ಸಂಕಲನ

ವರ್ಷ ೪

ಜನವರಿ + ಫೆಬ್ರುವರಿ ೨೦೦೫

ಸಂಪಾದಕರು

ಸಿದ್ಧಲಿಂಗ ಪಟ್ಟಣಶೆಟ್ಟಿ
ಹೇಮಾ ಪಟ್ಟಣಶೆಟ್ಟಿ

ಸಂಕಲನದ ಲೇಖಕರಿಗೆ + ಓದುಗರಿಗೆ ಕೆಲವು ಸೂಚನೆಗಳು

೧. ಲೇಖನಗಳ ಕೈಬರೆಹದ / ಟೈಪ್ ಮಾಡಿದ / ಡಿಟಿಪಿ ಮಾಡಿದ ಮೂಲ ಪ್ರತಿಗಳನ್ನೇ ಕಳಿಸಬೇಕು. ಝೆರಾಕ್ಸ್ ಪ್ರತಿ ಪರಿಶೀಲಿಸಲಾಗುವುದಿಲ್ಲ.

೨. ಲೇಖನಗಳು ಪ್ರಕಟಣೆಗೆ ಸ್ವೀಕೃತವಾದರೆ ಅವು ತಲುಪಿದ ೨ ತಿಂಗಳೊಳಗೆ ತಿಳಿಸಲಾಗುವುದು.

೩. ಸಂಕಲನದ ೧ ಸಂಚಿಕೆ ಪ್ರಕಟವಾಗುವಾಗ ಅದರ ಮುಂದಿನ ೩ ಸಂಚಿಕೆಗಳಿಗಾಗಿ ಆಯ್ದ ಲೇಖನಗಳು ಡಿಟಿಪಿ ಆಗಿ ಸಿದ್ಧವಾಗಿರುವುದರಿಂದ ಯಾವುದೇ ಹೊಸ ಲೇಖನ ಕನಿಷ್ಠ ನಾಲ್ಕಾರು ತಿಂಗಳ ನಂತರ ಪ್ರಕಟವಾಗುತ್ತದೆ. ಆದ್ದರಿಂದ ಲೇಖಕರು ಅನಗತ್ಯ ಕುತೂಹಲ ಅಥವಾ ಅವಸರ ತಳೆಯದಿರಲು ಕೋರಿಕೆ.

೪. ಉತ್ತರವನ್ನು ನಿರೀಕ್ಷಿಸಿ ಯಾರೂ ಸ್ವವಿಳಾಸದ ಲಕೋಟೆ ಅಥವಾ ಅಂಚೆಚೀಟಿ ಕಳಿಸುವುದು ಬೇಡ. ಕವಿತೆಗಳನ್ನು ಹೊರತುಪಡಿಸಿ ಅಸ್ವೀಕೃತ ಲೇಖನಗಳನ್ನು ಸಂಕಲನದ ವೆಚ್ಚದಲ್ಲಿಯೇ ಆಯಾ ಲೇಖಕರಿಗೆ ಮರಳಿಸಲಾಗುವುದು.

೫. **ಪರಿಶೀಲನೆಗೆ ಪುಸ್ತಕದ ೨ ಪ್ರತಿ ಕಳಿಸಿದರೆ ಮಾತ್ರ ಪರಿಗಣಿಸಲಾಗುವುದು.** ಎರಡು ಪ್ರತಿ ಸ್ವೀಕರಿಸಿದ ಮಾತ್ರಕ್ಕೆ ಅದರ ಪರಿಶೀಲನೆ ಮಾಡಿಸಲೇಬೇಕೆಂಬುದು ಸಂಕಲನಕ್ಕೆ ಬಂಧನಕಾರಿಯಲ್ಲ. ಒಮ್ಮೊಮ್ಮೆ ಪರಿಶೀಲಿತ ವಿಮರ್ಶಾಲೇಖನ ಪ್ರಕಟಣೆಗೆ ಸಿಗುವುದು ಅತಿ ವಿಳಂಬದ್ದೂ ಕಷ್ಟದ್ದೂ ಆಗಬಹುದಾಗಿದೆ.

೬. ಜನವರಿ, ಮಾರ್ಚ್, ಮೇ, ಜುಲಾಯಿ, ಸಪ್ಟಂಬರ್, ನವಂಬರ್ ೧೪ ರ ದಿನಾಂಕ ಹೊತ್ತು ಪ್ರಕಟವಾಗುವ ಸಂಚಿಕೆಗಳು ಸಕಾಲದಲ್ಲಿ ಚಂದಾಹಣ ಕೊಟ್ಟ ಎಲ್ಲರಿಗೂ ಸಾಮಾನ್ಯವಾಗಿ ಆಯಾ ತಿಂಗಳ ೧೦-೧೨ ನೇ ದಿನಾಂಕದೊಳಗಾಗಿ ತಲುಪುತ್ತವೆ.

೭. ಲೇಖಕರು ತಮ್ಮ ಒಳ್ಳೆಯ ಬರೆಹಗಳನ್ನು ಕಳಿಸುವುದರೊಂದಿಗೆ ತಮ್ಮ ಗಮನಕ್ಕೆ ಬರುವ ಹೊಸ ಲೇಖಕರ ಒಳ್ಳೆಯ ಲೇಖನಗಳನ್ನೂ ಸಂಕಲನಕ್ಕೆ ಕಳಿಸಲು ಪ್ರೇರೇಪಿಸಿರಿ.

೮. ಪ್ರಕಟವಾಗುವ ಪ್ರತಿಯೊಂದು ಲೇಖನಕ್ಕೆ ಸಾಂಕೇತಿಕ ಗೌರವಧನ ರೂ. ೧೦೦/- ಲೇಖನ ಪ್ರಕಟವಾದ ಎರಡು ವಾರದೊಳಗಾಗಿ ಕಳಿಸಲಾಗುವುದು.

ಸಂಕಲನ

ಜನವರಿ + ಫೆಬ್ರುವರಿ ೨೦೦೫

ಸಂಪಾದಕರು

ಸಿದ್ಧಲಿಂಗ ಪಟ್ಟಣಶೆಟ್ಟಿ

ಹೇಮಾ ಪಟ್ಟಣಶೆಟ್ಟಿ

ಸಂಕಲನ ಪ್ರಕಾಶನ

ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ

ಧಾರವಾಡ - ೫೮೦ ೦೦೪

R N I No. KARKAN 14160 / 10 / 1 / 2002 - TC

SANKALANA :

A Kannada Literary Magazine

Volume 4, Issue 1 : January + February 2005

Edited by Dr. Siddhaling Pattanshetti

Hoomane, Shridevinagar, Vidyagiri, Dharwad - 580 004

Printed by Saraswati Offset Printers, Shivaji Road, Dharwad - 580 001

•

•

•

ಸಂಕಲನ - ೧೯ : ಸಂಪುಟ ೪, ಸಂಚಿಕೆ ೧ : ಜನೆವರಿ + ಫೆಬ್ರುವರಿ ೨೦೦೫

ಸಂಪಾದಕರು : ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ ಮತ್ತು ಡಾ. ಹೇಮಾ ಪಟ್ಟಣಶೆಟ್ಟಿ

ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ - ೫೮೦ ೦೦೪

✆ : ೦೮೩೬-೨೪೬ ೨೭೧೮

•

ಸಂಕಲನದಲ್ಲಿ ಪ್ರಕಟವಾದ ಲೇಖನಗಳಲ್ಲಿ ವ್ಯಕ್ತವಾದ
ಅಭಿಪ್ರಾಯಗಳ ಹೊಣೆ, ಹಕ್ಕು ಆಯಾ ಲೇಖಕರವು.

•

೨೦೦೫ ರಿಂದ ಒಟ್ಟು ೩ ವರ್ಷಗಳ ಚಂದಾ ರೂ. ೫೦೦/- (ಚೆಕ್ ೫೫೦/-)

ವಾರ್ಷಿಕ ಚಂದಾ ರೂ. ೨೦೦/- (ಚೆಕ್ ೨೨೦/-)

•

•

ಡಿಟಿಪಿ : ಬಿಜಿಗ್ರಾಫಿಕ್ಸ್, ೧ನೇ ಕ್ರಾಸ್, ಜೋಶಿ ಫಾರ್ಮ್, ಧಾರವಾಡ - ೫೮೦ ೦೦೮

ಸಂಪಾದಕರ ಮಾತು

ಸಂಕಲನವು ಪ್ರಸ್ತುತ ಸಂಚಿಕೆಯೊಂದಿಗೆ ೪ ನೇ ವರ್ಷವನ್ನು ಪ್ರವೇಶಿಸುತ್ತಿದೆ. ಅನೇಕ ಲೇಖಕ ಮಿತ್ರರ, ಹಿರಿಯರ ಒತ್ತಾಸೆ, ಸಹಕಾರಗಳ ಬಲದಿಂದ ಯಶಸ್ವಿಯಾಗಿ ೩ ವರ್ಷಗಳನ್ನು ಪೂರ್ಣಗೊಳಿಸಲು ಸಾಧ್ಯವಾಗಿದೆ. ಈ ಯಶಸ್ಸಿಗೆ ಕಾರಣರಾದ ಎಲ್ಲರನ್ನೂ ಕೃತಜ್ಞತೆಯಿಂದ ನೆನೆಯುತ್ತೇವೆ.

ಸಂಕಲನವು ಎಲ್ಲ ದೃಷ್ಟಿಯಿಂದ ಕ್ರಮಶಃ ತನ್ನ ಗುಣವತ್ತತೆಯನ್ನು ಹೆಚ್ಚಿಸಿಕೊಳ್ಳುತ್ತ ಬಂದಿದ್ದರೂ ಚಂದಾದಾರರ ಸಂಖ್ಯೆ ಇಳಿಮುಖವಾಗಿದ್ದು ಬೇಸರಕ್ಕೆ ಕಾರಣವಾಗಿತ್ತು. ಆದರೆ ಮಿತ್ರರನ್ನು ಸಂಪರ್ಕಿಸಿ ಮಾಡಿದ ಪ್ರಯತ್ನದ ಫಲವಾಗಿ ನಿರಾಶರಾಗದೆ ಎಂಥ ಸಂದರ್ಭದಲ್ಲಿಯೂ ಪ್ರಕಟಣೆಯನ್ನು ಮುಂದುವರಿಸಲೇಬೇಕೆಂದು ನಿರ್ಧರಿಸಿದೆವು. ನಮ್ಮ ಕೋರಿಕೆಯನ್ನು ಮನ್ನಿಸಿ, ಪ್ರೋತ್ಸಾಹಿಸಿದ ನೂರಾರು ಮಿತ್ರರು ಮುಂದಿನ ಮೂರು ವರ್ಷಗಳ ಚಂದಾ ಕಳಿಸಿದ್ದಾರೆ. ನೂರಿನ್ನೂರು ಮಂದಿ ಕಳಿಸುವುದಾಗಿ ಪತ್ರ ಬರೆದಿದ್ದಾರೆ. ಬಹುಶಃ ಈ ಸಲವೂ ನಾಲ್ಕುನೂರರ ಅಂಚಿನಲ್ಲಿಯೇ ನಿಂತು ಪತ್ರಿಕೆ ನಡೆಸಬೇಕಾಗಬಹುದು. ಏನೇ ಆಗಲಿ ಸಂಕಲನ ಮುಂದುವರಿಯುತ್ತದೆ.

ಖ್ಯಾತ ಸಾಹಿತಿ, ವಿದ್ವಾಂಸ, ಸಂಶೋಧಕರಾದ ಡಾ. ಷ. ಶೆಟ್ಟರ್ ಅವರು 'ಕವಿರಾಜಮಾರ್ಗ ಮಂಥನ' ಮಾಡಿ ವಿಚಾರ-ವಿಶ್ಲೇಷಣೆ-ಸಂಶೋಧನೆಗಳನ್ನು ನಿರ್ವಚಿಸಿದ ವಿಶೇಷ ಲೇಖನಮಾಲೆಯನ್ನು ಸಂಕಲನ-೧೮ ರಿಂದಲೇ ಆರಂಭಿಸಿದ್ದೇವೆ. ಮಾಲೆಯ ೨ ನೇ ಲೇಖನ ಈ ಸಂಚಿಕೆಯಲ್ಲಿ ಬಂದಿದೆ. ಕನ್ನಡ ಸಾಹಿತ್ಯಾಧ್ಯಯನ, ಕಾವ್ಯಾಭ್ಯಾಸ, ಭಾಷಾಪ್ರಜ್ಞೆ, ಇತಿಹಾಸ ವಿಶ್ಲೇಷಣೆಗೆ ಹೊಸ ರೀತಿಯಲ್ಲಿ ಇನ್ನೂ ಹೆಚ್ಚಿನ ನಿಖರತೆಯನ್ನು ನೀಡುತ್ತಿರುವ ಈ ಲೇಖನಗಳ ಅಗಾಧತೆಯನ್ನು ಯಾರಾದರೂ ಗಮನಿಸಬಹುದಾಗಿದೆ. ಎಡ್ವರ್ಡ್ ಪೀಟರ್ ರೈಸ್ ಅವರಿಂದ ೧೮೮೩ ರಲ್ಲಿ ಮೊದಲ ಬಾರಿಗೆ ಸ್ಫುರಣಗೊಂಡ ಕವಿರಾಜಮಾರ್ಗ ಚಿಂತನಧಾರೆಗೆ ಮುಂದೆ ಹಲವು ವಿದ್ವಾಂಸರ, ಸಂಸ್ಥೆಗಳ ಕಾಣಿಕೆ ಸಂದಿದೆ. ಕೆ. ಬಿ. ಪಾಠಕ್, ಎ. ವೆಂಕಟರಾವ್, ಎಚ್. ಶೇಷ ಅಯ್ಯಂಗಾರ್, ಮುಳಿಯ ತಿಮ್ಮಪ್ಪಯ್ಯ, ವಿ. ಸೀ., ಭೀ. ಚಿಟಗುಪ್ಪಿ, ಕೆ. ಕೃಷ್ಣಮೂರ್ತಿ, ಎಂ. ಎಂ. ಕಲಬುರ್ಗಿ, ಶೆರಿಡನ್ ಪೊಲ್ಯಾಕ್, ಕೆ. ವಿ. ಸುಬ್ಬಣ್ಣ; ಮದ್ರಾಸ ವಿಶ್ವವಿದ್ಯಾಲಯ, ಹಂಪಿ ಕನ್ನಡ ವಿಶ್ವವಿದ್ಯಾಲಯ, ಕರ್ನಾಟಕ ಸಾಹಿತ್ಯ ಅಕಾಡೆಮಿಗಳ ಹರವು-ನೆಲೆಗಳ ಮೂಲಕ ತೆರೆದುಕೊಂಡ ನೃಪತುಂಗ-ಶ್ರೀವಿಜಯ-ಕವೀಶ್ವರ-ಮಾರ್ಗದಲ್ಲಿ ಕನ್ನಡಪ್ರಜ್ಞೆಯನ್ನು ಮೀರಿದ, ನಾಡನ್ನು ಬೆಳಗಿ ತೋರುವ ವಿದ್ವತ್‌ಪ್ರಭೆ ಶೆಟ್ಟರ್ ಅವರ ಲೇಖನಗಳಲ್ಲಿ ಮಿನುಗುತ್ತಿದೆ. ಇವನ್ನು ಸಂಕಲನವೇ ಪ್ರಕಟಿಸಲಿ ಎಂದು ಅವರು ಅಪೇಕ್ಷಿಸಿದ್ದು ಗೌರವದ ಮಾತು.

'ನನ್ನ ಅವ್ವ ನನ್ನ ಅಪ್ಪ' ಕೃತಜ್ಞತಾ ಲೇಖನಮಾಲಿಕೆಯ ಹಾಗೆ ಈ ಸಂಚಿಕೆಯಿಂದ 'ನನ್ನ ಶಾಲಾಗುರುಗಳು' ಎಂಬ ಗೌರವ ಲೇಖನಮಾಲಿಕೆ ಆರಂಭಿಸಿದ್ದೇವೆ. ನಮ್ಮ ವ್ಯಕ್ತಿತ್ವ ರೂಪಣೆಯಲ್ಲಿ ಶಾಲಾ ಗುರುಗಳು ಮಹತ್ವದ ಪಾತ್ರ ವಹಿಸಿದ್ದಾರೆ. ಅವರನ್ನು ನೆನೆಯುವುದು ನಮ್ಮ ಆದ್ಯ ಕರ್ತವ್ಯ. ಪ್ರಾಥಮಿಕ ಶಾಲೆಯ ಆರಂಭದ ಹಂತದಿಂದ ಕಾಲೇಜು ಸೇರುವ ಮೊದಲಿನ ಅವಧಿಯ ವರೆಗಿನ ಶಾಲಾಜೀವನದಲ್ಲಿ ನಮ್ಮನ್ನು ಬೆಳೆಸಿದ, ನಾವು ನೆನಪಿಡುವ, ಆದರಿಸುವ ಗುರುವರ್ಗವನ್ನು ನೆನೆದು ಬರುವ ಲೇಖನಗಳು ಈ ಮಾಲಿಕೆಯಲ್ಲಿ ಪ್ರಕಟವಾಗಲಿವೆ.

೧ ಜನವರಿ ೨೦೦೫ — **ಸಿದ್ಧಲಿಂಗ ಪಟ್ಟಣಶೆಟ್ಟಿ**
ಹೂಮನೆ, ಧಾರವಾಡ-೪ — **ಹೇಮಾ ಪಟ್ಟಣಶೆಟ್ಟಿ**

ಪರಿವಿಡಿ

೧. ನನ್ನ ಶಾಲಾ ಗುರುಗಳು : *ಶಿವಶಂಕರ ಹಿರೇಮಠ* ೫ - ೧೨

೨. ಗುಬ್ಬಿ ಬಂದಿತ್ತು : *ವಿಜಯಾ ಶ್ರೀಧರ್* ೧೨ - ೧೪

೩. ನನ್ನ ಅಪ್ಪ ನನ್ನ ಅವ್ವ : *ಎಂ. ರಾಮಚಂದ್ರಗೌಡ* ೧೫ - ೨೧

೪. ಅಯ್ದು ಕವಿತೆಗಳು : *ಸುನಂದಾ ಪ್ರಕಾಶ ಕಡಮೆ* ೨೨ - ೨೪

೫. ಸಮಕಾಲೀನ ಮಹಿಳಾ ಸಾಹಿತ್ಯ : *ಎಸ್. ವಿ. ಪ್ರಭಾವತಿ* ೨೪ - ೩೩

೬. ಭೂಮಿ ಮತ್ತು ಭೂಪತಿ : *ಷ. ಶೆಟ್ಟರ್* ೩೪ - ೫೩

೭. ಕನ್ನಡದಲ್ಲಿ ಕಲ್ಲಚ್ಚು ಅರ್ಥಾತ್ ಶಿಲಾಬರಹದ ಮುದ್ರಣ :
ಶ್ರೀನಿವಾಸ ಹಾವನೂರ ೫೪ - ೬೦

೮. ಅಭಿವೃದ್ಧಿಯ ಅನ್ವೇಷಣೆ : *ಅರವಿಂದ ಚೊಕ್ಕಾಡಿ* ೬೧ - ೭೨

೯. **ಪುಸ್ತಕ ಪರಿಶೀಲನೆ :** ೭೩ - ೮೦

೧. ಸಮಗ್ರ ದಿಗಂಬರ ಕಾವ್ಯ : ಅನು. : ಗುರುಮೂರ್ತಿ ಪೆಂಡಕೂರು–
ದೇಶಪಾಂಡೆ ಸುಬ್ಬರಾಯ

೨. ಮಧ್ಯಂತರದ ಒಂದು ಗದ್ಯಗೀತೆ : ಶಶಿಕಲಾ ವೀರಯ್ಯಸ್ವಾಮಿ,

೩. ಮೂರು ಕಿರುನಾಟಕಗಳು : ಶ್ರೀನಿವಾಸ್ ವಿ. ಸುತ್ರಾವೆ –*ಬಸವರಾಜ ವಕ್ಕುಂದ*

೪. ನಿಶಾ ನಿಮಂತ್ರಣ : ಅನು. : ಪಾಂಡುರಂಗ ಕೋಟಿ,

೫. ಸಲಸಲದ ಪಾಡು : ವಿಜಯಕಾಂತ ಪಾಟೀಲ —*ಅಂಕದ ಮುರಿಗೆಪ್ಪ*

೬. ಕಳಕಳಿ : ಡಾ. ಪ್ರಹ್ಲಾದ ಅಗಸನಕಟ್ಟೆ,

೭. ತೇಲ್‌ನೋಟ : ಕು. ಗೋ.–*ಆರ್. ಜಿ. ಮಠಪತಿ*

೮. ರಿಹರ್ಸಲ್ : ಚಂದ್ರಕಾಂತ ಕುಸನೂರ,

೯. ಮಿಂಚು : ಶಿರೀಷ್ ಜೋಶಿ –*ಬಾಳಣ್ಣ ಸೀಗಿಹಳ್ಳಿ*

೧೦. ಪಾಶುಪತ ದರ್ಶನ : ಎಸ್. ಎಸ್. ಹಿರೇಮಠ – *ಚಂದ್ರಶೇಖರ ವಸ್ತ್ರದ*

೧೦. ಸಂಕಲನ : ಅನಿಸಿಕೆ : ೮೧ - ೮೩

೧೧. ಸಂಕಲನ ೧೩ ರಿಂದ ೧೮ ರ ಸಮಗ್ರ ಸಾಮಗ್ರಿ ದರ್ಶನ ೮೩ - ೮೭

೧೨. ಕಡೀಪುಟ : *ಸಿದ್ಧಲಿಂಗ ಪಟ್ಟಣಶೆಟ್ಟಿ* ೮೮

ನನ್ನ ಶಾಲಾ ಗುರುಗಳು

ಶಿವಶಂಕರ ಹಿರೇಮಠ

೪೦ ರ ದಶಕ. ಆಗಿನ್ನೂ ಗ್ರಾಮೀಣ ಪ್ರದೇಶಗಳಲ್ಲಿ ಪೂರ್ವಪ್ರಾಥಮಿಕ, ಎಲ್.ಕೆ.ಜಿ., ಬಾಲವಾಡಿ, ಅಂಗನವಾಡಿ ಶಬ್ದಗಳ ಪ್ರವೇಶ ಪ್ರಾಥಮಿಕ ಹಂತದ ಶಾಲಾ ಅಧ್ಯಯನಕ್ಷೇತ್ರದಲ್ಲಿ ಆಗಿರಲಿಲ್ಲ. ಬಿನ್‌ಯತ್ತೆ, ದೊಡ್ಡ ಬಿನ್ನಯತ್ತೆ ಎನ್ನುವ ವರ್ಗಗಳು ಇದ್ದಿರಬಹುದಾದರೂ ಅಲ್ಲಿಗೂ ಪ್ರವೇಶ ೫-೬ ವರ್ಷದ ಮಕ್ಕಳಿಗೆ. ನನ್ನ ಊರು ಕಣಬರಗಿ. ಬೆಳಗಾವಿಯಿಂದ ಈಶಾನ್ಯ ದಿಕ್ಕಿಗೆ. ೩ ಮೈಲು (೫ ಕಿ.ಮೀ.) ಅಂತರದಲ್ಲಿರುವ ಹಳ್ಳಿ. ಈಗ ಅದು ಬೆಳಗಾವಿ ನಗರದ ಭಾಗ. ಅಲ್ಲಿಯ ಕನ್ನಡ ಪೂರ್ಣ ಪ್ರಾಥಮಿಕ ಶಾಲೆಯೇ ನಾನು ಓದಿದ ಶಾಲೆ.

ಮಲೆನಾಡಿನ ಸೆರಗಿನ ಪ್ರದೇಶದ ಊರಾಗಿದ್ದುದರಿಂದ ಜೂನ್ ತಿಂಗಳಿಗೆ ಕಣಬರಗಿಯಲ್ಲಿ ಮಳೆಗಾಲ. ನಮ್ಮ ಮನೆಯ ಸುತ್ತಲಿನ ಸ್ನೇಹಿತರು ಒಂದು ಮುಂಜಾನೆ ಶಾಲೆಗೆ ಹೊರಟಿದ್ದರು. ನನಗೂ ಅವರು ಶಾಲೆಗೆ ಬರಲು ಕರೆದರು. ನಾನೂ ಹಾಗೆಯೇ ಹೊರಟೆ. ಚಳಿ ಮತ್ತು ಮಳೆಯ ಕಾರಣ ನನ್ನ ತಾಯಿ ನನಗೆ ಕೊಂಚಿಗೆಯನ್ನು ಕಟ್ಟಿದ್ದಳು. ನನಗಾಗ ಮೂರೂವರೆ-ನಾಲ್ಕು ವರ್ಷ ಇರಬಹುದು. ಶಾಲೆಗೆ ಕೊಂಚಿಗೆ ಕಟ್ಟಿಕೊಂಡೇ ಹೋದೆ. ೧ ನೆಯ ವರ್ಗ ಕಲಿಸುವವರು ಶ್ರೀ ದತ್ತೂ ಮಾಸ್ತರ ಎಂದು ಪ್ರಸಿದ್ಧರಾದವರು. ಅವರು ನನಗೆ ಪ್ರೀತಿಯಿಂದಲೇ ಕರೆದು, 'ಎಷ್ಟ ಸಣ್ಣಾವ್ನ ಅದಿ, ಸಾಲಿಗೆ ಬಂದೀದಿ ಅಲ್ಲೋ...' ಎಂದು ಹೇಳಿ, 'ಕೊಂಚಿಗಿ ಕಟ್ಟಗೊಂಡ ಬರಬಾರದು, ಟೊಪಗಿ ಹಾಕಿಕೊಂಡು ಬರಬೇಕು' ಎಂದು ಹೇಳಿದರು. ಕಣಬರಗಿ ಗ್ರಾಮಸ್ಥರೇ ಆಗಿದ್ದ ದತ್ತೂ ಮಾಸ್ತರರು (ದತ್ತೋಪಂತ ಕಪಿಲೇಶ್ವರಿ) ಊರ ಹಿರಿಯರ ಮನೆಗೆ ಹೋಗಿ ನಕ್ಷತ್ರ-ತಿಥಿಗಳ ವಿಚಾರಗಳನ್ನು ಮಹತ್ವದ ದಿನಗಳಲ್ಲಿ ಹೇಳಿ ಬರುತ್ತಿದ್ದರು. ತಮ್ಮ ಸರಳತೆ, ದೈವಭಕ್ತಿ, ನಮ್ರ ಸ್ವಭಾವ, ಪಂಚಾಂಗ ಸೇವೆಗಳಿಂದಾಗಿ ಊರವರ ಮೆಚ್ಚಿಗೆಯನ್ನೂ ಗಳಿಸಿದ್ದರು. ಅವರ ಮಗ ಪಾಪ್ಯಾ(ಸಿದ್ಧೇಶ್ವರ), ಮೊಮ್ಮಗ(ಮಗಳ ಮಗ) ಪಲ್ಯಾ(ಪ್ರಹ್ಲಾದ) ನನ್ನ ಸ್ನೇಹಿತರಾಗಿದ್ದರು.

ನಾನು ೨-೩ ವರ್ಗಗಳನ್ನು ಕಲಿಯುವಾಗಲೂ ನನ್ನ ಹೆಸರನ್ನು ಅಧಿಕೃತವಾಗಿ ಶಾಲೆಯಲ್ಲಿ ವಯಸ್ಸು ಕಡಿಮೆ ಎಂಬ ಕಾರಣದಿಂದ ಹಚ್ಚಿರಲಿಲ್ಲ. ಬೆಳಗಾವಿಯಿಂದ ಸಾಹೇಬರೊಬ್ಬರು (ಆಫೀಸರ) ಬಂದು ನನ್ನ ಪರೀಕ್ಷೆ ತೆಗೆದುಕೊಂಡ ಮೇಲೆ ನನ್ನ ಹೆಸರನ್ನು ಒಮ್ಮೆಲೇ ೩ ನೇ ವರ್ಗಕ್ಕೆ ಹಚ್ಚಲಾಯಿತು. ನಮ್ಮ ವರ್ಗದ ಮಾಸ್ತರ ಬಂದಿರಲಿಲ್ಲ. ನಾವು ಹಾಗೆಯೇ ಚದುರಿ ಕುಳಿತಿದ್ದೆವು. ೫ ನೆಯ ವರ್ಗದಲ್ಲಿ ಒಂದು ಕವಿತೆ ಹೇಳುತ್ತಿದ್ದರು. ಅದರೊಳಗೆ ಸುಗ್ಗಿಯ ವರ್ಣನೆ ಇತ್ತು. ತಾಯಿ ಭೂಮಾತೆಗೆ ಭತ್ತದ ಗೊನೆಗಳು ತಮ್ಮನ್ನು ಪೋಷಿಸಿ ಬೆಳೆಸಿದ್ದಕ್ಕಾಗಿ ಕೃತಜ್ಞತೆಯಿಂದ ತಲೆಬಾಗುವಂತೆ ತಲೆಯನ್ನು ಬಾಗಿಸಿದ್ದುವು... ಎಂದು ಅರ್ಥ ಹೇಳುತ್ತಿದ್ದರು. ನನಗೆ ಅದು ಮಜಾ ಅನ್ನಿಸಿತು. ಅದನ್ನೇ ನೆನಪಿಸಿಕೊಳ್ಳುತ್ತ ಕುಳಿತಿದ್ದೆ. ನಂತರ ನಮ್ಮ ಮಾಸ್ತರರು ಬಂದರು. ಬೇರೀಜ, ವಜಾಬಾಕಿ (ಸಂಕಲನ, ವ್ಯವಕಲನ) ಲೆಕ್ಕಗಳನ್ನು ನಮ್ಮಿಂದ ಮಾಡಿಸಿದರು. ಸುಗ್ಗಿಯ ಬಗ್ಗೆ ೧೦ ಸಾಲಿನ ನಿಬಂಧ ಬರೆಯಲು ಹೇಳಿದರು. ನನಗೆ ೫ ನೆಯ ವರ್ಗದ ಭತ್ತದ ಗೊನೆಯ ನೆನಪಾಗಿ 'ಭತ್ತದ ಗೊನೆಗಳು ಭೂತಾಯಿಗೆ ನಮಸ್ಕಾರ ಮಾಡಲು

ತಮ್ಮ ತಲೆಯನ್ನು ಬಗ್ಗಿಸಿ ನಿಂತಿದ್ದವು' ಎಂದು ಬರೆದು ೧೦ ನೆಯ ಸಾಲನ್ನು ಮುಗಿಸಿದ್ದೆ. ಆ ಮಾಸ್ತರರೂ ಕಣಬರಗಿ ಊರವರೇ. ಭರಮಪ್ಪ ದೇವರಮನಿ ಅವರ ಹೆಸರು. ವೃತ್ತಿಯಿಂದ ಕುಂಬಾರ ಕುಟುಂಬದವರಾಗಿದ್ದ ಅವರಿಗೆ ನಾವು ಕುಂಬಾರ ಭರಮಾ ಮಾಸ್ತರ ಎಂದು ಕರೆಯುತ್ತಿದ್ದೆವು. ಇವರು, ನನ್ನ ತಂದೆ, ಮತ್ತೆ ಕೆಲವರು– ಮುತಗೇಕಾರ ಮಾಧು, ಸಣಗೌಡರ ಮಲಗೊಂಡ ಗೌಡ, ಅಂಗಡಿ ಬಾಳಪ್ಪ ಇತ್ಯಾದಿ– ಭಾನುವಾರಕ್ಕೊಮ್ಮೆ ಅಂಗಡಿ ಬಾಳಪ್ಪ ಅವರ ಮನೆಯ ಕೋಣೆಯಲ್ಲಿ ೫-೩-೨ ಇಸ್ಪೇಟ್ ಆಟ ಆಡುತ್ತಿದ್ದರು. ಬಾಳಪ್ಪನ ಅಂಗಡಿ ಮನೆಯ ಸಾಮಾನು ತರಲು, ಮತ್ತು ರವಿವಾರ ಇಸ್ಪೇಟ್ ಆಟದ ತಂದೆಯನ್ನು ಊಟಕ್ಕೆ ಕರೆಯಲು ನಾನು ನನ್ನ ತಮ್ಮಂದಿರು ಅಂಗಡಿಗೆ ಹೋಗುತ್ತಿದ್ದೆವು.

ಒಂದು ದಿನ ನನ್ನ ತಂದೆಯನ್ನು ಕರೆಯಲು ಹೋದಾಗ ಭರಮಾ ಮಾಸ್ತರರು ನನ್ನ ತಂದೆಗೆ, 'ಏ ಪತ್ರಯ್ಯ, ನಿನ್ನ ಮಗಾ ಶಂಕರ ಭಾಳ ಶಾಣ್ಯಾ ಅದಾನಪಾ. ಸುಗ್ಗಿ ನಿಬಂಧ ಬರೆಯಿಸಿದಾಗ ಹಿಂಗ ಬರದಿದ್ದ ನೋಡಪಾ. ಅವನ ಕಲ್ಪನಾ ಶಕ್ತಿ ಛಲೋ ಅದ' ಎಂದು ಪ್ರೋತ್ಸಾಹಕರ ಮಾತುಗಳನ್ನು ಆಡಿದರು. ಭತ್ತದ ಗೊನೆಗಳು ಭೂದೇವಿಗೆ ಬಾಗಿದ ಕಲ್ಪನೆ ನನ್ನದಲ್ಲದಿದ್ದರೂ ನಾನು ಖುಶಿಪಟ್ಟೆ. ನಾನು ೩ ನೇ ಯತ್ತೆ ಸ್ವಲ್ಪ ದಿನ ಮಾತ್ರ ಭರಮಾ ಮಾಸ್ತರ ಹತ್ತಿರ ಕಲಿತಿದ್ದರೂ ನನಗೆ ಬಹಳ ಪ್ರೀತಿ ಮಾಡುತ್ತಿದ್ದರು. ೪ ನೇ ವರ್ಗದ ಮಿಡಲ್ ಸ್ಕೂಲ ಸ್ಕಾಲರ್‌ಶಿಪ್ಪ ಪರೀಕ್ಷೆಯಲ್ಲಿ ನಾನು ಜಿಲ್ಲೆಗೆ ಪ್ರಥಮ ಸ್ಥಾನ ಪಡೆದದ್ದನ್ನು ತಿಳಿದು ನನ್ನನ್ನು ತಮ್ಮ ಮನೆಗೆ ಕರೆದು ಸ್ಪೆಶಲ್ ಊಟ ಮಾಡಿಸಿದರು. ಇವರು ನಿವೃತ್ತರಾದರೂ ನನ್ನ ಯೋಗಕ್ಷೇಮ ವಿಚಾರಿಸಿಕೊಳ್ಳುತ್ತಿದ್ದರು. 'ಪತ್ರಯ್ಯ, ನಿನ್ನ ಮಗನಿಗೆ ಏನೂ ಕಡಿಮೆ ಮಾಡಬೇಡ' ಎಂದು ನನ್ನ ತಂದೆಗೆ ಹೇಳುತ್ತಿದ್ದರು.

ಭರಮಾ ಮಾಸ್ತರ ತೀರಿಕೊಂಡಾಗ ಊರ ಸ್ವಾಮಿಗಳ ಮನೆತನದವನಾದ ನಾನು ಇವರ ಅಂತ್ಯಸಂಸ್ಕಾರಕ್ಕೆ ಹೋಗಿದ್ದೆ. ಭರಮಾ ಮಾಸ್ತರರು ತೊಟ್ಟುಕೊಳ್ಳುತ್ತಿದ್ದ ದೊಡ್ಡ ಆಕಾರದ ಬೆಳ್ಳಿಯ ಲಿಂಗದ ಕರಡಿಗೆಯನ್ನು ಅಂತ್ಯಸಂಸ್ಕಾರದ ಕಾಣಿಕೆ ಎಂದು ಸ್ವಾಮಿಯಾದ ನನಗೆ ಕೊಟ್ಟರು. ನಾಗಮುರಿ ಹೆಣಿಕೆಯ ನನ್ನ ಲಿಂಗವನ್ನು ತೆಗೆದು ಭರಮಾ ಮಾಸ್ತರರ ದೊಡ್ಡ ಆಕಾರದ ಲಿಂಗದ ಕರಡಿಗೆಯನ್ನು, ಅದು ಎದೆಗೆ ಎಡವಟ್ಟು ಅನ್ನಿಸಿದರೂ ನಾನು ಬಿ.ಎ. ತರಗತಿಯನ್ನು ಓದುತ್ತಿರುವ ವರೆಗೆ ಸಂತೋಷದಿಂದಲೇ ಕಟ್ಟಿಕೊಳ್ಳುತ್ತಿದ್ದೆ. ನನ್ನ ಪ್ರೀತಿಯ ಮಾಸ್ತರ ನನ್ನ ಎದಿ ಮೇಲೆ ಇದಾರೆ ಎಂದು ಅಭಿಮಾನ ಅನ್ನಿಸುತ್ತಿತ್ತು. ಬಿ.ಎ. ತರಗತಿಯಲ್ಲಿದ್ದಾಗ ಬೆಳಗಾವಿಯಲ್ಲಿದ್ದ ನಮ್ಮ ರೂಮು ಕಳವಾಯಿತು. ಎನ್.ಸಿ.ಸಿ. ಗೆ ಹೋದ ನಾನು ಲಿಂಗಪ್ಪನನ್ನು ರೂಮಿನಲ್ಲಿಯೇ ಬಿಟ್ಟು ಹೋಗಿದ್ದೆ. ಆ ಪ್ರಸಂಗದಲ್ಲಿ ಕಳೆದು ಹೋದ ಲಿಂಗವನ್ನು ನಾನಿನ್ನೂ ಸ್ಮರಿಸಿಕೊಳ್ಳುತ್ತೇನೆ. ಭರಮಾ ಮಾಸ್ತರರ ಪ್ರೀತಿ ಅಂತಃಕರಣಗಳನ್ನು ಅನುಭವಿಸುತ್ತೇನೆ.

೪ ನೆಯ ವರ್ಗಕ್ಕೆ ನಾನು ಬೆಳಗಾವಿಯ ಶೆಟ್ಟಿಗಲ್ಲಿ ಕನ್ನಡ ಶಾಲೆಗೆ ಹೋದೆ. ೨ ನೇ ಮಹಾಯುದ್ಧದ ದಿನಗಳು. ಕಣಬರಗಿಯಿಂದ ೩ ಮೈಲಿ ದೂರ. ನನ್ನ ತಂದೆಯೇ ೪ ನೇ ವರ್ಗದ ಗುರುಗಳಾಗಿದ್ದರು. ಮುಂಜಾನೆ ೮ ಅಂದರೆ ಶಾಲೆಗೆ ಹೋಗಬೇಕು. ಬೆಳಗಾವಿಯ ಮಾಣಿಕಬಾಗ ಮತ್ತಿತರ ಕಾರಖಾನೆಗಳಿಗೆ ಹೋಗುವ ಕೂಲಿಯಾಳುಗಳನ್ನು ಒಯ್ಯಲು ದಿನಾಲು

ಮುಂಜಾನೆ ೭ ಗಂಟೆಗೆ ಒಂದು ಟ್ರಕ್ ಬರುತ್ತಿತ್ತು. ಸಾಲೀ ಹುಡುಗ ಎಂಬ ಪ್ರೀತಿಯಿಂದ ನನ್ನನ್ನು ಕೂಲಿಯಾಳುಗಳು ಟ್ರಕ್ಕಿನಲ್ಲಿ ಕೂಡ್ರಿಸಿಕೊಂಡು ಹೋಗುತ್ತಿದ್ದರು. ನಾನು ಗಡಿಬಿಡಿಯಿಂದ ರೊಟ್ಟಿ ತಿಂದು, ಓಡಿ ಓಡಿ ಹೋಗಿ ಟ್ರಕ್ ಹಿಡಿಯುತ್ತಿದ್ದೆ. ಟ್ರಕ್ ತಪ್ಪಿದರೆ ಸಾಯಕಲ್ ಮೇಲೆ ಬರುತ್ತಿದ್ದ ನನ್ನ ತಂದೆ ತಮ್ಮ ಸಾಯಕಲ್ ಮೇಲೆ ಕರೆದುಕೊಂಡು ಶಾಲೆಗೆ ಹೋಗುತ್ತಿದ್ದರು.

೮ ಗಂಟೆಗೆ ಸರಿಯಾಗಿ ಟ್ಯೂಶನ್ ವರ್ಗಗಳು ಪ್ರಾರಂಭವಾಗಲೇಬೇಕು. ಸಮಯಪಾಲನೆ ಗುರುಗಳಾದ ನನ್ನ ತಂದೆಯ ಪ್ರಮುಖ ಗುಣ. ಬೆಳಗಾವಿಯ ಕಿಲ್ಲೇದ ಹತ್ತಿರ ಇರುವ ಕೆರೆ ದಂಡೆಯ ಹತ್ತಿರ ನನ್ನನ್ನು ಟ್ರಕ್ಕಿನಿಂದ ಇಳಿಸುತ್ತಿದ್ದರು. ಅಲ್ಲಿಂದ ೧.೫ ಕಿ.ಮೀ. ಇರುವ ಶಾಲೆಗೆ ನಡೆದುಕೊಂಡು ಹೋಗಲೇಬೇಕಾಗುತ್ತಿತ್ತು. ದಾರಿಯಲ್ಲಿ ಅರಣ್ಯ ಇಲಾಖೆಯ ಕಚೇರಿ ಇತ್ತು. ಅದರ ಸಮೀಪದ ಬಯಲಿನಲ್ಲಿ ಮುಂಜಾನೆ ಒಂದು ದಿವಸ ಗಾಳೀಪಟ ಹಾರಿಸುವ ಸ್ಪರ್ಧೆ ಇತ್ತು. ನಾನು ತುಸು ಸಮಯ ಗಾಳೀಪಟಗಳ ಹಾರಾಟವನ್ನು ನೋಡುತ್ತ ನಿಂತೆ. ಶಾಲೆಗೆ ಹೋಗುವದು ಕೆಲ ನಿಮಿಷ ತಡವಾಯಿತು. ಗುರುಗಳಾದ ನನ್ನ ತಂದೆ ನನ್ನನ್ನು ಅವಧಿ ಮುಗಿಯುವ ವರೆಗೆ (೮ ರಿಂದ ೧೦) ಎದ್ದು ನಿಲ್ಲಿಸಿದರು. ನಾನು ವರ್ಗದಲ್ಲಿ ಅಭ್ಯಾಸದಲ್ಲಿ ೧ ನೇ ನಂಬರ ಇದ್ದೆ. ವೀರಭದ್ರ ಚಿಟಗಿ ಎಂಬವ ೨ ನೇ ನಂಬರ. ಆತ ನನ್ನ ಸ್ನೇಹಿತ. ನನ್ನ ಅವಮಾನ ಗೋಳಾಟ ನೋಡಲಾರದೆ, ನಮ್ಮ ತಂದೆಗೆ 'ಗುರುಗಳೇ, ಶಂಕರೀಗೆ (ನನ್ನನ್ನು ಸ್ನೇಹಿತರು ಶಂಕರಿ ಎಂದು ಕರೆಯುತ್ತಿದ್ದರು) ಕೂಡ್ರಲು ಹೇಳಿರಿ' ಎಂದು ವಿನಂತಿಸಿಕೊಂಡ. ನನ್ನ ತಂದೆ ನಸುಗೋಪದಿಂದ, 'ಮಗನೇ, ಗೆಳ್ಯಾಗ ವಸೀಲಿ ಹಚ್ಚಾಕ ಬರತೀ... ಟಾಯಿಮ ಅಂದರೆ ಟಾಯಿಮ. ನೀನೂ ಎದ್ದ ನಿಲ್ಲು. ತಪ್ಪ ಮಾಡಿದವರಿಗೆ ವಸೀಲಿ ಎಂದೂ ಹಚ್ಚಬಾರದು' ಎಂದು ಅವನಿಗೂ ಎದ್ದು ನಿಲ್ಲಿಸಿದರು. ಕೆಲ ನಿಮಿಷಗಳಾದ ಮೇಲೆ ಇಬ್ಬರನ್ನೂ ಕೂಡ್ರಿಸಿದರು. ಇಂದು ನನ್ನ ತಂದೆ ಮತ್ತು ಆ ಸ್ನೇಹಿತ ಇಬ್ಬರೂ ಇಲ್ಲ. ಆದರೆ ಸಮಯನಿಷ್ಠೆಯ ಪ್ರಸಂಗವನ್ನು ಇವರಿಬ್ಬರ ನೆನಪಿನಲ್ಲಿಯೇ ಪಾಲಿಸಲು ಇಂದಿಗೂ ನಾನು ಪ್ರಯತ್ನಿಸುತ್ತೇನೆ.

ಮುಂಜಾನೆ ೮ ರಿಂದ ೧೦ ನಮ್ಮದು ಸ್ಪೆಶಲ್ ವರ್ಗ. ಅದು ಸ್ಕಾಲರ್‌ಶಿಪ್ಪ ಪರೀಕ್ಷೆಯ ತಯಾರಿ ಕ್ಲಾಸ. ೨೦ ವಿದ್ಯಾರ್ಥಿಗಳು ಬರುತ್ತಿದ್ದರು. ೨ ರೂ. ಫೀ. ೭-೮ ವಿದ್ಯಾರ್ಥಿಗಳಿಗೆ ಪುಕ್ಕಟೆಯಾಗಿಯೇ ಹೇಳುತ್ತಿದ್ದರು. ನಾವು ಸ್ಕಾಲರ್‌ಶಿಪ್ ಪರೀಕ್ಷೆಗೆ ಕುಳಿತ ವರ್ಷ ೧೩ ವಿದ್ಯಾರ್ಥಿಗಳು ಪಾಸಾದೆವು. ನಮ್ಮ ತಂದೆಗೆ ಬೆಳಗಾವಿಯಲ್ಲಿ ಸ್ಕಾಲರ್‌ಶಿಪ್ ಮಾಸ್ತರ ಎಂದೇ ಕರೆಯುತ್ತಿದ್ದರು. ಹೆಚ್ಚಿನ ಸಂಖ್ಯೆಯಲ್ಲಿ ಬೆಳಗಾವಿಯ ಹುಡುಗರೇ ಈ ಪರೀಕ್ಷೆಯಲ್ಲಿ ಪಾಸಾಗುತ್ತಿದ್ದುದರಿಂದ ಮುಂದೆ ಈ ಪರೀಕ್ಷೆಗೆ ಗ್ರಾಮೀಣ ಕೋಟಾ ಪ್ರಾರಂಭಿಸಿದರಂತೆ. ಅಲ್ಲಿ ಖಾಜಿ ಎಂಬ ವಿದ್ಯಾರ್ಥಿ ನನ್ನ ಸಹಪಾಠಿಯಾಗಿದ್ದ. ಅವನ ತಂದೆ ಫೌಜದಾರರು. ಅವರ ಮನೆಗೆ ಹೋಗಿ ಪೋಲೀಸ ಕೋಟಾದ ಉಲನ್ ರಗ್ಗವೊಂದನ್ನು ನಾನು ತಂದೆಯ ಹೇಳಿಕೆಯ ಮೇರೆಗೆ ತಂದಿದ್ದೆ. ಸುಮಾರು ೧೦ ವರ್ಷ ಆ ರಗ್ಗು ನನ್ನದು. ಶಂಕರಣ್ಣನ ರಗ್ಗ ಎಂದು ನನ್ನ ತಮ್ಮಂದಿರೂ ಅದನ್ನು ಮುಟ್ಟುತ್ತಿರಲಿಲ್ಲ.

ರಾಜಾ (ಡಾ. ಡಿ. ಎಸ್. ಕರ್ಕಿ ಅವರ ಮಗ) ಬೇರೆ ಶಾಲೆಗೆ ಹೋಗುತ್ತಿದ್ದರೂ ಟ್ಯೂಶನ್‌ಗಾಗಿ ನಮ್ಮ ತಂದೆಯ ಕ್ಲಾಸಿಗೆ (೮ ರಿಂದ ೧೦) ಬರುತ್ತಿದ್ದ. ಕವಿತೆಯ ವಾಚನವನ್ನು

ಚೆನ್ನಾಗಿ ಮಾಡುತ್ತಿದ್ದ. ಪ್ರ. ಗೋ. ಕುಲಕರ್ಣಿ ನಮ್ಮ ಶಾಲೆಯ ಮುಖ್ಯೋಪಾಧ್ಯಾಯರು. ದೊಡ್ಡ ವಿದ್ವಾಂಸರು. ೧೦ ನೇ ವರ್ಗದಲ್ಲಿದ್ದಾಗ ಲೋಕಸೇವಾ ಆಯೋಗದ ಪರೀಕ್ಷೆಗೆಂದು ಮುಂಬಯಿಗೆ ನಾನು ಹೋದ ಸಂದರ್ಭದಲ್ಲಿ ೧ ವಾರ ಪ್ರ. ಗೋ. ಕುಲಕರ್ಣಿ ಅವರ ಮಗನ ರೂಮಿನಲ್ಲಿ ಉಳಿದುಕೊಂಡಿದ್ದೆ (ವಿಲೇ ಪಾರ್ಲೆ). ಬೆಳಗಾವಿಯ ಅದೇ ಶಾಲೆಯಲ್ಲಿದ್ದ ಪಾಟೀಲ ಎಂಬ ಗುರುಗಳೂ ಲೇಖಕರು. ಅವರ ಕಾದಂಬರಿಗಳನ್ನು ನಾನು ಆವಾಗ ಓದಿದ್ದೆ. ಸ್ನೇಹಿತ ರಾಜಾ ಕೊಡುವ ಪುಸ್ತಕಗಳನ್ನೂ ಓದುತ್ತಿದ್ದೆ. ನಮ್ಮ ತಂದೆ ಬೆಳಗಾವಿಯ ಗಣಪತಗಲ್ಲಿ ಸಾರ್ವಜನಿಕ ವಾಚನಾಲಯದಿಂದ ತರುವ ಎಲ್ಲ ಪುಸ್ತಕಗಳನ್ನು ಓದುತ್ತಿದ್ದೆ. ಅವರು ರಾತ್ರಿ ಮಲಗಿದ ಮೇಲೆ ಅಟ್ಟದ ಮೇಲೆ ನನ್ನ ರಗ್ಗ ಹೊದೆದುಕೊಂಡು ಚಿಮಣಿ ಬೆಳಕಿನಲ್ಲಿ ತಂದೆ ತರುವ ಪ್ರೇಮಚಂದ-ಶರಶ್ಚಂದ್ರ ಸಾಹಿತ್ಯವನ್ನು ರಾತ್ರಿ ರಾತ್ರಿ ಓದಿ ಮುಗಿಸಿ ಮಲಗುತ್ತಿದ್ದೆ. ನಮ್ಮ ಮನೆಯಲ್ಲಿ ಸದ್ಬೋಧ ಚಂದ್ರಿಕೆ ಮಾಸಿಕದ ಹಳೆಯ ಸಂಚಿಕೆಗಳನ್ನು ಬಾಯಿಂಡ ಮಾಡಿ ಇಟ್ಟಿದ್ದರು. ಅಲ್ಲಿಯ ಧಾರಾವಾಹಿಗಳನ್ನೂ ಓದಿದೆ. ಹಾಯಸ್ಕೂಲಿಗೆ ಹೋಗುವಾಗ ಬೆಳಗಾವಿಯ ಸಾರ್ವಜನಿಕ ವಾಚನಾಲಯದಿಂದ ನಾನೇ ಪುಸ್ತಕ ತೆಗೆದುಕೊಂಡು ಬರುವಂತೆ ತಂದೆ ವಾಚನಾಲಯದ ಕಟ್ಟಿ ಎಂಬ ಅಧಿಕಾರಿಗೆ ಹೇಳಿ ಒಪ್ಪಿಗೆ ಪಡೆದುಕೊಂಡಿದ್ದರು. ಶ್ರೀ ಕಟ್ಟಿಯವರು ೫ ನೇ ವರ್ಗದಿಂದಲೇ ನನ್ನ ಗುರುಗಳಾಗಿದ್ದ ಗೋವಿಂದ ಶ್ರೀನಿವಾಸ ಯಕ್ಕುಂಡಿ ಅವರ ಹೆಂಡತಿಯ ತಮ್ಮ. ಹೊಸ ಪುಸ್ತಕ ಬಂದ ಕೂಡಲೇ ಆ ಪುಸ್ತಕ ನನಗೆ ಸುಲಭವಾಗಿ ಸಿಗುತ್ತಿತ್ತು. ಈ ರೀತಿ ಓದುವ ಹವ್ಯಾಸವನ್ನು ಬೆಳೆಯಿಸಿದ ನನ್ನ ಗುರುಗಳಾದ ತಂದೆಯವರಿಗೆ-ಶ್ರೀ ಕಟ್ಟಿಯವರಿಗೆ ನಾನು ಚಿರಋಣಿ. ನನ್ನ ಜೀವನದ ಕಠಿಣ ಸಮಸ್ಯೆಗಳನ್ನೆಲ್ಲ ನನ್ನ ಓದುಗಾರಿಕೆ ಮರೆಸಿದೆ. ನನ್ನನ್ನು ಪ್ರಸನ್ನನನ್ನಾಗಿ ಮಾಡಿದೆ.

ನನ್ನ ಅತ್ಯಂತ ಪ್ರೀತಿಯ ಗುರುಗಳಾದ ಶ್ರೀ ಯಕ್ಕುಂಡಿಯವರ ಮನೆಯಲ್ಲಿಯೇ ನಾನು ೫-೬-೭ ನೇ ವರ್ಗಗಳನ್ನು ಕಲಿಯುವಾಗ ಇರುತ್ತಿದ್ದೆ. ಊಟಕ್ಕೆ ಮಾತ್ರ ಮನೆಗೆ. ಯಕ್ಕುಂಡಿಯವರು ಪಾಶ್ಚಾಪುರ(ಬೆಳಗಾವಿ ಜಿಲ್ಲೆ)ದ ರಾಷ್ಟ್ರೀಯ ಶಾಲೆಯಲ್ಲಿ ಶಿಕ್ಷಕರಾಗಿದ್ದವರು. ನಮ್ಮ ತಂದೆಯೂ ಪಾಶ್ಚಾಪುರದ ಸ್ಕೂಲ ಬೋರ್ಡ ಕನ್ನಡ ಶಾಲೆಯಲ್ಲಿ ದಶಕಗಳ ಕಾಲ ಮಾಸ್ತರರಾಗಿದ್ದರು. ಪಾಶ್ಚಾಪುರದ ಕಾಂಗ್ರೆಸ್ ಕಾರ್ಯಕರ್ತರಾದ ಅಣ್ಣು ಗುರೂಜಿ, ಶೇಖ, ಜೋಶಿ ಡಾಕ್ಟರ, ಯಕ್ಕುಂಡಿ ಗುರೂಜಿಗಳ ಒಡನಾಡಿಯಾದ ನನ್ನ ತಂದೆ ಭಾರತ ಬಿಟ್ಟು ತೊಲಗಿರಿ ಆಂದೋಲನದಲ್ಲಿ ಗುಪ್ತರೀತಿಯಿಂದ ಸರಕಾರಿ ಶಿಕ್ಷಕರಾಗಿದ್ದರೂ ಭಾಗವಹಿಸುತ್ತಿದ್ದರು. ಇವರೆಲ್ಲರನ್ನು ಅರೆಸ್ಟ ಮಾಡುತ್ತಾರೆ ಎಂಬ ಸುದ್ದಿ ನಮ್ಮ ಕುಟುಂಬದ ಹಿತೈಷಿಗಳೂ ೩೦, ೪೦ ದಶಕದ ಪ್ರಭಾವಿ ಮುಂದಾಳುಗಳಾಗಿದ್ದ ಭರಮಪ್ಪಗೌಡ ಪಾಟೀಲ (ಭ. ಲಿಂ. ಪಾಟೀಲ, ದಲಾಲಿ ವರ್ತಕರು)ರಿಗೆ ಗೊತ್ತಾಗಿ ಕೂಡಲೇ ನನ್ನ ತಂದೆಯನ್ನು ಪಾಶ್ಚಾಪುರದಿಂದ ಬೆಳಗಾವಿಗೆ ಬದಲಿ ಮಾಡಿಸಿದರು. ಹೀಗಾಗಿ ಜೈಲಿಗೆ ಹೋಗುವದು ತಪ್ಪಿತು.

ಮುಂದೆ ಯಕ್ಕುಂಡಿ ಗುರೂಜಿಯವರನ್ನು ನಮ್ಮ ಊರು ಕಣಬರಗಿಗೆ ಇಂಗ್ಲಿಷ ಕ್ಲಾಸ ಟೀಚರ ಎಂದು, ಅವರು ರಾಷ್ಟ್ರೀಯ ಶಾಲೆಯಲ್ಲಿ ಕೆಲಸ ಮಾಡಿದವರು ಮತ್ತು ಆವಾಗ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆ ಪಾಸು ಮಾಡಿದವರು ಎಂದು, ಸ್ಕೂಲ ಬೋರ್ಡ ನೇಮಕ ಮಾಡಿತು. ಕನ್ನಡ ಶಾಲೆಯಲ್ಲಿ ೫ ನೇ ವರ್ಗದಿಂದ ಇಂಗ್ಲೀಷ ಕಲಿಸಲು ಪ್ರಾರಂಭ ಮಾಡಿದ

ವಿರಳ ಶಾಲೆಗಳಲ್ಲಿ ನನ್ನ ಕಣಬರಗಿಯ ಶಾಲೆಯೂ ಒಂದಾಗಿತ್ತು. ಭರಮಪ್ಪಗೌಡರು ಇಂಗ್ಲಿಷ ವರ್ಗಗಳಿಗೆ ಆವಾಗ ಬೆಂಚ-ಡೆಸ್ಕ ಮಾಡಿಸಿಕೊಟ್ಟರು. ೫, ೬, ೭ ನೆಯ ವರ್ಗದ ವಿದ್ಯಾರ್ಥಿಗಳು ಇಂಗ್ಲೀಷ ಅವಧಿ ಇದ್ದಾಗ ಹೆಮ್ಮೆಯಿಂದ ಬೆಂಚ ಮೇಲೆ ಕುಳಿತು ಕಲಿತು ಬರುತ್ತಿದ್ದರು. ಯಕ್ಕುಂಡಿ ಗುರುಗಳನ್ನು ನಾವೆಲ್ಲ ಇಂಗ್ಲೀಷ ಮಾಸ್ತರ ಎಂದೇ ಕರೆಯುತ್ತಿದ್ದೆವು. ಗಾಂಧೀ ಪ್ರಣಾಲಿಯ ಶಾಲೆಯಲ್ಲಿ ಕೆಲಸ ಮಾಡಿದ ಯಕ್ಕುಂಡಿ ಗುರುಗಳು ಕಣಬರಗಿಯಲ್ಲಿ ನಾಡಹಬ್ಬ, ಗಣಪತಿ ಉತ್ಸವ, ರಾಷ್ಟ್ರೀಯ ದಿನಾಚರಣೆಗಳನ್ನು ಆಚರಿಸಲು ಪ್ರಾರಂಭಿಸಿದರು. ನಾವು ಹುರುಪಿನಿಂದ ಉತ್ಸವಗಳು ಮತ್ತು ಪ್ರಭಾತ ಫೇರಿಗಳಲ್ಲಿ ಭಾಗವಹಿಸುತ್ತಿದ್ದೆವು. ಇದೇ ಕಾಲಕ್ಕೆ ನಾ. ಸು. ಹರ್ಡೀಕರ ಅವರಿಂದ ಪ್ರಾರಂಭವಾದ ರಾಷ್ಟ್ರೀಯ ಸೇವಾ ದಳ(ಆರ್.ಎಸ್.ಡಿ.)ದ ಶಾಖೆ ಕಣಬರಗಿಯಲ್ಲಿ ಪ್ರಾರಂಭವಾಯಿತು. ದಿನಾಲು ಸಂಜೆ ನಾವು ೫-೩೦ ರಿಂದ ೭ ಗಂಟೆಯ ವರೆಗೆ ಸೇವಾದಳಕ್ಕೆ ಹೋಗಿ ಆಟವಾಡುತ್ತಿದ್ದೆವು.

ಯಕ್ಕುಂಡಿ ಗುರುಗಳ ಮನೆಯಲ್ಲಿ ಒಂದು ಕಪಾಟಿನಲ್ಲಿ ಮಕ್ಕಳಿಗೆ ಬೇಕಾಗುವ ಪುಸ್ತಕಗಳ ಸಂಕಲನವಿತ್ತು. ವಿದ್ಯಾರ್ಥಿಗಳು ಯಾವ ಆತಂಕವಿಲ್ಲದೆ ಅಲ್ಲಿಯ ಪುಸ್ತಕಗಳನ್ನು ಓದಬಹುದಿತ್ತು. ಉಡುಪಿಯ ಒಂದಾಣೆ ಮಾಲೆ ಮತ್ತಿತರ ಎಲ್ಲ ಮಕ್ಕಳ ಪುಸ್ತಕಗಳನ್ನು ಸ್ವಂತ ಖರ್ಚಿನಿಂದ ಯಕ್ಕುಂಡಿ ಗುರುಗಳು ಖರೀದಿಸಿ ಮಕ್ಕಳಿಗೆ ಓದಲು ನೀಡುತ್ತಿದ್ದರು. ನಮ್ಮ ಊರಿನ ಪ್ರಮುಖ ನಾಗರಿಕರಾದ ಭರಮಪ್ಪಗೌಡರು ಕಾರಂತರ ಬಾಲಪ್ರಪಂಚವನ್ನು ನಮಗೆ ಓದಲು ಕೊಡಿಸಿದ್ದರು. ಶಾಲೆಯಲ್ಲಿ ನಾಟಕ, ಆಟ, ಯೋಗಾಸನ, ಭಾಷಣ ಮುಂತಾದ ಚಟುವಟಿಕೆಗಳ ಹಿಂದಿನ ಪ್ರೇರಕಶಕ್ತಿ ಯಕ್ಕುಂಡಿ ಗುರುಗಳೇ ಆಗಿದ್ದರು. ಅವರಿಗೆ ಮಕ್ಕಳಿರಲಿಲ್ಲ. ಗುರುಮಾತೆ ಭಾಗೀರಥಿಬಾಯಿಯವರು ನನ್ನನ್ನು ಮಗನೆಂದು ತಿಳಿದು ಲಾಲಿಸಿದರು. ಗುರುಮಾತೆಯವರ ತಮ್ಮ ವಸಂತ ನನ್ನ ಸ್ನೇಹಿತನಾಗಿದ್ದ. ಗುರುಮಾತೆಯವರ ತಂಗಿ ಶಾಂತಕ್ಕನ ಮದುವೆ ಶಾಹಪೂರ(ಬೆಳಗಾವಿ)ದಲ್ಲಿ ಆದಾಗ ಕಣಬರಗಿಯಿಂದ ಹಾಲಿನ ಬಿಂದಿಗೆಯನ್ನು ಹೊತ್ತುಕೊಂಡು ೮ ಕಿ.ಮೀ. ನಡೆದುಕೊಂಡೇ ಖುಶಿಯಿಂದ ನಾನು ತೆಗೆದುಕೊಂಡು ಹೋಗಿದ್ದೆ. ಅಚ್ಚ ಖಾದೀಧಾರಿಗಳಾದ ಯಕ್ಕುಂಡಿಯವರು ನನ್ನಲ್ಲಿ ರಾಷ್ಟ್ರೀಯ ಭಾವನೆ ಜಾಗೃತವಾಗುವಂತೆ, ಸತ್ಯ, ತ್ಯಾಗ, ಪರಿಶ್ರಮ ಗುಣಗಳು ಮೂಡುವಂತೆ ಪ್ರೇರಕ ಶಕ್ತಿಯಾಗಿದ್ದರು.

ಗಣಿತ, ಕನ್ನಡ, ಇತಿಹಾಸ, ಭೂಗೋಲ ಕಲಿಸುತ್ತಿದ್ದ ಗುಂಡೂ (ಗುಂಡೋ ಚಿದಂಬರ ಕುಲಕರ್ಣಿ) ಮಾಸ್ತರರು ದಿನಾಲು ರಸವತ್ತಾಗಿ ರಾಮಾಯಣ, ಮಹಾಭಾರತದ ಕತೆಗಳನ್ನು ನಮಗೆ ಹೇಳುತ್ತಿದ್ದರು. ಅವರು ನಮ್ಮ ಊರ ಗುಡ್ಡದಲ್ಲಿ ಇರುವ ಸಿದ್ಧೇಶ್ವರ ಗುಡಿಗೆ ತಪ್ಪದೇ ನಡೆದುಕೊಂಡೇ ಹೋಗುತ್ತಿದ್ದರು. ನಾವು ರವಿವಾರಕ್ಕೊಮ್ಮೆ ರಾಮತೀರ್ಥಕ್ಕೆ ಹೋಗಿ ಬಟ್ಟೆಬರೆ ಒಗೆದುಕೊಂಡು ಸ್ನಾನ ಮಾಡಿ, ಅಡಿಗೆ ಮಾಡಿಕೊಂಡು ಊಟ ಮಾಡಿ, ಸಂಜೆ ಗುಡ್ಡ ಹತ್ತಿ ಇಳಿದು ಬರುತ್ತಿದ್ದೆವು (ಟ್ರಾಕಿಂಗ್).

ನಿಬಂಧಗಳನ್ನು ಬರೆಯುವದೆಂದರೆ ನನಗೆ ಹುರುಪು. ನನ್ನ ತಂದೆ ರಾತ್ರಿಯ ಅಭ್ಯಾಸದ ವೇಳೆಯಲ್ಲಿ ಒಮ್ಮೆ ಆಕಳ ಬಗೆಗೆ ನಿಬಂಧ ಬರೆಯಲು ಹೇಳಿದ್ದರು. ಪಕ್ಕದ ಮನೆಯ ಭರಮಪ್ಪಗೌಡರ ಚಿಕ್ಕ ಮಕ್ಕಳೂ ಅಭ್ಯಾಸ ಮಾಡಲು ನಮ್ಮ ಮನೆಗೆ ಬರುತ್ತಿದ್ದರು. ನಿಬಂಧ ಓದು ಎಂದು ತಂದೆಯವರು ಹೇಳಿದಾಗ ಅವರುಗಳು ಡೊಗ್ಗಾಲ ಮಂಡಿಯೂರಿ ಕಂದೀಲಿನ

ಬೆಳಕಿನಲ್ಲಿ ತಾವು ಬರೆದದ್ದನ್ನು ಓದಿದರು. ಇದೇನಿದು ಬಹಳ ಹಗುರ ಎಂದು ನಾನು ಬರೆದಿರಲಿಲ್ಲ. ತಂದೆ ನನಗೆ ಕೇಳುವದಿಲ್ಲ ಎಂಬ ಭಾವನೆ ನನ್ನದಾಗಿತ್ತು. ನನಗೂ ಓದು ಎಂದು ಹೇಳಿದ ಕೂಡಲೆ ನಾನು ಪೇಚಾಟಕ್ಕೆ ಬಿದ್ದೆ. ಕಾಲು ಮಡಚಿ, ಚಕ್ಕಮುಕಳಿ (ಪದ್ಮಾಸನ) ಹಾಕಿ ಕುಳಿತುಕೊಂಡು ಪಾಟಿಯನ್ನು ಮುಖಕ್ಕೆ ನೇರವಾಗಿ ಹಿಡಿದುಕೊಂಡು ನಾನು ಬರೆಯದೇ ಇದ್ದ ನಿಬಂಧವನ್ನು ಸುಮ್ಮನೆ ಓದತೊಡಗಿದೆ. ನನ್ನ ತಂದೆ 'ಲಾಟಣ ಬೆಳಕಿನಲ್ಲಿ ಓದು. ಪಾಟೀ ಕೆಳಗೆ ಮಾಡು' ಎಂದರು. ನಿರ್ವಾಹ ಇಲ್ಲದೆ ಪಾಟೀ ಕೆಳಗೆ ಮಾಡಿದೆ. ನಾನು ಬರೆದದ್ದನ್ನು ನಮ್ಮ ತಂದೆ ನನ್ನ ಪಕ್ಕದಲ್ಲಿ ಕುಳಿತಿದ್ದ ಹುಡಗಿಯೊಬ್ಬಳಿಗೆ ಓದಲು ಕೊಡುವಂತೆ ಹೇಳಿದರು. ನನ್ನ ಪಾಟಿ ಅವಳಿಗೆ ಕೊಟ್ಟೆ. ಅವಳೂ ತಬ್ಬಿಬ್ಬು. ಅಲ್ಲಿ ಏನೂ ಬರೆದಿರಲಿಲ್ಲ. ನನ್ನ ತಂದೆಗೆ ಈ ವಿಷಯ ತಿಳಿದು ಸಿಟ್ಟು ಬಂದಿತು. 'ಲಫಂಗ ಮಗನೇ, ಸುಳ್ಳ ಹೇಳತೀ, ಮೋಸಾ ಮಾಡತೀ' ಎಂದು ಬಡೆಯಲು ಕೈ ಎತ್ತಿದರು, ಆದರೂ ಬಡೆಯದೆ, ನನ್ನ ಪಕ್ಕದಲ್ಲಿ ಕುಳಿತ ಆ ಹುಡಗಿಗೆ ನನಗೆ ೫ ಬಾರಿ ಗುದ್ದಲು ಹೇಳಿದರು. ಆಕೆ ನನ್ನ ಸ್ನೇಹಿತೆ. ಲೆಕ್ಕಗಳನ್ನು ಅವಳಿಗೆ ನಾನು ಹೇಳಿಕೊಡುತ್ತಿದ್ದೆ. ನಾನು ಬಾಗಿ ನಿಂತೆ. ಅವಳು ಎದ್ದು ಸುಮ್ಮನೆ ನನ್ನನ್ನು ಗುದ್ದಿದಂತೆ ಮಾಡಿದಳು. 'ಏನವಾ, ಗಣಿತ ಹೇಳಿಕೊಡತಾನ ಅಂತ ತಮ್ಮನಿಗೆ ಸಾವಕಾಶ ಗುದ್ದಿದಿ ಏನು' ಎಂದು ಕೇಳಿ, ನಕ್ಕು 'ತಪ್ಪು ಮಾಡಿದವರಿಗೆ ಶಿಕ್ಷೆ ಆಗಲೇಬೇಕು' ಎಂದು ಹೇಳಿದರು. ಹೀಗೆ ನನ್ನ ತಂದೆ ಯಾವುದೇ ಪ್ರಸಂಗ ಇರಲಿ, ಮೌಲ್ಯಗಳ ಪ್ರತಿಪಾದನೆಯನ್ನು ಆ ಕ್ಷಣವೇ ಮಾಡುತ್ತಿದ್ದರು.

ಒಮ್ಮೆ ನಮ್ಮ ಯಕ್ಕುಂಡಿ ಗುರೂಜಿಯವರು ೫ ನೇ ವರ್ಗದಲ್ಲಿ ಇದ್ದ ನಮಗೆ ಮಾವಿನ ತೋಟದ ಬಗೆಗೆ ನಿಬಂಧ ಬರೆಯಲು ಹೇಳಿದರು. ಒಬ್ಬರ ನಿಬಂಧವನ್ನು ಮತ್ತೊಬ್ಬರ ಕಡೆಯಿಂದ ಗುರುಗಳು ಓದಿಸುತ್ತಿದ್ದರು. ನನ್ನ ಮಿತ್ರ ಬಾಬುವಿನ ನಿಬಂಧ ನಾನು ಓದುತ್ತಿದ್ದೆ. ಅವನು, 'ಆಹಾ! ಮಾವಿನಕಾಯಿ ಪಾಡ ಆಗಿವೆ. ಅವುಗಳನ್ನು ಹರಿಯಬೇಕೆಂದರೆ ಕಾವಲುಗಾರ ಬೆನ್ನಟ್ಟಿ ಬರುತ್ತಾನೆ. ಕಾವಲುಗಾರ ಬೇರೆ ಕಡೆಗೆ ಹೋಗುವಂತೆ ಮಾಡಿ ಪಾಡ ಮಾವಿನಕಾಯಿ ಹರಿಯಬೇಕು' ಎಂದು ಬರೆದಿದ್ದ. ನಾನು ಅದನ್ನು ಓದಿದೆ. ಗುರುಗಳು ತಮ್ಮ ಬಚ್ಚಬಾಯಿ ಯಿಂದ ಮನಸಾರೆ ನಕ್ಕು, ತಮ್ಮದಲ್ಲದ ವಸ್ತುವಿಗೆ ಆಸೆ ಪಡಬಾರದು ಎಂದು ತಿಳಿಸಿದರು. 'ಚನ್ನಾಗಿ ಖರೇ ವಿಚಾರಗಳನ್ನು ಬರೆದಿದ್ದೀಯಾ' ಎಂದು ನನ್ನ ಮಿತ್ರನನ್ನು ಶ್ಲಾಘಿಸಿದರು.

ನಮ್ಮದೊಂದು ಮಾವಿನ ತೋಟವಿತ್ತು. ನಾನು ಬಹಳಷ್ಟು ಹಣ್ಣುಗಳನ್ನು ತಿನ್ನುತ್ತಿದ್ದೆ. ಮಾವಿನ ಸುಗ್ಗಿಯಲ್ಲಿ ನನ್ನ ಕೈ ಬೆರಳು, ಅಂಗಿ ಮಾವಿನಹಣ್ಣಿನ ವಾಸನೆಯಲ್ಲಿ. ಯಕ್ಕುಂಡಿ ಗುರುಗಳು ಒಮ್ಮೆ 'ಏನೋ ಶಂಕರ, ನೀ ಒಬ್ಬನೇ ಮಾವಿನ ಹಣ್ಣ ತಿಂತಿ ಏನು? ನಿನ್ನ ಗೆಳೆಯರಿಗೂ ತಂದು ಕೊಡು', ಎಂದು ಸಹಜವಾಗಿ ಹೇಳಿದರು. ನನ್ನ ತಾಯಿಗೆ ಇದನ್ನು ನಾನು ತಿಳಿಸಿ ಶಾಲೆಗೆ ಮಾವಿನ ಹಣ್ಣು ತೆಗೆದುಕೊಂಡು ಹೋಗುವೆ ಎಂದು ಹೇಳಿದೆ. ಆಕೆ, 'ಶಾಲೆಯೊಳಗೆ ಭಾಳ ಹುಡುಗೋರ ಇರತಾರ. ಒಬ್ಬರಿಗೆ ಕೊಟ್ಟು ಒಬ್ಬರಿಗೆ ಬಿಡಲಿಕ್ಕೆ ಬರುವದಿಲ್ಲ. ನಿನ್ನ ಗೆಳೆಯರಿಗೆ ಮನಿಗೆ ಕರೆದು ಹಣ್ಣು ಕೊಡು' ಎಂದು ಹೇಳಿದಳು. ನಾನು ಹಾಗೇ ಮಾಡಿದೆ. ಗುರುಗಳಿಗೆ ಈ ವಿಷಯ ಗೊತ್ತಾಗಿ ಬಸವಣ್ಣನವರ ದಾಸೋಹ ತತ್ವ ನಮಗೆ ತಿಳಿಸಿ ಹೇಳಿದರು.

ನಮ್ಮ ಶಾಲೆಯ ಎದುರುಗಡೆ ನಾರಾಯಣನ ಅಂಗಡಿ ಇದ್ದಿತು. ಅವನು ಆಗಾಗ ಬಜಿ ಮಿರ್ಚಿ ಮಾಡುತ್ತಿದ್ದ. ನಾನು ಸ್ವಾಮಿಗಳ ಮನೆತನದ ಹುಡುಗನಾದುದರಿಂದ ಆಗಾಗ ಲಿಂಗಾಯತ ಭಕ್ತರ ಮನೆಗೆ ಊಟಕ್ಕೆ ಹೋಗುತ್ತಿದ್ದೆ. ಆಗ ಅವರುಗಳು ಊಟ ಆದ ಮೇಲೆ ೧ ದುಡ್ಡು, ೨ ದುಡ್ಡು, ೧ ಆಣೆ, ೫ ದುಡ್ಡು ಹೀಗೆ ದಕ್ಷಿಣೆ ಕೊಡುತ್ತಿದ್ದರು. ಅವನ್ನೆಲ್ಲ ಕೂಡಿಸಿ ನಾನು ನನ್ನ ತಾಯಿಗೆ ನೀಡುತ್ತಿದ್ದೆ. ಒಮ್ಮೆ ದಕ್ಷಿಣೆಯ ಹಣದಲ್ಲಿ ೨ ಆಣೆ ತಾಯಿಗೆ ಹೇಳದೆ ಉಳಿಸಿಕೊಂಡು ಸ್ನೇಹಿತರುಗಳು ಬಜಿ ತಿಂದೆವು. ನಮಗೆ ೨ ಕ್ಕೆ (ಡೀಸೆಂಟ್ರಿ) ಹತ್ತಿಬಿಟ್ಟಿತು. ನನ್ನ ಸೋದರಮಾವ ನಾಗಯ್ಯ ಆಯುರ್ವೇದ ಡಾಕ್ಟರನಾಗಿದ್ದ. ಅವನ ಹತ್ತಿರ ಹೋಗಿ ಔಷಧ ತೆಗೆದುಕೊಂಡೆವು. ಈ ವಿಷಯ ಯಕ್ಕುಂಡಿ ಗುರುಗಳಿಗೆ ಗೊತ್ತು ಆಗಿ, ಸುಳ್ಳು ಹೇಳಿ ರೊಕ್ಕ ಉಳಿಸಿಕೊಳ್ಳುವದು, ಸಿಕ್ಕಿದ್ದನ್ನೆಲ್ಲ ತಿನ್ನುವದು ಮುಂತಾದ ಬಗೆಗೆ ಉಪದೇಶ ಹೇಳಿ, ನೀವು ಸುಳ್ಳು ಮಾತನಾಡಿದರೆ ನಾನು ಉಪವಾಸ ಮಾಡುತ್ತೇನೆ ಎಂದು ೧ ದಿನ ಉಪವಾಸ ಮಾಡಿದರು. ನಮ್ಮ ಗುರುಗಳ ಎದುರಿಗೆ ಸುಳ್ಳು ಹೇಳುವದಿಲ್ಲ ಎಂದು ಪ್ರತಿಜ್ಞೆ ಮಾಡಿದೆ. ಗುರುಗಳಿಗೆ ಸಂತೋಷವಾಯಿತು.

ಸ್ವಾತಂತ್ರ್ಯಯೋಧರೂ ರಾಷ್ಟ್ರೀಯ ಶಾಲೆಯ ಮಾಸ್ತರರೂ ಆಗಿದ್ದರಿಂದ ನನ್ನ ಗುರುಗಳ ಪರಿಚಯ ಮುಂಬಯಿ ರಾಜ್ಯದ ಮುಖ್ಯಮಂತ್ರಿ ಮತ್ತು ಶಿಕ್ಷಣಮಂತ್ರಿಗಳಾದ ಬಿ. ಜಿ. ಖೇರ ಅವರಿಗೆ ಇತ್ತು. ಆಗ ಯಕ್ಕುಂಡಿ ಗುರುಗಳಿಗೆ ಬಡತಿ ನೀಡಿ ಎ.ಡಿ.ಇ.ಆಯ್. ಎಂದು ಇನಸ್ಪೆಕ್ಟರ್ ಮಾಡಿ ಬೇರೆ ಕಡೆಗೆ ವರ್ಗ ಮಾಡಿದರು. ಅಲ್ಲಿಂದ ನಿವೃತ್ತರಾಗಿ ಗುರುಗಳು ೧೯೫೬ ನೇ ಇಸ್ವಿಗೆ ಬೆಂಗಳೂರಿಗೆ, ತಮ್ಮ ಹೆಂಡತಿಯ ತಮ್ಮ– ನನ್ನ ಮಿತ್ರ– ವಸಂತನ ಮನೆಗೆ ಹೋದರು. ನಾನು ೧೯೫೮, ೫೯, ೬೧ ರಲ್ಲಿ ಬೆಂಗಳೂರಿನಲ್ಲಿ ಇದ್ದಾಗ ಆಗಾಗ ಅವರ ಮನೆಗೆ ಹೋಗುತ್ತಿದ್ದೆ. ತಪ್ಪದೆ ಕಾಲುಮುಟ್ಟಿ ನಮಸ್ಕರಿಸುತ್ತಿದ್ದೆ. ಬೆಂಗಳೂರಿನ ರಾಜಾಜಿನಗರದ ವಿದ್ಯಾವರ್ಧಕ ಸಂಘದ ಶಾಲಾ ಸಂಕೀರ್ಣವನ್ನು ಕಟ್ಟುವಲ್ಲಿ ನನ್ನ ಗುರುಗಳ ದುಡಿಮೆ ಮಹತ್ವದ ಪಾತ್ರವಾಡಿದೆ. ನಾನು ಧಾರವಾಡದಲ್ಲಿ ನೌಕರಿ ಮಾಡುತ್ತಿದ್ದಾಗ ಗುರುಗಳು ಅಲ್ಲಿಗೆ ಬಂದಾಗ ನಮ್ಮ ಮನೆಗೆ ಬಂದು ಹೋಗುತ್ತಿದ್ದರು. ೧೯೬೫ ರಲ್ಲಿ ನನ್ನ ಮಗಳಿಗೆ ಖಾದಿ ಸ್ವೆಟರ-ಕೊಂಚಿಗೆ-ಅಂಗಿಯನ್ನು ಕಾಣಿಕೆಯಾಗಿ ಕೊಟ್ಟರು. ನನ್ನ ಹೆಂಡತಿ ಗುರುಗಳ ಆ ಕಾಣಿಕೆಯನ್ನು ಇನ್ನೂ ತನ್ನ ಪಳೆಯುಳಿಕೆಯಲ್ಲಿ ಇಟ್ಟುಕೊಂಡಿದ್ದಾಳೆ.

ಹಾಯಸ್ಕೂಲಿನ ೮, ೯, ೧೦, ೧೧ ನೇ ವರ್ಗದಲ್ಲಿ ಕಲಿಯುತ್ತಿದ್ದಾಗ ನನ್ನ ಗುರುಗಳಾದ ಎಂ. ಅಕಬರ ಅಲಿ ಅವರ ಪ್ರೇರಣೆಯಿಂದ ನಾನು ಸಾಹಿತ್ಯಿಕ ಚಟುವಟಿಕೆಯಲ್ಲಿ ತೊಡಗಿಸಿಕೊಂಡೆ. ಓದು, ಚರ್ಚೆ, ಕಾರ್ಯಕ್ರಮಗಳ ಏರ್ಪಾಡು ಮಾಡುವಿಕೆ, ಕೈಬರಹದ ಪತ್ರಿಕೆ ತೆಗೆಯುವದು ಮುಂತಾದ ಕಾರ್ಯವನ್ನು ಯುವಕ ಕಲಾವೃಂದದ ಮೂಲಕ ನಾವು ಮಾಡುತ್ತಿದ್ದೆವು. ಅಕಬರ ಅಲಿಯವರ ಪ್ರೇರಣೆಯಿಂದ ಎಡಪಂಥೀಯ ವಿಚಾರಧಾರೆ, ಆರ್ಥಿಕ ಸಮಾನತೆ, ಸಾಮಾಜಿಕ ನ್ಯಾಯ, ಜಾತ್ಯತೀತತೆ, ಸಾಹಿತ್ಯಪ್ರೀತಿ ಮುಂತಾದ ಮೌಲ್ಯಗಳತ್ತ ನಾನು ಆಕರ್ಷಿತನಾದೆ. ಅವರು ಓದಲು ವಿಪುಲ ಸಾಮಗ್ರಿಯನ್ನು ನನಗೆ ನೀಡುತ್ತಿದ್ದರು. ಬೆಳಗಾಮಿಯ ಕ್ಯಾಂಪಿನಲ್ಲಿದ್ದ ಅವರ ಮನೆಯ ಖಾಯಂ ಸದಸ್ಯನಂತೆ ನಾನು ಇರುತ್ತಿದ್ದೆ.

೫೦ ರ ದಶಕದಲ್ಲಿ ಬೆಳಗಾವಿಯಲ್ಲಿ ಕನ್ನಡ ಚಟುವಟಿಕೆಗಳನ್ನು ಸಂಘಟಿಸುವದಕ್ಕಾಗಿ ಬಿ. ಜಿ. ತುರಮರಿ ಗುರುಗಳ ನೇತೃತ್ವದಲ್ಲಿ ಬೆಳಗಾವಿ ಜಿಲ್ಲಾ ಕನ್ನಡ ವಿದ್ಯಾರ್ಥಿ ಕೂಟ (ಬೆಜಿಕವಿಕೂ)ದ ಮೂಲಕ ಗೆಳೆಯ ಅಣ್ಣಪ್ಪ, ಈಶ್ವರ, ಅಡ್ನಣಗಿ, ಘಿವಾರಿ ಅವರೊಂದಿಗೆ ಅನೇಕ ಕಾರ್ಯಗಳನ್ನು ನಾವು ಮಾಡಿದೆವು. ನಾವು ಹಾಯಸ್ಕೂಲ ವಿದ್ಯಾರ್ಥಿಗಳಾಗಿದ್ದಾಗ ನಮ್ಮೂರಿನಲ್ಲಿ ಗೆಳೆಯರ ಬಳಗ ಸಂಸ್ಥೆ ಸ್ಥಾಪಿಸಿ ನಾಟಕ ಮಾಡಿದೆವು. ಒಬ್ಬೊಬ್ಬರು ಒಂದೊಂದು ಪತ್ರಿಕೆಯ ಚಂದಾದಾರರಾಗಿ ನಿಯತಕಾಲಿಕ ವಾಚನಾಲಯ ಮಾಡಿದೆವು. ಶ್ರೀ ಪಾ. ರಾ. ಬಸ್ತಿ ಮಾಸ್ತರರು ಇದನ್ನು ಉತ್ತೇಜಿಸಿದರು. ಈ ಎಲ್ಲ ಶಾಲಾಗುರುಗಳು ನನ್ನ ಜೀವನವನ್ನು ರೂಪಿಸಿದ ರೂವಾರಿಗಳಾಗಿದ್ದಾರೆ.

■ ಶಿವಶಂಕರ ಹಿರೇಮಠ, ಮಂಜುನಾಥ ಕಾಲನಿ, ವಿಮುಕ್ತ, ಶಿವಗಿರಿ, ಧಾರವಾಡ-೫೮೦ ೦೦೭ ■

ಗುಬ್ಬಿ ಬಂದಿತ್ತು

ವಿಜಯಾ ಶ್ರೀಧರ್

ಮೊನ್ನೆ ನಮ್ಮ ಮನೆ ಅಂಗಳಕ್ಕೆ ಒಂದು ಗುಬ್ಬಿ ಬಂದಿತ್ತು. ಎಷ್ಟೊಂದು ನೆನಪುಗಳನ್ನು ಹೊತ್ತು ತಂದಿತ್ತು! ಈಗ ಮೂರು ವರ್ಷಗಳಿಂದ ನಮ್ಮ ಮನೆ, ಹೂತೋಟ, ಶಿವಮೊಗ್ಗ ಸುತ್ತ-ಮುತ್ತಲಿನ ಪ್ರದೇಶದಲ್ಲಿ ಕಾಣೆಯಾಗಿದ್ದ ಗುಬ್ಬಿ ಮತ್ತೆ ಬಂತು ಅಂದರೆ...! ಬೆಂಗಳೂರಿನಲ್ಲೂ ಗುಬ್ಬಿಗಳು ಕಾಣುತ್ತಿಲ್ಲ ಅಂತ ಪತ್ರಿಕೆಗಳ ವಾಚಕರ ವಾಣಿಗಳಲ್ಲಿ ಪ್ರಕಟವಾಗಿದ್ದವು. ಕಾಲಪ್ರವಾಹದಲ್ಲಿ ನಾಶವಾಗಿ ಹೋಗುವ ಜೀವಿಗಳ ಸಾಲಿಗೆ ಗುಬ್ಬಿಯೂ ಸೇರಿ ಹೋಗುತ್ತದೋ ಎಂಬ ಆತಂಕ ಪರಿಸರಪ್ರೇಮಿಗಳನ್ನು ಕಾಡುತ್ತಿತ್ತು. ಆದರೆ ಮೂರು ವರ್ಷಗಳ ನಂತರ ನಮ್ಮಲ್ಲಿ ಸಮೃದ್ಧ ಮಳೆಯಾಗಿದೆ, ಗುಬ್ಬಿಗಳು ಬಂದಿವೆ.

ಕಳೆದ ವಸಂತದ ಪ್ರಾರಂಭದಲ್ಲಿ ಹಾಡುವ ಕೋಗಿಲೆಗಳು ಎಲ್ಲಿ ಮಾಯವಾದವು ಅಂತ ಪರಿಸರಪ್ರೇಮಿ, ಆರ್ಥಿಕ ತಜ್ಞ ಬಿ. ಎಂ. ಕುಮಾರಸ್ವಾಮಿ ಶಿವಮೊಗ್ಗದ ನಾವಿಕ ಪತ್ರಿಕೆಗೆ ಒಂದು ಪತ್ರ ಬರೆದರು. ನಂತರ ಹತ್ತಾರು ಓದುಗರು ಕೋಗಿಲೆಗಳು ಎಲ್ಲೆಲ್ಲಿ ಅಡಗಿವೆ ಅಂತ ಪತ್ತೆ ಹಚ್ಚಿ, ಅವುಗಳ ಬಗೆಗಿನ ಜಾನಪದ ಕಥೆಗಳು, ವೈಜ್ಞಾನಿಕ ವಿವರಗಳು ಪ್ರಕಟವಾಗಿ ಶಿವಮೊಗ್ಗ ಜನತೆಯ ಪ್ರಜ್ಞಾಶಕ್ತಿಯನ್ನು ತೋರಿಸಿತ್ತು. ಆದರೆ ಪಾಪ! ಬಡ ಗುಬ್ಬಿ ಬಗ್ಗೆ ಅಷ್ಟೊಂದು ಗಲಾಟೆ ಆಗಲಿಲ್ಲ. ಆದರೆ ಗುಬ್ಬಿ ಬಗ್ಗೆ ನನ್ನ ಕಾಳಜಿ ಮಾತ್ರ ಹೆಚ್ಚಾಗುತ್ತಲೇ ಇತ್ತು. ನನ್ನ ಗುಬ್ಬಿ ಗೀಳು ಎಂಥ ಪ್ರಭಾವ ಬೀರಿತ್ತು ಅಂದರೆ..... ಪ್ರವಾಸ ಕಾಲದಲ್ಲಿ ಹಳ್ಳಿ ಮನೆ ಮೇಲೆ ಗುಬ್ಬಿ ಕಣ್ಣಿಗೆ ಬಿದ್ದರೆ ಯಜಮಾನರ ಮೊಬೈಲ್ ಫೋನು ಮುಖಾಂತರ ಮನೆಗೆ ಫೋನು ಮಾಡಿ ಇಲ್ಲೊಂದು ಗುಬ್ಬಿ ಇದೆ ಅಂತ ಹೇಳುವ ತವಕ! 'ಗುಬ್ಬಿ' ಊರಿನ ಮುಖಾಂತರ ಹಾದು ಹೋಗುವಾಗ ಇದೊಂದು ಹೆಸರಾಗಿ ಮಾತ್ರ ಉಳಿದುಕೊಳ್ಳುತ್ತದೋ ಅಂತ ಭಯವಾಗುತ್ತಿತ್ತು. ಗುಬ್ಬಿ ವೀರಣ್ಣನವರ ದೈತ್ಯ ಪ್ರತಿಭೆಯ ನೆನಪೂ ತರುವ 'ಗುಬ್ಬಿ'.

ಹೀಗಿರುವಾಗ ಮೊನ್ನೆ ನಮ್ಮ ಅಂಗಳಕ್ಕೆ ಗುಬ್ಬಿ ಬಂದಿತ್ತು. ರಾಶಿ ನೆನಪುಗಳ ಹೊತ್ತು ತಂದಿತ್ತು. ನಾವು ಪುಟ್ಟ ಮಕ್ಕಳಾಗಿದ್ದಾಗ ೪೫ ವರ್ಷಗಳ ಹಿಂದೆ, ಮಲೆನಾಡಿನ ಅಜ್ಜನ ಮನೆ ಅಂಗಳದಲ್ಲಿ, ಮನೆಯಲ್ಲಿ ಗುಬ್ಬಿಗಳ ಹಿಂಡೇ ಇತ್ತು. ಅಜ್ಜನ ಮನೆ ಬೆಟ್ಟದಲ್ಲಿ ಭತ್ತದ ಬಣವೆ ಹಾಕಿ, ಭತ್ತ ಬೇರ್ಪಡಿಸಲು ಗಾಣ ತಿರುಗುವ ಸಮಯ ಗುಬ್ಬಿಗಳ ರಾಶಿ

ರಾಶಿ! ಪುಟ್ಟ ಮಕ್ಕಳ ಬೆರಗು ಕಣ್ಣಿಗೆ ಖುಶಿಯೋ ಖುಶಿ!! ಸ್ವಲ್ಪ ದಪ್ಪವಾಗಿ, ಕಪ್ಪು ಬಣ್ಣದ ರೆಕ್ಕೆ ಇರುವುದು ಗಂಡು ಗುಬ್ಬಿಯಂತೆ; ತೆಳ್ಳಗೆ, ಬೆಳ್ಳಗೆ ಇರುವುದು ಹೆಣ್ಣಂತೆ!! ಆಳುಗಳು ಹೇಳುತ್ತಿದ್ದರು.

ಗುಬ್ಬಿಗಳು ಬಂದು ಭತ್ತ ತಿನ್ನುತ್ತಿದ್ದವು, 'ಹುಶ್' ಎಂದರೆ ಭರ್ರನೆ ಹಾರಿ ಹೋಗುತ್ತಿದ್ದವು. ರಾತ್ರಿ ಅಜ್ಜನ ಮನೆಯ ದೊಡ್ಡ ಚಾವಡಿಯಲ್ಲಿ ಸಾಲಾಗಿ ಮಲಗಿದರೆ ಅಜ್ಜಿಯ ಕತೆಗಳು. ಮಾತು ಕಲಿಯುವ ಮೊದಲೇ ಕೇಳಿದ ಕತೆ 'ಕಾಗಕ್ಕ-ಗುಬ್ಬಕ್ಕ'. ಕಾಗಕ್ಕ ಕೆಟ್ಟವಳು, ಕಪ್ಪು, ಒರಟು. ಗುಬ್ಬಕ್ಕ ಬೆಳ್ಳಗೆ, ನಾಜೂಕು, ಒಳ್ಳೆಯವಳು. ಕಾಗಕ್ಕ ಶೆಗಣಿ ಮನೆ ಕಟ್ಟಿದ್ದು, ಗುಬ್ಬಕ್ಕ ಕಲ್ಲಿನ ಮನೆ, ನಿಧಾನವಾಗಿ ಕಟ್ಟಿದ್ದು. ರಾತ್ರಿ ಜೋರಾಗಿ ಗುಡುಗು-ಸಿಡಿಲು-ಮಳೆ ಬಂದು ಕಾಗಕ್ಕನ ಮನೆ ಕೊಚ್ಚಿಹೋದದ್ದು, ಗುಬ್ಬಿಯ ಗಟ್ಟಿ ಮನೆಗೆ ಕಾಗಕ್ಕ ಬಂದು ಆಶ್ರಯ ಬೇಡಿ, ರಾತ್ರಿ ಗುಬ್ಬಿ ಮರಿಗಳನ್ನು ತಿಂದು ದ್ರೋಹ ಮಾಡಿದ ಅದ್ಭುತ-ರಮ್ಯ ಕತೆ ಗುಬ್ಬಿ ಬಗ್ಗೆ ಪ್ರೀತಿ ಹೆಚ್ಚಿಸಿತ್ತು. ಈಗ ಮಧ್ಯ ವಯಸ್ಸು ದಾಟಿದ ಮೇಲೆ ಕಾಗೆಯ ಕಪ್ಪು ಬಣ್ಣವೂ ಸುಂದರವಾಗಿ ಕಾಣುತ್ತದೆ. ಅದರ ಬುದ್ಧಿವಂತಿಕೆ, ಅದರ ಗುಣ ವಿಶೇಷಗಳು ಅರ್ಥವಾಗಿವೆ, ಅದು ಬೇರೆಯ ಮಾತು. ಕಥೆಗಾರ ಶೇಷನಾರಾಯಣರು ಬರೆದ "ಮನೆಯೊಳಗೆ ಕಾಗೆ ಬಂತು" ಕತೆ ಓದಿದ ಮೇಲಂತೂ ಕಾಗೆಯ ಮಹಿಮೆ ಗೊತ್ತಾಗಿದೆ. ಆದರೆ ಬಾಲ್ಯದಲ್ಲಿ ನಾವೆಲ್ಲರೂ ಗುಬ್ಬಿ ಪಕ್ಷಪಾತಿಗಳಾಗಿದ್ದದ್ದಂತೂ ನಿಜ.

ಅಜ್ಜನ ಮನೆಯ ದೊಡ್ಡ ಚಾವಡಿಯಲ್ಲಿ ಹತ್ತಾರು ದೊಡ್ಡ ದೊಡ್ಡ ಫೋಟೋಗಳನ್ನು ಹಾಕಿದ್ದರು. ಎಲ್ಲಾ ರವಿವರ್ಮ ಬಿಡಿಸಿದ್ದಂತೆ. ಮಧ್ಯದಲ್ಲಿ ನಾಲ್ಕು ಅಡಿ ಅಗಲ, ಮೂರು ಅಡಿ ಉದ್ದದ ದೊಡ್ಡ ಕನ್ನಡಿ ಇತ್ತು. ಈ ಎಲ್ಲ ಫೋಟೋಗಳ ಹಿಂದೆ ಗುಬ್ಬಿಗಳ ಸಂಸಾರ ಇರುತ್ತಿತ್ತು. ರಜೆಯಲ್ಲಿ ಅಜ್ಜನ ಮನೆಯಲ್ಲಿ ಮೊಮ್ಮಕ್ಕಳ ಗಲಾಟೆ, ನಮ್ಮ ಗಲಾಟೆ ಮೀರಿಸಿ ಈ ಗುಬ್ಬಿಗಳ ಕಿರುಚಾಟ. ಮೊಟ್ಟೆ ಇಡುವುದು, ಮರಿ ಮಾಡುವುದು, ಮರಿಗೆ ಗುಟುಕು ನೀಡುವುದು, ಗಂಡು-ಹೆಣ್ಣು ಗುಬ್ಬಿಗಳ ಪ್ರಣಯ-ಜಗಳ ನೋಡುತ್ತ ಸಮಯ ಜಾರಿದ್ದೇ ಗೊತ್ತಾಗುತ್ತಿರಲಿಲ್ಲ.

ಹೊಸದಾಗಿ ಗೂಡು ಕಟ್ಟುವಾಗ ಶ್ರದ್ಧೆಯಿಂದ ಹುಲ್ಲು-ಕಸ-ಕಡ್ಡಿ ತರುವ ಗುಬ್ಬಿಗಳು, ಮರಿಗಳು ದೊಡ್ಡದಾಗಿ ಹಾರಿ ಹೋದಾಗ ಅಷ್ಟೇ ನಿರ್ಲಿಪ್ತತೆಯಿಂದ ಹಳೇ ಗೂಡು ಬಿಡುವುದು ಮತ್ತೆ ಹೊಸ ಗೂಡು ಕಟ್ಟುವುದು.... ಮತ್ತೆ ಸಂಸಾರ ಚಕ್ರ ಪ್ರಾರಂಭವಾಗುತ್ತಿತ್ತು.

ನಾವು ಬೆಳೆಯತೊಡಗಿದೆವು. ಕೆಲಸಗಾರರು ಸಿಕ್ಕದೇ, ಉತ್ತು ಬಿತ್ತು ಮಾಡುವವರಿಲ್ಲದೆ ಅಜ್ಜನ ಮನೆ ಗದ್ದೆ ಹೋಯ್ತು, ಭತ್ತದ ರಾಶಿ ಮಾಯವಾಯ್ತು. ಗುಬ್ಬಿ ಹಿಂಡು ಹಾರಿ ಹೋದವು. ಮಕ್ಕಳಾಗಿದ್ದ ನಾವು ಸಂಸಾರ ಕಟ್ಟಿಕೊಂಡು, ಕಂಡ-ಕಂಡ ಊರಲ್ಲಿ ಗೂಡು ಕಟ್ಟಿಕೊಂಡೆವು. ಅಲೆದು ಸಾಕಾಗಿ ನನ್ನ ಸಂಸಾರ ಶಿವಮೊಗ್ಗದ ಬಾಡಿಗೆ ಗೂಡಿನಲ್ಲಿ ವಾಸಿಸತೊಡಗಿತು. ಅದು ಈಗ ಇಪ್ಪತ್ತು ವರ್ಷಗಳ ಹಿಂದೆ. ನಮ್ಮ ಮನೆಯಲ್ಲಿ ಮೂವರು ಸಣ್ಣ ಮಕ್ಕಳು. ಮನೆಗೆ ಬಂದು ಹೋಗುವವರ ಮಧ್ಯೆ, ಗುಬ್ಬಿಗಳೂ ಗೂಡು ಕಟ್ಟಿಕೊಂಡವು. ಮನೆ ಕಸ ಗುಡಿಸಿ, ಸ್ವಚ್ಛ ಮಾಡಿದ ಅರ್ಧ ಗಂಟೆಯೊಳಗೆ ಮಕ್ಕಳು ಪಾಟಿ, ಪುಸ್ತಕ, ಹೂವು, ಆಟದ ಸಾಮಾನು ಹರಡುತ್ತಿದ್ದರು. ಜೊತೆಗೆ ಗುಬ್ಬಿಗಳು ತಮ್ಮ ಮನೆ ಕಟ್ಟುವ ಸಂಭ್ರಮದಲ್ಲಿ

ಕಸ-ಕಡ್ಡಿ-ಹುಲ್ಲು ಹರಡುತ್ತಿದ್ದವು. ಮಕ್ಕಳಿಗೆ ಗದರಿಸಿದರೆ ಅಳು-ಗಲಾಟೆ. ಗುಬ್ಬಿಗೆ ಹೆದರಿಸಲು ನನಗೇ ಹೆದರಿಕೆ! ಗುಬ್ಬಿ ಬಂದರೆ ಲಕ್ಷ್ಮಿ ಬಂದ ಹಾಗೆ, ಮನೆಯಲ್ಲಿ ಗುಬ್ಬಿ ಗೂಡು ಕಟ್ಟಿದರೆ ಶುಭ ಅಂತ ಅಜ್ಜನ ಮನೆಯಲ್ಲಿದ್ದಾಗಿನಿಂದ ಬೆಳೆದು ಬಂದ ನಂಬಿಕೆ!!

ಆದರೂ ಒಮ್ಮೊಮ್ಮೆ ಗುಬ್ಬಿಗೆ ಬೈಯಲೇಬೇಕಾಗುತ್ತಿತ್ತು. ಅದು ಕೈ ತೊಳೆಯುವ ಬೇಸಿನ್ ಹತ್ತಿರ ನಾನು ನೇತು ಹಾಕಿದ ಕನ್ನಡಿಯಿಂದಾಗಿ! ಈ ಕನ್ನಡಿಯಲ್ಲಿ ತಮ್ಮ ಪ್ರತಿಬಿಂಬವನ್ನು ನೋಡಿ ಹೆದರಿ, ಸಿಟ್ಟಾಗಿ ಗುಬ್ಬಿಗಳು ಪ್ರತಿಸ್ಪರ್ಧಿಗಳೋ ಎನ್ನುವಂತೆ, ಕನ್ನಡಿಯನ್ನು ಕುಕ್ಕುತ್ತಿದ್ದವು. ನನ್ನ ಕೊನೇ ಮಗಳು ಅಷ್ಟೇ ಒಂದೊಂದೇ ಶಬ್ದ ಮಾತನಾಡಲು ಕಲಿತಿದ್ದಳು. ಗುಬ್ಬಿ ಗಲಾಟೆ ಮಾಡಿದಾಗ "ಕೆತ್ತ ಗೊಬ್ಬಿ" ಅಂತ ಕೂಗುತ್ತಿದ್ದಳು. ನಾವು ನಗುತ್ತಿದ್ದೆವು. ಕನ್ನಡಿಯ ಮೇಲೆ ಒಂದು ಬಟ್ಟೆ ಮುಚ್ಚಿ ಈ ಮಾಯಾ ಗುಬ್ಬಿಗಳ ಜಗಳ ನಿಲ್ಲಿಸಬೇಕಾಗುತ್ತಿತ್ತು.

ನಮ್ಮ ಮಕ್ಕಳು ದೊಡ್ಡವರಾದರು. ಗೊತ್ತಾಗಲೇ ಇಲ್ಲ. ವಿದ್ಯಾಭ್ಯಾಸ-ಮದುವೆ-ಹಾಸ್ಟೆಲ್-ಮನೆ ಅಂತ ದೂರವಾದರು. ನನ್ನ ಅರಿವಿಗೆ ಬಾರದಂತೆ ಗುಬ್ಬಿಗಳು ಬರುವುದು ಕಡಿಮೆಯಾಗಿ ಕೊನೆ-ಕೊನೆಗೆ ನಿಂತೇ ಹೋಯ್ತು. "ಗುಬ್ಬಿ-ಗುಬ್ಬಿ" ಅಂತ ನಾನು ಹಲುಬುವಂತಾಯ್ತು. ಮಕ್ಕಳು ರಜೆಗೆ ಮನೆಗೆ ಬಂದಾಗ "ಮಕ್ಕಳೇ ಎಲ್ಲಾದರು ಗುಬ್ಬಿ ನೋಡಿದ್ದೀರಾ?" ಎಂದು ಕೇಳುವಂತಾಯ್ತು.

ನಮ್ಮ ಮಲೆನಾಡಿನ ಹಳ್ಳಿಗಳಲ್ಲಿ 'ಗುಬ್ಬಿ' ಎಷ್ಟು ಪ್ರಿಯವಾಗಿತ್ತು ಗೊತ್ತೇ? ತಲೆಕೂದಲನ್ನು ಮುಂದೆ ಉಬ್ಬಿದಂತೆ ಬಾಚಿಕೊಂಡರೆ "ಗುಬ್ಬಿ ತೆಗೆದು ಬಾಚುವುದು" ಎನ್ನುತ್ತಿದ್ದರು. ಪುಟ್ಟ ಗುಬ್ಬಿಯ ಉಬ್ಬಿದ ರೆಕ್ಕೆಯ ಹಾಗೆ ತಲೆಗೂದಲು ಕಾಣುತ್ತಿತ್ತು ಎನ್ನುವ ಕಾರಣದಿಂದ! ಹಾಗೆ ಅಂಗಿಯ ತೋಳು ನೆರಿಗೆಯಿಂದ ಕೂಡಿದ್ದರೆ ಅದಕ್ಕೂ ಗುಬ್ಬಿ ತೋಳು ಅಂತಲೇ ಹೆಸರಾಗಿತ್ತು. ಸಣ್ಣ ಮಕ್ಕಳಿಗೆ ಚಿನ್ನ, ಮುದ್ದು, ಬಂಗಾರಿ ಅಂದಷ್ಟೇ ಪ್ರೀತಿಯಿಂದ 'ಗುಬ್ಬಿ' ಅನ್ನುತ್ತಿದ್ದರು. ಪ್ರತಿ ಮಗುವೂ ಕಾಗಕ್ಕ-ಗುಬ್ಬಕ್ಕ ಕತೆ ಕೇಳುತ್ತಲೇ ಬೆಳೆಯುತ್ತಿತ್ತು.

ಈಗ ಮೂರು ವರ್ಷಗಳ ಕೆಳಗೆ ಮೊಮ್ಮಗಳು 'ಮಹತಿ' ಹುಟ್ಟಿದಾಗ ಅವಳಿಗೆ ಕಾಗಕ್ಕ-ಗುಬ್ಬಕ್ಕ ಕತೆ ಹೇಳಿದರೂ, 'ಗುಬ್ಬಿಯನ್ನು ಎಲ್ಲಿ ತೋರಿಸಲಿ' ಎಂದು ಚಿಂತಿಸುತ್ತಿದ್ದೆ. ಎರಡು ವರ್ಷಗಳ ಹಿಂದೆ ಹೊಸನಗರದ ಶ್ರೀರಾಮಚಂದ್ರಾಪುರ ಮಠದ ಸಮೃದ್ಧ ಪರಿಸರದಲ್ಲಿ ಗುಬ್ಬಿಗಳ ಪುಟ್ಟ ಹಿಂಡೊಂದನ್ನು ನೋಡಿ ಅಚ್ಚರಿಯಾಗಿತ್ತು, ಸ್ವಲ್ಪ ಸಮಾಧಾನವಾಗಿತ್ತು.

ಮೊನ್ನೆ ನಮ್ಮ ಅಂಗಳದಲ್ಲಿ ಒಂದು ಗುಬ್ಬಿ ಬಂದು ಆಡಿ ಹೋಯ್ತು. ಮುಂದಿನ ಬಾರಿ ಮೊಮ್ಮಗಳು ಬಂದರೆ ಗುಬ್ಬಿ ತೋರಿಸುತ್ತ 'ತಾ ಗುಬ್ಬಿ, ತಾವನ ಗುಬ್ಬಿ, ಮುಚ್ಚಳು ತೆರೆದರೆ ಮೂನ್ನೂರು ಗುಬ್ಬಿ' ಅಂತ ಆಟ ಆಡಿಸಬಹುದೆಂಬ ಆಸೆ ಚಿಗುರಿದೆ.

ಮತ್ತೆ ಮತ್ತೆ ಮಳೆ ಬರಲಿ, ಭೂಮಿಯ ಕಣಜ ತುಂಬಲಿ, "ಒಂದು ಗುಬ್ಬಿ ಬಂತು, ಒಂದು ಕಾಳು ಕಚ್ಚಿಕೊಂಡು ಹೋಯ್ತು, ಇನ್ನೊಂದು ಗುಬ್ಬಿ ಬಂತು, ಇನ್ನೊಂದು ಕಾಳು ಕಚ್ಚಿಕೊಂಡು ಹೋಯ್ತು....." ಎಂದು, ಎಂದೂ ಮುಗಿಯದ ಕತೆ ಹೇಳುವಂತಾಗಲಿ ಎಂದು ಮನಸ್ಸು ಹಾರೈಸುತ್ತಿದೆ.

■ ವಿಜಯಾ ಶ್ರೀಧರ್, w/o. ಡಾ. ಕೆ. ಆರ್.ಶ್ರೀಧರ್, ೧ ನೇ ಮೇನ್,ರಾಜೇಂದ್ರನಗರ, ಶಿವಮೊಗ್ಗ-೪ ■

ನನ್ನ ಅಪ್ಪ ನನ್ನ ಅವ್ವ

ಎಂ. ರಾಮಚಂದ್ರಗೌಡ

ಬೆಂಗಳೂರು ನಗರಕ್ಕೆ ಕೇವಲ ೫೦ ಕಿ.ಮೀ. ದೂರದಲ್ಲಿರುವ ಇಟ್ಟಸಂದ್ರ ಗ್ರಾಮ ನನ್ನ ತಂದೆ ಬಿ. ಮುನಿನಂಜಪ್ಪನವರು ಹುಟ್ಟಿದ ಊರು. ೧೯೦೫ ರಲ್ಲಿ ಜನಿಸಿದ ಅವರು ಸರಿಯಾಗಿ ೧೦೦ ವರ್ಷಗಳನ್ನು ಪೂರೈಸಿದ್ದಾರೆ. ಕಳೆದ ೫-೬ ವರ್ಷಗಳಿಂದ ನಡೆದಾಡಲು ಸಾಧ್ಯವಾಗದೆ, ಅವರಿಗೆ ಮಂಚವೆ ಸರ್ವಸ್ವವಾಗಿದೆ, ಅಂತಿಮ ದಿನಗಳನ್ನು ಎದುರು ನೋಡುತ್ತಿದ್ದಾರೆ. ಇತ್ತೀಚೆಗೆ ಕಣ್ಣಿನ ದೃಷ್ಟಿ ಕಡಿಮೆಯಾಗಿದೆ, ಮಾತನಾಡಿಸಲು ಬಂದವರ ಗುರುತು ಹಿಡಿಯಲು ತದೇಕ ದೃಷ್ಟಿಯಿಂದ ನೋಡಿ, ಆಗದೆ ನಿರಾಸೆ ಪಡುವುದನ್ನು ಅವರ ಮುಖದಲ್ಲಿ ಕಾಣಬಹುದು. ಆದರೆ ಈ ಮುದಿ ವಯಸ್ಸಿನಲ್ಲಿ ಪ್ರೀತಿಯಿಂದ ಸೇವೆ ಮಾಡುತ್ತಿರುವ ಬೆರಳೆಣಿಕೆಯಷ್ಟು ಜನರನ್ನು ಹಾಗು ನನ್ನವ್ವನನ್ನು ಈಗಲೂ ಗುರುತಿಸುತ್ತಾರೆ.

ಅವರ ನೂರು ವರ್ಷಗಳ ತುಂಬು ಜೀವನ ಇಂದಿನ ಜನಾಂಗಕ್ಕೆ ಮಾದರಿ ಎಂದು ಹೇಳಿದರೆ ತಪ್ಪಾಗದು. ಅವರು ನಡೆದ ದಾರಿ, ಅವರು ತೋರಿದ ಕಾರ್ಯಕ್ಷಮತೆ, ಜೀವನದ ಮೇಲೆ ಅವರಿಗಿದ್ದ ಅಪಾರ ಪ್ರೀತಿ, ಮಾಡುವ ಕೆಲಸದ ಬಗೆಗಿನ ಗೌರವ ಅವರ ಬಗ್ಗೆ ಆದರ ಹೆಚ್ಚಿಸುತ್ತವೆ.

ನನ್ನ ಅವ್ವ ರಾಮಕ್ಕ ಅವರಿಗಿಂತ ೧೦ ವರ್ಷ ಚಿಕ್ಕವರು. ಆರೋಗ್ಯ ಅಷ್ಟೇನು ಸರಿ ಇಲ್ಲ. ಆದರೂ ಇಳಿವಯಸ್ಸಿನಲ್ಲಿ ಗಂಡನ ಸೇವೆ ಮಾಡುವುದರಲ್ಲಿಯೇ ತೃಪ್ತಿ. ಆಗಾಗ ಸಿಡಿಮಿಡಿಗೊಂಡು, ಇನ್ನೂ ಬದುಕಲು ಬಿಟ್ಟಿದ್ದಾನೆ, ಎಂದು ದೇವರನ್ನು ನಿಂದಿಸುತ್ತಿರುತ್ತಾರೆ. ವಿದ್ಯಾಭ್ಯಾಸ ಇಲ್ಲದಿದ್ದರೂ ಬದುಕಿನ ಎಲ್ಲಾ ಮಜಲುಗಳನ್ನು ದಿಟ್ಟತನದಿಂದ ನಿಭಾಯಿಸಿದ್ದಾರೆ. ಒಂಬತ್ತು ಮಕ್ಕಳಿಗೆ ಜನ್ಮ ಕೊಟ್ಟು, ಆ ಮಕ್ಕಳ ಬದುಕನ್ನು ಹಸನುಗೊಳಿಸುವಲ್ಲಿ ನಿಃಸ್ವಾರ್ಥಶ್ರಮಪಟ್ಟವರು. ಒಬ್ಬ ಮಗನನ್ನು ಹುಟ್ಟಿದ (ಅವಳಿಜವಳಿ) ಕೆಲವೇ ತಿಂಗಳುಗಳಲ್ಲಿ ಕಳೆದುಕೊಂಡರು. ಅವನ ಹೆಸರು ರಾಮಚಂದ್ರ. ಅವನ ನೆನಪಿಗಾಗಿ ಕೊನೆಯಲ್ಲಿ ಹುಟ್ಟಿದ ನನಗೆ ರಾಮಚಂದ್ರಗೌಡ ಎಂಬ ಹೆಸರನ್ನಿಟ್ಟರು. ೪ ಗಂಡು ೪ ಹೆಣ್ಣುಮಕ್ಕಳ ಜೊತೆಗೆ ನನ್ನ ಅಪ್ಪನ ಕಡೆಯ ಸಂಬಂಧಿಗಳೂ ಸೇರಿ ೨೦ ಜನರ ದೊಡ್ಡ ಕುಟುಂಬ ನಮ್ಮದು. ಅದರ ಪೂರ್ಣ ಜವಾಬ್ದಾರಿ ನನ್ನ ಅಪ್ಪ ಅವ್ವನದು.

ಅಂದಿನ ಕಾಲದ ಎಲ್.ಎಸ್. (ಲೋವರ್ ಸೆಕೆಂಡರಿ ಸ್ಕೂಲ್) ಮಾಡಿದ ಅವರಿಗೆ ಸರ್ಕಾರಿ ಉಪಾಧ್ಯಾಯರ ಕೆಲಸ ದೊರಕಿತ್ತು ಎಂದು ಹೇಳುತ್ತಿದ್ದುದನ್ನು ಕೇಳಿದ್ದೇನೆ. ಅದೇಕೊ ಅದನ್ನು ಇಷ್ಟಪಡದ ಅವರು ಸ್ವಂತ ವೃತ್ತಿಯನ್ನು ಕೈಗೆತ್ತಿಕೊಂಡರು. ಒಕ್ಕಲುತನ ನಮ್ಮ ಕುಟುಂಬಕ್ಕೆ ಅಂಟಿಕೊಂಡು ಬಂದ ಕಸುಬು. ಇದ್ದ ಸ್ವಲ್ಪ ಜಮೀನಿನಲ್ಲಿಯೇ ವೃತ್ತಿ ಪ್ರಾರಂಭಿಸಿದವರು. ಅಂದಿನ ದಿನಗಳಲ್ಲಿ ವಿದ್ಯುತ್ ಇಲ್ಲ, ನೀರಾವರಿ ಪಂಪ್‌ಸೆಟ್ಟುಗಳಿಲ್ಲ. ಅಂದು ಅವರು ಕಂಡುಕೊಂಡಿದ್ದ ಏತ ನೀರಾವರಿ. ಎತ್ತುಗಳನ್ನು ಕಟ್ಟಿ ಹಗ್ಗದ ಮೇಲೆ ಕುಳಿತು ಇಳಿಜಾರಿನಲ್ಲಿ ಎತ್ತುಗಳನ್ನು ನಡೆಸಿ ಕಪಿಲೆ ಎಂದು ಕರೆಯುವ ಚರ್ಮದ ನೀರು

ಶೇಖರಿಸುವ ಸಾಧನದಿಂದ ನೀರನ್ನು ಮೇಲಕ್ಕೆತ್ತಿ ಬೆಳೆಗಳಿಗೆ ಹಾಯಿಸುತ್ತಿದ್ದರಂತೆ. ೧೯೬೦-೬೫ ರಲ್ಲಿ ಇದನ್ನು ಕಂಡ ನೆನಪು ನನಗಿದೆ. ಎಷ್ಟು ದೀರ್ಘ ಕಾಲ ಈ ರೀತಿ ಸಾಹಸದಿಂದ ಒಕ್ಕಲುತನವ ಕಸಬು ಮಾಡುತ್ತಿದ್ದರು ಎಂದು ಈಗ ನೆನೆಸಿದರೆ ಭಯವಾಗುತ್ತದೆ. ಅಂದಿನ ದಿನಗಳಲ್ಲಿ ಆ ತಲೆಮಾರಿನ ಜನ ಪಟ್ಟ ಕಷ್ಟಗಳ ಹೋಲಿಕೆಗೆ ಇಂದು ಎಲ್ಲಾ ರೀತಿಯ ಸೌಲಭ್ಯಗಳನ್ನು ಅನುಭವಿಸುತ್ತಿರುವ ನಾವು ಅವರಿಗೆ ಸಾಟಿಯಾಗಲು ಸಾಧ್ಯವೆ?

ನನ್ನ ತಾತ ಮುತ್ತಾತಂದಿರು ಗಡದನಾಯಕನಹಳ್ಳಿ ಎಂಬ ಗ್ರಾಮದಿಂದ ಈಗಿನ ಇಟ್ಟಸಂದ್ರ ಗ್ರಾಮಕ್ಕೆ ವಲಸೆ ಬಂದಿರಬೇಕು. ಹಾಗಾಗಿ ಗಡದನಾಯಕನಹಳ್ಳಿಯವರ ಮನೆ ಎಂಬ ನಾಮಾಂಕಿತ ನಮ್ಮ ಮನೆಗೆ ಬಂದಿರಬೇಕು. ಇಟ್ಟಸಂದ್ರ ಗ್ರಾಮ ಬೆಂಗಳೂರು ಜಿಲ್ಲೆಯ ಹೊಸಕೋಟೆ ತಾಲ್ಲೂಕಿನಲ್ಲಿದ್ದರೆ, ಗಡದನಾಯಕನಹಳ್ಳಿ ಇದೇ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನಲ್ಲಿದ್ದು ನಾವು ಆಚರಿಸುವ ಭಂಡಿದೇವರು ಎಂಬ ಕಾರ್ಯಕ್ರಮ ೧೦-೧೨ ವರ್ಷಕ್ಕೊಮ್ಮೆ ಅದೇ ಗ್ರಾಮದಲ್ಲಿ ಇಂದಿಗೂ ನಡೆಯುತ್ತಾ ಬಂದಿದೆ. ಬಹುಶಃ ೧೦ ವರ್ಷಗಳಿಗೊಮ್ಮೆಯಾದರೂ ರಕ್ತಸಂಬಂಧಿಗಳು ಒಂದೆಡೆ ಬೆರೆಯಲಿ ಎಂಬ ಯೋಚನೆ ಇದರಲ್ಲಿ ಇರಬೇಕು. ಬೇರೆ ಬೇರೆ ಊರುಗಳಲ್ಲಿ ನೆಲೆಸಿರುವ ಎಲ್ಲ ಕುಲಬಾಂಧವರು ಈ ಊರಿಗೆ ವಲಸೆ ಬಂದು, ಬೇರೆಯವರ ಮನೆಗಳಲ್ಲಿ ವಾಸ್ತವ್ಯ ಮಾಡಿ ಒಂದು ವಾರ ಕಾಲ ಭಂಡಿದೇವರ ಕಾರ್ಯಕ್ರಮವನ್ನು ಊರ ಹಬ್ಬ ಎಂಬಂತೆ ಆಚರಿಸಿ ಕೊನೆಯ ದಿನ ಪ್ರಾಣವಧೆಯನ್ನು ಮಾಡಿ, ಹೊಟ್ಟೆತುಂಬಾ ಉಂಡು, ಮತ್ತೆ ೧೦ ವರ್ಷ ಕಾಯಬೇಕಲ್ಲ ಎಂಬ ಯೋಚನೆಯೊಂದಿಗೆ ಅವರವರ ಊರುಗಳಿಗೆ ತೆರಳುತ್ತಾರೆ.

ನನ್ನ ಅವ್ವ-ಅಪ್ಪನ ಪ್ರೀತಿಯ ಮೊದಲ ಮಗ ಎಂ. ಗೋಪಾಲಯ್ಯ. ಅಪ್ಪ ಬಹಳ ಕಾಳಜಿ ಯಿಂದ ಅವರ ವಿದ್ಯಾಭ್ಯಾಸವನ್ನು ಮಾಡಿಸಿದರು. ಮೈಸೂರಿನಲ್ಲಿ ಎಂ.ಎ. ಪದವಿ ಪಡೆದು ಸರ್ಕಾರಿ ಕೆಲಸಕ್ಕೆ ಸೇರಿದಾಗ ಬಹಳ ಸಂತೋಷಪಟ್ಟರು. ೨೦ ಜನರ ದೊಡ್ಡ ಕುಟುಂಬಕ್ಕೆ ಆಸರೆಯಾಗಿ ನಿಲ್ಲುತ್ತಾನೆ, ತನ್ನ ಜವಾಬ್ದಾರಿಯನ್ನು ಸ್ವಲ್ಪ ಮಟ್ಟಿಗೆ ಕಡಿಮೆ ಮಾಡುತ್ತಾನೆ ಎಂದು ಆಸೆಪಟ್ಟರು. ನಮ್ಮ ಊರಿನಲ್ಲಿ ಅಲ್ಲಿಯ ವರೆಗೂ ಯಾರೂ ಪದವಿ ಪಡೆದಿರಲಿಲ್ಲ. ನಮ್ಮ ಪಕ್ಕದ ಮನೆಯಲ್ಲಿ ದೊಡ್ಡ ಮುಸ್ಲಿಮರ ಕುಟುಂಬ ಒಂದಿತ್ತು. ಆ ಮನೆಗೂ ನಮ್ಮ ಮನೆಗೂ ವಿಶೇಷ ಸಂಬಂಧವಿತ್ತು. ಅವರ ಕಷ್ಟಸುಖಗಳಲ್ಲಿ ಇವರು, ಇವರ ಕಷ್ಟಸುಖಗಳಲ್ಲಿ ಅವರು ಸಮನಾಗಿ ಭಾಗಿಗಳಾಗುತ್ತಿದ್ದರು. ಅವರ ಮನೆಯಲ್ಲಿದ್ದ ಬಹಳಷ್ಟು ಹೆಣ್ಣುಮಕ್ಕಳು ಬಂದು ರೇಷ್ಮೆ ಹುಳಗಳಿಗೆ ಹಿಪ್ಪುನೇರಳೆ ಆಹಾರವನ್ನು ಕೊಡಲು ಸಹಕರಿಸುತ್ತಿದ್ದರು. ಹಾಗಾಗಿ ಆ ಮನೆಯ ಹೆಣ್ಣುಮಕ್ಕಳ ಮೇಲೆ ನನ್ನ ಅವ್ವ ಅಪ್ಪನಿಗೆ ವಿಶೇಷವಾದ ಪ್ರೀತಿ ಇತ್ತು. ನನ್ನ ಅಣ್ಣ ಗೋಪಾಲಯ್ಯನಿಗೆ ಮುಂದೆ ಕರ್ನಾಟಕ ರಾಜ್ಯ ಸಣ್ಣಕೈಗಾರಿಕೆ ಅಭಿವೃದ್ಧಿ ಕಾರ್ಪೊರೇಷನ್ ನಲ್ಲಿ ಉತ್ತಮ ಕೆಲಸ ಸಿಕ್ಕಿ ನನ್ನ ಅಪ್ಪನ ಆಸೆಯನ್ನು ಸ್ವಲ್ಪ ಮಟ್ಟಿಗೆ ಪೂರ್ಣಗೊಳಿಸಿದ್ದ.

ನನ್ನ ಅಪ್ಪನಿಗೆ ಮೊದಲಿನಿಂದಲೂ ಬೆಂಗಳೂರಿನ ಒಡನಾಟವಿತ್ತು. ಇದಕ್ಕೆ ಕಾರಣ ಅಪ್ಪ ಮದುವೆ ಮಾಡಿಕೊಂಡಿದ್ದು ಬೆಂಗಳೂರಿಗೆ ಬಹಳ ಸಮೀಪವಿದ್ದ ನಾಗನಹಳ್ಳಿ ಎಂಬ

ಗ್ರಾಮದಲ್ಲಿ. ಹೀಗಾಗಿ ಆ ಕಾಲಕ್ಕೆ ಪ್ರಸಿದ್ಧ ಗುತ್ತಿಗೆದಾರರಾಗಿದ್ದ ವೆಂಕಟಸ್ವಾಮಪ್ಪ ಎಂಬುವರ ಪರಿಚಯವಾಗಿ ಆ ಕುಟುಂಬಕ್ಕೆ ಪ್ರತೀ ವಾರವು ನನ್ನ ಅಪ್ಪ ತುಪ್ಪ ಮತ್ತು ಕೋಳಿಮೊಟ್ಟೆ ದೊಡ್ಡ ಪ್ರಮಾಣದಲ್ಲಿಯೆ ಸರಬರಾಜು ಮಾಡುತ್ತಿದ್ದರು. ಈ ಪರಿಚಯ ಸಂಬಂಧವಾಗಿ ಮಾರ್ಪಟ್ಟು ಅವರ ಮೊದಲ ಮಗಳು ರಾಧ ನನ್ನ ಅತ್ತಿಗೆಯಾದಳು. ಈ ಶ್ರೀಮಂತ ಕುಟುಂಬದ ಒಡನಾಟದಿಂದಾಗಿ ಅಪ್ಪ ಎಣಿಸಿದ್ದಂತೆ ನನ್ನ ಅಣ್ಣನಿಂದ ಅವರಿಗೆ ಏನೂ ಸಹಾಯ ಸಿಗಲಿಲ್ಲ. ಕಾರಣ ತನ್ನ ಶ್ರೀಮಂತ ಹೆಂಡತಿಯ ಬೇಕು-ಬೇಡಗಳಿಗೆ ಅಣ್ಣನ ಸಂಬಳ ಮುಗಿದು ಹೋಗುತ್ತಿತ್ತು ಎಂದು ಕಾಣುತ್ತದೆ. ಇದರಿಂದ ಆದ ನಿರಾಸೆಯನ್ನ ಅಪ್ಪ ಅವ್ವನ ಸಂಗಡ ತೋಡಿಕೊಳ್ಳುತ್ತಿದ್ದುದನ್ನ ಕೇಳಿದ್ದೇನೆ.

ಸ್ವಾಭಿಮಾನದ ಸಂಕೇತವಾಗಿದ್ದ ಅಪ್ಪ ಎಂದೂ ಯಾರಿಂದಲೂ ಕೈ ಮುಂದೆ ಮಾಡಿ ಬೇಡಿದವನಲ್ಲ. ಅದೇ ರೀತಿ ಮಗನ ಮದುವೆಗೂ ಕೈ ಒಡ್ಡಲಿಲ್ಲ. ಅವರಿಗಿದ್ದ ಮಿತಿಯಲ್ಲಿ ಸಂಸಾರವನ್ನು ನಿಭಾಯಿಸಿ ಅಷ್ಟರಲ್ಲಿಯೇ ತೃಪ್ತಿ ಪಡೆಯುತ್ತಿದ್ದರು. ವ್ಯವಹಾರದಲ್ಲಿ ತುಂಬಾ ನಿಷ್ಠುರ ವ್ಯಕ್ತಿಯಾಗಿದ್ದ ಅಪ್ಪ ಲೆಕ್ಕಾಚಾರದಲ್ಲಿ ಬಹಳ ಶಿಸ್ತು. ಅವರ ೧೦೦ ವರ್ಷಗಳ ಜೀವಿತಾವಧಿಯಲ್ಲಿ ಯಾರಿಗೂ ಒಂದು ರೂಪಾಯಿ ಮೋಸ ಮಾಡಿದವರಲ್ಲ. ಅವರಿಗೆ ಬರಬೇಕಾದ ೧ ರೂಪಾಯಿಯನ್ನೂ ಬಿಟ್ಟವರಲ್ಲ. ಕೊಡಬೇಕಾಗಿದ್ದರೆ ಇಟ್ಟುಕೊಳ್ಳುತ್ತಿರಲಿಲ್ಲ. ಇದು ನನ್ನ ಮೇಲೆ ವಿಶೇಷ ಪರಿಣಾಮ ಬೀರಿತ್ತಲ್ಲದೆ, ಒಂದು ಸಾರಿ ಮರೆಯಲಾಗದ ಪಾಠವನ್ನು ಕಲಿಸಿತು.

ನನಗೆ ಆಗ ಸುಮಾರು ೧೦-೧೨ ವರ್ಷಗಳಿರಬಹುದು. ಸೂರ್ಯ ನಿಧಾನವಾಗಿ ಮರೆಯಾಗುತ್ತಿದ್ದ. ನಮ್ಮ ಮನೆಯ ಮುಂದೆ ಇದ್ದ ವಿಶಾಲವಾದ ಬಯಲಿನಲ್ಲಿ ಸೈಕಲ್ ತುಳಿಯುತ್ತಿದ್ದೆ. ನನ್ನನ್ನು ಹತ್ತಿರ ಕರೆದ ಅವರು ನೂರು ರೂಪಾಯಿಗಳನ್ನು ನನಗೆ ಕೊಟ್ಟು, 'ತೋಟದಲ್ಲಿ ೫ ಜನ ಕೆಲಸ ಮಾಡುತ್ತಿದ್ದಾರೆ, ಅವರಿಗೆ ಹಣ ಕೊಡಬೇಕಾಗಿತ್ತು, ಮರೆತುಬಿಟ್ಟೆ, ಬೇಗನೆ ಹೋಗಿ ಕೊಟ್ಟು ಬಾ' ಎಂದರು. ತೋಟ ಸುಮಾರು ಒಂದೂವರೆ ಕಿ.ಮೀ. ದೂರದಲ್ಲಿದ್ದ ಕಾರಣ ಕತ್ತಲಾಗುತ್ತಿದೆ, ನಾಳೆ ಕೊಟ್ಟರಾಯಿತು ಎಂದು ಬಿಟ್ಟೆ. ಒಂದು ಕ್ಷಣ ಯೋಚಿಸಿದ ಅವರು ಬೆನ್ನಿನ ಮೇಲೆ ಕೈಯಿಟ್ಟು, 'ನೋಡಯ್ಯ ನಮಗಾಗಿ ನಮ್ಮ ತೋಟದಲ್ಲಿ ಅವರು ಬಂದು ಕೂಲಿಗಾಗಿ ಕೆಲಸ ಮಾಡುತ್ತಿದ್ದಾರೆ. ಈ ಹಣ ಅವರ ಕೈ ಸೇರದಿದ್ದರೆ ಅವರು, ಅವರ ಮಕ್ಕಳು ಉಪವಾಸ ಮಲಗಬೇಕಾಗಬಹುದು. ಅವರು ನಮ್ಮಂತೆ ಇದ್ದರೆ ಕೂಲಿ ಕೆಲಸಕ್ಕೆ ಬರುವ ಅಗತ್ಯ ಏನಿತ್ತು? ಹೋಗು, ಬೇಗನೆ ಕೊಟ್ಟು ಬಾ, ಎಂದರು. ಮರುಮಾತನಾಡದೆ ಕೊಟ್ಟು ಬಂದೆ. ಇದು ಅಪ್ಪ ಬದುಕಿನಲ್ಲಿ ಸತತವಾಗಿ ಅಳವಡಿಸಿಕೊಂಡು ಬಂದ ದಾರಿ. ಮುಂದೆ ನನ್ನ ಬದುಕಿನಲ್ಲಿ ನನ್ನ ಒಡನಾಟಕ್ಕೆ ಬಂದ ನನ್ನ ಕೆಲಸಗಾರರನ್ನು ಪ್ರೀತಿ ವಿಶ್ವಾಸದಿಂದ ನೋಡಿಕೊಂಡು ಮುನ್ನಡೆ ಸಾಧಿಸಲು ನೆರವಾಯಿತು.

ಅಪ್ಪನ ದೊಡ್ಡ ಗುಣವೆಂದರೆ ತನಗೆ ತೊಂದರೆ ಕೊಟ್ಟವರಿಗೂ ಸಹ ಎಂದಿಗೂ ಕೇಡನ್ನು ಬಯಸಿದವರಲ್ಲ. ಅಂಥವರ ಬಗ್ಗೆ ಎಂದೂ ಟೀಕೆ ಮಾಡಿದ್ದನ್ನು ಕೇಳಿಲ್ಲ. ಎಲ್ಲಾ ವಿಧಿಯ ಆಟ ಎನ್ನುತ್ತಿದ್ದರು. ಜೀವನದ ಬಗ್ಗೆ ಅವರೆಂದೂ ನಮ್ಮೊಂದಿಗೆ ವ್ಯಾಖ್ಯಾನ ಮಾಡದಿದ್ದರೂ

ಈ ಭಾವಿಯನ್ನು ಕಟ್ಟಲು ದೊಡ್ಡ ಕಲ್ಲುಗಳನ್ನು ಸುಮಾರು ೩೦ ಕಿ.ಮೀ. ದೂರದಿಂದ ಎತ್ತಿನ ಗಾಡಿಗಳಲ್ಲಿ ತೆಗೆದುಕೊಂಡು ಬಂದದ್ದು, ಮಣ್ಣಿನ ಕುಸಿತದಿಂದಾಗಿ ಭಾವಿ ತೆಗೆಯಲು ಸಾಧ್ಯವೇ ಇಲ್ಲವೆಂಬ ಪರಿಸ್ಥಿತಿ ಬಂದದ್ದು, ೬೫ ಅಡಿಗಳ ಆಳದಲ್ಲಿ ನೀರು ಸಿಗದಿದ್ದಾಗ ನಿರಾಸೆಗೊಂಡದ್ದು, ಕೊನೆಯದಾಗಿ ಇನ್ನು ೫ ಅಡಿಗಳಷ್ಟು ತೆಗೆದು ಕೆಲಸ ನಿಲ್ಲಿಸಿಬಿಡಿ, ಎಂದು ಆಳು ಮಕ್ಕಳಿಗೆ ಹೇಳಿ ಸಂತೆಗೆ ಹೋಗಿ ವಾಪಸ್ಸು ಬರುವಷ್ಟರಲ್ಲಿ ನೀರು ಕಾಣಿಸಿಕೊಂಡು ಅವರಿಗೆ ಅಪಾರ ಸಂತೋಷವನ್ನು ತಂದುಕೊಟ್ಟು, ಇನ್ನು ಮೇಲೆ ನನ್ನ ಹೆಂಡತಿ ದೂರದಿಂದ ಕುಡಿಯುವ ನೀರನ್ನು ತರುವುದು ತಪ್ಪಿತೆಂದು ಒಳಗೆ ಹರ್ಷಗೊಂಡಿದ್ದು, ಅಲ್ಲದೆ ಊರಿನವರಿಗೆ ೪೦ ವರ್ಷಗಳ ಕಾಲ ಸತತವಾಗಿ ನೀರನ್ನು ಕೊಟ್ಟದ್ದು —ಈ ಎಲ್ಲ ಕಥೆಯನ್ನು ಅವರ ಬಾಯಿಂದ ಕೇಳುವುದೇ ಒಂದು ಸೊಗಸು. ಇಷ್ಟು ವರ್ಷ ಎಲ್ಲರ ನೀರಿನ ದಾಹವನ್ನು ತಣಿಸಿದ್ದ ಮನೆಯಂಗಳದ ಭಾವಿ ಇಂದು ಬರಿದಾಗಿದೆ, ಮುಂದೆ ಬರಬಹುದಾದ ನೀರಿನ ಬರಗಾಲಕ್ಕೆ ಸಾಕ್ಷಿಯಾಗಿ ನಿಂತಿದೆ. ತುಂಬಿ ತುಳುಕುತ್ತಿದ್ದ ಭಾವಿ ಕಳೆದ ೫ ವರ್ಷಗಳಿಂದ ಬರಿದಾಗಿದೆ, ಊರಿನ ಜನರ ದುರಾಸೆಯಿಂದಾಗಿ ಕೆರೆ-ಕುಂಟೆಗಳನ್ನೂ ಬಿಡದೆ ಉಳುಮೆ ಮಾಡಿಕೊಂಡಿರುವುದರ ಫಲ ಎನ್ನುವಂತೆ ಸಾಕ್ಷಿಯಾಗಿ ನಿಂತಿದೆ.

೪ ಜನ ಹೆಣ್ಣು ಮಕ್ಕಳಿಗೆ ೩ ಗಂಡು ಮಕ್ಕಳಿಗೆ ವಿಜೃಂಭಣೆಯಿಂದ ಮದುವೆ ಮಾಡಿದ ಅಪ್ಪ ನನ್ನ ಮದುವೆ ಮಾಡಲು ಸಾಧ್ಯವಾಗದೆ ನಿರಾಸೆ ಅನುಭವಿಸಿದ್ದು ವಿಪರ್ಯಾಸ. ಪ್ರೇಮವಿವಾಹಕ್ಕೆ ಮನೆಯಲ್ಲಿ ನನ್ನ ಅವ್ವ ಹಾಗೂ ನನ್ನ ಮೂರನೆಯ ಅಣ್ಣ ತೋರಿಸಿದ ಪ್ರತಿರೋಧದಿಂದಾಗಿ ನಡೆದ ಘಟನೆಗಳಿಂದ ೧೯೮೨ ರಲ್ಲಿ ನಾನು ಆಕಸ್ಮಿಕವಾಗಿ ಬೆಂಗಳೂರಿಗೆ ಸ್ಥಳಾಂತರಗೊಡೆ. ನನ್ನ ಸೋದರತ್ತೆಯ ಮಗನ ಸಹಾಯದಿಂದ ಬೆಂಗಳೂರಿನ ಪ್ರತಿಷ್ಠಿತ ಡಿ.ವಿ.ಜಿ. ರಸ್ತೆಯಲ್ಲಿ ಸಣ್ಣದಾಗಿ ಜವಳಿ ಅಂಗಡಿಯನ್ನು ಪ್ರಾರಂಭಿಸಿದೆ. ಪ್ರೀತಿಸಿದ ಹುಡುಗಿಯೊಂದಿಗೆ ೧೯೮೫ ರಲ್ಲಿ ಧರ್ಮಸ್ಥಳದಲ್ಲಿ ವಿವಾಹವಾದೆ. ಕೆಲವೇ ತಿಂಗಳಲ್ಲಿ ನನ್ನ ಅಪ್ಪನ ಆಶೀರ್ವಾದ ದೊರೆಯಿತು. ಅವರ ಆಸೆಯಂತೆ ಅವರು ನಡೆಸುತ್ತಿದ್ದ ರೇಷ್ಮೆ ಮೊಟ್ಟೆ ತಯಾರಿಕಾ ಕೇಂದ್ರವನ್ನು ಬೆಂಗಳೂರಿಗೆ ಸ್ಥಳಾಂತರಿಸಿದೆ. ಅದನ್ನು ಕೇವಲ ೬ ವರ್ಷಗಳ ಅವಧಿಯಲ್ಲಿ ಇಡೀ ಏಷ್ಯಾದಲ್ಲಿಯೇ ನಂ. ೧ ಎಂಬ ಹೆಗ್ಗಳಿಕೆಗೆ ಪಾತ್ರವಾಗುವಂತೆ ಮಾಡಿದ ನನ್ನ ಮೇಲೆ ಅವರಿಗೆ ಅಪಾರ ಪ್ರೀತಿ. ಆದರೆ ಇದನ್ನು ಎಂದೂ ಹೊರಗಡೆ ವ್ಯಕ್ತಪಡಿಸಿದವರಲ್ಲ; ಅವರ ಮುಖ ಅವರ ಕಣ್ಣು ಅವರು ವ್ಯಕ್ತಪಡಿಸುವ ಭಾವನೆಗಳಿಂದಷ್ಟೇ ಅರ್ಥಮಾಡಿಕೊಳ್ಳಬೇಕು.

ಬೆಂಗಳೂರಿನಲ್ಲಿ ಒಂದು ಮನೆ ಮಾಡಬೇಕು, ಕಾರನ್ನು ಹೊಂದಿರಬೇಕು ನಮ್ಮ ನೆಂಟರಿಷ್ಟರಲ್ಲಿ ಯಾರಿಗೂ ಕಡಿಮೆ ಇಲ್ಲದಂತೆ ಬದುಕಬೇಕು ಎಂಬ ಅವರ ಆಸೆಯನ್ನು ನಾನು ಈಡೇರಿಸಿದ್ದೆ. ೩ ಅಂತಸ್ತಿನ ೪ ಮನೆಗಳು, ೧ ಕಾರಿಗೆ ಬದಲಾಗಿ ೩-೪ ಕಾರುಗಳನ್ನು ಅವರು ಪ್ರಾರಂಭಿಸಿದ ಕಸುಬಿನಿಂದ ಪಡೆದು ಅವರ ಆಸೆಯನ್ನು ಪೂರ್ಣಗೊಳಿಸಿದೆ.

ರೇಷ್ಮೆ ಇಲಾಖೆಯಿಂದ ನನ್ನನ್ನು ಚೀನಾ ಮತ್ತು ಜಪಾನ್ ದೇಶಗಳಿಗೆ ಅಧ್ಯಯನ ಪ್ರವಾಸಕ್ಕೆ ೧೯೯೪ ರಲ್ಲಿ ಕಳುಹಿಸಿದಾಗ ವಿಮಾನ ನಿಲ್ದಾಣದಲ್ಲಿ ಅವರ ಕಣ್ಣುಗಳಲ್ಲಿ ಸಂತೋಷದ ಬಾಷ್ಪವನ್ನು ಕಂಡಿದ್ದೆ. ಇಡೀ ಇವರ ಜೀವಿತಾವಧಿಯಲ್ಲಿ ಬಹಳಷ್ಟು ಕಷ್ಟಗಳನ್ನು

ಎದುರಿಸಿ ಮುಂದೆ ಬರಲು ಹೋರಾಟ ಮಾಡಿದ ಅವರು ಎಂದೂ ಯಾವುದೇ ಕಾರಣಕ್ಕೂ ಕಣ್ಣೀರಿಟ್ಟವರಲ್ಲ. ಉದ್ವೇಗಕ್ಕೆ ಒಳಗಾದವರಲ್ಲ. ಸ್ಥಿತಪ್ರಜ್ಞರು.

ನನ್ನ ೩ ನೆಯ ಅಕ್ಕ ರತ್ನಮ್ಮ ನೋಡಲು ಸ್ವಲ್ಪ ಕಪ್ಪಾಗಿದ್ದಾಳೆ ಎಂಬ ಕಾರಣಕ್ಕೆ, ಅಷ್ಟೇನೂ ಸರಿ ಇರದಿದ್ದ ತನ್ನ ಸಂಬಂಧದಲ್ಲಿ ಕೊಟ್ಟು ಮದುವೆ ಮಾಡಿಬಿಟ್ಟರು. ನನ್ನ ಅವ್ವ ಸೇರಿದಂತೆ ಯಾರಿಗೂ ಇಷ್ಟವಿರಲಿಲ್ಲ, ದೊಡ್ಡಣ್ಣ ಮಾತ್ರ ಅಪ್ಪನ ಅಭಿಪ್ರಾಯಕ್ಕೆ ಸಮ್ಮತಿಸಿದ್ದ. ಆದರೆ ಎಲ್ಲರೂ ಎಣಿಸಿದಂತೆ ಅದು ಸರಿಹೋಗಲಿಲ್ಲ. ಸರಿಯಾಗಿ ಬದುಕಲಿಕ್ಕೆ ನನ್ನ ಭಾವ ನಂದಪ್ಪನಿಗೆ ಏನೇನೂ ವ್ಯವಸ್ಥೆ ಇರಲಿಲ್ಲ. ಕೆಲಸ ಮಾಡುವುದರಲ್ಲಿ ಆಸಕ್ತಿಯೂ ಇರಲಿಲ್ಲ. ಹೀಗಾಗಿ ನನ್ನ ಅಕ್ಕ ಭಾವನನ್ನು ನಮ್ಮ ಊರಿಗೆ ಕರೆದುಕೊಂಡು ಬಂದು ಮನೆಯಲ್ಲಿಯೆ ಇಟ್ಟುಕೊಂಡರು. ಗಂಡು ಮಕ್ಕಳಿಗೆ ಕೊಟ್ಟಂತೆ ಒಂದು ಪಾಲನ್ನೂ ಕೊಟ್ಟರು, ಇದಕ್ಕೆ ನಮ್ಮ ಯಾರ ವಿರೋಧವೂ ಇರಲಿಲ್ಲ.

ಈಗ ಜೀವನದ ಕೊನೆ ದಿನಗಳನ್ನು ಎಣಿಸುತ್ತಿರುವ ನನ್ನ ಅಪ್ಪನಿಗೆ ನನ್ನ ಅಕ್ಕನ ಆಸರೆಯೂ ದೊರಕಿದೆ. ೫ ವರ್ಷಗಳಿಂದ ನನ್ನ ಅವ್ವ, ನನ್ನ ಅಕ್ಕ, ಅಕ್ಕನ ಮಕ್ಕಳು ಬೇಸರಿಸದಂತೆ ಅವರ ಸೇವೆ ಮಾಡುತ್ತಿದ್ದಾರೆ. ಕಳೆದ ಮೂರು ವರ್ಷಗಳಿಂದ ಮೂತ್ರಕೋಶ ಕಾರ್ಯ ನಿರ್ವಹಿಸುತ್ತಿಲ್ಲವಾದ್ದರಿಂದ, ಹೊಕ್ಕಳಿನ ಹತ್ತಿರ ರಂಧ್ರ ಕೊರೆದು ಪೈಪಿನ ಮುಖಾಂತರ ಮೂತ್ರ ಹೊರಬರುವಂತೆ ಮಾಡಲಾಗಿದೆ.

ನನ್ನ ಅವ್ವ ಹಾಗೂ ನನ್ನ ಅಕ್ಕ ಅಪ್ಪನ ಸೇವೆ ಮಾಡಿದಂತೆ, ನನಗೂ ನನ್ನ ಪ್ರೀತಿಯ ಮಡದಿಗೂ ಆ ಅವಕಾಶ ಸಿಕ್ಕಿದೆ. ಕಳೆದ ೫ ವರ್ಷಗಳಿಂದ ಪ್ರತೀ ತಿಂಗಳು ಕಾರಿನಲ್ಲಿ ಕರೆದುಕೊಂಡು ಬಂದು, ಆರೋಗ್ಯ ತಪಾಸಣೆ ಮಾಡಿಸಿ, ೩-೪ ದಿವಸ ಬೆಂಗಳೂರಿನ ನನ್ನ ಮನೆಯಲ್ಲಿದ್ದು, ಮತ್ತೆ ಊರಿಗೆ ಬಿಟ್ಟು ಬರುವ ಕಾರ್ಯ ನಿರಂತರವಾಗಿ ನಡೆದಿದೆ. ನನ್ನ ಅಪ್ಪನಿಗೆ ಮಗ ಪ್ರೀತಿಸಿ ಮದುವೆಯಾದ ಸೊಸೆಯ ಮೇಲೆ ಅಪಾರ ಪ್ರೀತಿಯಿದೆ. ಇದಕ್ಕೆ ಅವರ ಕಷ್ಟ ಕಾಲದಲ್ಲಿ ಅವಳು ಮಾಡಿದ ಸೇವೆಯೇ ಕಾರಣ. ಈ ಪ್ರೀತಿಯನ್ನು ಕಂಡು ನನ್ನ ಅವ್ವ ಅಸೂಯೆ ಪಟ್ಟಿದ್ದೂ ಇದೆ. ಈಗಲೂ ಊಟ ಮಾಡಲು, ಹಣ್ಣು ತಿನ್ನಲು, ನೀರು ಕುಡಿಯಲು ಹಟ ಮಾಡುವುದುಂಟು. ಆಗ ಪ್ರೀತಿಯ ಸೊಸೆ ಮುಂದೆ ನಿಂತು ತಗೋ ಎಂದರೆ ಸಾಕು ಮರುಮಾತನಾಡದೆ ಎಲ್ಲವೂ ಮಾಡುತ್ತಾರೆ.

ಸರಿಯಾಗಿ ೧೦೦ ವರ್ಷಗಳನ್ನು ಕಂಡಿರುವ ಅವರ ಬದುಕು ನಮಗೊಂದು ಮಾದರಿ. ಬದುಕನ್ನು ಯಾವದೇ ರೀತಿ ಬಂದಂತೆ ಸ್ವೀಕರಿಸಬೇಕು ಎಂಬುದಕ್ಕೆ ಅತ್ಯುತ್ತಮ ಉದಾಹರಣೆ. ಜೀವನದ ಎಲ್ಲಾ ಏಳುಬೀಳುಗಳನ್ನು ಕಂಡಿರುವ ಅವರು ತುಂಬು ಬದುಕನ್ನು ನಡೆಸಿದವರು. ಈ ಇಳಿವಯಸ್ಸಿನಲ್ಲಿ ನಿರಂತರ ಅವರ ಸೇವೆಯನ್ನು ಮಾಡುತ್ತಿರುವ ನನ್ನ ಅವ್ವನ ಸಹನೆ ಬೆಟ್ಟದಷ್ಟು. ಅವರಿರುವಷ್ಟು ಕಾಲ ಅವರ ಸೇವೆ ಮಾಡುವುದೇ ನಮ್ಮ ನಿಜವಾದ ಭಾಗ್ಯ.

■ ಎಂ. ರಾಮಚಂದ್ರಗೌಡ

೧೨೯, ಗೋವಿಂದಪ್ಪ ರಸ್ತೆ, ಬಸವನಗುಡಿ, ಬೆಂಗಳೂರು-೫೬೦ ೦೦೪ ■

೧. ಮೀನು

ಕೆಲ ಮನೆಯಲ್ಲಿವೆ
ಜಲಚರಗಳಿಗೆ ಈಜುಗೊಳ
ನಿಶ್ಚಲ ಗಾಜುಗೋಳ.

ನೀರ ಸೀಳಿ ಚಿಮ್ಮುತ್ತಿದೆ
ಮೀನ ಕಾಮನಬಿಲ್ಲು
ಚಂಚಲ ಕಣ್ನೋಟ.

ಬೆಳಕಿಗೊಡ್ಡಿ ಮಿಂಚುತ್ತಿದೆ
ನೀರೊಳು ನೀರಾಗಿ
ಮಾಟದ ಮೈ ಬಳುಕಿ.

ಚಣ ನಿಂತು ಪಿಸುಗುಟ್ಟಿದೆ
ಬಾಯಲಿ ಬಾಯಿಟ್ಟು
ಹೆಜ್ಜೆ ಗುರುತು ಬಿಡದೆ.

ಪಾರದರ್ಶಕ ದಡದಲ್ಲೇ
ಬಲೆ ಬೀಸುವ ಬೆಕ್ಕಿಗೆ
ದಕ್ಕದ ಎದೆ ಬಡಿತ.

ಬೆಕ್ಕಿನ ಕಣ್ಣಾಳತೆಯಲ್ಲೇ
ಜಿಗಿದಾಡುವ ಮೀನ ಕಿವಿ ತುಂಬಾ
ಕಾಣದ ಕಡಲ ಮೊರೆತ.

೨. ಚುಕ್ಕಿಗಳೇ ಕೇಳಿ...

ಪುಟ್ಟ ಗೆಜ್ಜೆ ಕಾಲ್ಗಳ
ಇನಿದನಿ ಕುಣಿಸುತ್ತ
ಬೆಳದಿಂಗಳ ಅಟ್ಟದಲ್ಲಿ
ಪುಟು ಪುಟು ಓಡಾಡಿದ
ಹಾಲುಗಲ್ಲದ ಪುಟಾಣಿ.

ಇದೀಗ
ಹಾಲು ಕುಡಿಯಲು ಬೇಡ
ಪಲ್ಯ ತಿನ್ನಲು ಬೇಡ
ಎಂದೆಲ್ಲ ಹಠ ತೊಟ್ಟರೂ
ಅಡಗಿ ಕೂತಿರುವ
ಗೆರೆ ಕೊರೆದ ಚಂದ್ರಾಮ
ಘಾಗ್ರಾ ಚೋಲಿ ಲಾಚಾ ಶರಾರಾ
ಜೀನ್ಸು ಟೀ ಶರ್ಟಿನೊಳಗೆ
ಚುಕ್ಕಿಗಳ ಕಣ್ಣ ಕುಕ್ಕುವಂತೆ.

ಶ್!
ಕುಂಡದೊಳಗಿನ ಮನೀಪ್ಲ್ಯಾಂಟು
ನೆಡುವ ಕೋಲಿನ ಗುಂಟ
ಮೊಗವೆತ್ತಿ ನೋಡುತಿದೆ.

ಚಂದಿರನ ಸುತ್ತುವರಿವ
ಚುಕ್ಕಿಗಳೇ "ಇಲ್ಲಿ
ಫೋಟೋ ತೆಗೆ
ವುದಕ್ಕೆ ನಿಷೇಧವಿದೆ."

೩. ಹೆಬ್ಬಾವು

ಹೆಜ್ಜೆ ಗುರುತಿಲ್ಲದ
ಹಕ್ಕಿಯೊಂದು
ಬಡಿಯುತ್ತಿದೆ ಬಾಗಿಲು.

ಅದರ ಬೆನ್ನಲ್ಲಿದೆ
ಕಟ್ಟುವ ಮನೆ
ತಿಂಗಳ ಕೊನೆ.

ಚಹಕ್ಕೆ ಸಕ್ಕರೆ ಸಾಕೇ ತುಸು!
ನಲವತ್ತರ ಆಸುಪಾಸು.

ಮಗುವಿನ ಷೂ ಹರಿದಿದೆ
ಹಾಕಿ ಬಿಡುವೆ ಎರಡು ಹೊಲಿಗೆ
ಅಕ್ಕಿ ಬೇಳೆ ಎರಡಿದ್ದರೆ ಅಡಿಗೆ.

ತಿಂಗಳಿಗಾರೇ ತೆಂಗಿನಕಾಯಿ
ಎಣ್ಣೆ ಇಳಿಸು ಅರ್ಧ ಕೇಜಿಗೆ
ಗ್ಯಾಸಲ್ಲೇ ಕಾಸು ನೀರು ಸೋವಿ.

ನೋಡು ಕರೆಂಟು ಬಿಲ್ಲು
ಇನ್ನೇನು ಸಾಲದ ಕಂತು ಬಾಲು.

ಆಫೀಸಿಗೇ ನಡದೇ ಹೋದರೆ
ಹೊಟ್ಟೆ ಕರಗಿ ಸ್ಮಾರ್ಟು
ಲೂನಾಕ್ಕೆ ಪೆಟ್ರೋಲು
ನ್ಯಾಷನಲ್ ವೇಸ್ಟು.

ಕಟೋರಿ ಬ್ಲೌಸಿಗೆ
ಬ್ರಾದ ಅಗತ್ಯವಿಲ್ಲ
ಸ್ನೇಹಿತೆಯ ಹೊಸ ಸಿದ್ಧಾಂತ
ಫಾಲೋ ಮಾಡೋಣ.

ಹೊಸ ಮನೆ ನೆಲಕ್ಕೆ
ಮಾರ್ಬಲ್ಲೇ ಇರಲೇನೆ?
ಮಕ್ಕಳಿಗಾಯ್ತು ಬಿಡಿ
ಕಂಪ್ಯೂಟರಿಗೊಂದು ರೂಮು.

ಅಯ್ಯಯ್ಯೋ!
ಹಿಂಡಿಟ್ಟ ಟರ್ಕೀಸ್ ಟಾವೆಲ್ಲು
ಬುಸುಗುಡುತ್ತಿದೆ
ಹೆಬ್ಬಾವಿನಂತೆ

ಕಿಟಕಿಯ
ಸಂದಿಯಿಂದೇನಾದರೂ
ಹಕ್ಕಿ
ಒಳ ಬಂತೇ?

೪. ಮರೆತೇ ಹೋದ ಮಗ್ಗಿ

ನಾಗ ಪಂಚಮಿಯ ಜೋಕಾಲಿಯಲ್ಲಿ
ಕೂತಿರುವೆ ಅಂದಿನಂತೆಯೇ
ಬಾ ಅಣ್ಣಾ
ಬೀಳದಂತೆ ತೂಗು.

ಸೈಕಲ್ ಮುಂದೆ ಕೂಡಿಸಿಕೊಂಡು
ಸಣ್ಣ ಸ್ಪ್ರಿಂಗಿನ ಬಳೆ ತೊಡಿಸು
ಬಾ ಅಣ್ಣಾ
ಟೈಲರ್ ಹತ್ತಿರ
ಅಂಬ್ರೆಲಾ ಅಂಗಿಗೆ ಅಳತೆ ಕೊಡಿಸು.

ಅದೇ ಸಂಪತ್ತಿಗೆ ಸವಾಲ್
ಸಿನೆಮಾ ತೋರಿಸು ಬಾ ಅಣ್ಣಾ
ಹೊರ ಬಂದ ಕೂಡಲೇ
ಲಿಂಬು ಸೋಡಾ ಕುಡಿಸು.

ಚಿಮಣೀ ದಿಪದ
ನೆಳಲು-ಬೆಳಕಲ್ಲಿ ಹಾರಾಡುವ
ಮಳೆ ಹುಳುಗಳ ಹಿಡಿಯುತ್ತ
ಮರೆತೇ ಹೋದ ಮಗ್ಗಿಗಳ
ಬಾಯಿಪಾಠ ಮಾಡುವಾ.

'ಡುಮ್ಮಿ... ಡುಮ್ಮಿ' ಅಂತ
ರೇಗಿಸಿ ನೋಡು
ಅಮ್ಮ ಅಡಿಗೆ ಬಿಟ್ಟು
ಓಡಿ ಬರುವಳು
ಕೈಯಲ್ಲಿ ಸೌಟು ಹಿಡಿದೇ
ಸುಳ್ಳು ಪೆಟ್ಟು ಕೊಡಲು

ಆಹಾ! ಎಂಥ ಸುಗಂಧ
ಅಮ್ಮನ ಮಡಿಲು.

೫. ಲಂಗೋಟಿಗಳ ಸಂತೆ

ಹುಟ್ಟಿ ಮೂರು ದಿನ
ಮುಷ್ಟಿಯಲಿ ಬ್ರಹ್ಮಾಂಡ
ಕಣ್ಣಿನಲಿ ನೀಲಿ ಬಿಂಬ
    ಗೊಂಬೆ ಕಿವಿ
    ತುಟಿ ಹೂ
    ಎಸಳು ಬೆರಳು
ಎಣ್ಣೆ ಅಭ್ಯಂಜನದಲ್ಲಿ
ಬೆತ್ತಲೆ ತೊಡೆ ಅವಚಿ
ಬೆಚ್ಚನೆ ತೋಳಲಿ ಈಜು
    ಬಿಸಿ ನೀರ ಹದಕ್ಕೆ
    ಕುಸು-ಕುಸು ಸ್ವರ
    ತಿಳಿಗುಲಾಬಿ ಮೈಬಣ್ಣ
    ಚೆಂಗುಲಾಬಿ
ಬೆಳ್ಳಿ ಕಾಲ್ಬಳೆ ನಾದ
ತೊಟ್ಟಿಲಲಿ ಗುಬ್ಬಚ್ಚಿ
ಕೆಳಗೆ ಹೊಗೆ ಧೂಪ.
    ಮುಸು-ಮುಸು ಸವಿ
    ರಾಗದಲ್ಲಿ ಹಸಿ ಬಿಸಿ ಕಡಲು
    ಒಳವಸ್ತ್ರವೆಲ್ಲ ಒದ್ದೆ
ಜರತಾರಿ ಸೀರೆ
ನಿಮಿಷದಲಿ ಮುದ್ದೆ ಮುದ್ದೆ
    ಕಂಡ ಕಂಡಲ್ಲೆಲ್ಲ
    ಲಂಗೋಟಿಗಳ ಸಂತೆ
    ಬೈಗು ಜಾಗರಣೆ
    ಬೆಳಗು ಅನುದಿನ ನಿದ್ದೆ
ಹಾಲು ಗಲ್ಲದ ಮೇಲೆ
ಹಾಲ ಬಿಂದು
ಅಪ್ಪನಿಗೆ ಸೋಲದ ಅಮ್ಮ
ನಿನ್ನಾಟಕೆ ಶರಣು
    ಅಮ್ಮನೆರಡು ಹೆಗಲುಗಳೇ
    ನಿನ್ನ ಜೊಲ್ಲು ಪಟ್ಟಿ
    ಆ ಘಮದೊಳಗೆ
    ಎದ್ದು ನಿಂತಳು
    ತಾಯ್ತನದ ಕದವ ತಟ್ಟಿ
ಹೊರ ಹೊರಟ ಅಪ್ಪನ
ಹೂ ಮುತ್ತು
ನಿನ್ನ ಹಣೆ ಜಾರಿ
ಅಮ್ಮನ ಕೆನ್ನೆಗೆ ಬಿತ್ತು.

■ ಸುನಂದಾ ಪ್ರಕಾಶ ಕಡಮೆ
೯೦, 'ನಾಗಸುಧೆ', ಕಾಳಿದಾಸನಗರ, ವಿದ್ಯಾನಗರ ವಿಸ್ತೀರ್ಣ, ಹುಬ್ಬಳ್ಳಿ-೫೮೦ ೦೩೧ ■

ಸಮಕಾಲೀನ ಮಹಿಳಾ ಸಾಹಿತ್ಯ

ಎಸ್. ವಿ. ಪ್ರಭಾವತಿ

೨೦೦೩ ನೇ ಇಸವಿಯಲ್ಲಿ ನಿಂತು, ಹಿಂದಿರುಗಿ ನೋಡುತ್ತಾ, ಸಮಾಲೀನ ಮಹಿಳಾ ಸಾಹಿತ್ಯದ ಕುರಿತು, ಅದರಲ್ಲೂ ೯೦ ರ ದಶಕದ ಈಚೆಗೆ ಎಂಬ ಮಾತನ್ನೂ ಸೇರಿಸಿ ನಮ್ಮನ್ನು ನಾವೇ ಮಿತಿಗೊಳಿಸಿಕೊಳ್ಳುವುದೂ, ಸಮೃದ್ಧಿಯ ಕಾರಣದಿಂದ ಇಂದು ಅಗತ್ಯವಾಗಿದೆ.* ಈ ವಿಚಾರ ಸಂಕಿರಣವು ಕಾವ್ಯ, ಚುಟುಕು, ಹನಿಗವನ, ಕಾದಂಬರಿ, ಸಣ್ಣಕತೆ, ಕಿರುಗತೆ, ವಿಮರ್ಶೆ, ವಿಚಾರ ಸಾಹಿತ್ಯ –ಇವಿಷ್ಟನ್ನೂ ಒಳಗೊಂಡು ಒಂದು ರೀತಿಯಲ್ಲಿ ಸಮಗ್ರವಾಗಿದೆ. ಆದರೆ ಈ ದಶಕದಲ್ಲಿ ಸೇರ್ಪಡೆಯಾದ ಮತ್ತು ಸಾಹಿತ್ಯದ ವೈವಿಧ್ಯತೆಯನ್ನು ಹೆಚ್ಚಿಸಿದ ಪ್ರವಾಸ ಪ್ರಬಂಧ, ವೈದ್ಯ ಸಾಹಿತ್ಯ, ಶಿಶು ಸಾಹಿತ್ಯ, ಸಂಶೋಧನೆ, ಅನುವಾದ ಮತ್ತು ಮಹಾಕಾವ್ಯಗಳನ್ನು ಒಳಗೊಳ್ಳದೇ ಅಷ್ಟರ ಮಟ್ಟಿನ ಕೊರತೆಯನ್ನೂ ಉಳಿಸಿದೆ.

'ಹಿಂದಣ ಹೆಜ್ಜೆಯನರಿತಲ್ಲದೇ ನಿಂದ ಹೆಜ್ಜೆಯನರಿಯಬಾರದು' ಎನ್ನುತ್ತಾನೆ ಅಲ್ಲಮಪ್ರಭು. ಕನ್ನಡ ಸಾಹಿತ್ಯ ಚರಿತ್ರೆಯನ್ನೇ ಭಾಷೆಯ ದೃಷ್ಟಿಯಿಂದ ಹಲ್ಮಿಡಿ ಶಾಸನಕ್ಕೂ ಸಾಹಿತ್ಯದ ದೃಷ್ಟಿಯಿಂದ ಕವಿರಾಜಮಾರ್ಗಕ್ಕೂ ಕೊಂಡೊಯ್ದು ಒಂದು ಒಂದೂವರೆ ಸಾವಿರ ವರ್ಷದ ಇತಿಹಾಸವನ್ನು ಸೃಷ್ಟಿಸುತ್ತಿರುವ ನಾವು ಮಹಿಳಾ ಸಾಹಿತ್ಯ ಚರಿತ್ರೆಯೊಂದನ್ನು ಕನ್ನಡದಲ್ಲಿ ಬರೆಯುವುದಾದರೆ ಅದನ್ನು ಹನ್ನೆರಡನೇ ಶತಮಾನದಿಂದ ಪ್ರಾರಂಭಿಸಬೇಕಾಗುತ್ತದೆ. ಅದಕ್ಕಿಂತ ಮೊದಲಿನದನ್ನು ಅಲಿಖಿತ ಪರಂಪರೆಯಾದ ಜನಪದ ಸಾಹಿತ್ಯ ಎಂದು ಪರಿಗಣಿಸಿದ್ದರೂ ಕನ್ನಡದಲ್ಲಿ ಜನಪದ ಕವಯಿತ್ರಿಯರೇ ಸೃಷ್ಟಿಸಿರುವ ಸಾಹಿತ್ಯವೇನೂ ಕಡಿಮೆ ದರ್ಜೆಯದಲ್ಲ. ಇತ್ತೀಚೆಗೆ, ಅದರಲ್ಲೂ ಸ್ತ್ರೀ ಸಂವೇದನೆಯ ಹೊಳಹುಗಳನ್ನು ಗುರುತಿಸಲಾಗುತ್ತಿದೆ. ನಮ್ಮ ದೇಶದ ಎರಡು ಮಹಾಕಾವ್ಯಗಳಾದ 'ರಾಮಾಯಣ', 'ಮಹಾಭಾರತ'ಗಳೂ ಜಾನಪದ ಮೂಲದವಾಗಿದ್ದು ಆ ಮೂಲ ಕತೆಯು, ವ್ಯಾಸ ವಾಲ್ಮೀಕಿಗಳು ಶಿಷ್ಟ ಪರಂಪರೆಯಲ್ಲಿ, ಪುರುಷ ಪ್ರಧಾನ ನೆಲೆಯಲ್ಲಿ ರೂಪಿಸಿದ ಕಾವ್ಯಗಳಿಗಿಂತ ಭಿನ್ನ ನೆಲೆಯಲ್ಲಿದ್ದು, ಸ್ತ್ರೀಪರವಾಗಿದ್ದು, ಮಾತೃಪ್ರಧಾನ ನೆಲೆಯಲ್ಲಿವೆ.

ಅಲಿಖಿತ ಪರಂಪರೆಯಿಂದ ಲಿಖಿತ ಪರಂಪರೆಗೆ ಬಂದರೆ ಹನ್ನೆರಡನೇ ಶತಮಾನದಲ್ಲಿ ನಾಗಚಂದ್ರನ ಸಮಕಾಲೀನಳಾಗಿ ಕಂತಿ ಎಂಬ ಕವಯಿತ್ರಿಯಿದ್ದಳು. ಅವಳು ನಾಗಚಂದ್ರನೊಂದಿಗೆ ಸಮ ಸಮವಾಗಿ ಕವಿತಾರಚನೆ ಮಾಡುತ್ತಾ ಚದುರಿನ ಪದ್ಯಗಳನ್ನು ರಚಿಸುತ್ತಿದ್ದಳು ಎಂಬ ಪ್ರತೀತಿಯಿದ್ದರೂ ಕಂತಿ ಎಂಬ ಕವಯಿತ್ರಿ ಇದ್ದಳೆಂಬುದಕ್ಕೆ ಸಾಕಷ್ಟು ಆಧಾರಗಳು ಸಿಗದಿರುವುದರಿಂದ ಅಕ್ಕಮಹಾದೇವಿಯೇ ಕನ್ನಡದ ಮೊಟ್ಟ ಮೊದಲ ಕವಯಿತ್ರಿಯಾಗುತ್ತಾಳೆ. ಬಸವಣ್ಣನವರು ಪ್ರತಿಪಾದಿಸಿದ ಸಾಮಾಜಿಕ ನ್ಯಾಯದ ಪರಿಣಾಮವಾಗಿ ಕಲ್ಯಾಣದಲ್ಲಿ ಒಂದು ದೊಡ್ಡ ಕ್ರಾಂತಿಯೇ ನಡೆದು ಅದರ ಉಪ ಉತ್ಪನ್ನವೆಂಬಂತೆ ರಚಿತವಾದ ವಚನ ಸಾಹಿತ್ಯ ಕನ್ನಡದ ವಿಶಿಷ್ಟ ಆಸ್ತಿ. ಅಕ್ಕನೂ ಒಳಗೊಂಡಂತೆ ಬಹು ಮಂದಿ ಶರಣೆಯರು ವಚನಗಳನ್ನು ರಚಿಸಿದರು. ಸಮಾಜದ ಎಲ್ಲ ಜಾತಿಗಳಿಂದ ಎಲ್ಲ ಸ್ತರಗಳಿಂದ ಬಂದ ಶರಣೆಯರು ಅಕ್ಕನನ್ನೂ ಅಲ್ಲಮನನ್ನೂ ಅನುಸರಿಸಿದ್ದರಲ್ಲಿ ಆಶ್ಚರ್ಯವಿಲ್ಲ. ಅಕ್ಕಮಹಾದೇವಿಯೇನೋ ಸಂಸಾರವನ್ನು ತೊರೆದು ಚೆನ್ನಮಲ್ಲಿಕಾರ್ಜುನನೇ ತನ್ನ ಗಂಡನೆಂದು ಪರಿಭಾವಿಸಿ ಅಲೌಕಿಕ ನೆಲೆಯಲ್ಲಿ ನಿಂತು ವಚನಗಳನ್ನು ರಚಿಸಿದ್ದರಿಂದ ಅವುಗಳಲ್ಲಿ ಭಾವತೀವ್ರತೆ, ಪರಿಪಕ್ವತೆ, ಉತ್ತಮ ಗುಣಮಟ್ಟದ ಕಾವ್ಯ ಇವನ್ನು ಗುರುತಿಸಬಹುದು. ಆದರೆ ಉಳಿದ ಶರಣೆಯರಿಗೆ ಈ ಸ್ವಾತಂತ್ರ್ಯವಿರಲಿಲ್ಲ. ಅವರಿಗೆ ಸಂಸಾರದ ಬಂಧನವಿತ್ತು. ಆದರೂ ಕೆಲವರು ಅಕ್ಕನಷ್ಟೇ ದಿಟ್ಟವಾಗಿ ಬರೆದಿದ್ದಾರೆ. ಅಕ್ಕನ ಪ್ರತಿಭೆ ಎಂಥದೆಂದರ ಇಂದಿಗೂ ಅವಳಂತೆ ಬದುಕಿದ ಅಥವಾ ಅವಳಂತೆ ಬರೆಯುವ ಕನ್ನಡದ ಕವಯಿತ್ರಿಯರನ್ನು ಹುಡುಕಬೇಕಿದೆ, ಪ್ರತಿಭಾ ಅಂಥವರನ್ನು ಹೊರತುಪಡಿಸಿದರೆ. ಅಕ್ಕ ಅಲ್ಲಮನಂಥವರು ಕನ್ನಡದಲ್ಲಿ ಬರೆಯದೇ ಉತ್ತರ ಇಂಡಿಯಾದ ಯಾವ ಭಾಷೆಯಲ್ಲಿ ಬರೆದಿದ್ದರೂ ಜಗತ್‌ಪ್ರಸಿದ್ಧರಾಗುತ್ತಿದ್ದರು ಎಂಬ ಮಾತೊಂದಿದೆ. ಇಂತಹ ಅಕ್ಕನಿಂದ ಪ್ರಾರಂಭವಾಗುವ ಕನ್ನಡದ ಮಹಿಳಾ ಸಾಹಿತ್ಯ ಚರಿತ್ರೆಯ ಮುಂದಿನ ಐದುನೂರು ವರ್ಷಗಳ ಶೂನ್ಯದ ನಂತರ ಮತ್ತೆ ಹೆಣ್ಣಿನ ಧ್ವನಿಯನ್ನು ಕೇಳಬೇಕಾದರೆ ನಾವು ಹದಿನೇಳನೇ ಶತಮಾನಕ್ಕೇ ಬರಬೇಕು.

ಚಿಕ್ಕದೇವರಾಜ ಒಡೆಯರು ಸಾಹಿತ್ಯ ಸಂಸ್ಕೃತಿಗೆ ಬೆಲೆಯಿತ್ತು ತಮ್ಮ ಆಸ್ಥಾನದಲ್ಲಿ ಸಾಹಿತಿಗಳ ಹಿಂಡನ್ನೇ ಬೆಳೆಸಿದವರು. ಅವರ ಗುರು ಅಳಸಿಂಗರಾರ್ಯರು, ಒಡೆಯರ ಸಂಚಿ ಊಳಿಗದವಳಾದ ಹೊನ್ನಮ್ಮನಿಗೂ ಗುರುವಾಗಿ ಅಂದು, ಹೆಣ್ಣುಮಕ್ಕಳಿಗಿದ್ದ ಅನೇಕ ನಿರ್ಬಂಧಗಳ ನಡುವೆಯೂ ಅವಳಿಗೆ ಅಕ್ಷರ ಕಲಿಸಿ, ಲೇಖನಿ ಹಿಡಿಸಿ ಕಾವ್ಯ ಬರೆಯುವ ಪ್ರೇರಣೆ ಕೊಟ್ಟದ್ದು ಒಂದು ದೊಡ್ಡ ವಿಷಯವೇ. ಈ ಎಲ್ಲಾ ಕೃತಜ್ಞತೆಯ ಭಾರದ ನಡುವೆ ಹೊನ್ನಮ್ಮ ಸಾಂಗತ್ಯದಲ್ಲಿ 'ಹದಿಬದೆಯ ಧರ್ಮ' ಬರೆಯುವಾಗ ಅಂದು ರೂಢಮೂಲ ವಾಗಿದ್ದ ಎಲ್ಲಾ ಸಾಂಪ್ರದಾಯಕ ಅಂಶಗಳನ್ನೂ ಒಪ್ಪಿಕೊಂಡೇ ಬರೆಯುವ ಅನಿವಾರ್ಯತೆ ಅವಳಿಗಿತ್ತು, ಅವಳ "ಪೆಣ್ಣಲ್ಲವೇ ನಮ್ಮನೆಲ್ಲ ಪಡೆದ ತಾಯಿ ಪೆಣ್ಣಲ್ಲವೇ ಪೊರೆದವಳು" ಎಂಬ ಪ್ರಸಿದ್ಧವಾದ ಒಂದು ಪದ್ಯದಿಂದ ಅವಳ ಕಾವ್ಯವನ್ನು ಅಳೆದು, ಉಳಿದಂತೆ ಅವಳು ಹೆಣ್ಣಿಗೆ ತೊಡಿಸಿರುವ ಇತರ ನಿರ್ಬಂಧಗಳನ್ನು ಅಲಕ್ಷಿಸಿ ಅವಳು ಸ್ತ್ರೀಪರವಾಗಿ ಬರೆದಳು ಎಂದು ಹೇಳುವುದು ಸರಿಯಲ್ಲ. ಇದೇ ಮಾತನ್ನು ಅವಳ ಸಮಕಾಲೀನರಾದ ಶೃಂಗಾರಮ್ಮ, ಚೆಲುವಾಂಬೆ, ಹೆಳವನಕಟ್ಟೆ ಗಿರಿಯಮ್ಮ ಇವರಿಗೂ ಅನ್ವಯಿಸಬಹುದು. ಇದೇ ಸರಿಸುಮಾರಿಗೆ ಕುಮಾರವ್ಯಾಸ, ಲಕ್ಷ್ಮೀಶರ ಪ್ರಭಾವಕ್ಕೆ ಒಳಗಾಗಿ ಸಂಪ್ರದಾಯದ ಹಾಡುಗಳನ್ನು ಬರೆದವರು, ಹರಿದಾಸರನ್ನನುಸರಿಸಿ ಕೀರ್ತನೆಗಳನ್ನು ಬರೆದವರು, ಈ ಎರಡು ಕ್ಷೇತ್ರಗಳಲ್ಲಿ ಕೆಲಸ ಮಾಡಿದ ಸ್ತ್ರೀಯರ ದೊಡ್ಡ ಪಟ್ಟಿಯೇ ಇದೆ. ಆದರೆ ಇವರ‍್ಯಾರೂ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಉಲ್ಲೇಖ ವನ್ನೂ ಕಂಡವರಲ್ಲ. ಡಾ. ಕಮಲಾ ಹಂಪನಾರಂಥವರ ಸಂಶೋಧನೆಯ ಪರಿಣಾಮವಾಗಿ ಈಗೀಗ ಇವರು ಬಿಡಿ ಬಿಡಿಯಾಗಿ ಉಲ್ಲೇಖಗೊಳ್ಳುತ್ತಿದ್ದಾರೆ.

ಹಾಗೆ ನೋಡಿದರೆ ಹೊಸಗನ್ನಡ ಸಾಹಿತ್ಯದ ಮೊಟ್ಟಮೊದಲ ಲೇಖಕಿಯಾದ ನಂಜನಗೂಡು ತಿರುಮಲಾಂಬಾ ಮತ್ತು ಅವರ ಸಮಕಾಲೀನರಾದ ಆರ್. ಕಲ್ಯಾಣಮ್ಮ, ತಿರುಮಲೆ ರಾಜಮ್ಮ, ಹೆಚ್.ಎಸ್. ಕಾತ್ಯಾಯನಿ, ಪಡುಕೋಣೆ ಸೀತಾದೇವಿ, ಹೆಚ್.ವಿ. ಸಾವಿತ್ರಮ್ಮ, ಕೊಡಗಿನ ಗೌರಮ್ಮ, ಬೆಳಗೆರೆ ಜಾನಕಮ್ಮ, ಮೂಕಾಂಬಿಕಮ್ಮ, ಜಯಲಕ್ಷ್ಮೀದೇವಿ, ಶ್ಯಾಮಲಾದೇವಿ, ...ಇವರ‍್ಯಾರೂ ಹೊಸಗನ್ನಡ ಸಾಹಿತ್ಯ ಚರಿತ್ರೆಗಳಲ್ಲಿ ಉಲ್ಲೇಖಿತರಾಗಿಲ್ಲ. ತೀರಾ ಇತ್ತೀಚೆಗೆ ಡಾ. ಸುಮಿತ್ರಾಬಾಯಿ ಮತ್ತು ಡಾ. ವಿಜಯಾ ದಬ್ಬೆಯಂತಹ ಸ್ತ್ರೀವಾದೀ ವಿಮರ್ಶಕರು ನಡೆಸಿರುವ ಪ್ರತ್ಯೇಕ ಅಧ್ಯಯನಗಳ ಮೂಲಕವಷ್ಟೇ ಇವರು ಓದುಗರಿಗೆ ಪರಿಚಿತರು. ನಂಜನಗೂಡು ತಿರಾಮಲಾಂಬಾ ಅವರ ಬಗ್ಗೆ ವಿಜಯಾ ದಬ್ಬೆ ಬರೆದ 'ಹಿತೈಷಿಣಿಯ ಹೆಜ್ಜೆಗಳು', ಹೆಚ್. ವಿ. ಸಾವಿತ್ರಮ್ಮ ಅವರ ಬಗ್ಗೆ ಡಾ. ಎನ್. ಗಾಯತ್ರಿ ಮತ್ತು ಡಾ. ಸುಮಿತ್ರಾಬಾಯಿ ಬರೆದ 'ವಿಮುಕ್ತೆಯ ಹಾದಿಯಲ್ಲಿ', ಬೆಳಗೆರೆ ಜಾನಕಮ್ಮ ಅವರ ಬಗ್ಗೆ ನೇಮಿಚಂದ್ರ ಬರೆದ 'ಬೆಳಗೆರೆ ಜಾನಕಮ್ಮ', ಸಿ. ಎನ್. ಜಯಲಕ್ಷ್ಮೀದೇವಿ ಅವರ ಬಗ್ಗೆ ಚಂದ್ರಮತಿ ಸೋಂದಾ ಬರೆದ 'ವ್ಯಕ್ತಿ ಅಭಿವ್ಯಕ್ತಿ', ಕಲ್ಯಾಣಮ್ಮ ಅವರ ಬಗ್ಗೆ ಸುಮಿತ್ರಾಬಾಯಿ ಬರೆದ 'ಕಲ್ಯಾಣ ಸರಸ್ವತಿ', ತಿರುಮಲೆ ರಾಜಮ್ಮ ಅವರ ಬಗ್ಗೆ ಹೆಚ್. ಎಸ್. ಪಾರ್ವತಿ ಬರೆದ 'ಭಾರತಿ' —ಇವು ಮೊದಲ ತಲೆಮಾರಿನ, ನವೋದಯದಲ್ಲಿ ಬರೆದ ಈ ಲೇಖಕಿಯರ ಬಗ್ಗೆ ಹೊಸ ದೃಷ್ಟಿಕೋನವನ್ನೇ ನೀಡಿ ಇನ್ನು ಮುಂದಾದರೂ ಸಾಹಿತ್ಯ

ಚರಿತ್ರೆಗಳಲ್ಲಿ ಇವರ ಉಲ್ಲೇಖವಾಗಲೇಬೇಕಾದ ಅನಿವಾರ್ಯತೆಯನ್ನುಂಟು ಮಾಡಿದವು. ಮೊದಲ ತಲೆಮಾರಿನ ಈ ಲೇಖಕಿಯರಲ್ಲಿ ಬಹುಮಂದಿ ಸಮಾಜ ಸೇವಕಿಯರು, ಪತ್ರಿಕೆ ನಡೆಸುತ್ತಿದ್ದವರು. ತಿರುಮಲಾಂಬಾ ಅವರು 'ಸನ್ಮಾರ್ಗ ದರ್ಶಿನಿ' ಮತ್ತು 'ಕರ್ನಾಟಕ ನಂದಿನಿ' ಎಂಬ ಪತ್ರಿಕೆಗಳನ್ನೂ ಕಲ್ಯಾಣಮ್ಮ ಅವರು 'ಸರಸ್ವತಿ' ಎಂಬ ಪತ್ರಿಕೆಯನ್ನೂ ಗಿರಿಬಾಲೆಯವರು 'ಸುಪ್ರಭಾತ' ಪತ್ರಿಕೆಯನ್ನೂ ನಡೆಸುತ್ತಿದ್ದರು. ಶ್ಯಾಮಲಾದೇವಿಯವರು 'ಜಯಕರ್ನಾಟಕ' ಪತ್ರಿಕೆಯ ಮಹಿಳಾ ವಿಭಾಗದ ಸಂಪಾದಕಿಯಾಗಿದ್ದರು. ಖ್ಯಾತ ಪತ್ರಕರ್ತರಾದ ತಿ. ತಾ. ಶರ್ಮರ ಪತ್ನಿ ಎಂದೇ ಹೆಸರಾದ ರಾಜಮ್ಮ ಇತ್ಯಾದಿ. ಇವರಲ್ಲಿ ಕೆಲವರು ನಾಟಕಗಳನ್ನು ಬರೆದವರು, ಅನುವಾದ ಮಾಡಿದವರು. ಸೀತಾದೇವಿ ಪಡುಕೋಣೆ ಆ ಕಾಲಕ್ಕೇ ಕೈಲಾಸಂ ಅವರ 'ಹೋಂ ರೂಲ್'ನ್ನು ಕೊಂಕಣಿ ಭಾಷೆಗೆ, ಆ್ಯಂಟನ್ ಚೆಕಾಫ್‌ನ 'ಅಂಕಲ್ ಟೋನಿ'ಯನ್ನು 'ವೇಣುಮಾವ' ಎಂಬ ಹೆಸರಿನಿಂದ ಕನ್ನಡಕ್ಕೆ, ವಿ. ಸೀ. ಯವರ 'ಸೋಹ್ರೋಬ್ ರುಸ್ತುಂ' ಅನ್ನು ಹಿಂದಿಗೆ ಅನುವಾದಿಸಿದ್ದರು. ತಿರುಮಲೆ ರಾಜಮ್ಮನವರು ಸರಳ ರಗಳೆಯ ಪ್ರಯೋಗ ಮಾಡಿ 'ಕಪಟ ನಾಟಕ', 'ಅಹಲ್ಯಾ', 'ತಪಸ್ವಿನಿ' ಮೊದಲಾದ ನಾಟಕ ರಚಿಸಿದ್ದರು.

ಮೊದಲ ತಲೆಮಾರಿನ ಈ ಲೇಖಕಿಯರು ತಮ್ಮ ಸಮಕಾಲೀನರಾದ ಮಾಸ್ತಿ, ಕುವೆಂಪು, ಬೇಂದ್ರೆಯನ್ನೂ ಅನುಸರಿಸದೇ ಅನಕೃ, ತರಾಸು, ನಿರಂಜನ ಅವರ ರಂಜನೀಯ ಬರವಣಿಗೆಯನ್ನೂ ಅನುಸರಿಸದೇ ಸುಧಾರಣಾವಾದಿಗಳಾದ ಕೆರ್ಕಿ ವೆಂಕಟರಮಣಶಾಸ್ತ್ರೀ, ವೆಂಕಟ ರಂಗೋ ಕಟ್ಟಿ, ಆಲೂರು ವೆಂಕಟರಾಯರು, ಮುದವೀಡು ಕೃಷ್ಣರಾಯರು, ಕೆರೂರು ವಾಸುದೇವಾಚಾರ್ಯರು –ಇವರುಗಳನ್ನು ಅನುಸರಿಸಿದ್ದರಿಂದ ಅವರ ಬರವಣಿಗೆಗಳು ಬದುಕಿನಿಂದ ಪಲಾಯನ ಮಾಡದೇ ಸಮಾಜಮುಖಿಯಾದವು.

ಹೊಸ ಗಾಳಿಗೆ ಬೆನ್ನು ತಿರುಗಿಸಲೂ ಆಗದೇ, ಸಂಪ್ರದಾಯಗಳಿಗೆ ಸಿಕ್ಕಿ ಬೀಳಲು ಮನಸ್ಸೂ ಬಾರದೇ, ಕ್ರಾಂತಿ, ಮಡಿವಂತಿಕೆ ಇವೆರಡೂ ಒಟ್ಟೊಟ್ಟಿಗೇ ಹೆಜ್ಜೆ ಹಾಕುವ ಇವರ ಬರವಣಿಗೆಯ ಕ್ರಮವನ್ನು ಇಲ್ಲಿನ ಹೋರಾಟದ ಕ್ರಮವು ಆಕ್ರಮಣದ ವಿರುದ್ಧದ ರಕ್ಷಣಾ ಕ್ರಮ ಎಂದು ಭಾವಿಸಬೇಕೇ ಹೊರತು, ಹೊಸ ದಿಗಂತದ ಕಡೆಗೆ ಸಾಗುವ ದಿಟ್ಟ ಹೆಜ್ಜೆ ಎಂದೇನೂ ಅಲ್ಲ. ಹೀಗೆ ಇವರ ಮಿತಿಗಳನ್ನು ಒಪ್ಪಿಕೊಂಡು ಅವರ ಕಾಲಕ್ಕೆ ಅವರು ಅಷ್ಟು ಮಾಡಿದ್ದೇ ಹೆಚ್ಚು ಎಂದೂ ಅವರವರ ಕಾಲಕ್ಕೆ ಅವು ಹೊಸ ಪ್ರಯೋಗಗಳೇ ಆಗಿದ್ದವು ಎಂದೂ ಹೇಳಬಹುದು. ಸಾರಾಸಗಟಾಗಿ ಅವರೆಲ್ಲರೂ ಕಲಾತ್ಮಕವಾಗಿ ಬರೆದರು, ಜಾಗೃತಿ ಮೂಡಿಸಿದರು ಎಂದು ಹೇಳಲಾಗದು.

ಸಮೃದ್ಧಿ ಒಂದನ್ನು ಹೊರತುಪಡಿಸಿ ಇನ್ನೆಲ್ಲಾ ಅಂಶಗಳಲ್ಲೂ ಸಾಧನೆಯನ್ನೇ ಮಾಡಿದ ಈ ಮೊದಲ ತಲೆಮಾರಿನ ಲೇಖಕಿಯರ ನಂತರ ಬಂದವರು, ಎರಡನೇ ತಲೆಮಾರಿನ ಲೇಖಕಿಯರು. ಇವರಿಗೆ ತಮ್ಮ ಅಕ್ಕಂದಿರು ಮಾದರಿಯಾಗದೇ ಹೋದುದಕ್ಕೆ ಕಾರಣಗಳು, ನವೋದಯದ ಆದರ್ಶಗಳು ಕುಸಿದು ಬಿದ್ದುದಿರಬಹುದು, ನವ್ಯದ ಸಿನಿಕತನವಿರಬಹುದು. ಒಟ್ಟಿನಲ್ಲಿ ತಮ್ಮ ಸ್ತ್ರೀ ಹೃದಯದ ಸಹಜ ಅನಿಸಿಕೆಗಳನ್ನು ಮರೆಮಾಚಿ ಪುರುಷರು ಸೃಷ್ಟಿಸಿದ ಮಾದರಿಗಳನ್ನೇ ಇವರು ಅನುಸರಿಸಿದರು. ಇದರಿಂದ ಮನರಂಜನೆ ಸಿಕ್ಕಿರಬಹುದು, ಕಥೆ

ಮತ್ತು ಕಾದಂಬರಿಗಳು ಓದಿಸಿಕೊಂಡು ಹೋಗುವ ಮಾಧ್ಯಮವಾದುದು ನಿಜವಿರಬಹುದು. ಆದರೆ ಯುವ ಜನಾಂಗವನ್ನು ರಂಜನೆಯ ಹುಸಿಲೋಕಕ್ಕೆ ಕರೆದೊಯ್ದು ನಿಜವಾದ ಬದುಕಿನ ಗಂಭೀರತೆಗೆ ಕುರುಡಾಗುವಂತೆ ಮಾಡಿದ್ದರಿಂದಾಗಿ ಇಂತಹ ಹುರುಳಿಲ್ಲದ ರಚನೆಗಳಿಂದ ವಿಮರ್ಶಕರು ಇವರ ಬರವಣಿಗೆಯನ್ನು ಗಂಭೀರವಾಗಿ ಗಮನಿಸದೇ ಹೋದರು. ವೈದೇಹಿ, ನೇಮಿಚಂದ್ರ, ವೀಣಾ ಶಾಂತೇಶ್ವರ ಇಂಥವರು ಬರೆಯತೊಡಗಿದ ಮೇಲೂ ಇಂದಿಗೂ ಅನೇಕ ವಿಮರ್ಶಕರು, ಭಾಷಣಕಾರರು ನಿಮ್ಮ ಮಹಿಳಾ ಸಾಹಿತ್ಯದಲ್ಲೇನಿದೆ ಬರೀ ಬಂಗಲೆ, ಕಾರು, ಒಡವೆ, ಸೀರೆ, ಪ್ರೀತಿ, ಪ್ರಣಯ ಎಂದು ಅಪಹಾಸ್ಯ ಮಾಡುವುದು, ವೇದಿಕೆಗಳಿಂದ ಮಾತನಾಡುವಾಗ ಉದ್ದೇಶಪೂರ್ವಕವಾಗಿ ಮಹಿಳೆಯರ ಒಂದು ಕೃತಿಯನ್ನೂ ಪ್ರಸ್ತಾಪ ಮಾಡದಿರುವುದು ಇದನ್ನು ನಾವು ಪದೇ ಪದೇ ಕಾಣುತ್ತಿದ್ದೇವೆ. ಆದರೂ ಎರಡನೇ ತಲೆಮಾರಿನ ಲೇಖಕಿಯರ ಸಮೃದ್ಧ ಕೃಷಿಯನ್ನು ಹಾಗೆ ಸಾರಾಸಗಟಾಗಿ ತಳ್ಳಿ ಹಾಕುವಂತಿಲ್ಲ. ಅಪವಾದವೆನ್ನುವಂತೆಯಾದರೂ ಕೆಲವು ಉತ್ತಮ ಕಲಾಕೃತಿಗಳಿವೆ. ಜನಪ್ರಿಯ ಲೇಖಕಿಯರೂ ಕೆಲವು ಉತ್ತಮ ಕೊಡುಗೆ ಕೊಟ್ಟಿದ್ದಾರೆ.

ನವೋದಯದ ಹಂತದಲ್ಲಿ ಬರೆಯತೊಡಗಿದ ಈ ಲೇಖಕಿಯರಲ್ಲಿ ಬಹುಮಂದಿ ಬದುಕಿದ್ದು ಇನ್ನೂ ಬರೆಯುತ್ತಿರುವುದು, ನವ್ಯದ ಕಾಲಕ್ಕೆ ಬಂದವರೂ ಬರೆಯುತ್ತಿರುವುದು, ದಲಿತ ಬಂಡಾಯದೊಳಕ್ಕೆ ಮುಸ್ಲಿಂ ಮತ್ತು ಮಹಿಳಾ ಕಾವ್ಯವನ್ನು ಸೇರಿಸಿದ್ದು ಮತ್ತು ನಂತರದ ಸ್ತ್ರೀವಾದೀ ವಿಮರ್ಶೆ ಬೆಳೆದದ್ದು ಇವಿಷ್ಟೂ ಸೇರಿ ಮೂರನೇ ತಲೆಮಾರಿನ ಲೇಖಕಿಯರ ಸಂಖ್ಯೆ ಮಾತ್ರವಲ್ಲದೇ ವೈವಿಧ್ಯತೆಯೂ ಸೇರಿ ಸಮಕಾಲೀನ ಮಹಿಳಾ ಸಾಹಿತ್ಯವು ತುಂಬಾ ಸಂಕೀರ್ಣವಾಗಿದೆ. ಅಡಿಪಾಯವಿಲ್ಲದೇ ಕಟ್ಟಡ ಕಟ್ಟುವುದು ಹೇಗೆ ಸಾಧ್ಯವಿಲ್ಲವೋ ಹಾಗೆಯೇ ಎಪ್ಪತ್ತು ಎಂಬತ್ತರ ದಶಕದ ಸಾಧನೆಯನ್ನು ಮರೆತು ತೊಂಭತ್ತರ ದಶಕದ ಬಗ್ಗೆ ಮಾತನಾಡಲಾಗುವುದಿಲ್ಲ. ತ್ರಿವೇಣಿ, ಎಂ. ಕೆ. ಇಂದಿರಾ, ನವೋದಯ ಪರಂಪರೆಯಲ್ಲಿ ಸ್ತ್ರೀ ಸಂವೇದನೆಯನ್ನು ತುಂಬಿದರೆ ವೀಣಾ, ರಾಜಲಕ್ಷ್ಮೀ ನವ್ಯದ ಪರಂಪರೆಯಲ್ಲಿ ಅದನ್ನು ತುಂಬಿದರು. ನಂತರ ನೇಮಿಚಂದ್ರ ಆ ಕೆಲಸವನ್ನು ಮುಂದುವರಿಸುತ್ತಿರುವಂತೆಯೇ ವೈದೇಹಿ ಪ್ರಾರಂಭಿಸಿದ ಪ್ರಾದೇಶಿಕತೆಯೊಂದಿಗೆ ಸ್ತ್ರೀ ಸಂವೇದನೆಯನ್ನು ತುಂಬುವ ಕಾರ್ಯವನ್ನು ಗೀತಾ ನಾಗಭೂಷಣ, ಎಂ.ಎಸ್. ವೇದಾ, ನಾಗವೇಣಿ ಮಾಡಿದರು. ತುಳಸಿ ವೇಣುಗೋಪಾಲ್, ಮಿತ್ರಾ ವೆಂಕಟರಾಜ್ ಮುಂಬಯಿ ಲೋಕವನ್ನು ತೆರೆದಿಟ್ಟರು.

ಈ ದಶಕಗಳ ಲೇಖಕಿಯರ ಇನ್ನೊಂದು ದೊಡ್ಡ ಸಾಧನೆಯೇನೆಂದರೆ ಮಹಿಳಾ ಸಾಹಿತ್ಯವೆಂದರೆ ಸಾಕು ಕತೆ ಕಾದಂಬರಿಗಳೆಂಬ ಭಕ್ಷ್ಯ ಭೋಜ್ಯಗಳಿಂದಲೇ ತುಂಬಿದೆ ಎಂಬ ಮಾತನ್ನು ಸುಳ್ಳು ಮಾಡುವಂತೆ ಇಂದು ಪ್ರವಾಸ, ಪ್ರಬಂಧ, ವಿಮರ್ಶೆ, ವೈದ್ಯಕೀಯ, ಕಾವ್ಯ, ಶಿಶು ಸಾಹಿತ್ಯ, ಸುದ್ದಿ ಕಾವ್ಯ, ನಾಟಕ, ಹಾಸ್ಯ ಸಾಹಿತ್ಯ, ಅನುವಾದ, ಮಹಾಕಾವ್ಯ, ಸಂಶೋಧನೆ —ಈ ಇಷ್ಟೂ ಪ್ರಕಾರಗಳಲ್ಲಿ ಲೇಖಕಿಯರು ಕೃಷಿ ಮಾಡಿದ್ದಾರೆ, ಮಹತ್ವದ್ದನ್ನು ಸಾಧಿಸಿದ್ದಾರೆ.

ಪ್ರವಾಸ ಪ್ರಬಂಧ ಕನ್ನಡದಲ್ಲಿ ಪ್ರಾರಂಭವಾದುದೇ ತೀರಾ ಇತ್ತೀಚೆಗೆ ವಿ. ಸೀ. ಯವರ 'ಪಂಪಾಯಾತ್ರೆ'ಯ ಮೂಲಕ ಎಂಬ ಹೇಳಿಕೆಯಿದೆ. ಈ ಹಿನ್ನೆಲೆಯಲ್ಲಿ ಗಮನಿಸಿದರೆ ಇಂದು

ವಿದೇಶ ಪ್ರವಾಸ ಮಾಡಿ ಬಂದ ಎಲ್ಲರೂ ಒಂದೊಂದು ಪುಸ್ತಕ ಬರೆದವರೇ. ಡಾ. ಅನುಪಮಾ ಅವರ 'ಅಂಗೈಯಲ್ಲಿ ಯುರೋ ಅಮೆರಿಕಾ'ದಿಂದ ಹಿಡಿದು ಲತಾ ಗುತ್ತಿಯವರ 'ನಾ ಕಂಡ ಅರೇಬಿಯಾ', ಇತ್ತೀಚಿನ ಕುಲಶೇಖರಿಯವರ 'ಬೊಗಸೆ ಬುತ್ತಿ'ಯ ವರೆಗೆ ಇದರ ವ್ಯಾಪ್ತಿ ಹರಡಿದೆ. ಸಾಮಾನ್ಯವಾಗಿ ಲೇಖಕರು ಅಮೆರಿಕೆಯ ಬಗ್ಗೆ ಹೆಚ್ಚು ಬರೆವರೆ ಲೇಖಕಿಯರು ಇತರ ಪೂರ್ವ ದೇಶಗಳ ಬಗ್ಗೆ ಬರೆದುದು ಮತ್ತು ಲಿಂಗಭೇದಕ್ಕೆ ಅವಕಾಶವಿಲ್ಲದಂತೆ ಗುಣಮಟ್ಟ ವನ್ನು ಕಾಯ್ದುಕೊಂಡುದು ಇವುಗಳ ವಿಶೇಷ. ಆರ್ಯಾಂಬಾ ಪಟ್ಟಾಭಿಯವರ 'ವಿದೇಶ ಪ್ರವಾಸ', ಪದ್ಮಾ ಶೆಣೈ ಅವರ 'ವಾಸ ಪ್ರವಾಸ', ಚಂದ್ರಭಾಗಾದೇವಿಯವರ 'ಹೆಜ್ಜೆ ಗೆಜ್ಜೆಯ ನುಡಿ', ಎಂ.ಕೆ. ಇಂದಿರಾ ಅವರ 'ಅನುಭವ ಕುಂಜ', ವಸಂತೀಚಂದ್ರ ಅವರ 'ಭಾರತದರ್ಶನ', ಲಲಿತಾ ಶಾಸ್ತ್ರಿ ಅವರ 'ಹಿಮವಂತನ ನಾಡಿನಲ್ಲಿ', ನೀಳಾದೇವಿಯವರ 'ಸಬಲನ ವಿದೇಶ ಯಾತ್ರೆ', 'ನಾ ಕಂಡ ಅಖಂಡ'; ಗಿರಿಮಾಜಿಯವರ 'ಬೆಂಗಳೂರಿನಿಂದ ಬದರೀನಾಥಕ್ಕೆ' ಜಯಲಕ್ಷ್ಮಮ್ಮನವರ 'ಬದರಿ ಯಾತ್ರೆ' ಇವನ್ನು ಹೆಸರಿಸಬಹುದು.

ಡಾ. ಅನುಪಮಾ ನಿರಂಜನ ಅವರು ಸೃಜನಶೀಲ ಕೃತಿಗಳೊಂದಿಗೇ ಅದಕ್ಕೆ ಸಮಸಮವಾಗಿ ವೈದ್ಯಕೀಯ ಕ್ಷೇತ್ರದಲ್ಲೂ ಉಪಯುಕ್ತವಾದ, ಅನೇಕ ಪುಸ್ತಕಗಳನ್ನು ಬರೆದುದೇ ಮೊದಲಾಗಿ ಇಂದು ಅನೇಕ ವೈದ್ಯೆಯರು ವೈದ್ಯ ಸಾಹಿತ್ಯ ರಚಿಸಿರುವುದು ಮತ್ತು ಅವು ಹೆಚ್ಚು ಜನಪ್ರಿಯವೂ ಪ್ರಯೋಜನಕಾರಿಯೂ ಆಗಿ ಅನೇಕ ಮುದ್ರಣಗಳನ್ನು ಕಂಡಿರುವುದು ಈ ಕ್ಷೇತ್ರದ ವಿಶೇಷ. ಈಗ ಈ ಕ್ಷೇತ್ರದ ಪ್ರಸಿದ್ಧ ಹೆಸರು ಡಾ. ಗಿರಿಜಮ್ಮ. ಅನುಪಮಾ ಅವರಂತೆಯೇ ಇವರೂ ವೈದ್ಯ ಲೋಕದ ಒಳಹೊರಗುಗಳನ್ನು ತೆರೆದಿಟ್ಟವರು, ಅದಕ್ಕೆ ಸೃಜನಶೀಲತೆಯ ಮೆರುಗನ್ನು ಬೆಸೆದವರು. ಇಂದು ಈ ಕ್ಷೇತ್ರದಲ್ಲಿ ಡಾ. ವಸುಂಧರಾ ಭೂಪತಿ, ಡಾ. ಅನ್ನಪೂರ್ಣಮ್ಮ, ಡಾ. ಶಮಂತಕಮಣಿ, ಡಾ. ಲೀಲಾವತಿ ದೇವದಾಸ್, ಡಾ. ಬಿ.ಎ. ವೀಣಾ, ಡಾ. ಸುನಂದಾ ಕುಲಕರ್ಣಿ, ಡಾ. ಆರ್. ವತ್ಸಲಾ ಮೊದಲಾದವರನ್ನು ಹೆಸರಿಸಬಹುದು.

ಒಂದು ಕಾಲಕ್ಕೆ ಪುರುಷರ ಕ್ಷೇತ್ರವೆಂದೇ ಮೀಸಲಾಗಿದ್ದ ಶಿಶು ಸಾಹಿತ್ಯ ಕ್ಷೇತ್ರಕ್ಕೆ ಮಕ್ಕಳ ಕೂಟದ ಮೂಲಕ ಕಲ್ಯಾಣಮ್ಮನವರು ಕಾಲಿಟ್ಟ ಮೇಲೆ ಇಂದು ಅನೇಕರು ಬರೆಯತೊಡಗಿದ್ದಾರೆ. ಎರಡನೇ ತಲೆಮಾರಿನ ಅನೇಕ ಲೇಖಕಿಯರ ಹೆಸರು ಇಲ್ಲಿ ಬರುತ್ತದೆ. ಈ ಲೇಖಕಿಯರನೇಕರಲ್ಲಿ ಮಕ್ಕಳಿಗಾಗಿ ಪುಸ್ತಕ ಬರೆಯದೇ ಇರುವವರೇ ಇಲ್ಲ ಅನ್ನಬಹುದು.

ಸಂಶೋಧನಾ ಕ್ಷೇತ್ರದ ಹೆಬ್ಬಾಗಿಲು ಬದುಕಿನ ಇತರ ಕ್ಷೇತ್ರಗಳಂತೆ ಮೊದಮೊದಲು ಪುರುಷರಿಗೆ ಮಾತ್ರ ತೆರೆದಿತ್ತು ಎಂದೇ ಹೇಳಬೇಕು. ಪಾಶ್ಚಾತ್ಯ ವಿದ್ವಾಂಸರು ನಮ್ಮ ಸಾಹಿತ್ಯ ಚರಿತ್ರೆಯನ್ನು ಕಟ್ಟಿದರು, ಗ್ರಂಥಗಳನ್ನು ಸಂಪಾದಿಸಿದರು, ವ್ಯಾಕರಣ ಭಾಷಾಶಾಸ್ತ್ರಗಳನ್ನು ಬರೆದರು. ಆ ಹಂತದಲ್ಲಿ ಆರ್. ನರಸಿಂಹಾಚಾರ್, ಡಿ.ಎಲ್. ನರಸಿಂಹಾಚಾರ್, ಆ.ನೇ. ಉಪಾಧ್ಯೆ ಮೊದಲಾದ ಮೊದಲ ತಲೆಮಾರಿನ ವಿದ್ವಾಂಸರು ಯಾವ ಪದವಿಯ ಆಮಿಷವೂ ಇಲ್ಲದೇ ಕೇವಲ ಜ್ಞಾನಾರ್ಜನೆಗಾಗಿಯೇ ಸಂಶೋಧನೆಯನ್ನು ಕೈಗೊಂಡರು. ಪ್ರಾರಂಭದಲ್ಲಿ ಇದು ಪ್ರಾಚೀನ ಕವಿಗಳ ಕಾಲ ದೇಶ ಕೃತಿಗಳ ಚರ್ಚೆಗೆ ಮಾತ್ರ ಸೀಮಿತವಾಗಿದ್ದುದು ಅನಂತರ ಇತರ ಕ್ಷೇತ್ರಗಳಿಗೆ ವಿಸ್ತಾರಗೊಂಡಿತು. ಯಾವಾಗ ವಿಶ್ವವಿದ್ಯಾಲಯಗಳಲ್ಲಿ ಪಿಹೆಚ್.ಡಿ.

ಪದವಿಗಾಗಿ ಸಂಶೋಧನೆ ನಡೆಸುವ ಪ್ರವೃತ್ತಿಯು ಪ್ರಾರಂಭವಾಯಿತೋ ಆಗ ಆ ಕ್ಷೇತ್ರದ ಹೆಬ್ಬಾಗಿಲು ಸ್ತ್ರೀಯರಿಗೂ ತೆರೆಯಿತು. ಈಗ ಕರ್ನಾಟಕದ ಒಂಭತ್ತು ವಿಶ್ವವಿದ್ಯಾಲಯಗಳಲ್ಲದೇ ಮದರಾಸು, ಮುಂಬಯಿ, ಉಸ್ಮಾನಿಯಾ ಮೊದಲಾದ ಹೊರನಾಡ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳಲ್ಲಿಯೂ ಎಂ.ಫಿಲ್. ಮತ್ತು ಪಿಹೆಚ್.ಡಿ. ಪದವಿಗಾಗಿ ಸಂಶೋಧನೆಗಳು ನಡೆಯುತ್ತಿದ್ದು, ಹಿಂದೆಂದೂ ಇಲ್ಲದಷ್ಟು ಅಪರಿಮಿತ ಸಂಖ್ಯೆಯಲ್ಲಿ ಎಲ್ಲವೂ ಪುಸ್ತಕ ರೂಪದಲ್ಲಿ ಪ್ರಕಟವಾಗಿವೆಯೆಂದಾಗಲೀ, ಎಲ್ಲವೂ ಮೌಲಿಕ ಎಂದಾಗಲೀ ಹೇಳಲಾಗುವುದಿಲ್ಲ. ಇವುಗಳನ್ನು ಸ್ಥೂಲವಾಗಿ ಸ್ತ್ರೀಯರೇ ರಚಿಸಿದ ಪಿಹೆಚ್.ಡಿ. ಪ್ರಬಂಧಗಳು, ಸ್ತ್ರೀವಿಷಯಕವಾದ ಎಂ.ಫಿಲ್. ಮತ್ತು ಪಿಹೆಚ್.ಡಿ. ಪ್ರಬಂಧಗಳು ಎಂದು ವಿಂಗಡಿಸಿದರೂ ಈ ಪಟ್ಟಿ ದೊಡ್ಡದಾಗಿದ್ದು, ಡಾ. ಎಂ.ಎಂ. ಕಲಬುರ್ಗಿ ಅವರ ಅಭಿನಂದನ ಗ್ರಂಥವಾದ 'ಮಹಾಮಾರ್ಗ'ದ ಅನುಬಂಧ ದಲ್ಲಿ ಇದುವರೆಗೆ ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ಪಿಹೆಚ್.ಡಿ. ಪದವಿಗಾಗಿ ಅರ್ಪಿತವಾದ ಪ್ರಬಂಧಗಳ ಪಟ್ಟಿಯೊಂದನ್ನು ಕೊಡಲಾಗಿದ್ದು ಅದೂ ಅಪೂರ್ಣವಂತೆ! ಅಂದ ಮೇಲೆ ಈ ವಿಷಯದ ಅಗಾಧತೆಯನ್ನು ನಾವೇ ಊಹಿಸಬಹುದಾಗಿದೆ. ವಚನಕಾರರ ದೃಷ್ಟಿಯಲ್ಲಿ ಸ್ತ್ರೀ, ಅಕ್ಕಮಹಾದೇವಿ ಜೀವನ ಕೃತಿಗಳು, ವಚನ ಚಳವಳಿ ಹಾಗೂ ಸ್ತ್ರೀ ಜಾಗೃತಿ ಇಂತಹವಲ್ಲದೇ, ಚೆಲುವಾಂಬೆ ಅವರ ಕೃತಿಗಳು, ಹದಿಬದೆಯ ಧರ್ಮ, ಕುಮಾರವ್ಯಾಸನ ಸ್ತ್ರೀ ಪಾತ್ರಗಳು. ದ್ರೌಪದೀ ಸಮೀಕ್ಷೆ, ಕನ್ನಡ ಸಾಹಿತ್ಯದಲ್ಲಿ ದ್ರೌಪದಿ ಇಂತಹ ಪ್ರಾಚೀನ ಕೃತಿಗಳು ಮತ್ತು ರಾಮಾಯಣದರ್ಶನಂ ಸ್ತ್ರೀ ಪಾತ್ರಗಳು, ಆಧುನಿಕ ಕತೆಗಳ ಸ್ತ್ರೀವಾದೀ ಅಧ್ಯಯನ, ತ್ರಿವೇಣಿ ಕಾದಂಬರಿಗಳಲ್ಲಿ ಹೆಣ್ಣಿನ ಮಾದರಿಗಳು, ಕಾರಂತರ ಕಾದಂಬರಿಗಳಲ್ಲಿ ಸ್ತ್ರೀ –ಇಂತಹ ಆಧುನಿಕ ಸಾಹಿತ್ಯದ ವಿಷಯಗಳೂ, ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ವೇಶ್ಯಾಜೀವನ, ಹೈದರಾಬಾದ್ ಕರ್ನಾಟಕದ ಮಹಿಳಾ ಕಾವ್ಯ, ಮಾತೃದೇವತೆ ಅಧ್ಯಯನ –ಇಂತಹ ಸಂಕೀರ್ಣ ವಿಷಯಗಳೂ ಪಿಹೆಚ್.ಡಿ. ಪ್ರಬಂಧದ ವಸ್ತುವಾಗಿವೆ. ಇವಲ್ಲದೇ ಶೈಲಜಾ ಉಡಚಣ, ಕಮಲಾ ಹಂಪನಾ, ಲಲಿತಾ ನಾಯಕ್ ಪ್ರೌಢ ಪ್ರಬಂಧಕ್ಕೆ ವಸ್ತುವಾಗಿದ್ದಾರೆ.

ಈ ಶತಮಾನದ ಕೊನೆಯ ದಶಕದ ಇನ್ನೊಂದು ಕೊಡುಗೆ ಎಂದರೆ ಕಾವ್ಯಗಳ ಅನುವಾದ. ಕೆ. ಎನ್. ವಿಜಯಲಕ್ಷ್ಮಿಯವರ 'ಸ್ಯಾಫೋ ಕಾವ್ಯ' ಮತ್ತು ಸಿಲ್ವಿಯಾ ಪ್ಲಾತ್‌ಳ ಕಾವ್ಯದ ಅನುವಾದ, ಒಂದು ಮಹತ್ವದ ಪ್ರಯತ್ನ. ಡಾ. ಮಧು ವೆಂಕಾರೆಡ್ಡಿಯವರ 'ಥೇರೀ ಗಾಥಾ' ದಂತಹ ಪ್ರಶಸ್ತಿ ವಿಜೇತ ಕೃತಿಗಳೂ ಇವೆ. ಅಕಾಡಮಿಯ ಅನುವಾದಕ್ಕೆ ಮೀಸಲಾದ 'ಅನಿಕೇತನ' ದಲ್ಲಿಯೂ ಮಹಿಳಾ ಕಾವ್ಯಗಳ ಅನುವಾದವಾಗಿದೆ. ಕಮಲಾ ಹಂಪನಾರ 'ಏಷಿಯಾದ ಹಣತೆಗಳು' ಮತ್ತು ಪದ್ಮಾ ರಾಮಚಂದ್ರ ಶರ್ಮರ ಕಾನೂರು ಹೆಗ್ಗಡಿತಿ ಮತ್ತು 'ಚಿಕವೀರ ರಾಜೇಂದ್ರ'ದ ಇಂಗ್ಲಿಷ್ ಅನುವಾದಗಳನ್ನೂ ಇಲ್ಲಿ ಹೆಸರಿಸಬಹುದು.

ಹನಿಗವನಗಳನ್ನು ಇಂದು ಒಂದು ಸಾಹಿತ್ಯ ಪ್ರಕಾರವಾಗಿ ಪರಿಗಣಿಸಿದ್ದು ಅಲ್ಲೂ ಲೇಖಕಿಯರು ಕೈಯಾಡಿಸಿದ್ದಾರೆ. ಶೈಲಜಾ ಉಡಚಣರ 'ತುಂತುರು' ಒಂದು ಉದಾಹರಣೆ. ಪ್ರೇಮಾ ಭಟ್ ಜಪಾನಿ ಹೈಕುಗಳ ಮಾದರಿಯಲ್ಲಿ ಹೈಕುಗಳ ಸಂಗ್ರಹವನ್ನೇ ತಂದಿದ್ದಾರೆ. ಆಧುನಿಕ ವಚನಗಳು ಅತ್ಯಂತ ಜನಪ್ರಿಯ ಪ್ರಕಾರವಾಗಿದ್ದು, ಕಮಲಾ ಹಂಪನಾ ಅವರ

'ಬುಗುಡಿ'ಯನ್ನು ಹೆಸರಿಸಬಹುದು. ಉದಯವಾಣಿ ಪತ್ರಿಕೆ ಪ್ರಕಟಿಸುವ ಸುದ್ದಿಕಾವ್ಯಕ್ಕೆ ಬರೆದು ಅದೇ ಹೆಸರಿನ ಸಂಕಲನ ತಂದಿರುವ ವಸಂತ ಕಲ್‌ಬಾಗಲ್‌ದೊಂದು ಹೊಸ ಪ್ರಯತ್ನ. ಇವೂ ಮಹಿಳಾ ಕಾವ್ಯದ ಪರಿಧಿಗೇ ಬರುತ್ತವೆ.

ಕಾವ್ಯವೆಂದರೆ ಮುಗಿಯಿತು. ಅದರಲ್ಲಿ ಮಹಿಳಾ ಕಾವ್ಯವೇನು, ಪುರುಷ ಕಾವ್ಯವೇನು ಎನ್ನಿಸಬಹುದು. ಆದರೆ ನಮ್ಮ ಸಾಹಿತ್ಯದ ಇತಿಹಾಸದಲ್ಲಿ ಹೀಗೆ ಲಿಂಗಭೇದವಿಲ್ಲದೇ ಗುರುತಿಸುವ ಪ್ರೌಢತೆಯನ್ನು ನಾವಿನ್ನೂ ಮುಟ್ಟದಿರುವುದರಿಂದಲೂ ಮತ್ತು ಅನೇಕ ವೇದಿಕೆಗಳಲ್ಲಿ ಹೀಗೆ ಪ್ರತ್ಯೇಕವಾಗಿ ಗುರುತಿಸುತ್ತಲೇ ಇರುವುದರಿಂದಲೂ ಮಹಿಳಾ ಕಾವ್ಯದ ಅನನ್ಯತೆಯನ್ನು ಹೀಗೆ ಗುರುತಿಸಬಹುದು. ಅದುವರೆಗೂ ಅನಾವರಣಗೊಳ್ಳದ ಸ್ತ್ರೀ ಜಗತ್ತು ಅನಾವರಣಗೊಂಡಿತು. ಪುರುಷಪ್ರಧಾನ ಮೌಲ್ಯಗಳ ಮಧ್ಯೆ ಸ್ತ್ರೀ ಸಂವೇದನೆ ಮೊದಲು ಇಣುಕಿ ನೋಡಿ ಅನಂತರ ಪ್ರಭುತ್ವ ಸ್ಥಾಪಿಸಿತು. ಅನೇಕ ಹಳೆಯ ಮೌಲ್ಯಗಳು ಪ್ರಶ್ನಿತವಾಗಿ ಹೊಸ ಮೌಲ್ಯಗಳು ಸ್ಥಾಪನೆಗೊಂಡವು. ಈ ಪ್ರಶ್ನೆಗಳೋ ಉತ್ತರ ಬೇಕಿಲ್ಲದ, ಪ್ರಶ್ನಿಸುವುದಕ್ಕಾಗಿಯೇ ಮಾಡಿದ ಪ್ರಶ್ನೆಗಳು. ಇದು ಅನೂಹ್ಯ ಜಗತ್ತಿನ ಅನಾವರಣದ ರೋಮಾಂಚನವುಂಟು ಮಾಡಿತು. ಬಂಡಾಯದ ಕಿಡಿ ಹಾರಿತು. ಜೊತೆಜೊತೆಗೇ ಉತ್ತಮವಾದ ಪ್ರತಿಮೆಗಳನ್ನು ಕಟ್ಟುವ ಕೆಲಸ ನಡೆಯಿತು. ಹಳೇ ಪ್ರತಿಮೆಗಳ ಭಂಜನೆ ಮತ್ತು ಹೊಸ ಪ್ರತಿಮೆಗಳ ನಿರ್ಮಾಣ ಅವ್ಯಾಹತವಾಗಿ ನಡೆಯಿತು. ವಿವಾಹದಂಥ ಸಂಸ್ಥೆಗಳು ಹೊಸ ಒತ್ತಡಗಳಿಗೆ ಒಳಗಾಗಿರುವುದರಿಂದ ಅಲ್ಲಿಯೂ ಸಮಸ್ಯೆಗಳು ಹುಟ್ಟಿ ಲೈಂಗಿಕ ಸಂಬಂಧಗಳ ಬಗ್ಗೆ ಕೂಡ ಮುಕ್ತತೆಯಿಂದ ಬರೆಯುವ ವಾತಾವರಣ ಉಂಟಾಯಿತು. ಕೌಟುಂಬಿಕ ಸಂಬಂಧಗಳು ನಿಷ್ಠುರ ವಿಮರ್ಶೆಗೆ ಒಳಗಾದವು.

ಕಾವ್ಯಲೋಕವೆಂಬುದೇ ಒಂದು ವಿಸ್ಮಯ, "ನನಗೂ ನಿನಗೂ ಅಂಟಿದ ನಂಟಿನ ಕೊನೆ ಬಲ್ಲವರಾರು ಕಾಮಾಕ್ಷಿಯೇ" ಎಂಬಂತೆ. 'ಪದ್ಯಂ ವಧ್ಯಂ ಗದ್ಯಂ ಹೃದ್ಯಂ' ಎಂದು ಮುದ್ದಣ ಹೇಳಿದ್ದು ಕೇವಲ ಬಾಯಿಮಾತಿಗಿರಬೇಕು. 'ಗದ್ಯಂ ಕವೀನಾಂ ನಿಕಷಂ ವದಂತಿ' ಎಂಬ ಮಾತು ಏಳನೇ ಶತಮಾನದ ಬಾಣಭಟ್ಟನು ತನ್ನ 'ಕಾದಂಬರಿ'ಯನ್ನು ಗದ್ಯದಲ್ಲಿ ಬರೆದ ನಂತರ ಜಾರಿಗೆ ಬಂದುದರಿಂದ ಅನಂತರ ಕನ್ನಡದಲ್ಲೂ ಯಾರೂ ಗದ್ಯ ಬರೆಯಲೇ ಇಲ್ಲ ಎಂದೂ ಹೇಳುವುದುಂಟು. ಒಟ್ಟಿನಲ್ಲಿ 'ವಡ್ಡಾರಾಧನೆ', 'ಚಾವುಂಡರಾಯ ಪುರಾಣ'ಗಳ ನಂತರ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಪದ್ಯದ್ದೇ ವಿಜೃಂಭಣೆ. ಗದ್ಯ ಇಲ್ಲವೇ ಇಲ್ಲ, ಇದ್ದರೂ ಚಂಪೂ ಕಾವ್ಯಗಳ ಮಧ್ಯದಲ್ಲಿ. ಈ ಪದ್ಯದ ಮಹಾಪೂರದಲ್ಲಿ ಆಧುನಿಕ ಸಾಹಿತ್ಯದಲ್ಲಿ ಪ್ರಾರಂಭದಲ್ಲಿ ಹೆಣ್ಣಿನ ಧ್ವನಿ ಕೇಳಿಸಿದ್ದೇ ಅಸ್ಪಷ್ಟವಾಗಿ, ಕ್ಷೀಣವಾಗಿ. ಮೊದಲ ತಲೆಮಾರಿನ ಲೇಖಕಿಯರಲ್ಲಿ ತಿರುಮಲೆ ರಾಜಮ್ಮನವರ 'ರಾಷ್ಟ್ರಶಕ್ತಿ', 'ರಾಷ್ಟ್ರಭಕ್ತಿ' ತಿರುಮಲಾಂಬಾ ಅವರ 'ಭಕ್ತಿ ಗೀತಾವಳಿ', 'ಭಾವ ಗೀತಾವಳಿ', 'ಭದ್ರ ಗೀತಾವಳಿ' —ಇವುಗಳಲ್ಲಿ ದೇಶಪ್ರೇಮ, ಭಕ್ತಿ, ಪ್ರೀತಿ, ವಾತ್ಸಲ್ಯ, ಸೌಂದರ್ಯ ಮೊದಲಾದವುಗಳೇ ಕವಿತೆಯ ವಸ್ತುವಾಗಿದ್ದು ಅವು ತಮ್ಮ ರಮ್ಯ ಸಂಪ್ರದಾಯವನ್ನುಳಿಸಿಕೊಂಡು ನವೋದಯ ಪರಂಪರೆಗೆ ಅನುಗುಣವಾಗಿವೆ. ಬೆಳಗೆರೆ ಜಾನಕಮ್ಮನವರ ಕವಿತೆಗಳು ಮಾತ್ರ ಅದ್ಭುತವಾದ ಬಂಡಾಯ ಮನೋಧರ್ಮದವಾಗಿವೆ. ನಿಜವಾದ ಮಹಿಳಾ ಕಾವ್ಯವನ್ನು ಅಂದರೆ ಅಕ್ಕಮಹಾದೇವಿಯನ್ನು ಮತ್ತೆ ನೆನಪಿಸುವ

ಮಹಿಳಾ ಕಾವ್ಯವನ್ನು ನಾವು ನೋಡಬೇಕಾದರೆ ನವೋದಯ, ನವ್ಯ, ಪ್ರಗತಿಶೀಲ ಸಾಹಿತ್ಯವನ್ನು ದಾಟಿ ಬಂಡಾಯಕ್ಕೆ ಬರಬೇಕು. ಬಂಡಾಯ ಕಾವ್ಯದ ಪ್ರತಿಭಟನಾ ಮನೋಭಾವ ಮತ್ತು ಡಾ. ಸಿದ್ಧಲಿಂಗಯ್ಯ 'ಇಕ್ರಲಾ ವದೀರ್ಲಾ' ಮೂಲಕ ಹಾಕಿಕೊಟ್ಟಿದ್ದ ಹೊಸತನಗಳು ನವ್ಯದ ಸಿನಿಕತನ ಮತ್ತು ಒಂಟಿತನಗಳು ಮೂಡಿಸಿದ್ದ ಜಡತ್ವವನ್ನು ತೊಡೆದುಹಾಕಿ ಕಾವ್ಯದಲ್ಲಿ ತಮ್ಮ ಅಸ್ತಿತ್ವವನ್ನು ಹುಡುಕಿಕೊಳ್ಳತೊಡಗಿದ್ದ ಕವಯಿತ್ರಿಯರಿಗೆ ಬಂಡಾಯದ ವೇದಿಕೆ ಪ್ರಶಸ್ತವಾಗಿ ಪರಿಣಮಿಸಿತು. ಮುಸ್ಲಿಮರಿಗೂ ಇದೇ ಕಾರಣದಿಂದಲೇ ಬಂಡಾಯ ಪ್ರಿಯವಾಯಿತು. ಹೀಗಾಗಿ ನಾವು ಮಹಿಳಾ ಕಾವ್ಯ ಮತ್ತು ಮುಸ್ಲಿಂ ಸಂವೇದನೆ ಎರಡನ್ನೂ ಬಂಡಾಯಕ್ಕೆ ಸೇರಿಸುವುದುಂಟು.

ಮಹಾಕಾವ್ಯದ ಕಾಲ ಮುಗಿಯಿತು ಎಂಬ ಮಾತನ್ನು ಸುಳ್ಳು ಮಾಡಿ ಕನ್ನಡಕ್ಕೆ ಮೊದಲ ಜ್ಞಾನಪೀಠ ಪ್ರಶಸ್ತಿ, ಮೊದಲ ಪಂಪ ಪ್ರಶಸ್ತಿ ತಂದಿತ್ತ 'ಶ್ರೀ ರಾಮಾಯಣ ದರ್ಶನಂ'ನ ಭವ್ಯತೆಯಾಗಲೀ, ಪಂಪ, ಕುಮಾರವ್ಯಾಸ, ಕುವೆಂಪು ಅವರ ಲೋಕಾನುಭವವಾಗಲೀ ಇಲ್ಲದಿರುವ ಜಯದೇವಿತಾಯಿ ಲಿಗಾಡೆ ಅವರ 'ಸಿದ್ಧರಾಮ ಪುರಾಣ'ವನ್ನೂ, ಮಲ್ಲಿಕಾ ಕಡಿವಾಳ ಅವರ 'ವಿವೇಕಾನಂದ ವಿಜಯ'ವನ್ನೂ ಒಂದು ಸಾವಿರ ವರ್ಷದಲ್ಲಿ ಒಬ್ಬ ಮಹಿಳೆಯೂ ಮಹಾಕಾವ್ಯ ರಚನೆಗೆ ಕೈ ಹಾಕದಿರುವ ಹಿನ್ನೆಲೆಯಲ್ಲಿ ನಾವು ನೋಡಬೇಕು. ಇವೆರಡೂ ಸಾಂಪ್ರದಾಯಕವಾಗಿದ್ದು ಸ್ತ್ರೀ ಸಂವೇದನೆಯನ್ನು ಹೊಂದಿಲ್ಲದಿರಬಹುದು, ಆದರೆ ಕಾವ್ಯಮಯತೆಯಿದೆ. ಮತ್ತೆ ಮುಂದೊಂದು ದಿನ ನಿಜವಾಗಿ ಸ್ತ್ರೀ ಸಂವೇದನೆಯ ಮಹಾಕಾವ್ಯವೊಂದು ಹುಟ್ಟುವುದಕ್ಕೆ ಇವು ಪ್ರೇರಣೆಯೂ ಆಗಬಹುದು.

ಲೇಖಕಿಯರಲ್ಲಿ ನಾಟಕ ಬರೆದವರು ತೀರಾ ವಿರಳ. ಟಿ. ಸುನಂದಮ್ಮನವರ 'ಚಕ್ರಚುಕ್ಕೆ', ಗೀತಾ ಕುಲಕರ್ಣಿಯವರ 'ಕಿಟಕಿ ತೆರೆಯಿತು', 'ಪೊಳ್ಳುಮರ'; ಯಮುನಾ ಮೂರ್ತಿಯವರ 'ನಂಜು ನೇಹ', 'ನೆರವು ನೀಡಿದ ಕೈ', ಡಾ. ಮಲ್ಲಿಕಾ ಘಂಟಿಯವರ 'ಬೀಜ', ಸಂಧ್ಯಾ ಅವರ 'ದೀಪಿಕಾ', ಡಾ. ವಿಜಯಾ ಸುಬ್ಬರಾಜ್ ಅವರ 'ಪಾಂಚಾಲಿ ಮತ್ತು ಇತರ ನಾಟಕಗಳು' ಇವನ್ನು ಹೆಸರಿಸಬಹುದು. ಡಾ. ಹೇಮಾ ಪಟ್ಟಣಶೆಟ್ಟಿ ಪ್ರಾರಂಭದಲ್ಲಿ 'ಅಂತರಂಗ'ದ ಮೂಲಕ, ಈಗ 'ಧಾರಕ'ದ ಮೂಲಕ ಹೊಸ ನಾಟಕ ಪ್ರಯೊಗ ಮಾಡಿದ್ದಾರೆ. ಡಾ. ವಿಜಯಾ ಬೀದಿ ನಾಟಕಗಳಿಗೆ ಪ್ರಸಿದ್ಧರು.

'ಕೊರವಂಜಿ'ಯ ರಾಶಿ ಅವರಿಂದ ಪ್ರಾರಂಭವಾದ ಹಾಸ್ಯ ಸಾಹಿತ್ಯದ ಪರಂಪರೆಯನ್ನು ಮುಂದುವರಿಸಿಕೊಂಡು ಬಂದು, ಇಂದು ಹಾಸ್ಯ ಸಾಹಿತ್ಯದ ಅನಭಿಷಿಕ್ತ ಸಾಮ್ರಾಜ್ಞಿ ಎಂದು ಹೆಸರಾಗಿರುವ ಟಿ. ಸುನಂದಮ್ಮನವರ 'ಮೈಲಾರಿ ಸರಸ' ಎಂಬ ಸ್ಥಾಯೀ ಪಾತ್ರಗಳು ಸಾಂಪ್ರದಾಯಕವಾಗಿಯೇ ಇದ್ದೂ ಮನಸೂರೆಗೊಳ್ಳುತ್ತದೆ. ಅದೇ ಹಾದಿಯಲ್ಲಿ ಮುನ್ನಡೆದಿರುವ ಭುವನೇಶ್ವರಿ ಹೆಗಡೆ ಇನ್ನಷ್ಟು ಆರೋಗ್ಯಕರವಾಗಿ ಬರೆಯುತ್ತಿದ್ದಾರೆ.

ಸಮಕಾಲೀನ ಮಹಿಳಾ ಸಾಹಿತ್ಯದ ಸಮೃದ್ಧಿ ಮತ್ತು ಪ್ರಯೋಗಶೀಲತೆಯ ಬೇರುಗಳು ಎಪ್ಪತ್ತು ಮತ್ತು ಎಂಬತ್ತರ ದಶಕದಲ್ಲಿಯೇ ಇರುವುದರಿಂದ ತೊಂಭತ್ತರ ದಶಕಕ್ಕೆ ಬರುವ ಮೊದಲು ಒಂದು ಮಾತನ್ನು ಅವಶ್ಯವಾಗಿ ಹೇಳಬೇಕು. ಸಾಮಾನ್ಯವಾಗಿ ಎಲ್ಲ ವಿಮರ್ಶಕರಿಂದಲೂ ನಿರ್ಲಕ್ಷ್ಯಕ್ಕೆ ಗುರಿಯಾಗಿರುವ, ಒಂದು ಗುಂಪಿನ ವಿಮರ್ಶಕರಿಂದ ಇವರ ಹೆಸರು

ಹೇಳುವುದೂ ಸಲ್ಲದು ಎಂಬ ಅಸ್ಪೃಶ್ಯತನಕ್ಕೆ ಗುರಿಯಾಗಿರುವ, ಜನಪ್ರಿಯ ಸಾಹಿತ್ಯ ಬರೆಯುವವರು ಎಂಬ ಲೇಬಲ್ ಅಂಟಿಸಿಕೊಂಡ ಒಂದು ಲೇಖಕಿಯರ ಗುಂಪೇ ಕನ್ನಡ ಸಾಹಿತ್ಯದಲ್ಲಿದೆ. ಇಂಥ ಕತೆ ಕಾದಂಬರಿಗಳಲ್ಲಿ ಸಕಲ ಕಲಾವಲ್ಲಭನೂ ಸರ್ವಾಂಗ ಸುಂದರನೂ ಆದ ನಾಯಕ, ಸಕಲಗುಣ ಪರಿಪೂರ್ಣಳೂ ಸರ್ವಾಂಗ ಸುಂದರಿಯೂ ಆದ ನಾಯಕಿ. ಇವರಿಬ್ಬರ ಪ್ರಥಮ ಮಿಲನದಲ್ಲಿಯೇ ಪ್ರಣಯ, ಅದಕ್ಕೆ ನೂರಾ ಎಂಟು ಅಡ್ಡಿಗಳು. ಕೊನೆಗೆ ಎಲ್ಲವೂ ಶುಭ ಎಂದು ಮುಗಿಯುವ ರೀತಿ. ಬದುಕಿನ ಆಳ ಅಗಲಗಳ ಗ್ರಹಿಕೆಯಿಲ್ಲದ, ಮೇಲು ಮೇಲಿನ ಪದರದ, ಯುವ ಜನಾಂಗವನ್ನು ದಾರಿ ತಪ್ಪಿಸಿ ಇದೇ ಬದುಕು ಎಂಬ ಭ್ರಮೆ ಮೂಡಿಸಿ ಗಂಭೀರ ಸಮಸ್ಯೆಗಳತ್ತ ಬೆನ್ನು ತಿರುಗಿಸುವ ಪಲಾಯನವನ್ನು ಮಾಡುವ, ಇಂಥ ಕಾದಂಬರಿಗಳ ಮಧ್ಯೆಯೂ ಇರುವ ಒಂದೆರಡು ಮಿಂಚುಗಳನ್ನು ನಾವು ಗುರುತಿಸದೇ ಏಕದಂ ತೊಂಭತ್ತರ ದಶಕದ 'ಗಾಂಧಿ ಬಂದ', 'ಬದುಕು', 'ಜಮೀನು'ಗಳತ್ತ ಹೊರಳಿ ಬಿಟ್ಟರೆ ಅಂತಹ ಗ್ರಹಿಕೆಯೂ ಅಸಂಪೂರ್ಣವಾಗುತ್ತದೆ ಎಂಬ ಅರಿವಿನಿಂದ ಒಂದೆರಡು ಮಾತು ಹೇಳಬೇಕಾಗಿದೆ. ಬದುಕಿನಲ್ಲಿ ಗಂಭೀರ ಮುಖವಲ್ಲದೇ ಹಗುರ ಮುಖವೂ ಒಂದಿದೆ ಎಂದು ಮನಗಾಣಿಸಿದ, ಬದುಕುವ ಪ್ರೀತಿಯನ್ನು ಕಲಿಸಿದ ವಾಣಿ ಅವರ 'ಶುಭಮಂಗಳ', 'ಎರಡು ಕನಸು', 'ಹೊಸ ಬೆಳಕು', 'ಗಂಧದ ಗುಡಿ' —ಇವು ಕೊಡುವ ಸಂದೇಶವನ್ನು ಪ್ರಗತಿಪರವಲ್ಲ ಎಂಬ ಒಂದೇ ಕಾರಣಕ್ಕೆ ಹಾಗೆ ಸಾರಾಸಗಟಾಗಿ ತಳ್ಳಿ ಹಾಕಲಾಗದು. ಪ್ರೇಮಾ ಭಟ್ ಅವರ 'ನೂರಾ ಎಂಟು ಕತೆಗಳು' ಮತ್ತು 'ಪಂಚಾಮೃತ'ದ ಕತೆಗಳು ಇಂದಿನ ವಿಮರ್ಶಕರ ನಿರೀಕ್ಷೆಯ ಮಟ್ಟ ಮುಟ್ಟದಿರಬಹುದು. ಆದರೆ 'ನಂದಿನಿ'ಯಂತಹ ಪರಿಸರ ಪ್ರಾಣಿ ಪ್ರೀತಿಯ ಕೃತಿಯನ್ನಾಗಲೀ, 'ಶಂಕ್ರು ಬೇಡಿದ್ದು' ಕತೆಯ ಮಾನವೀಯ ಮುಖವನ್ನಾಗಲೀ ಹಾಗೆ ನಿರ್ಲಕ್ಷಿಸಬಹುದೆಂದು ನನಗೆ ತೋರುವುದಿಲ್ಲ. ಪ್ರಕಾಶಕಿಯಾಗಿಯೂ ಲೇಖಕಿಯಾಗಿಯೂ ಬೆಳೆದಿರುವ ಡಾ. ನಿರುಪಮಾ ಅವರಾಗಲೀ ಪ್ರೇಮಾ ಭಟ್ ಅವರಾಗಲೀ ಬದುಕಿನಲ್ಲೂ ಸಾಹಿತ್ಯದಲ್ಲೂ ರಾಜಿ ಮಾರ್ಗಕ್ಕೆ ಒತ್ತು ಕೊಡುವವರು. ಪ್ರೇಮಾ ಭಟ್‌ಗೆ ಅರವತ್ತು ತುಂಬಿದ ಸಂದರ್ಭದಲ್ಲಿ 'ನನ್ನ ಯಜಮಾನರು ಬರೆಯುವುದು ಬೇಡ ಎಂದಿದ್ದರೆ ನಾನು ಬರೆಯುತ್ತಿರಲಿಲ್ಲ' ಎಂದರು. ನಿರುಪಮಾಗೆ ಅನುಪಮಾ ಪ್ರಶಸ್ತಿ ಬಂದಾಗ ಅವರು, 'ಸ್ವೇಚ್ಛೆ ಸ್ವಾತಂತ್ರ್ಯವಲ್ಲ' ಎಂದರು. ಇಂದಿನ ವಿಮರ್ಶಕರು ಇವರ ಈ ಮಾತುಗಳನ್ನು ಪ್ರತಿಗಾಮಿ ಎನ್ನುತ್ತಾರೆ ಮತ್ತು ಅವರ ಸಾಹಿತ್ಯದಲ್ಲಿ ಗಂಭೀರವಾದುದನ್ನೇ ಹುಡುಕುತ್ತಾರೆ. ಅವರು ಬೆಳೆದು ಬಂದ ಕುಟುಂಬದ ವಾತಾವರಣವೇ ಅವರ ಮಿತಿಯಾಗಿದ್ದು ಆ ಮಿತಿಯಲ್ಲೂ ಅವರ ಸಾಧನೆಯನ್ನು, ಜೀವಮಾನದ ಗಾಥೆಯನ್ನು ನಾವು ಗುರುತಿಸಲು ಏಕೆ ಸಾಧ್ಯವಾಗುತ್ತಿಲ್ಲ?

---

* ೯೦ ರ ದಶಕದಿಂದ ಇತ್ತೀಚೆಗಿನ ಸಾಹಿತ್ಯ ಕುರಿತು ಕರ್ನಾಟಕ ಸಾಹಿತ್ಯ ಅಕಾಡೆಮಿಯು ಅಕ್ಟೋಬರ್ ೨೦೦೩ ರಲ್ಲಿ ನಡೆಸಿದ ವಿಚಾರ ಸಂಕಿರಣದ ಅಧ್ಯಕ್ಷ ಭಾಷಣ

■ ಡಾ. ಎಸ್. ವಿ. ಪ್ರಭಾವತಿ, C/o. ಎಸ್. ವಿದ್ಯಾಶಂಕರ್, # ೩೦೧, ೩ ನೇ ಮಹಡಿ,
ಪಲ್ಲವ ಟೆರೇಸ್, ಎಡೆಯೂರು ಲೇಕ್ ಎದುರು, ಜಯನಗರ VI, ಬೆಂಗಳೂರು-೫೬೦ ೦೮೨ ■

ಭೂಮಿ ಮತ್ತು ಭೂಪತಿ

ಷ. ಶೆಟ್ಟರ್

ಪೆಱನಾವಂ ಧರಾಚಕ್ರಕ್ಕೆಱೆಯುಂ ಕೆಳೆಯುಪ್ಪವಂ?

ಅರಸೊತ್ತಿಗೆಯ (ಮೊನಾರ್ಕಿಕಲ್ ವ್ಯವಸ್ಥೆ) ಪ್ರಧಾನ ಘಟಕಗಳಲ್ಲೊಂದು, ಭೂಮಿ; ಮತ್ತೊಂದು ಭೂಪತಿ. ಭೂಪತಿಯ ಅಂಕಿತದಲ್ಲಿರುವ ಭೂಭಾಗವೇ ರಾಜ್ಯ. ರಾಜ್ಯದ ಹೃದಯ, ರಾಜಧಾನಿ ಪಟ್ಟಣ. ರಾಜನ ವಾಸಸ್ಥಾನ ಮತ್ತು ಕಾರುಭಾರಿನ ಕೇಂದ್ರ, ಅರಮನೆ. ಅರಮನೆಯ ಮಹತ್ವದ ಅಂಗಗಳು ಅಂತಃಪುರ ಮತ್ತು ಆಸ್ಥಾನ. ಆಸ್ಥಾನದ ಪ್ರಧಾನ ಕಾರ್ಯ, ಮಂತ್ರ; ಇಲ್ಲಿಯ ಸಭಾಪ್ರಮುಖರು, ಮಂತ್ರಿ, ಮಹಿಷಿ, ಸೇನಾಪತಿ, ಸಾಮಂತ, ಮೊದಲಾದವರು. ಈ ಬಗ್ಗೆ ಕವಿರಾಜಮಾರ್ಗವು ಒದಗಿಸುವ ವಿವರಗಳ ಚರ್ಚೆ ಈ ಲೇಖನದ ವಸ್ತು.[೧]

ಲೋಕ-ವಿಶ್ವ-ಜಗತ್ತು :

ಲೋಕ ಒಂದು ಅಗಾಧ ಘಟಕ. ಅದರಲ್ಲಿ ಕನಿಷ್ಠ ಮೂರು ಉಪ ಘಟಕಗಳಿವೆ. ಅವು– ಊರ್ಧ್ವ (ಸ್ವರ್ಗ, ದೇವಲೋಕ ಮುಂತಾಗಿ ಗುರುತಿಸಲ್ಪಡುವ ಆಕಾಶೋತ್ತರ ವಿಭಾಗ); ಮಧ್ಯ (ಭೂಮಿ, ಜೀವಿಗಳ ವಾಸಸ್ಥಾನ ಎಂದೆಲ್ಲ ಬಗೆಯಲಾದ ಇಹಲೋಕ) ಮತ್ತು ಅಧೋ (ಪಾತಾಳ, ಅಂಧಕಾರ, ದಾನವರ ಕ್ಷೇತ್ರವೆಂದು ಗುರುತಿಸಲ್ಪಡುವ ಪಾತಾಳ) ಲೋಕಗಳು. ನಮ್ಮ ಚಿಂತನೆ, ಒಡನಾಟ, ವ್ಯವಹಾರ, ನಂಬಿಕೆ ಮೊದಲಾದವು ಈ ಮೂರರಲ್ಲಿ ಒಂದರಲ್ಲಾದರೂ ಸಲ್ಲಬೇಕು. ಇಲ್ಲದಿದ್ದರೆ ಅವು ಅಸಹಜ, ಅವಾಸ್ತವವಾಗಿ, 'ಲೋಕ ವಿರುದ್ಧ'ವೆನಿಸುವುವೆಂಬುದು ಮಾರ್ಗಕಾರನ ಮತ (೧-೧೧೯). ಅವುಗಳನ್ನು ವಿವೇಕಿ ಲೋಕವು 'ಗರ್ಹಿತ'(ಅಸಮ್ಮತ)ವೆಂದು ಜರಿಯುವುದು.

ಅಂದರೆ 'ಲೋಕ'ವೆಂಬುದು ಒಂದು ಭೌಗೋಳಿಕ ಘಟಕ ಮಾತ್ರವಾಗಿರದೆ ವಾಸ್ತವವಾದ, ನಂಬಲರ್ಹವಾದ, ಗ್ರಾಹ್ಯಸಾಧ್ಯವಾದ, ಚಿಂತನಾಘಟಕವೂ ಆಗಿರುವುದೆಂದರ್ಥ.

'ವಿಶ್ವ'ವೆಂಬುದು 'ಲೋಕ'ಕ್ಕೆ ಪ್ರತಿಪದವೋ ಅಥವಾ ಪೂರಕ ಪದವೋ ಎಂಬ ಜಿಜ್ಞಾಸೆಯನ್ನು ಹುಟ್ಟಿಸುವುದು. 'ವಿಶ್ವ' ಪದವನ್ನು ಒಮ್ಮೆ ಮಾತ್ರ ಪ್ರಸ್ತಾಪಿಸಿ, ಅದನ್ನು 'ವಿಶ್ವಲೋಕ' ಎಂದು ಮಾರ್ಗಕಾರನು ಸಂಯುಕ್ತಗೊಳಿಸಿರುವನು (೩-೨೨೮). ಇದರಿಂದಾಗಿ 'ವಿಶ್ವ' ಮತ್ತು 'ಲೋಕ'ಗಳು ಪ್ರತಿಪದಗಳೆಂಬ ಭಾವನೆಯುಂಟಾಗುವುದು. ಈ ಎರಡು ಪದಗಳು ಅಪರೂಪವಾಗಿ– ಅಂದರೆ ಒಂದೊಂದು ಬಾರಿ ಮಾತ್ರ– ಬಳಕೆಗೊಂಡಿದ್ದರೆ, 'ಜಗತ್' ಎಂಬುದು ಇಲ್ಲಿ ಅಷ್ಟೇನೂ ವಿರಳವಾಗಿಲ್ಲ. 'ಜಗತ್' ಒಂದು ಜಲಾವೃತ, ಅಗಾಧ, ಭೂವಲಯ (ಜಗದಗಾಧ... ದ್ವೀಪಕಲ್ಪಮ್) ಎಂದೂ ಇದು ಮಾನವನ ವಾಸಸ್ಥಾನ (ಜಗತೀ ತಳಿಗತ ಮನುಜರ್) ಎಂದೂ ತಿಳಿಸಲಾಗಿದೆ (೩-೨೨೩; ೧-೧೭). ಈ ಎರಡು ಉಲ್ಲೇಖಗಳೂ ಮಧ್ಯಲೋಕಕ್ಕೆ ಸಂಬಂಧಪಟ್ಟವುಗಳಾಗಿವೆ.

ಜಗತ್ತನ್ನು ಸಮರ್ಥವಾಗಿ ಆಳುವವನೇ 'ಜಗನ್ನುತ'; ಅವನು ಜನರಿಂದ ಸ್ತುತಿಸಲ್ಪಡುವಂಥವನು (೧-೮). ಈ ಜಗತ್ತನ್ನು ಪಾವನಗೊಳಿಸಿ, ಇಲ್ಲಿಯೇ ನೆಲೆ ನಿಲ್ಲಲು

ಲಕ್ಷ್ಮೀ ಇವನ್ನು ಅಂಗ್ಳ ಮಾಡಿಕೊಂಡಳು ('ಕಮಲಂ ಜಗದೇಕ ಪಾವನೀಯು ಶ್ರೀಕಂ'– ೩-೨೪). ಈ ಜಗತ್ತು ಶ್ರೀಮಂತಗೊಳ್ಳುವುದು, ನಿಸರ್ಗದ ಔದಾರ್ಯದಿಂದ. ಈ ಪ್ರಕ್ರಿಯೆಯನ್ನು ಕಮಲದ ಮೂಲಕ ಸಂಕೇತಿಸಲಾಗಿದೆ. (ಕೊಬ್ಬುಬ್ಬಿ ಬೆಳೆದ ಯುವತಿಯ ಮುಂಡಾಗ್ರದಿಂದ ಹೊರಹೊಮ್ಮುವ ಕಮಲಮುಖಿ– 'ವನದೇವತೆ', 'ಲಜ್ಜಾಗೌರಿ', 'ರೇಣುಕಾ'– ಯನ್ನು ಇದು ನೆನಪಿಗೆ ತರುವುದು). ಈ ತತ್ವವನ್ನು 'ವಿಳಸಿತ ಸಸ್ಯ ಸಂಪದಭಿರಾಮ ಗುಣೋದಯೆ ತಾಳ್ದಿದಳ್ ಧರಾಲಳನೆ ವಿಶಾಲ-ಲಕ್ಷ್ಮೀಯನಸಾರತಮ್' ಎಂಬ (೨-೧೧೦) ನುಡಿಯಲ್ಲಿ ಮಾರ್ಗಕಾರನು ಬಂಧಿಸಿಟ್ಟಿರುವನು.

ನರೇಂದ್ರನಿಂ ಧರಣಿ ಸನಾಥೆ :

ಹಲವಾರು ಪದಗಳಿಂದ ಮಾರ್ಗಕಾರನು ಜಗತ್ತನ್ನು ಗುರುತಿಸಿರುವನು. ಅವುಗಳಲ್ಲಿ 'ಅವನಿ', 'ವಸುಧಾ', 'ಪೊಡವಿ', 'ಕ್ಷಿತಿ' ಎಂಬವು ವಿರಳವಾಗಿ (ಒಂದು ಬಾರಿ ಮಾತ್ರ ಇಲ್ಲವೇ ಒಂದೇ ಸಂದರ್ಭದಲ್ಲಿ) ಬಂದರೆ, 'ಧರಾ' ಮತ್ತು 'ಭೂ' (ಮೂಲದ) ಪದಗಳು ಅಷ್ಟೇನು ವಿರಳವಾಗಿಲ್ಲ.[೨] 'ವಸುಧಾ ವಲಯ'ವನ್ನು ಒಂದು ಭೌಗೋಳಿಕ ಘಟಕವೆಂದು ಸ್ಪಷ್ಟಪಡಿಸಲಾಗಿದ್ದರೆ, 'ಅವನಿ', 'ಪೊಡವಿ', 'ಕ್ಷಿತಿ'ಗಳನ್ನು ಅವುಗಳ ಒಡೆಯರಾದ 'ಅವನೀಶ', 'ಪೊಡವಿಪತಿ', 'ಕ್ಷಿತಿಪತಿ'ಯ ಮೂಲಕ ಗುರುತಿಸಲಾಗಿದೆ.[೩] ಇನ್ನೂ ಹೆಚ್ಚು ಸ್ಪಷ್ಟವಾಗಿ ಗುರುತಿಸಲ್ಪಟ್ಟಿರುವ ಘಟಕಗಳೆಂದರೆ 'ಧರಾ' ಮತ್ತು 'ಭೂ' ಮೂಲದ ಪದಗಳು. 'ಧರಾಧಿಪ' ಮತ್ತು 'ಧರಾವಲ್ಲಭ', (೩-೧೧, ೧) ಎಂದು ಭೂಪತಿಯನ್ನು, 'ಧರಾಲಳನೆ' ಮತ್ತು 'ಧರಾವಧು', (೨-೧೧೦; ೩-೧೬೩) ಎಂದು ಭೂದೇವಿ(ಅವಳಿಗೆ ಸಮಾನಳಾದ ಮಹಿಷಿ)ಯನ್ನು ಉಲ್ಲೇಖಿಸಲಾಗಿದೆ. ಪುರುಷ(ಧರಾಧಿಪ)ನ ಅಂಕಿತಕ್ಕೊಳಪಟ್ಟ ವನಿತೆ, ಭೂ. 'ತನ್ನರೇಂದ್ರನಿಂ ಧರಣಿ ಸನಾಥೆ' (೧-೧೧೫), ಎಂದು ಈ ವನಿತೆಯ ಸ್ವರೂಪವನ್ನು ಬಯಲುಗೊಳಿಸಲಾಗಿದೆ. **'ಸತತಂ ಭುಜಂಗ ಭೋಗಾಶ್ರಿತೆ ನಿನ್ನ ಕಳತ್ರವೀ ಧರಾವಧು'**, **(೩-೧೬೩) ಎಂಬ ಘೋಷಣೆಗೆ ಇದು ಹಿನ್ನೆಲೆ.**

ಈ ಧರಣಿಯ ವಾಸ್ತವ ಸ್ವರೂಪ, ಚಕ್ರಾಕೃತಿ (೨-೧೨೮). ಇದನ್ನು ನಿರ್ಧರಿಸುವ ನೈಸರ್ಗಿಕ ಘಟಕಗಳು– ಸಮುದ್ರ (ನದಿ), ಬೆಟ್ಟ (ಎತ್ತರ ಪ್ರದೇಶ), ಸಸ್ಯಸಂಪದ ಮತ್ತು ತೊಯ್ದು ಮಣ್ಣು (ಕೆಸರು) (೩-೨೦೭; ೨-೧೧೦; ೨-೬೧) ಮೊದಲಾದವು. ಚಂದ್ರಮುಖಿಯ **'ಗುರು ಜಘನ-ಪಯೋಧರ ಯುಗಭಾರ'**ದಿಂದ ವಿಧುರೆಯಾಗಿದ್ದನ್ನು ಧರಾಧಿಪನು ಕಂಡನೆನ್ನುವಲ್ಲಿ (೨-೫೮) ಅಡಗಿರುವ ಸಾಂಕೇತಿಕತೆಯನ್ನು ಬಿಚ್ಚಿ ನೋಡಿದಾಗ ಯೌವನದ ಹೊರೆಹೊತ್ತ, ಸಾಗರದಂತೆ ತೊಯ್ದಾಡುವ (ನಡುವಿನ), ಪರ್ವತದಂತೆ ಕಠಿಣವೂ-ಉನ್ನತವೂ ಆದ (ಸ್ತನ ಜಘನಗಳ) ಪರಿಳಿತ(ಬೆಟ್ಟ ಕಣಿವೆಯನ್ನು)ವನ್ನು ಧರಾಧಿಪನು ಕಂಡು, ಅವಳ (ರಾಗ) ಸಂಕಷ್ಟ ಪರಿಹರಿಸಲು ಮುಂದೆ ಬಂದನೆಂಬ ಅರ್ಥ ಹೊರಹೊಮ್ಮುವುದು. ಭುವಿಯ ವಿಸ್ತಾರವನ್ನು ನಿರ್ಧರಿಸುವ ಸಹಜ ಮೇರೆ 'ತೋಯ' (ಸಾಗರ; ಜಲಸಂಗ್ರಹ). ಈ 'ಜಳನಿಧಿ ಪರಿಖಾವೃತ ಭೂಮಿಭಾಗ'ವನ್ನು (೩-೫೫) ಸೊಗಯಿಸುವ 'ಜಳನಿಧಿ ಮೇಖಲಾ ವಲಯಿತಾಂಗಿ'ಗೆ ಸಮೀಕರಿಸಲಾಗಿದೆ (೨-೧೧೦). 'ಭುವನ', 'ಭೂತಳ'ವಲ್ಲದೆ,

`ಭೂಪತಿ', `ಭೂಪ', `ಭೂಪಾಳ', `ಭೂಪೇಂದ್ರ', `ಭೂಭೃನ್ನಾಥ' ಎಂಬೆಲ್ಲ ಪದಗಳು ಈ ಕಾವ್ಯದ ಉದ್ದಗಲಕ್ಕೆ ಪಸರಿಕೊಂಡಿವೆ.[೪]

ಅರಸ :

ರಾಜ್ಯದ ಅಧಿಪತಿ ರಾಜ. 'ರಾಜ್ಞಾ ಭವಃ ಕರ್ಮವಾ ರಾಜ್ಯಂ'; 'ರಾಜ್ಞಾ ಪೃಥಿವೀ ಪರಿಪಾಲನೋಚಿತಂ ಕರ್ಮರಾಜ್ಯಂ' ಎಂಬುದು ಪಾರಂಪರಿಕ ಉಕ್ತಿ. 'ರಾಜ' ಪದದ ಪುರಾತನತೆ ಋಗ್ವೇದದ ಕಾಲಕ್ಕೆ ಹೋಗುವುದು. ಇದನ್ನು 'ರಾಜ್', 'ರಾಜ್ಞ' ಮತ್ತು 'ರಾಟ್' ಮೂಲದಿಂದ ಶೋಧಿಸಲಾಗಿದೆ. 'ರಾಜ' ಎಂದರೆ ಪ್ರಕಾಶಿಸು, ಕಂಗೊಳಿಸು ಎಂದೂ 'ರಜ್ಞಾ' ಎಂದರೆ ಸಂತೈಸು, ಸುಖೀಪಡಿಸು ಎಂದೂ, 'ರಾಟ್' ಎಂದರೆ ಆಳುವ ಅಧಿಕಾರವುಳ್ಳವನೆಂದು ಅರ್ಥ.[೫] 'ಲಾಜೋ', 'ರಾಜ', 'ಮಹರಾಜ', 'ಮಹಾರಾಜಾಧಿರಾಜ', 'ಧರ್ಮರಾಜ' ಎಂಬವು ಮೌರ್ಯ, ಶಾತವಾಹನ, ಇಕ್ಷ್ವಾಕು, ಕದಂಬ, ಚಾಳುಕ್ಯರ ಶಾಸನಗಳಲ್ಲಿ ಬರುವ ಸಾಮಾನ್ಯ ಪದಗಳು. 'ರಾಜನ್ಯ', 'ರಾಜರಾಜ', 'ರಾಜೇಂದ್ರ', 'ಮಹಾರಾಜ', 'ಮಹಾರಾಜಾಧಿರಾಜ', 'ಚಕ್ರವರ್ತಿ', 'ಸಮ್ರಾಟ' ಈ ಮೊದಲಾದ ಪದಗಳನ್ನು ಮಾರ್ಗಕಾರನು ಬಳಸಿಲ್ಲ. ಎಲ್ಲೋ ಒಂದೆಡೆ **'ಮುದಮಂ ಲೋಕಕ್ಕೆ ಪಡೆಗುಮಿಂತೀ ರಾಜಂ'** (೩-೧೧೦), ಎಂದು 'ರಾಜ' ಪದವನ್ನು, ಇನ್ನೊಂದೆಡೆ 'ನೆರದೇವದಿ ರಾಜ್ಯನಂ ಪರಿಗೋನರರಾದಮಂ' (೨-೧೪೦), ಎಂದು 'ರಾಜ್ಯ' ಪದವನ್ನು, 'ರಾಜರಾಜಿ' (ರಾಜಸಮೂಹ–೩-೧೦) ಎಂಬ ಪದವನ್ನು ಮತ್ತೊಂದೆಡೆ ಪ್ರಯೋಗಿಸಿರುವನು.

ಋಗ್ವೇದ ಕಾಲದಲ್ಲಾಗಲೇ ಪ್ರಯೋಗದಲ್ಲಿದ್ದ 'ರಾಜ' ಪದವನ್ನು ಗೌಣಗೊಳಿಸಿ, ಇತ್ತೀಚಿಗೆ (ಕ್ರಿ. ಶ. ೧-೨ ನೆಯ ಶತಕ) ಬಳಕೆಗೆ ಬಂದ 'ಅರಸ' ಪದದ ಬಗ್ಗೆ ಅವನು ಒಲವು ತೋರಲು ಇದ್ದ ಕಾರಣ ನಮಗೆ ತಿಳಿಯದು. ಆದರೆ 'ಅರಸ' ಪದವನ್ನು ಈ ಕಾವ್ಯದಲ್ಲಿ ಕನಿಷ್ಠ ಹತ್ತು ಬಾರಿ ಪ್ರಯೋಗಿಸಲಾಗಿದೆ.[೬] ಇದು ಕನ್ನಡ ಶಬ್ದ ಭಂಡಾರವನ್ನು ಯಾವಾಗ ಸೇರಿಕೊಂಡಿತೆಂಬುದರ ಬಗ್ಗೆ ನಾವಿನ್ನೂ ತಿಳಿಯಬೇಕಾಗಿದೆ. ಆದರೆ, ಬನವಾಸಿ ಕದಂಬ, ಅತಿಪೂರ್ವದ ಗಂಗ ಮತ್ತು ಬದಾಮಿ ಚಾಳುಕ್ಯರ ಸಂಸ್ಕೃತ ಶಾಸನಗಳಲ್ಲಿ ಈ ಪದವು ಅಪರೂಪವಾಗಿದ್ದು, ಕ್ರಿ. ಶ. ಸು. ೫ ನೆಯ ಶತಮಾನದ ಮಧ್ಯದಿಂದ ಇದರ ಬಳಕೆಯು ಕ್ರಮೇಣ ಜನಪ್ರಿಯಗೊಂಡಿತೆನಿಸುವುದು. ಹಲ್ಮಿಡಿ ಶಾಸನ(ಕ್ರಿ.ಶ. ೪೫೦)ದಲ್ಲಿ ಬರುವ 'ಸಟ್ಟಿಜ್ಞದರ್ ವಿಜಾರಸ', ಚಿತ್ರದುರ್ಗ ಜಿಲ್ಲೆಯ ಕ್ರಿ. ಶ. ೫೦೦ ರ ಶಾಸನದಲ್ಲಿ ಕಾಣಸಿಕೊಳ್ಳುವ 'ಶ್ರೀ ಚಸ್ಸಿಯಮ್ಮರಸ' ಎಂಬುವೇ ಅತ್ಯಂತ ಪುರಾತನವಾದ ಪ್ರಯೋಗಗಳೋ ಅಥವಾ ಅದಕ್ಕಿಂತ ಮುಂಚೆ ಈ ಪದವು ಪ್ರಯೋಗವಾಗಿತ್ತೋ, ಎಂಬುದನ್ನು ಇನ್ನೂ ನಿರ್ಧರಿಸಬೇಕಾಗಿದೆ. ಅರಸ ಪ್ರತ್ಯಯದ ನಾಮಪದಗಳು ೭-೮ ನೆಯ ಶತಮಾನಗಳಲ್ಲಿ ಹೆಚ್ಚು ಪ್ರಸಾರಕ್ಕೆ ಬಂದಂತೆ ತೋರುವವು. ಚಾಳುಕ್ಯ ವಿನಯಾದಿತ್ಯನ ಸಾಮಂತನೂ ಬನವಾಸಿ ನಾಡನ್ನಾಳುತ್ತಿದ್ದ 'ಆಳುವರಸ', ಇಮ್ಮಡಿ ಕೀರ್ತಿವರ್ಮನ ಸಾಮಂತನೂ 'ಗಂಗಿ-ಪಾಂಡಿಯೂರ' ಅಧಿಪತಿಯಾದ ಸಿಂದರಸ ಮತ್ತು ಮಾಧವಟ್ಟಿಯರಸ (ಮಾಧವ ಸತ್ತಿ-ಅರಸ), ಶ್ರವಣಬೆಳ್ಗೊಳದಲ್ಲಿ ಕಾಣಸಿಕೊಳ್ಳುವ ಚೋಳಮುತ್ತರಸ, ಬನವಾಸಿ

ಮಂಡಲವನ್ನಾಳಿದ ರಾಜಾದಿತ್ಯರಸ. ಮುಂತಾದವರಲ್ಲದೆ 'ಅರಸಣ್ಣ', 'ಅರಸಿಮಕೊತ್ತಿಗಳ್' ಮುಂತಾದ ಪ್ರಯೋಗಗಳು ಈ ಕಾಲದ ಶಾಸನಿತ ನಿದರ್ಶನಗಳು.[೬] ಅಪರೂಪವಾಗಿಯಾದರೂ ಅರಸ ಮತ್ತು ರಾಜ ಪದಗಳು ಬೆಸೆದುಕೊಂಡು ಬಂದ ನಿದರ್ಶನಗಳು ಈ ಕಾಲದಲ್ಲುಂಟು. ಬೆಂಗಳೂರು ಪ್ರದೇಶದ ಕ್ರಿ.ಶ. ೭೫೦ ರ ಒಂದು ಶಾಸನದಲ್ಲಿ 'ಶ್ರೀ ಪುರುಷ ಮಹಾರಾಜ ಅರಸುಗೆ'ಯ್ಯುತ್ತಿದ್ದುದನ್ನು ಇಲ್ಲಿ ನಿದರ್ಶಿಸಬಹುದು.[೭]

ಸಂಸ್ಕೃತ ನಿಘಂಟಿನ ಹೊರಗೆ ನಿಂತಿರುವ ಈ ಪದವನ್ನು ಮೊದಲು ನಾವು ಕಾಣುವುದು (ಕ್ರಿ. ಶ. ೨-೩ ನೆಯ ಶತಕದ) ತಮಿಳಿನ 'ಶಂಗಂ' ಸಾಹಿತ್ಯದಲ್ಲಿ. 'ಅರಸ', 'ಅರಸರ್', 'ಅರಸರ್ಕಳ್', ಎಂಬೆಲ್ಲ ಪದಗಳನ್ನು ಕಲಿತ್ತೊಗೈ (೨೭೭-೫; ೩೭೨-೭), ಅಹನಾನೂರು (೩೩೮-೨), ಪುರನಾನೂರು (೧೫೪-೪) ಮೊದಲಾದ ಸಂಕಲನಗಳಲ್ಲಿ ನೋಡುವೆವು. ರಾಷ್ಟ್ರಕೂಟ ಕಾಲದಲ್ಲಿ ವ್ಯಾಪಕ ಬಳಕೆಗೆ ಬಂದ ಈ ದ್ರಾವಿಡ ಪದವು ರಾಜ್ಯದ ನರ್ಮದಾ ನದಿಯನ್ನು ದಾಟಿ ಉತ್ತರ ಭಾರತದಲ್ಲಿ ಕಾಲಿಡಲಿಲ್ಲ; ಗಂಗಾನದಿಯನ್ನು ರಾಷ್ಟ್ರಕೂಟ ಸೈನ್ಯವು ಹಲವಾರು ಬಾರಿ ಮುಟ್ಟಿದರೂ ಈ ಪದ ಮಾತ್ರ ದಖ್ಖಣದ ಉತ್ತರ ಗಡಿಯನ್ನು ದಾಟಲಿಲ್ಲ.

ಈಗಾಗಲೇ ಗಮನಿಸಲಾದ ಹತ್ತು ನಿದರ್ಶನಗಳೊಡನೆ, 'ಅರಸಿ' ಎಂಬ ಇನ್ನೆರಡು ಉಲ್ಲೇಖಗಳನ್ನು (೨-೧೪೧; ೩-೨೩೩) ಸೇರಿಸಿದರೆ, ಈ ಸಂಖ್ಯೆಯು ಹನ್ನೆರಡಕ್ಕೇರುವುದು. **'ಅರಸಗಾ... ಕ್ಷ್ಮಾ ಪರಿಪಾಲ್ಯ'** (೧-೬೫) ಎಂಬ ಒಂದು ನಿದರ್ಶನವನ್ನು ಬಿಟ್ಟರೆ ಇಲ್ಲಿ ಬರುವ ಉಲ್ಲೇಖಗಳೆಲ್ಲಾ ಅರಸ-ಅರಸಿಯ ಅಂತಃಪುರ ಜೀವನಕ್ಕೆ ಸಂಬಂಧಿಸಿರುವುದರಿಂದ ಅವುಗಳ ವಿವರವಾದ ಚರ್ಚೆ ಇಲ್ಲಿ ಅಪ್ರಸ್ತುತವೆಂದು ಭಾವಿಸಬಹುದು.

ಕವಿರಾಜಮಾರ್ಗದಲ್ಲಿ 'ರಾಜ' ಪದವು ಅಪರೂಪವಾಗಿದ್ದರೂ ರಾಷ್ಟ್ರಕೂಟ ಶಾಸನಗಳಲ್ಲಿ ಅದಕ್ಕೆ ಬಡತನವಿಲ್ಲ. ಈ ಮನೆತನದ ಅರಸರ ಹೆಸರಿಗೆ ಅಂಟಿಕೊಂಡು 'ರಾಜ' ಅಥವಾ 'ಮಹಾರಾಜ' ಎಂಬ ಪ್ರತ್ಯಯಗಳು ಬರುವುದಿಲ್ಲವೆಂಬುದು ಸ್ಥೂಲವಾಗಿ ನಿಜ— ಏಕೆಂದರೆ, ಇಲ್ಲಿ 'ತುಂಗ' ಮತ್ತು 'ವರ್ಷ' ಪ್ರತ್ಯಯಗಳಿಗೆ ಪ್ರಾಧಾನ್ಯತೆ — ಆದರೆ ಶಾಸನಗಳ ಒಳಪಾಠಗಳಲ್ಲಿ 'ರಾಜ' ಪದಕ್ಕೆ ಕೊರತೆ ಇಲ್ಲ. ವಲ್ಲಭರಾಜ, ಮಹಾರಾಜಸರ್ವ, ಗೋವಿಂದರಾಜ, ಕರ್ಕರಾಜ, ಕೃಷ್ಣರಾಜ ಎಂಬ ನಿದರ್ಶನಗಳಲ್ಲದೆ, ಈ ಮನೆತನದವರೆಲ್ಲರೂ 'ಮಹರಾಜಾಧಿರಾಜ' ಎಂದು ಕರೆದುಕೊಂಡದ್ದನ್ನು ನಾವಿಲ್ಲಿ ನಿರ್ಲಕ್ಷಿಸುವಂತಿಲ್ಲ. ಅಲ್ಲದೆ, ಇವರಲ್ಲಿ ಕೆಲವರು 'ಗಜರಾಜಮಲ್ಲ' (ಕೊಟ್ಟಿಗ), 'ಮಹಾರಾಜಷಂಡ' (ಅಮೋಘವರ್ಷ), 'ರಾಜಮಾರ್ತಾಂಡ' (ಮುಮ್ಮಡಿ ಮತ್ತು ನಾಲ್ವಡಿ ಇಂದ್ರರು), 'ರಾಜಸಿಂಗ' (ದಂತಿದುರ್ಗ), 'ರಾಜಾಧಿರಾಜ' (ಮುಮ್ಮಡಿ ಗೋವಿಂದ) ಎಂದು ಗುರುತಿಸಿಕೊಂಡದ್ದನ್ನೂ ಮರೆಯುವಂತಿಲ್ಲ.

ಕ್ಷ್ಮಾ-ಪರಿಪಾಲನೆ :

ಅರಸನ ಕರ್ತವ್ಯ, ಕ್ಷ್ಮಾ ಪರಿಪಾಲನೆ (೧-೬೫); ಇದನ್ನೇ ಅಮರಕೋಶದಲ್ಲಿ 'ಕ್ಷ್ಮಾಭೃತ್' ಎಂದು ಗುರುತಿಸಿರುವುದು. ಭೂಮಿಯನ್ನು ಮತ್ತು ಭೂಪಾಲನನ್ನು ಆಶ್ರಯಿಸಿದ ಪ್ರಜೆಗಳನ್ನು ರಕ್ಷಿಸುವುದು ಕ್ಷತ್ರಿಯನ ಕರ್ತವ್ಯ (೧-೧೩೩; ೧೩೩). ಈ ಕರ್ತವ್ಯವನ್ನು ಸಮರ್ಥವಾಗಿ ನಿರ್ವಹಿಸುವವನು 'ಪ್ರಭು', 'ಸ್ವಾಮಿ' ಎಂದು ಪೂಜಿತನಾಗುವನು. ಭೂಮಿ

ಮತ್ತು ಭೂಪಾಲನ ಸಂಬಂಧವನ್ನು ಪ್ರತಿಪಾದಿಸಲು 'ಅವನೀಶ', 'ಧರಾಧಿಪತಿ', 'ಧರಾವಲ್ಲಭ', 'ಪಾರ್ಥಿವ', 'ಪೊಡವಿಪತಿ', 'ಭೂಪತಿ', 'ಭೂಪಾಳ', 'ಭೂಪೇಂದ್ರ', 'ಭೂಭೃದುತ್ತುಂಗ', 'ಭೂಭೃನ್ನಾಥ', 'ಮಹೀಪತಿ', 'ಮಹೀಶ್ವರ', 'ವಲ್ಲಭ', 'ಕ್ಷಿತಿಪತಿ' ಎಂಬೆಲ್ಲ ಪದಗಳನ್ನು ಮಾರ್ಗಕಾರನು ಬಳಸಿರುವನು.[೧೦]

ಭೂಪತಿಯಿಂದ ವಂಚಿತಳಾದ 'ಭೂ' ಬಂಜೆ ಹೆಣ್ಣು ಮಾತ್ರ; ಅವನ ಆಶ್ರಯ ದೊರೆಯುವುದರಿಂದಲೇ ಅವಳು 'ಸನಾಥೆ'(ಮುತ್ತೈದೆ)ಯಾಗುವಳು (೧-೧೦೫). ಇಲ್ಲಿ ಆಶ್ರಯದಾತ ಪುರುಷ; ಆಶ್ರಿತಳು ಪ್ರಕೃತಿ. ಈ ಕಾರಣದಿಂದಲೇ ಧರಾವಧುವು **'ಸತತಂ ಭುಜಂಗ ಭೋಗಾಶ್ರಿತೆ'** (೩-೧೬೩) ಎನಿಸುವಳು. ಪಾರ್ಥಿವನೇ ಧರಾಲಳನೆಯ 'ಪತಿ', 'ನಾಥ', 'ವಲ್ಲಭ' ಮತ್ತು **'ಈಶ'**. 'ಪೊಡವಿ-**ಪತಿ**', 'ಧರಾಧಿ-**ಪತಿ**', 'ಭೂ-**ಪತಿ**', 'ಮಹೀ-**ಪತಿ**', 'ಕ್ಷಿತಿ-**ಪತಿ**' ಎಂದೂ ಭೂಭೃನ್-**ನಾಥ**, ಅವನಿ-**ಈಶ** ಮತ್ತು ವಲ್ಲಭನ್ ಎಂದೂ ಅವನನ್ನು ಸಂಬೋಧಿಸಲಾಗಿರುವುದು. ಅಂಥವನಿಂದಲೇ ಲೋಕ(ಭೂಮಿ=ರಾಜ್ಯ)ವು ಮುದಗೊಳ್ಳುವುದು– **'ಅತಿಮುದಮುಮಂ ಲೋಕಕ್ಕೆ ಪಡೆಗುಮಿಂತೀ ರಾಜಂ'** (೩-೧೧೦). ಕ್ಷ್ಮಾಪರಿಪಾಲನೆಯು ಕ್ಷತ್ರಿಯ ಶ್ರೇಷ್ಠನಿಂದಲ್ಲದೆ ಬೇರೊಬ್ಬನಿಂದ ಸಾಧ್ಯವಿಲ್ಲ (೧-೬೬); ಕಾರಣ, ಅವನನ್ನು ಹೊರತುಪಡಿಸಿ **'ಪೆಜನಾವಂ ಧರಾಚಕ್ರಕ್ಕೆಱಿಯಂ ಕೆಳೆಯಪ್ಪವಂ?'** (೨-೧೨೭) –ಎಂಬುದು ಮಾರ್ಗಕಾರನ ಪ್ರಶ್ನೆ.

ತಮ್ಮ ಬಹುತೇಕ ಶಾಸನಗಳಲ್ಲಿ ರಾಷ್ಟ್ರಕೂಟರು ಅತ್ಯಂತ ಹೆಮ್ಮೆಯಿಂದ ಹೇಳಿಕೊಂಡಿರುವ ಬಿರುದುಗಳಲ್ಲಿ ಒಂದು 'ಶ್ರೀ ಪೃಥ್ವೀವಲ್ಲಭ'. ಕ್ಷಿತಿಯನ್ನೂ ಕ್ಷಿತಿಪತಿಯನ್ನೂ ಹಲವಾರು ಪದಗಳಿಂದ ಬೆಸೆದು ಬಣ್ಣಿಸಿರುವ ಮಾರ್ಗಕಾರನು 'ಪೃಥ್ವೀ' ಪದವನ್ನು ಈ ಕಾವ್ಯದ ಹೊರಗಿಟ್ಟಿರುವುದರಿಂದ, ಅವರ ಅಚ್ಚುಮೆಚ್ಚಿನ ಈ ಬಿರುದನ್ನು ನಾವು ಈ ಕಾವ್ಯದಲ್ಲೆಲ್ಲೂ ಕಾಣುವುದಿಲ್ಲ. ಆದರೆ ಅದೇ ಅರ್ಥ ಕೊಡುವ 'ಪಾರ್ಥಿವ' ಪದವನ್ನು ಅವನು ಕನಿಷ್ಠ ಎರಡು ಬಾರಿ (೩-೪೪, ೨೨೬) ಬಳಸಿರುವನು.

ಭೂಮಿಯನ್ನು ರಕ್ಷಿಸಿದಂತೆ ತನ್ನನ್ನು ಆಶ್ರಯಿಸಿದವರನ್ನು ರಕ್ಷಿಸುವುದೂ ಭೂಪತಿಯ ಕರ್ತವ್ಯ. ಅತಿ ಪೂರ್ವ ಕಾಲದಿಂದಲೂ ಅವನನ್ನು 'ಜನಪದಾಧಿಪ' ಎಂದು ಗುರುತಿಸುತ್ತಾ ಬಂದುದು ಈ ಕಾರಣಕ್ಕಾಗಿಯೇ. ಅರಸನ ಹೊಣೆಗಾರಿಕೆಯನ್ನು ಮನದಂದು ಅವನನ್ನು 'ಜನಪತಿ', 'ಜನೇಶ'ನೆಂದೂ 'ನರಪ', 'ನರಪತಿ', 'ನರನಾಯಕ', 'ನರಪಾಲ', 'ನರಮಹಿತ', 'ನರೇಂದ್ರ'ನೆಂದೂ 'ನೃಪ', 'ನೃಪತಿ', 'ನೃಪವೃಷಭ', 'ನೃಪೇಂದ್ರ', 'ನೃಪತುಂಗ'ನೆಂದೂ ಕೊಂಡಾಡಲಾಗಿದೆ.[೧೧] ಜನ, ನರ, ನೃಪ ಪದಗಳು ಪಡೆದ ಸ್ಥಾನವನ್ನು 'ಪ್ರಜೆ' ಇಲ್ಲಿ ಪಡೆದಿಲ್ಲ. ಒಂದೆ(ರಡೆ)ಡೆ ಮಾತ್ರ 'ಪ್ರಜೆ'ಯ ಪ್ರಸ್ತಾಪ ಬರುವುದು (೧-೧೩೨-೩); ಆದರೆ, 'ಪ್ರಜಾಪತಿ', 'ಪ್ರಜಾಹಿತ', ಮುಂತಾದುವನ್ನು ಈ ಕಾವ್ಯದಲ್ಲೆಲ್ಲೂ ನಾವು ಕಾಣುವುದಿಲ್ಲ. ಅರಸನ ಪಾಲಕ ಗುಣಕ್ಕಿಂತಲೂ ಅವನ ಪ್ರಭುತ್ವ ಶಕ್ತಿಯನ್ನು ಪ್ರಧಾನಗೊಳಿಸಿರುವುದರಿಂದ ಅವನನ್ನು 'ಪತಿ', 'ನಾಯಕ', 'ಇಂದ್ರ', 'ವೃಷಭ', 'ತುಂಗ', ಎಂದು ಹಲವು ಬಾರಿ ಇಲ್ಲಿ ಸಂಬೋಧಿಸಲಾಗಿದೆ.

ಅಭಿಮಾನಿ :

ಜನನಾಯಕನೂ ಭೂನಾಥನೂ ಆದ ಅರಸನ ವ್ಯಕ್ತಿತ್ವವನ್ನು ರೂಪಿಸುವ ಗುಣಗಳಲ್ಲಿ ಪ್ರಮುಖವಾದವು– ಅಭಿಮಾನ ಮತ್ತು ಗಾಂಭೀರ್ಯ. ಅಭಿಮಾನವೇ ಕ್ಷತ್ರಿಯನ ಧನ (೨-೧೭); ಅದನ್ನು ಬೆಳೆಸಿ-ಉಳಿಸಿಕೊಂಡವನ ಬಗ್ಗೆ ಲೋಕವೇ ಹೆಮ್ಮೆಪಡುವುದು. ಕಾರಣ '**ಮೆಚ್ಚದವರಾರ್ ಅಭಿಮಾನಿಯಪ್ಪನಂ**'(೧-೧೨೩) ಎಂಬುದು ಮಾರ್ಗಕಾರನ ಪ್ರಶ್ನೆ. ಸಾಗರದ ಗಾಂಭೀರ್ಯ, ಕುಲಗಿರಿಯ ಗೌರವ, ಧರಣಿಯ ತಾಳ್ಮೆ, ಇಂದುವಿನ ಕಾಂತಿ, ಅಂಬರಮಣಿಯ ಪ್ರಕಾಶ ಅವನಲ್ಲಿ ಕೇಂದ್ರೀಕೃತವಾದಾಗಲೇ ಅರಸನ ವ್ಯಕ್ತಿತ್ವಕ್ಕೆ ವೈಶಿಷ್ಟ್ಯತೆ ಬರುವುದು (೩-೨೦, ೪೦, ೮೫, ೮೬). ಇದರೊಡನೆ 'ಆರೂಢ ವಿಪುಳವಂಶ'ನೂ 'ಕುಲಜಾತಿವಿಶದನೂ' ಆದರೆ (೩-೧೩೨, ೨೨೭) ಅವನ ವರ್ಚಸ್ಸಿಗೆ ಮೇರೆಯೇ ಇರದು. ಕಾರಣ, 'ಲಾವಣ್ಯದಿನ್ ಅತಿ ಗಂಭೀರನೂ' (೩-೪೦) ದಿನೇಶನಿಗಿಂತಲೂ ಮಿಗಿಲಾದ ಪರಮೋದಯನೂ (೩-೪೧), ಪ್ರಭೂತಗುಣನೂ ಆದ ಇವನು 'ಸಕಲಜನವಿನುತ' (೨-೩೮)ನೆನಿಸುವುದು. ಇವನು ಧೈರ್ಯದಲ್ಲಿ ಸುರಗಿರಿ (೩-೪೪, ೮೬). ಅರಾತಿ ಸಮಿತಿಯನ್ನು (೨-೨೪, ೮೦) ವಿಪರೀತಕನಾಗಿ, ತರುದಹನನಾಗ್ನಿಯಂತೆ (೩-೧೦೦, ೨೨), ನಾಶಗೊಳಿಸುವ ನಲ್ಲದೆ, ಶತ್ರುಗಳ ಮಹಾಸೇನೆಯಿಂದ ತನ್ನ ಪ್ರಜೆಗಳಿಗೆ ಆಗುವ ದುಗುಡವನ್ನು ನಿರಾತಂಕವಾಗಿ ನಿವಾರಿಸುವನು– '**ಪೂರಾಶ್ರಿತ ಹೃತ್ಕ್ಲೇಶ ವಿದೂರಾ ದೂರೀಕೃತ ಬಲವಿಸ್ತಾರಾ**' (೩-೨೩೬). 'ಅರಿಬಲವಿಘಟನ್', 'ಅರಾತಿನಿಕರ ತರುದಹನಂ', 'ವ್ಯಪಗತಭಯನ್', 'ವಿನಹಿತ-ರಿಪುಕುಳನ್' ಎಂಬೆಲ್ಲ ಹೊಗಳಿಕೆಗೆ ಸಹಜವಾಗಿ ಅಂಥವನು ಪಾತ್ರನಾಗುವನು. [೨]

ಉದಾರಿ :

ಅರಸನಿಗೆ ವಿಸ್ತಾರವಾದ ಭೂಮಿ ಇರಬೇಕು; ಆದರೆ ಅದು ಬರಡಾಗಿದ್ದರೆ ಅದೊಂದು ಹೊರೆ ಮಾತ್ರ. ಇಂತಹ ಬರಡು ಭೂಮಿಯ ಒಡೆತನವನ್ನು ಹೊಂದಿದವನು ಶ್ರೀಸಂಪನ್ನ ಅಥವಾ ಇಂದ್ರಸಮಾನ(೨-೪೪, ೭೨)ನೆನಿಸಲಾರ. '**ವಿಪುಲ ಕಟಕ ದ್ವಿಪ ಹರಿ ಮಹಿಷಿ**'ಯನ್ನು ಒಳಗೊಂಡವನೇ ನಿಜವಾದ ಭೂನಾಥ. ಅಲ್ಲದೆ ಅವನು 'ವ್ಯಪನೀತ ಶ್ರೀ ಫಲದಂ', ಅಂದರೆ ತನ್ನ ಸಂಪತ್ತನ್ನು ಫಲಪ್ರದವಾಗಿ ವಿನಿಯೋಗಿಸಬಲ್ಲವನಾಗಿರಬೇಕು (೩-೧೧೧). ತನ್ನ ಸಂಪತ್ತನ್ನು ಹೀಗೆ ಹಂಚಿದಾಗ ಮಾತ್ರ 'ಅರ್ಥಿಗಣಾರ್ಥಿತ ಕಲ್ಪವೃಕ್ಷನ್' (೨-೧೦) ಎಂದು ಅವನು ಖ್ಯಾತಿ ಗಳಿಸಿಕೊಳ್ಳುವನು. ಅಂಥವನನ್ನು ಲೋಕವು 'ವರ್ಷ' (ಸಂಪತ್ತು, ಕ್ಷಮೆ, ತ್ಯಾಗ ಮೊದಲಾದುವನ್ನು ಧಾರಾಕಾರವಾಗಿ ಸುರಿಸುವವನು) ಎಂದು ಮನ್ನಿಸುವುದು. '**ಪರಿಭವಮಂ ಕಳಲ್ಚುವುದಧೀಶ್ವರನಾ ದಯೆ ಸಾಲ್ಗುಮ್**' (೧-೧೧೫) ಎಂಬ ನೆಮ್ಮದಿಯ ಉಸಿರನ್ನು ಅವನ ಪ್ರಜಾವೃಂದವು ಹಾಕುವುದು.

ಜನಕಲ್ಯಾಣವನ್ನು ಬಯಸುವ ಸಮ್ರಾಟನಿಂದ ಬೇಡುವ, ಬೇಡಿ ಪಡೆಯಬಲ್ಲೆವು, ಎಂಬ ಭರವಸೆಯು ದೀನ ದಲಿತರಿಗಿರುತ್ತದೆ. 'ನೋಡುವೆನು ಆ ಅರ್ಥಿಗಣಾರ್ಥಿತ ಕಲ್ಪವೃಕ್ಷ'ನಾದ ಮಹೀಪತಿಯನ್ನು; 'ಬೇಡುವೆನು ಆ ಉದಾತ್ತ ಚಾರುಗುಣನಿಂ, ಅರ್ಥ ಸಂಚಯಮನ್'

(೨-೧೦೨) ಎಂಬ ನುಡಿಯಲ್ಲಿ ಮಾರ್ಗಕಾರನು ಇದನ್ನು ಪ್ರತಿಬಿಂಬಿಸಿರುವನು. ಈ ಕಾರಣದಿಂದಾಗಿ ರಾಷ್ಟ್ರಕೂಟ ಅರಸರೆಲ್ಲಾ 'ವರ್ಷ' ಬಿರುದಿಗೆ ಅರ್ಹರೆನಿಸಿರಲು ಸಾಕು.

ರಾಷ್ಟ್ರಕೂಟ ಅರಸರ ವೈಶಿಷ್ಟ್ಯಪೂರ್ಣ (ಅಂದರೆ, ಹಿಂದೆಂದೂ ಯಾರೂ ಪಡೆದುಕೊಳ್ಳದಂತಹ) ಬಿರುದು 'ವರ್ಷ'. ಇದರ ಬಗ್ಗೆ ಹಿಂದೊಮ್ಮೆ ಚರ್ಚಿಸಿದ್ದೇನೆ.[೧೩] ಆದರೆ, ಈ ಬಿರುದಿಗೆ ಅರ್ಹರೆನಿಸಲು ಅವರು ಮಾಡಿದ ಸಾಧನೆಗಳನ್ನು ನಾವಿನ್ನೂ ಕಂಡುಕೊಳ್ಳಬೇಕಾಗಿದೆ. ಇದರ ಬಗ್ಗೆ ಸ್ಪಷ್ಟ ಚಿತ್ರವನ್ನು ಪಡೆಯಬೇಕಾದರೆ, ಅವರು ಘೋಷಿಸಿಕೊಂಡ ಬಿರುದುಗಳ ಪಟ್ಟಿ ಮಾಡಿದರೆ ಸಾಲದು; ಅವರು ಕೊಟ್ಟ ದಾನ-ದತ್ತಿಗಳ ಮೌಲ್ಯೀಕರಣ ಮಾಡಿ, ಅದರ ಪ್ರಮಾಣವನ್ನು ಮುಂಚೆ ಆಳಿದವರ ಸಾಧನೆಯೊಂದಿಗೆ ತುಲನೆ ಮಾಡಬೇಕು.

ಇದು ಏನೇ ಇರಲಿ, ರಾಷ್ಟ್ರಕೂಟರಿಗೆ 'ವರ್ಷ' ವಿಶೇಷಣವು ಬಹಳ ಪ್ರಿಯವಾಗಿತ್ತು ಎಂಬುದರಲ್ಲಿ ಅನುಮಾನವಿಲ್ಲ. ಇಲ್ಲದಿದ್ದರೆ ಧ್ರುವನ 'ಧರಾವರ್ಷ', ಕೃಷ್ಣನ 'ಅಕಾಲವರ್ಷ', ಗೋವಿಂದನ 'ಪ್ರಭೂತವರ್ಷ', ನೃಪತುಂಗನ 'ಅಮೋಘವರ್ಷ', ಕರ್ಕನ 'ಸುವರ್ಣವರ್ಷ', ಮುಮ್ಮಡಿ ಇಂದ್ರನ 'ನಿತ್ಯವರ್ಷ' ಎಂಬ ಬಿರುದುಗಳಿಗೆ ಅರ್ಥವೇ ಇರುತ್ತಿರಲಿಲ್ಲ.[೧೪] ತಮ್ಮ ದಾನಶೂರತ್ವವನ್ನು ಪ್ರದರ್ಶಿಸಲು ಇವರಲ್ಲಿ ಕೆಲವರು ಇನ್ನೂ ಹಲವು ವಿಶೇಷಣಗಳನ್ನು ಪಡೆದುಕೊಂಡರು. ಮುಮ್ಮಡಿ ಗೋವಿಂದನ **'ದೀನನಾಥ ಜನಹ್ಲಾದಕರ ದಾನನಿರತ ಮನೋವೃತ್ತಿ'** ಎಂಬ ಶಾಸನ ಪಾಠವು ಕವಿರಾಜಮಾರ್ಗದಲ್ಲಿ ಬರುವ **'ಅರ್ಥಿಗಣಾರ್ಥಿತ ಕಲ್ಪವೃಕ್ಷ', 'ಪರೋಪಕಾರನಿರತ', 'ಉದಾತ್ತ ಚಾರುಚರಣ', 'ಅತ್ಯುದಾರ', 'ದಯಾಲೂ', 'ಅರ್ಥಿಫಲದಾಯಿ'** ಎಂಬ ಪದಗಳನ್ನು ನೆನಪಿಗೆ ತಂದುಕೊಡುವುವು.[೧೫] ಪ್ರೀತಿಯಿಂದ ಕೊಡಲು ನಿಂತಾಗ (ಅಮೋಘವರ್ಷನಂಥವನಿಗೆ) ಭೂಮಂಡಲವೇ ಒಂದು ಬಿಂದು– **'ನೆಲನುಂ ಪ್ರಿಯದೆಡೆಗೆ ಕಿಱಿದು ಕೊಳಲುಂ ಕುಡಲುಂ'** (೩-೧೭೫) ಆಗುತ್ತಿತ್ತೆಂಬುದು ಇಲ್ಲಿ ಸ್ಮರಣಾರ್ಹ.

ಇವರಲ್ಲಿ ಕೆಲವರು ಮಹಾದಾನಿಗಳೂ ಉದಾರ ಪೋಷಕರೂ ಆಗಿದ್ದರೆಂಬುದನ್ನು ಐತಿಹಾಸಿಕ ಆಕರಗಳು ಬೆಂಬಲಿಸುವುವು. ಅವರ ದಾಖಲಿತ ಮಹಾದಾನಗಳಲ್ಲಿ ದಂತಿದುರ್ಗನು ಉಜ್ಜೈನಿಯಲ್ಲಿ ಮಾಡಿದ ಹಿರಣ್ಯಗರ್ಭದಾನ, ಗೋವಿಂದನು ಪ್ರತಿಷ್ಠಾನದಲ್ಲಿ ಪೂರೈಸಿದ ಹಲವು ಮಹಾದಾನಗಳಲ್ಲದೆ ಮಯೂರ್‌ಖಂಡಿಯಲ್ಲಿ ನೆರವೇರಿಸಿದ ತುಲಾಪುರುಷ, ನಾಲ್ವಡಿ ಗೋವಿಂದನ ಹಿರಣ್ಯಗರ್ಭ, ಗೋಸಹಸ್ರ, ಉಭಯಮುಖಿ, ಕಲ್ಪವೃಕ್ಷ ದಾನಗಳು, ಅವುಗಳಲ್ಲಿ ಕೆಲವು ಗಮನಾರ್ಹ ಉದಾಹರಣೆಗಳು.[೧೬] ಈ ಬಗೆಯ ಮಹಾದಾನಗಳು ರಾಷ್ಟ್ರಕೂಟ ಪೂರ್ವದ ಇತಿಹಾಸದಲ್ಲಿ ದಾಖಲೆಗೊಂಡಿದ್ದರೂ, ದಾನ ಪ್ರಮಾಣದಲ್ಲಿ ಸರಿಗಟ್ಟಬಹುದಾದ ನಿದರ್ಶನವನ್ನು ಹುಡುಕುವುದು ಸುಲಭವಲ್ಲ. ಎರಡು ಬಾರಿ ಅಶ್ವಮೇಧವನ್ನೂ, ಒಮ್ಮೆ ರಾಜಸೂಯ ಯಾಗವನ್ನೂ ಹತ್ತಾರು ಮಹಾದಾನಗಳನ್ನೂ, ರಜತಕುಂಭ, ಅಶ್ವರಥ. ಸಾವಿರ ಅಶ್ವಗಳನ್ನೂ, ೪೨,೭೦೦ ಕಪಿಲೆಗಳನ್ನೂ ೬೮,೦೦೦ ಕಾರ್ಷಪಣಗಳನ್ನೂ ದಾನರೂಪದಲ್ಲಿ ವಿತರಿಸಿದ ಶಾತವಾಹನ ವಂಶದ ಮೊದಲನೆಯ ಶಾತಕರ್ಣಿಯ ನಾನಾಘಾಟ್ ಶಾಸನಕ್ಕೆ

ಮೊರೆಹೋದರೆ ಈ ಪ್ರಯತ್ನ ಫಲಿಸಬಹುದೇನೋ. ರಾಷ್ಟ್ರಕೂಟರಿಗಿಂತ ಸರಿಸುಮಾರು ಒಂದು ಸಹಸ್ರ ವರ್ಷ ಕಾಲ ಹಿಂದೆ ಸಂಭವಿಸಿದ ಘಟನೆ ಅದು.

ಇದು ಏನೇ ಇರಲಿ, ರಾಷ್ಟ್ರಕೂಟ ಅರಸರು ಕೆಲವು ವಿಶಿಷ್ಟ ದಾಖಲೆಗಳನ್ನು ನಿರ್ಮಿಸಿದರು. ಅವುಗಳಲ್ಲಿ ಒಂದು, ದೇವಾಲಯ ನಿರ್ಮಾಣಕ್ಕೆ ಅವರು ವಿನಿಯೋಗಿಸಿದ ಅಪಾರ ಸಂಪತ್ತು. ಬೃಹತ್‌ಶಿಲೆ (ಬೆಟ್ಟ)ಯನ್ನು ಕೊರೆದು, ಅತ್ಯಂತ ಭವ್ಯವಾದ 'ಕೈಲಾಸನಾಥ' ದೇವಾಲಯವನ್ನು ನಿರ್ಮಿಸಲು ಅವರೊಂದು ಬೆಟ್ಟದಷ್ಟು ಸುವರ್ಣವನ್ನು ವಿನಿಯೋಗಿಸಿದರೆಂಬುವುದರಲ್ಲಿ ಅನುಮಾನವಿಲ್ಲ– ಏಕೆಂದರೆ, ಈ ಬಗೆಯ ಮತ್ತು ಈ ಪ್ರಮಾಣದ ದೇವಾಲಯವು ಮತ್ತೊಮ್ಮೆ ಮತ್ತೆಲ್ಲಿಯೂ ನಿರ್ಮಾಣವಾಗಲಿಲ್ಲವೆಂಬುದು ಐತಿಹಾಸಿಕ ಸತ್ಯ. ಪಲ್ಲವರು ಮತ್ತು ಪಾಂಡ್ಯರು ಪೂರ್ಣಪ್ರಮಾಣದ ಶಿವಾಲಯಗಳನ್ನು ಕೊರೆಸಿದರು, ಆದರೆ ಕೈಲಾಸನಾಥ ದೇವಾಲಯಕ್ಕೆ ಹೋಲಿಸಿ ನೋಡಿದರೆ ಅವು ಸಾಸುವೆ ಕಾಳಿನಷ್ಟು ಚಿಕ್ಕವಾಗಿ ಗೋಚರಿಸುವುವು. ಬೌದ್ಧರು ಅನೇಕ ಅದ್ಭುತ ಗುಹಾಲಯಗಳನ್ನು ನಿರ್ಮಿಸಿದರು, ಆದರೆ ಹೊರಮೈ ಇರದ ಅವರ ಗುಹಾಲಯಗಳಾವೂ ಕೈಲಾಸನಾಥಕ್ಕೆ ಸಮ ಎನಿಸಲಾರವು. ಇಂದಿನ ಅಫಘಾನಿಸ್ತಾನದ ಬಾಮಿಯಾನದಲ್ಲಿ ನಿರ್ಮಾಣಗೊಂಡ ಬೌದ್ಧ ಸಮುಚ್ಚಯ ಮತ್ತು ಬುದ್ಧನ ಬೃಹತ್ ಉಬ್ಬು ಶಿಲ್ಪಗಳು (ಇತ್ತೀಚೆಗೆ ಭಗ್ನಗೊಂಡವು), ಪ್ರಮಾಣದಲ್ಲಿಯೂ ವಿಸ್ತಾರದಲ್ಲಿಯೂ ಶ್ರಮವಿನಿಯೋಗದಲ್ಲಿಯೂ ಕೈಲಾಸನಾಥ ದೇವಾಲಯವನ್ನು ಮೀರಬಹುದಾದವೇನೋ, ಆದರೆ ಅವುಗಳ ನಿರ್ಮಾಣವು ಒಬ್ಬ ಪೋಷಕನಿಂದ, ಒಂದೇ ಕಾಲಘಟಕದಲ್ಲಿ, ಆಗಲಿಲ್ಲ. ಬಾಮಿಯಾನದಲ್ಲಿ ಇತ್ತೆಂದು ಚೀನಿ ಯಾತ್ರಿಕನು ದಾಖಲಿಸಿರುವ ಶಯನ ಬುದ್ಧನ ಪ್ರತಿಮೆ ಏನಾದರೂ ಉಳಿದು ಬಂದಿದ್ದರೆ (ಅದು ಎಕರೆಗಳಷ್ಟು ಪ್ರದೇಶವನ್ನು ಆವರಿಸಿತ್ತೆಂದಿರುವುದರಿಂದ) ಅದೊಂದು ರಾಷ್ಟ್ರಕೂಟರ ದಾಖಲೆಯನ್ನು ಮುರಿಯಬಹುದಾಗಿತ್ತು, ಆದರೆ ಅದಿಂದು ದಂತಕತೆಯ ರೂಪದಲ್ಲಿ ಮಾತ್ರ ನಮ್ಮಲ್ಲಿ ಉಳಿದುಕೊಂಡಿದೆ!

ಕೈಲಾಸನಾಥ ದೇವಾಲಯವನ್ನು ನಿರ್ಮಿಸಿ ಒಂದು ಬಗೆಯ ದಾಖಲೆಯನ್ನು ರಾಷ್ಟ್ರಕೂಟ ಕೃಷ್ಣನು ನಿರ್ಮಾಣ ಮಾಡಿದರೆ, ನೃಪತುಂಗನು ಮತ್ತೊಂದು ಬಗೆಯ ದಾಖಲೆಯನ್ನು ನಿರ್ಮಾಣ ಮಾಡಿದನು. ಅವನು ತನ್ನ ಭಂಡಾರದ ಸುವರ್ಣವನ್ನು ವಿನಿಯೋಗಿಸಿ ಇದನ್ನು ನಿರ್ಮಿಸಲಿಲ್ಲ; ತನ್ನ ದೇಹಾಂಗವನ್ನು ಪ್ರಜಾಹಿತಕ್ಕಾಗಿ ಕತ್ತರಿಸಿ ಬಲಿಕೊಟ್ಟು, ತನ್ನ ರಾಜ್ಯವನ್ನು ದುರ್ಭಿಕ್ಷೆಯಿಂದ ಪಾರು ಮಾಡಲು ಮಹಾಲಕ್ಷ್ಮಿಯನ್ನು ಮೊರೆಹೋದನು. ಪ್ರಜೆಗಳ ಹಿತಕ್ಕಾಗಿ ತನ್ನ ಅಂಗಾಂಗವನ್ನೇ ಬಲಿಕೊಟ್ಟ ಮತ್ತೊಬ್ಬ ಅರಸನ ನಿದರ್ಶನವನ್ನು ರಾಷ್ಟ್ರಕೂಟ ಪೂರ್ವಯುಗದ ಇತಿಹಾಸದಲ್ಲಿ ನಾವು ಕಾಣುವುದಿಲ್ಲ.

ಅಖಿಳಚೋದ್ಯವಿದ್ಯಾ ಪಾರಂಗತರು :

ಈ ಉದಾರ-ತ್ಯಾಗ ಗುಣಗಳ ಸೆರಗನ್ನು ಹಿಡಿದು ಶೋಧಿಸಿದರೆ ಇನ್ನೂ ಅನೇಕ ಸದ್ಗುಣಗಳನ್ನು ರಾಷ್ಟ್ರಕೂಟರಲ್ಲಿ ಕಾಣಬಹುದು. ಮುನಿಯಂತೆ 'ಅಪರಾಗ' (೩-೨೨೯)ರಾಗಿ, 'ಅಪಾಕೃತ-ವೈಕೃತ-ಚಾಪಳ ವಿಕಾರದಿಂದ' (೩-೨೨೧) ಅವರಲ್ಲಿ ಕೆಲವರು ಮುಕ್ತಿ ಹೊಂದಿದರು. ಕೊಟ್ಟ ಮಾತನ್ನು ಪೂರೈಸಿ ಕೊಡುವಂಥವರೂ– 'ಅನುನೀತ ಗೃಹೀತ ವಾಕ್ಯಂ'

(೩-೨೨೧) ಉಪ್ಪೇಕ್ಷಿತ ಗುರಿಯನ್ನಿಟ್ಟುಕೊಂಡು ಗೆಳೆತನ ಮಾಡದಂತಹವರೂ—ಅಕಾರಣ ಧುರ್ಯಮಿತ್ರ–(೩-೨೨೯), ಗುಣ ಮತ್ತು ಅನುಗುಣಗಳನ್ನು ಗುರುತಿಸಬಲ್ಲಂತಹವರೂ (೧-೧೧೪; ೩-೨೨೭), ಉಚಿತರೂ (೨-೩೯) ವಿನಯೋಪಚಾರರೂ (೩-೨೨೨) ಮಿತವಚನರೂ (೨-೮), ವಿವೇಕ ಬೃಹಸ್ಪತಿಗಳೂ (೧-೯) ಅವರಾಗಿದ್ದರು. ಸಾರಸ್ವತ ಲೋಕದಲ್ಲಿ ಸ್ಥಾನ ಪಡೆದುಕೊಳ್ಳಲು ಅವರು ಶಬ್ದಾಲಂಕಾರ ಮತ್ತು ಅರ್ಥಾಲಂಕಾರಗಳನ್ನು ಅರಿತುಕೊಂಡು (೨-೨), ಪ್ರಾಸಭೇದಗಳನ್ನು ಕರಗತ ಮಾಡಿಕೊಂಡು (೨-೩೦), ವ್ಯಾಕರಣ, ಕಾವ್ಯ, ನಾಟಕ, ಲೋಕವಿದ್ಯೆ, ಕಲಾವಿದ್ಯೆ, ದರ್ಶನಶಾಸ್ತ್ರ ಮತ್ತು ಅಲಂಕಾರ ಶಾಸ್ತ್ರಗಳಲ್ಲಿ ಪಾಂಡಿತ್ಯವನ್ನು ಸಾಧಿಸಿಕೊಂಡವರಾಗಿದ್ದರು.

ಗಾಂಭೀರ್ಯ, ಚಾರಿತ್ರ್ಯ, ಜ್ಞಾನ, ಕ್ಷಾತ್ರಗುಣ, ಔದಾರ್ಯ, ಮೊದಲಾದವುಗಳನ್ನು ಗಳಿಸಿಕೊಳ್ಳುವುದು ಮಾತ್ರವಲ್ಲದೆ, ಸಮಾಜಜೀವಿಯೂ ಕುಟುಂಬಜೀವಿಯೂ ಆದ ಮಾನವ ಸಹಜ ಗುಣಗಳೂ ಅವರಲ್ಲಿದ್ದವು. ರಾಜಾಸಕ್ತನಾದಂತೆ ನಿಲಯೈಕವೃತ್ತಿ ಅಥವಾ ಸಂಸಾರದಲ್ಲಿ ಆಸಕ್ತರಾಗಿದ್ದರಲ್ಲದೆ, ಸಂಸಾರಿಗಳಾಗಿಯೂ 'ವ್ಯಸನವ್ಯಪೇತ'ರಾಗಿದ್ದರು (೩-೨೩೦). ಗಂಭೀರರಾದರೂ ವಿನಯಶೀಲರೂ ಅಸಹಸ ಸಾಹಸ ವಿನೋದಿಗಳೂ ಸರಸಾಶ್ರಯ ಮೂರ್ತಿಗಳೂ (೩-೨೨೨, ೨೨೯) ಆಗಿದ್ದು, ತಮ್ಮೆಲ್ಲ ಜವಾಬ್ದಾರಿಗಳನ್ನು ನಿಭಾಯಿಸಲು 'ಅಖಿಳ ಚೋದ್ಯವಿದ್ಯ' (೨-೨೨೭)ಗಳನ್ನು ಕರಗತ ಮಾಡಿಕೊಂಡ ರಾಷ್ಟ್ರಕೂಟ ಅರಸರ ನಿದರ್ಶನವನ್ನೂ ಮಾರ್ಗಕಾರನು ಕೊಟ್ಟಿರುವನು. ಭೋಗ್ಯಯೋಗ್ಯವಾದುದನ್ನು ಭೋಗಿಸುವಲ್ಲಿ ಆಸಕ್ತರಾಗಿರುವುದಲ್ಲದೆ ಅದನ್ನು ಭೋಗಿಸುವ ಕಲೆಯನ್ನೂ ಮೈಗೂಡಿಸಿಕೊಂಡ ಅವರು ಕೆಲವೊಮ್ಮೆ ಕ್ರೀಡಾಶೈಲದಲ್ಲಿ, ಕೆಲವೊಮ್ಮೆ ಅಂತಃಪುರದಲ್ಲಿ, ಮತ್ತು ಕೆಲವೊಮ್ಮೆ ಉದ್ಯಾನಗಳಲ್ಲಿ, ಪರಿವಾರ ವಾರವನಿತೆಯರೊಡನೆ ಕಂದುಕ ಮೊದಲಾದ ಕ್ರೀಡೆಯಲ್ಲಿ ತೊಡಗಿ, ವಿನೋದವಿಹಾರದಲ್ಲಿ ಪಾಲ್ಗೊಂಡು, ಹರ್ಷಗೊಳ್ಳುತ್ತಿದ್ದರು (೧-೯೯, ೧೨೧); ನೃಪಬಾಂಧವರೊಡನೆ, ಪ್ರಿಯ ಮಿತ್ರರೊಡನೆ, ಪರಿವಾರದೊಡನೆ ಬೆರೆತು, ಅವರನ್ನು ತಣಿಸಿ ತಾವೂ ತಣಿಯಬೇಕು, ಎಂಬವುಗಳನ್ನೆಲ್ಲ ಅವರು ಮೈಗೂಡಿಸಿಕೊಂಡಿದ್ದರೆಂಬುದನ್ನು ಮಾರ್ಗಕಾರನು ತಿಳಿಸಿಕೊಟ್ಟಿರುವನು.

ಆಸ್ಥಾನ :

ಕವಿರಾಜಮಾರ್ಗದಲ್ಲಿ 'ಆಸ್ಥಾನ', 'ಒಡ್ಡೋಲಗ', ಮತ್ತು 'ಮಂತ್ರಿಮಂಡಲ'ಗಳ ಪ್ರಸ್ತಾಪವಿಲ್ಲ; ಆದರೆ 'ಸಭಾಂಗಣ', 'ಸಭಾಸದ' ಮತ್ತು 'ಸಭೆ'ಗಳನ್ನು ಉಲ್ಲೇಖಿಸಲಾಗಿವೆ.[೧೬] ಇದರಂತೆ 'ಮಂತ್ರಿ'ಯನ್ನು ಹೊರತುಪಡಿಸಿ (೩-೧೪೪) ಆಸ್ಥಾನದ ಉಳಿದ ಸಭಾಸದರಾರನ್ನೂ ಇಲ್ಲಿ ಹೆಸರಿಸಿಲ್ಲ. ಆದರೆ ಶಾಸನಗಳಲ್ಲಿ ಈ ಬಗ್ಗೆ ಸಾಕಷ್ಟು ವಿವರಗಳು ದೊರೆಯುವುವು. ನೃಪತುಂಗನ ಸೂರತ್ ತಾಮ್ರಪಟ ಶಾಸನದಲ್ಲಿ ಬರುವ 'ಮಂತ್ರಿ ಪರಿಷತ್' ಮತ್ತು ಶಿರೂರ ಶಾಸನದಲ್ಲಿ ಉಲ್ಲೇಖಗೊಂಡಿರುವ ಸೇನಾಪತಿ, ದಂಡನಾಯಕ, ಸಾಮಂತ, ತಳವಾರ ಮೊದಲಾದವರನ್ನು ಇಲ್ಲಿ ಉದಾಹರಿಸಬಹುದು. ಸಂಜಾನ್ ಶಾಸನದಲ್ಲಿ ಆಸ್ಥಾನ ಪ್ರಮುಖರ ಮಹತ್ವದ ಬಗ್ಗೆ ಮಾರ್ಮಿಕವಾಗಿ ವ್ಯಾಖ್ಯಾನಿಸಲಾಗಿದೆ : 'ಅರಸನೇ ಆಸ್ಥಾನದ ಆತ್ಮ. ಮಂತ್ರಿ

ಅವರ ಮೆದುಳು, ರಾಜನೀತಿಯುಕ್ತವಾದ ಸಾಮಂತ ಮಂಡಲವೇ ಅವರ ಇಂದ್ರಿಯ. ನಿಯಮಬದ್ಧ (ಚರ್ಚೆಯ) ನುಡಿಗಳೇ ಅವರ ಸೇವಾವರ್ಗ. ಅರಸನು ತನ್ನ ಕಾಯ(ಆಸ್ಥಾನ)ವನ್ನು ಅಲಂಕರಿಸಿ, ಆತ್ಮ(ಹೃದಯ)ದ ಮೂಲಕ, ತನ್ನದಾದ 'ವಿಷಯ (ಪ್ರಾಪಂಚಿಕ ಸುಖ; 'ವಿಷಯ'ವೆಂಬ ರಾಜ್ಯಾಡಳಿತ ಘಟಕ)ವನ್ನು ನಿರಾತಂಕವಾಗಿ ಆಳುವನು.[೨೫]

ಅರಸನು ಆಸ್ಥಾನದ ಆತ್ಮನಾಗಿದ್ದನೆಂಬುವುದರಲ್ಲಿ ಅನುಮಾನವಿಲ್ಲ. ಅರಮನೆಯಲ್ಲೂ-ಆಸ್ಥಾನದಲ್ಲೂ ಅವನೇ ಕೇಂದ್ರಬಿಂದು. **'ಪರಿವಾರ-ವಾರ-ವನಿತಾ ಪರಿವೃತ'**ನಾಗಿ ಅರಸನು ಸಭಾಂಗಣದಲ್ಲಿ **'ಅಂಬರತಳದೊಳ್ ವರತಾರಾ ಪರಿಗತ ಶಶಿಧರನಂತೆ'** ಶೋಭಿಸುವನು; ಹೀಗೆ ಪರಿವೃತರಾದವರಲ್ಲಿ ನೃಪತನಯರು, ನೃಪಸನಾಭಿಗಳು, ನೃಪಜನರು, ಸುಮಿತ್ರರು, ಪರಿಜನರು ಸೇರಿರುತ್ತಿದ್ದರು (೨-೧೦; ೧-೨೧). ರಾಜನ ಇಂತಹ ಆಸ್ಥಾನ ಮಂಟಪದ ಮೇಲೆ **'ಉತ್ಸವದಿಂ ಕುಣಿವಂತನಿಲಾಹತ-ಕೇತನಾಳಿ'**(೧-೯೬)ಗಳು ಸೊಗಯಿಸುತ್ತಿದ್ದವು; ಸಭಾಂಗಣದ ಮುಂದೆ **'ಪರಚಕ್ರ ಭೂಪರಟ್ಟಿದ ಕರಿಗಳ್'** ಬಿಡುತ್ತಿದ್ದ **'ಮದದ ಪೊನಲಿಂ... ಮಂದಿರದೊಳಗೆಲ್ಲ ಕಾಲಮುಂ ಕೆಸಱಿಕ್ಕು'**ತ್ತಿತ್ತು (೩-೧೮೨). ಈ ಚಿತ್ರವನ್ನು ಶಾಸನಗಳಲ್ಲಿ ಇನ್ನೂ ವಿಸ್ತಾರಗೊಳಿಸಲಾಗಿದೆ. ಕಾಡುಮಿಕಗಳು ಹಿಂಡುಗಟ್ಟಿ ನುಗ್ಗುವಂತೆ ಶತ್ರುರಾಜರ ಗಜದಳಗಳು ಗುಂಪುಗುಂಪಾಗಿ ನೃಪತುಂಗನ ಆಸ್ಥಾನಕ್ಕೆ ಧಾವಿಸಿ ಬರುತ್ತಿದ್ದ ಚಿತ್ರವನ್ನು ಸಂಜಾನ್ ಶಾಸನ ಪರಿಚಯಿಸುವುದು (ಪ. ೪೪). ಪಲ್ಲವ ಅರಸನು ಒಪ್ಪಿಸಿದ ಗಜಗಳು ಸುರಿಸುತ್ತಿದ್ದ 'ಮಾತಂಗಾನ್ ಮದವಾರಿ ನಿಜ್ಝರಮುಖಃ'ದ ಚಿತ್ರವನ್ನು ನೃಪತುಂಗನ ತಂದೆಯಾದ ಮುಮ್ಮಡಿ ಗೋವಿಂದನ ರಥನಪುರ ತಾಮ್ರಪಟ ಶಾಸನವು ಪರಿಚಯಿಸುವುದು.[೨೬] ಹೀಗೆ 'ವಶಪಡಿಸಿಕೊಂಡ ಶತ್ರು ಗಜದಳದ ಮೇಲೆ ಸವಾರಿ ಮಾಡಿ, ತನ್ನ ಅಗ್ಗಳಿಕೆಯನ್ನು ಮೆರೆಯಲು ಸಭಾಂಗಣದಿಂದ ಹೊರಬರುತ್ತಿದ್ದ ಅರಸನ ಚಿತ್ರವನ್ನು ಮಾರ್ಗಕಾರ ಸೂಚಿಸಿರುವನು.[೨೭] ಹೊರಾಂಗಣದಲ್ಲಿ ಆಗ ವಾದ್ಯಗೋಷ್ಠಿಯು ಸತತವಾಗಿ ನಡೆಯುತ್ತಿತ್ತು ಮಾತ್ರವಲ್ಲ, ಡಕ್ಕಾ ಮೊದಲಾದ ಗಟ್ಟಿಮೇಳದವರು ಕುಟ್ಟಿ-ಬಡಿದು ಬಾರಿಸುತ್ತಿದ್ದ ವಾದ್ಯಗಳ ಉದ್ಘೋಷವು 'ಯುದ್ಧರಂಗದ ಮೊದಲ ಸಾಲಿನಲ್ಲಿ ನಿಂತು ಶತ್ರುಗಳನ್ನು ಇವನಂತೆ ಜಯಿಸಬಲ್ಲವನು, ವಿನೀತರಾದವರನ್ನು ರಕ್ಷಿಸಬಲ್ಲವನು, ಯಾಚಕರ ಬೇಡಿಕೆಗಳನ್ನು ಪೂರೈಸಬಲ್ಲವನು, ಸಂಪ್ರದಾಯದ ಘನತೆಯನ್ನು ರಕ್ಷಿಸಬಲ್ಲವನು, ಈ ಧರಣಿಯ ಮೇಲೆ (ನೃಪತುಂಗನಂಥವನು) ಮತ್ತೊಬ್ಬನಿಲ್ಲ', ಎಂದು ಆಕಾಶವೇ ಭೇದಿಸುವಂತೆ ಸಾರಿ ಹೇಳುವಂತಿತ್ತೆಂದು ಈ ಶಾಸನವು ತಿಳಿಸುವುದು (ಅದೇ ಪ. ೩೭).

ಆಸ್ಥಾನಿಕರಲ್ಲಿ ಅರಸನನ್ನು ಹರಸಲು ಬರುವವರು, ಅವನಲ್ಲಿ ಯಾಚಿಸಿ ಬರುವವರು, ಮತ್ತು ಅವನ ಅನುವು-ಅನುಗ್ರಹವನ್ನು ದೊರಕಿಸಿಕೊಳ್ಳಲು ಬರುವ(ಸಾಮಂತ/ಶತ್ರುರಾಜ)ವರು ಪ್ರಮುಖರಾಗಿದ್ದರು. ಹರಸುವವರಲ್ಲಿ ಪ್ರಮುಖರಾದವರು ಗೊರವರು ಮತ್ತು ಗುಣವೃದ್ಧರು; ಅರಸನನ್ನು, ಪ್ರಜೆಗಳನ್ನು, ಪರಿವಾರದವರನ್ನು, (ದೈವವು) ಕಾಪಾಡಬೇಕೆಂಬುದು ಅವರ ಅಭೀಪ್ಸೆ (೧-೧೩೨-೩). 'ಆಯುಂ ಶ್ರೀಯುಂ ವಿಜಯಮುಮಾಯತಿಯುಂ ನೃಪತಿ ನಿನಗೆ ನಿಜಸಂತತಿಯುಂ ನ್ಯಾಯದೆ ಪೆರ್ಚುವುದಕ್ಕೀ ತೋಯಧಿ-ಧರಣೀ-ಧರಾಧರ-ಕ್ಷಿತಿವರೆಗಂ'

(೩-೨೦೭), ಎಂದು ಸದಾ ಕಾಲವೂ ರಾಜ್ಯದ ಅಭ್ಯುದಯಕ್ಕೆ ಅವಶ್ಯವಾದ ಆಯುಸ್ಸು, ಸಂಪತ್ತು, ವಿಜಯ, ಸಂತತಿಯು ಅರಸನಿಗೆ ಲಭಿಸಲೆಂದು ಅವರು ಬೇಡುತ್ತಿದ್ದರು. ಇತರೆ ಆಸ್ಥಾನ ಕವಿಗಳೂ ವಂದಿಮಾಗಧರೂ ಅರಸರ ಕಲ್ಯಾಣಗುಣವನ್ನು **"ತಾರಾಪತಿವತ್ ಕೀರ್ತಿ-ವಿಹಾರಾ (ಹಾರ)ಪ್ರಭಯಾ ನಿಜತನು ಪೂರಾ ಪೂರಾಶ್ರಿತ ಹೃತ್ಕ್ಲೇಶ ವಿದೂರಾ ದೂರೀಕೃತ ಬಲವಿಸ್ತಾರಾ"** (೩-೨೩೬), ಎಂದು ಕೀರ್ತಿಸುತ್ತಿದ್ದರು. ಯಾಚಿಸಿ ಬರುವವ ರನ್ನೂ ಅವರು ಯಾಚಿಸುತ್ತಿದ್ದ ಬಗೆಯನ್ನೂ ಈಗಾಗಲೇ ಅರಸನ 'ಉದಾರ' ಗುಣವಡಿ ಕಂಡಿದ್ದು, ಅದನ್ನು ಇಲ್ಲಿ ಪುನಃ ಪ್ರಸ್ತಾಪಿಸುವ ಆವಶ್ಯಕತೆ ಇಲ್ಲ. ಅವರೆಲ್ಲರೂ ಅರಸನನ್ನು 'ಅರ್ಥಿಗಣಾರ್ಥಿತ ಕಲ್ಪವೃಕ್ಷನ್' ಎಂದೇ ಬಗೆದಿದ್ದರೆಂಬುದನ್ನು ಮಾತ್ರ ಇಲ್ಲಿ ಮತ್ತೊಮ್ಮೆ ನೆನೆಯಬಹುದು.

ಪಾವುಡ, ಒಸಗೆ ಮತ್ತು ಕಪ್ಪವನ್ನು ಒಪ್ಪಿಸಲು ಆಸ್ಥಾನಕ್ಕೆ ಬರುತ್ತಿದ್ದವರಲ್ಲಿ ಪುರಜನರು, ಪ್ರಜೆಗಳು, ಸಾಮಂತ ಮತ್ತು ಪದಾನತ ಪ್ರಭುಗಳು (೧-೯೯, ೧೨೫, ೧೧೮) ಸೇರಿರುತ್ತಿದ್ದರು. ಶತ್ರುರಾಜರು ಅರಸನ ಕಾಲ್ಗೆರಗಿ, ತಮ್ಮ ನಿಷ್ಠೆಯನ್ನು ಆಸ್ಥಾನದಲ್ಲಿ ಪ್ರದರ್ಶಿಸುವಾಗ, ಅವರ ಮುಕುಟದಿಂದ ಕಳಚಿ ಕೆಳಚೆಲ್ಲುತ್ತಿದ್ದ ಮುತ್ತು-ಮಣಿಗಳು **'ವೀರನಾರಾಯಣನ ಸಭಾಂಗಣವನ್ನೆಲ್ಲಾ ನಕ್ಷತ್ರಖಚಿತ ಬಾಂದಳದಂತೆ'** ಶೋಭಿಸುತ್ತಿದ್ದುದನ್ನು ಮಾರ್ಗಕಾರನು ಸೊಗಸಾಗಿ ವರ್ಣಿಸಿರುವನು (೩-೧೮೧). ಈ ಚಿತ್ರವು ನೃಪತುಂಗನ ಸಂಜಾನ್ ಶಾಸನದಲ್ಲಿಯೂ ಪ್ರತಿಧ್ವನಿಸಿದೆ. ಅಮೋಘವರ್ಷನು ತನ್ನ ರಾಜದಂಡವನ್ನು ಬೀಸಿದಾಗ, ಸಾಮಂತ ಮಾಂಡಲಿಗರ ಮುಕುಟಗಳಿಂದ – ಫಲಭರಿತ ವೃಕ್ಷವನ್ನು ದೊಣ್ಣೆಯಿಂದ ಬಡಿದಾಗ ಉದುರಿ ಬೀಳುವ ಹಣ್ಣುಗಳಂತೆ – ಮುತ್ತುಗಳು ಬಿದ್ದು, ಉರುಳುರುಳುತ್ತಾ ನೃಪತುಂಗನ ಒಡ್ಡೋಲಗವನ್ನು ಪ್ರವೇಶಿಸುತ್ತಿದ್ದುವೆಂದು ಅಲ್ಲಿ ವಿವರಿಸಲಾಗಿದೆ (ಅದೇ ಪ. ೪೪).

ಆಸ್ಥಾನ ಸದಸ್ಯರಲ್ಲಿ ಮಾರ್ಗಕಾರನು 'ಮಂತ್ರಿ' ಮತ್ತು 'ಮಹಿಷಿ'ಯರನ್ನು ಮಾತ್ರ ಹೆಸರಿಸುವುದರಿಂದ ನಮ್ಮ ಚರ್ಚೆಯನ್ನೂ ಅವರಿಗೆ ಮಾತ್ರ ಸೀಮಿತಗೊಳಿಸಬಹುದು. 'ಅಮಾತ್ಯ' ಮತ್ತು 'ಸಚಿವ' ಪದಕ್ಕೆ 'ಆಪ್ತ', 'ನಿಕಟವರ್ತಿ' ಎಂಬೆಲ್ಲ ಅರ್ಥಗಳಿದ್ದರೆ, ಅರಸನೊಡನೆ ಸದಾ ಸಂವಾದದಲ್ಲಿರುವವನನ್ನು 'ಮಂತ್ರಿ' ಎಂದು ಗುರುತಿಸಲಾಗುತ್ತಿತ್ತು. ಬಾಹ್ಯಶತ್ರು, ಅಂತಃಶತ್ರು, ಸೈನ್ಯದ ಬಲವು-ನಿಲುವು, ವಿಧಿ ಮತ್ತು ಕಾಲದ ಬೆಂಬಲ, ರಾಜನೀತಿ, ದೂತ ವೃತ್ತಾಂತ, ಪಯಣ ವರದಿ, ಯುಕ್ತಿ-ಲೋಕೋಕ್ತಿ, ಸಕಲಕಳಾಕಳಾಪ, ಲಾಭದಾಯಕ ಯುದ್ಧ, ಈ ಬಗೆಯ ಹತ್ತಾರು ವಿಷಯಗಳ ಬಗ್ಗೆ (೩-೨೧೪, ೨೧೯) ಎಲ್ಲರಿಗಿಂತಲೂ ಮೊದಲು ಅರಿತುಕೊಂಡು, ಅವುಗಳ ಬಗ್ಗೆ ಅರಸರೊಡನೆ ಮಂತ್ರಾಲೋಚನೆ ಮಾಡುವುದು ಮಂತ್ರಿಯ ಗುಣ. ಹೀಗಲ್ಲದೆ ಜನರಲ್ಲೆಲ್ಲ ಗುಲ್ಲಾದ ವಾರ್ತೆಯನ್ನು, ಕಾಲ ಮೀರಿದ ಬಳಿಕ, ಅರಸನೊಡನೆ ಚರ್ಚಿಸಲು ಬರುವವನು ಮಂತ್ರಿಯೆನಿಸಲಾರನು. ಏಕೆಂದರೆ ಈ ಬಗೆಯ ಮಂತ್ರವು **'ನಗಧ್ವನಿಪ್ರೊಲನುಕರಣ-ವಾರ್ತೆ'** ಅಥವಾ ಬೆಟ್ಟದ ಮಾರ್ದನಿ ಮಾತ್ರ ಆಗಬಲ್ಲದು (೩,೧೪೪), ಎಂಬುದು ಮಾರ್ಗಕಾರನ ಮತ. ಅಂದರೆ ತ್ವರಿತ ಗತಿಯಲ್ಲಿ ವರದಿ ಕೊಡುವುದು ಮಾತ್ರ ಮಂತ್ರಿಯ ಗುಣವಾಗಿರಲಿಲ್ಲ. ಅವನು ಹೇಳಬೇಕಾದುದನ್ನು ಅರಸನ ಮನಮುಟ್ಟುವಂತೆ ಹೇಳುವ ಕಲೆಯನ್ನೂ ಅವನು ಕರಗತ ಮಾಡಿಕೊಂಡಿರಬೇಕಾಗಿತ್ತು. ರೋಗ ಅರಿತು ಮದ್ದು

ಕೊಡುವ ವೈದ್ಯನಂತೆ. ಅರಸನ ಮನದಿಂಗಿತವನ್ನು ಅರಿತುಕೊಂಡು ಅವನಿಗೆ ಸಲಹೆ ಕೊಡುವುದೇ ಅವನ ಜಾಣ್ಮೆಯಾಗಿತ್ತು (೩-೧೫೨); 'ಪರಿಣಾಮ-ಪಥ್ಯಮುಂ ಸುಖ ಪರಿಕರಮುಂ ಮೆಚ್ಚದನ್ನರಾರೀ-ಮಾತಂ' (೩-೧೫೪), ಎಂಬ ಮಂತ್ರ ರಹಸ್ಯವನ್ನು ಅರಿತುಕೊಂಡು, ಹಿತಕರವೂ ಸುಖಕರವೂ ರಸಭರಿತವೂ ಆದ ನುಡಿಗಳಲ್ಲಿ, ಅವನು ಅರಸನಿಗೆ ಅರುಹಬೇಕಾದ ಕೌಶಲ್ಯವನ್ನು ಕರಗತ ಮಾಡಿಕೊಂಡಿರಬೇಕು. ಮಂತ್ರಿಯಿಂದ ಇಂತಹ 'ನಯವಿನಯ ನಾನಾಮಂತ್ರ', 'ನಯವಿಮುದಿತಯುಕ್ತಿ'ಗಳನ್ನು ಪಡೆಯುವುದೂ ಚರ್ಚಿಸುವುದೂ ಅರಸನ ಕರ್ತವ್ಯವೆನಿಸಿತ್ತು (೩-೨೧೪, ೨೧೯).

ಅತ್ಯಂತ ನಿಕಟವರ್ತಿಯೂ ಆಪ್ತನೂ ಆದ ಮಂತ್ರಿಯನ್ನು ತನ್ನ ಸ್ವಂತ ನೆರಳೆಂದೇ ಭಾವಿಸುತ್ತಿದ್ದುದಲ್ಲದೆ, ಅವನನ್ನು 'ಪ್ರತಿಹಸ್ತ', 'ದಕ್ಷಿಣಹಸ್ತ', 'ಇಷ್ಟಭೃತ್ಯ', 'ಪ್ರಸೂನಸಮಃ' ಎಂದು ಅಮೋಘವರ್ಷ, ಕರ್ಕ ಮತ್ತು ಮುಮ್ಮಡಿಕೃಷ್ಣ ಮೊದಲಾದವರು ಗೌರವಿಸುತ್ತಿದ್ದುದನ್ನು ಕೊಣ್ಣೂರು, ದೇವಗಿರಿ, ಹಲಹರವಿ, ಮುಂತಾದ ಶಾಸನಗಳು ಸ್ಪಷ್ಟಗೊಳಿಸಿರುವುವು.[೧೧] ಮುಮ್ಮಡಿ ಕೃಷ್ಣನ ಮಂತ್ರಿಯಾದ ಗಜಾಂಕುಶ ನಾರಾಯಣನು ಇಲ್ಲಿಯ ಮೊದಲೆರಡು ವಿಶೇಷಣಗಳಿಗೆ ಸತ್ಪಾತ್ರನೆನಿಸಿದ್ದನು. ರಾಷ್ಟ್ರಕೂಟ ರಾಜ್ಯದ ಮಂತ್ರಿಪದವಿಯನ್ನು ಅಲಂಕರಿಸುವವರಿಗೆ ಕುಲ-ಮತ-ಜಾತಿಯ ಹಿರಿಮೆಗಿಂತಲೂ ಸಾಮರ್ಥ್ಯ, ಅರ್ಹತೆ, ದಕ್ಷತೆ ಪ್ರಮುಖವಾಗಿದ್ದುವೆಂದು ಕಾಣುವುದು. ಅವರು ಬ್ರಾಹ್ಮಣರಾಗಿರಬಹುದು (ಗಜಾಂಕುಶ ನಾರಾಯಣ, ರೇವದಾಸ ದೀಕ್ಷಿತ, ವಿಶೋತ್ತರ ದೀಕ್ಷಿತ ಮೊದಲಾದವರಂತೆ), ಜೈನರಾಗಿರಬಹುದು (ಬಂಕೇಶ, ಲೋಕಾದಿತ್ಯ ಮೊದಲಾದವರಂತೆ) ಅಥವಾ ವಿದೇಶೀಯರೂ ಮೊಹಮ್ಮದೀಯರೂ (ತಜಿಕ ಮದುಮತಿಯಂತೆ) ಆಗಿರಬಹುದಾಗಿತ್ತು.

ವಿಪುಲ-ಕಟಕನಾದ ಅರಸನು 'ದ್ವಿಪ-ಹರಿ-ಮಹಿಷೀ ನಿಷೇವನು'(೩-೧೧೧)ಎನ್ನುವಲ್ಲಿ ಮಾರ್ಗಕಾರನು ಅರಸಿಗೂ ಅಂತಃಪುರ ಮತ್ತು ಆಸ್ಥಾನದಲ್ಲಿ ಒಂದು ಸ್ಥಾನವನ್ನು ದೊರಕಿಸಿಕೊಟ್ಟಿರುವನು. ಅಂತಃಪುರದಲ್ಲಿ ಅರಸನಿಗೆ ಸುಖ-ಸೌಭಾಗ್ಯವನ್ನು ದೊರಕಿಸಿಕೊಡುವಲ್ಲಿ ಅವಳ ಪಾತ್ರ ಬಹು ಮಹತ್ವದ್ದಾಗಿತ್ತು; ಅವಳಿಲ್ಲದ ಅರಸನ ಕ್ರೀಡೆಗೆ 'ಅಟ್ಟ' ಇರುತ್ತಿರಲಿಲ್ಲ (೧-೧೨೧). ಅವಳನ್ನೊಳಗೊಂಡ ಪರಿವಾರ-ವಾರವನಿತೆಯರಿಂದ ಪರಿವೃತನಾದಾಗಲೇ ಅರಸನು "ಅಂಬರ ತಳದೊಳ್ ವರತಾರಾಗತ ಶಶಿಧರನಂತೊಪ್ಪಿ" ಶೋಭಿಸುತ್ತಿದ್ದನು (೨-೧೦, ೧೨). ಅಂತಃಪುರವು ನೂರಾರು ಗಣಿಕೆಯರಿಂದ, ವಿಲಾಸಿನಿಯರಿಂದ ಕೂಡಿರುತ್ತಿತ್ತು; ಆದರೆ ಅರಸಿಯ ಸ್ಥಾನ-ಮಾನ ಅವರಾರಿಗೂ ದೊರೆಯಲು ಸಾಧ್ಯವಿರಲಿಲ್ಲ. ಅವರಲ್ಲಿ ಕೆಲವರು ಅರಸನ ಹೆಚ್ಚಿನ ಅನುರಾಗಕ್ಕೊಳಗಾದರೂ ಆ ಸಂದರ್ಭವನ್ನು ಉಪಯೋಗಿಸಿಕೊಂಡು ಅರಸಿಯಂತೆ ಅವರು ಸರಸವಾಡತೊಡಗಿದರೆ ಅದೊಂದು ಉಪಾಯವಾಗದೇ ಅಪಾಯವೇ, ಎಂಬುದು ಅರಮನೆಯ ಸಿದ್ಧಾಂತ. ಹದಿಹರೆಯ ವಿಲಾಸಿನಿಯೊಬ್ಬಳು ಇಂತಹ ಸಾಹಸಕ್ಕಿಳಿದಾಗ, ಅನುಭವಸ್ಥೆಯಾದ ಅವಳ ತಾಯಿ ಅವಳನ್ನೆಚ್ಚರಿಸಿ 'ಅರಸರೊಳಿಲೆ ನೀಂ ಸರಸಮುಸರಸಿಯುವೋಲಾಡುತಿರ್ಪ ನಿನಗಿದು ಗುಣಮೇ... ಸರಸಮನಾದರಸರಲ್ಲದವರೊಳ್ ಮಗಳೇ' (೩-೨೩೩) ಎಂದು ಎಚ್ಚರಿಕೆ ಕೊಡುವಳು. ವಿಲಾಸಿನಿಯಾದವಳು ಅರಸನನ್ನು ಎಷ್ಟು

ಒಲಿಸಿಕೊಂಡರೂ ಅವಳು ಅರಸಿಯನ್ನು ಸರಿಗಟ್ಟಲಾರಳು; ಹಾಗೆ ಪ್ರಯತ್ನಿಸುವುದು ಅವಳಿಗೆ ಸಲ್ಲದ ಗುಣ; ಅಲ್ಲದೆ ಅದೊಂದು ನಿರರ್ಥಕ ಪ್ರಯತ್ನ ಮಾತ್ರ. ಕಾರಣ, ಜಾಣಳಾದವಳು ಅರಸನಲ್ಲದವರೊಡನೆ ಸರಸವಾಡಿ ಸುಖಪಡಬೇಕೆಂಬುದು ಈ ಜರದ್ವಧುವಿನ ಹಿತನುಡಿ.

ಅರಸಿಯ ಕಾರ್ಯಕ್ಷೇತ್ರವನ್ನು ಅಂತಃಪುರ, ಅರಮನೆಯುದ್ಯಾನ, ವನಾಂತರ ಪ್ರದೇಶ, ಶಯನಗೃಹ ಮತ್ತು ಕ್ರೀಡಾಕೂಟಗಳಿಗೆ ಮಾರ್ಗಕಾರನು ಸೀಮಿತಗೊಳಿಸಿದ್ದು ಅವಳನ್ನು ಆಸ್ಥಾನಕ್ಕಾಗಲೀ ಆಡಳಿತ ಕ್ಷೇತ್ರಕ್ಕಾಗಲೀ ಕರೆತಂದಿಲ್ಲ. ಆದರೆ ರಾಷ್ಟ್ರಕೂಟರ ಅರಸಿಯರ ಕಾರ್ಯಕ್ಷೇತ್ರವು ತುಂಬಾ ವಿಸ್ತಾರವಾಗಿತ್ತೆಂಬುದನ್ನು ಶಾಸನಗಳು ಸ್ಪಷ್ಟಪಡಿಸುವುವು. ಇದಕ್ಕೆ ಒಂದೆರಡು ನಿದರ್ಶನಗಳನ್ನು ಇಲ್ಲಿ ಕೊಡಬಹುದು. ಕ್ರಿ.ಶ. ೭೮೬ ರಲ್ಲಿ ಧ್ರುವನ ಮಹಿಷಿ ಶೀಲಾಮಹಾದೇವಿಯು ಸ್ವಮುದ್ರಿಕೆಯಲ್ಲಿ ಒಂದು ಶಾಸನವನ್ನು ಹೊರಡಿಸಿ, 'ಪರಮೇಶ್ವರೀ', 'ಪರಮಭಟ್ಟಾರಕೀ' ಎಂದು ತನ್ನನ್ನು ತಾನು ಕರೆದುಕೊಂಡು, ನೇರವಾಗಿ 'ವಿಷಯಪತಿ', 'ರಾಷ್ಟ್ರಪತಿ', 'ಗ್ರಾಮಕೂಟ', 'ನಿರುಕ್ತ' ಮತ್ತು 'ಮಹತ್ತರು'ಗಳಿಗೆ ನಿರ್ದೇಶನವಿತ್ತುದನ್ನು ಜೇಡುವೈ ತಾಮ್ರಪಟ ಶಾಸನದಿಂದ, ಮತ್ತು ಕ್ರಿ.ಶ. ೯೧೫ ರಲ್ಲಿ ಹಿರಣ್ಯಗರ್ಭ ಮೊದಲಾದ ದಾನ ಮಹೋತ್ಸವದಲ್ಲಿ ತೊಡಗಿದ ನಾಲ್ವಡಿ ಇಂದ್ರನು ತನ್ನ ಮಹಿಷಿಯಾದ ಭೋಗಿಯವ್ವೆಗೆ ಹನ್ನೆರಡು ಸಾಮಂತರನ್ನೊಡಗೂಡಿ 'ಲಲಾಟಪಟ್ಟ' ಕಟ್ಟಿ ಗೌರವಿಸಿದ್ದನ್ನು ಅಂದೂರು ತಾಮ್ರಪಟ ಶಾಸನದಿಂದ ತಿಳಿದುಕೊಳ್ಳಬಹುದು. ಮಹೋತ್ಸವಗಳಲ್ಲಿ ನೃಪತಿ, ನೃಪಾಂಗನೆಯರು ಮತ್ತು ಪರಿಜನರು ಪಾಲ್ಗೊಳ್ಳುತ್ತಿದ್ದುದನ್ನು ಮಾರ್ಗಕಾರನು ಗುರುತಿಸಿರುವುದನ್ನೂ (೧-೧೨೧) ಇಲ್ಲಿ ನೆನೆಯಬಹುದು.

ಮಂತ್ರಿ, ಮಹಿಷಿಯರಲ್ಲದೇ ಇನ್ನೂ ಅನೇಕರು ಆಸ್ಥಾನದ ಸಭಾಸದರಾಗಿದ್ದುದನ್ನು ಈಗಾಗಲೇ ಗಮನಿಸಿರುವೆವು. ಇವರೆಲ್ಲರೂ **'ಸಕಳ-ಲೌಕಿಕ-ಸಾಮಾಯಿಕೋರು-ವೈದಿಕ-ವಿಶೇಷ-ವಿವೇಕ ಪರಾಯಣ'ರೂ,** ಕಳಾಕಳ ಸಾಹಿತ್ಯ ವಿದ್ಯೆ ಬಲ್ಲವರೂ, ಪ್ರತಿಭಾ-ವಿಭವರೂ, ಮಹಾಚತುರರೂ, ಜಾಣರೂ, **'ಭಾಷಾ-ವಿಶೇಷ-ವಿಷಯಾತಿಶಯಾಮಳ ಕೌಶಳರೂ'** ಆಗಿದ್ದರು (೩-೨೧೯-೨೨೧). ಗುಣದಲ್ಲಿ ಅವರು ದೋಷರಹಿತರು. ವೃತ್ತಿಯಲ್ಲಿ ಸೇವಾತತ್ಪರರು. ಪ್ರವೃತ್ತಿಯಿಂದ ಮತ್ಸರಮುಕ್ತರು. ಪುರುಷಾರ್ಥಗಳಲ್ಲಿ ಮೋಕ್ಷಾರ್ಥಿಗಳು (೩-೨೨೨-೨೨೪). ಸಭೆಯಲ್ಲಿ ಅವರು ಚರ್ಚಿಸುತ್ತಿದ್ದ ಪ್ರಧಾನ ವಿಷಯಗಳು : ೧. ನಯವಿನಯ ನಾನಾಮಂತ್ರ (ರಾಜನೀತಿಯನ್ನೊಳಗೊಂಡ ಮಂತ್ರಾಲೋಚನೆ); ೨. ದೂತ ಪ್ರಯಾಣ (ದೂರ ದೂರದಿಂದ ಗೂಢಚಾರಿಗಳು ತರುತ್ತಿದ್ದ ರಹಸ್ಯ ವರದಿಯ ವಿಮರ್ಶೆ); ೩. (ರಾಜ್ಯ, ಸೈನ್ಯ, ಶತ್ರು ಮೊದಲಾದವರಿಗೆ ಸಂಬಂಧಿಸಿದ) ಪ್ರಯಾಣ ವಿವರ; ೪. ಅಕ್ಷಯ-ಸಮಯ-ವಿಳಸೋಲ್ಲಾಸಿ-ಸಂಗ್ರಾಮ (ಭಂಡಾರವನ್ನು ತುಂಬುವ, ಲಾಭದಾಯಕ, ಯುದ್ಧಗಳ ಯೋಜನೆ) ಮೊದಲಾದವು (೩-೧೭೪). ಈ ಚರ್ಚೆಯು ಅವೇಶಕ್ಕೊಳಗಾದವರಿಂದ, ಉದ್ಧಟವಾದಿಗಳಿಂದ, ಅಸಂಸ್ಕೃತ ನುಡಿಗಾರರಿಂದ, ನಡೆಯುತ್ತಿರಲಿಲ್ಲ; ಅದರ ವೈಖರಿಯನ್ನೂ ಶಬ್ದಭಂಡಾರವನ್ನೂ ವಾಗಾಧಿಪ ಅಥವಾ ನೃಪತುಂಗನ "ಪಾವನೀಯ ಗಭೀರ... ವಚನ'ವು (೨-೧, ೩೦) ನಿರ್ಧರಿಸಿ ನಿರ್ದೇಶಿಸುತ್ತೆನ್ನುವುದರಲ್ಲಿ ಅನುಮಾನವಿಲ್ಲ.

ರಣನೀತಿ ಮತ್ತು ವೀರ ಸಿದ್ಧಾಂತ :

ರಾಷ್ಟ್ರಕೂಟ ಅರಸರ – ಅವರಲ್ಲೂ ಧ್ರುವ, ಮುಮ್ಮಡಿ ಗೋವಿಂದ, ಇಮ್ಮಡಿ ಇಂದ್ರ ಮತ್ತು ಮುಮ್ಮಡಿ ಕೃಷ್ಣರ – ದಿಗ್ವಿಜಯಗಳ ಪರಮೋದ್ದೇಶವು ಶತ್ರುರಾಜರನ್ನು ಸದೆಬಡಿದು, ಅವರ ಸಂಪತ್ತನ್ನು ಸೂರೆಗೊಂಡು, ಆ ಮೂಲಕ ತಮ್ಮ ಅಗ್ಗಳಿಕೆಯನ್ನು ಮೆರೆಯುವುದಾಗಿತ್ತು. 'ನಿಜ ಭುಜಬಲ ಸಮಾನೀತ ಪರನೃಪ ಲಕ್ಷ್ಮೀಕರ ಧೃತ'ನೆಂದು ಮುಮ್ಮಡಿ ಗೋವಿಂದನು ಖ್ಯಾತಿ ಹೊಂದಿದ್ದನು. ವೆಂಗಿಯ ಅಧಿಪತಿಯನ್ನು ಸೋಲಿಸಿ, ಅವನ ಧನ, ನೆಲ ಮತ್ತು ಬಲವನ್ನು ವಶಪಡಿಸಿಕೊಂಡ ಇಮ್ಮಡಿ ಗೋವಿಂದನನ್ನು ಮತ್ತು ವಿಂಧ್ಯಪರ್ವತದ ಶ್ರೀ ಭುವನಾಧಿಪತಿಯನ್ನು ಶರಣಾಗತಗೊಳಿಸಿ, ಅವನಿಂದ ಅಪಾರ ಕಪ್ಪವನ್ನು ಕಿತ್ತುಕೊಂಡ ಮುಮ್ಮಡಿ ಗೋವಿಂದನನ್ನು, ಇಲ್ಲಿ ನೆನೆಯಬಹುದು.[೭೭] ಪರಮಾರ, ಕನೋಜ ಮತ್ತು ಗೌಡ ರಾಜರ ವಿರುದ್ಧ ಸತತವಾಗಿ ಕಾದಾಡಿದ ರಾಷ್ಟ್ರಕೂಟ ಅರಸರೆಲ್ಲರ ಗುರಿ ಇದಕ್ಕಿಂತ ಭಿನ್ನವಾಗಿರಲಿಲ್ಲ.

ವಿಜಯದ ಪಾರಿತೋಷಕವಾಗಿ ಶತ್ರುರಾಜರಿಂದ ವಶಪಡಿಸಿಕೊಳ್ಳುತ್ತಿದ್ದವುಗಳಲ್ಲಿ ನೆಲ-ಬಲದೊಡನೆ ಅಂತಃಪುರದ ಗಣಿಕಾ ಸಮುದಾಯವೂ ಸೇರಿರುತ್ತಿತ್ತು. ಹೀಗೆ ವಶಪಡಿಸಿಕೊಂಡ ತಮ್ಮ ಗಣಿಕೆಯರನ್ನು ಮರಳಿ ಪಡೆಯಲು ನೃಪತುಂಗನ ಆಸ್ಥಾನಕ್ಕೆ ಬಂದು, ಅದು ಕೈಗೂಡದಿದ್ದಾಗ ನಿರಾಶೆ ಹೊಂದಿದ ಅರಸರ ಸಂಕಟವನ್ನು ಸಂಜಾನ್ ತಾಮ್ರಪಟಶಾಸನದಿಂದ ನಾವು ಪರಿಚಯ ಮಾಡಿಕೊಳ್ಳಬಹುದು.

ಪರಾಜಿತ ಅರಸರ ಆಸ್ಥಾನವನ್ನು ವಿಜಯೀದಳವು ಪ್ರವೇಶಿಸುವಾಗ, ಗಣಿಕೆಯರಿಗೆ ಅಗ್ರಸ್ಥಾನವಿರುತ್ತಿತ್ತೆಂದು ಕಾಣುವುದು. ಕಟಕ, ಕಟಿಸೂತ್ರ, ಕುಂಡಲ, ಕೇಯೂರ, ಹಾರ ಮೊದಲಾದ ಆಭರಣಗಳಿಂದ ಅಲಂಕೃತಗೊಂಡ ಸಾವಿರಾರು ಗಣಿಕೆಯರ ಮೆರವಣಿಗೆ, ಮತ್ತು ಅವರನ್ನು ಹಿಂಬಾಲಿಸಿ ಬಂದ ಚಾಮರ, ಶ್ವೇತಾತಪತ್ರತ್ರಯ, ಕಹಳೆ, ಶಂಖ, ಪಾಳಿಧ್ವಜ ಕೇತುಪತಾಕೆಯವರ ಚಿತ್ರವು ಕ್ರಿ.ಶ. ೮೬೬ ರ ನವಲಗುಂದ ಶಾಸನದಲ್ಲಿ ಸ್ಪಷ್ಟವಾಗಿ ಮೂಡಿ ನಿಂತಿದೆ. ಈ ದಳ ದಟ್ಟಣೆಯಿಂದಾಗಿ ಆಸ್ಥಾನವೇ ಅಂಧಕಾರದಲ್ಲಿ ಮುಳುಗಿತ್ತು ಎಂಬುದನ್ನೂ ಈ ಶಾಸನ ತಿಳಿಸುವುದು.[೭೮]

'ಗಣಿಕೆ', 'ವರನಾರಿ', 'ವಾರವನಿತಾ', 'ವಾರವಾರನಾರೀ', 'ವಿಲಾಸಿನೀ'– ಮುಂತಾದವರನ್ನು ಮಾರ್ಗಕಾರನು ಒಂದೋ-ಎರಡೋ ಬಾರಿ ಉಲ್ಲೇಖಿಸುವನು,[೭೯] ಆದರೆ, ನೃಪತುಂಗನ ಕಾಲಕ್ಕಾಗಲೇ ಶಾಸನ ಪರಿಭಾಷೆಯಲ್ಲಿ ಬೆರೆತಿದ್ದ 'ಪೋಟಿ', 'ಪೊಡ್ಡಿ', 'ಬೊಡ್ಡಿ', 'ಸೂಳೆ', ಮುಂತಾದವರನ್ನು ಅವನು ಪ್ರಸ್ತಾಪಿಸುವುದಿಲ್ಲ. 'ಬಸವಿ' ಪದವು ಅನಂತರ ಕಾಲದಲ್ಲಿ ಬಳಕೆಗೆ ಬಂದರೂ 'ದೇವದಾಸಿ' ಪದವು ಮಧ್ಯಕಾಲೀನ ಬಹುತೇಕ ಕನ್ನಡ ಶಾಸನಗಳಿಂದ ಹೊರಗೆ ಉಳಿದಿದ್ದುದು ಕುತೂಹಲಕರ. ರಾಷ್ಟ್ರಕೂಟ ಕಾಲದ ಗಣಿಕೆಯರೆಲ್ಲ ಅಂತಃಪುರ ಸೇವಾವರ್ಗಕ್ಕೆ ಸೇರಿದವರಾಗಿದ್ದರೇ ಹೊರತು ದೇವಾಲಯ ಸೇವಾವರ್ಗಕ್ಕೆ ಸೇರಿದವರಾಗಿರಲಿಲ್ಲ.

'ಪರಪಕ್ಷಮುಳ್ಳಿನಂ ತನಗಿರಿವುಬ್ಬಸಮ್' (ಪ್ರತಿಪಕ್ಷವಿರುವ ವರೆಗೂ ತನಗೆ ಕ್ಲೇಶ ತಪ್ಪಿದ್ದಿಲ್ಲ) ಎಂಬುದನ್ನು ಮಾನದಂದ ರಾಷ್ಟ್ರಕೂಟ ಅರಸರು 'ಅದಜಿನ್

ಅೞಿಪುದದನೇಗೆಯ್ದುಂ' (೩-೧೫೧) ಅಥವಾ ಹೇಗಾದರೂ ಮಾಡಿ ಅದನ್ನು ಮುಗಿಸಬೇಕು. ಎಂಬ ತೀರ್ಮಾನಕ್ಕೆ ಬರುವುದು ಅನಿವಾರ್ಯವಾಗಿತ್ತು.

ಅರಿನೃಪರನ್ನು ಜಯಿಸಿ 'ಪರಾಕ್ರಮದೆ ಶೌರ್ಯಮಂ ಪ್ರಕಟಿಸುವುದು' (೧-೬೨) ಅಂದಿನ ಧರ್ಮ; ಅಂಥವರು ಮಾತ್ರ 'ನತಸಕಳಾರಾತಿ ಜನಪತಿನ'ರ್, 'ವಿಸಟಿತ ಹಸ್ತ ರಿಪುಕುಳ'ರ್, 'ವಿರೋಧಿ ತರುದಹನ'ರ್ (೨-೪೪, ೭೬; ೩-೨೨), ಎನಿಸಲು ಅರ್ಹರಾಗುತ್ತಿದ್ದರು. ಅರಿನೃಪರಿಗಿಂತಲೂ ಅಂತಃಶತ್ರುಗಳು ರಾಜ್ಯಕ್ಕೂ, ರಾಜನಿಗೂ ಹೆಚ್ಚು ಅಪಾಯಕಾರಿ ಎಂಬುದು ಇಂದಿನಂತೆ ಅಂದೂ ನಿಜವೆನಿಸಿತ್ತು. 'ಕಿಱಿದೆಂದೇಳಿಸಿ' (ಅಲ್ಪವೆಂದು ಬಗೆದು) ಅವರನ್ನು ನಾಶ ಮಾಡದಿದ್ದರೆ – ಪೞಿಪಡೆ ಕಿಡಿಸಿದೊಡೆ– 'ಅಂಬುದ ನಿವಹವು ದಿವಸಕರ'ನನ್ನು ಮುತ್ತುವಂತೆ ಮುತ್ತಿ, ಶಶಿಮಂಡಲವನ್ನು ರಾಹು ನುಂಗುವಂತೆ ಅವರು ನುಂಗಿಬಿಡುವರು (೧-೧೪೯; ೩-೧೪೮) ಅಲ್ಲದೆ, ಸಾಗರದಾಳದಲ್ಲಿ ಅಡಗಿ ಕುಳಿತ; ಬಡಬಾಗ್ನಿಯು ಅದರ ಉತ್ಕರ್ಷಕ್ಕೆ ಅಡ್ಡಿ ತರುವಂತೆ ಅರಸನ ಏಳ್ಗೆಗೆ ಅವರು ಅಡ್ಡಿ ಒಡ್ಡುವುದು. (೩-೧೫೦). ಪುಡಿಮಣ್ಣು ಹರಡಿ ಸುತ್ತಲನ್ನೆಲ್ಲ ಹೊಲಸೆಬ್ಬಿಸುವಂತೆ, ಅಂತಃಶತ್ರುವೆಂಬ ಮಲಿನ ಕಣಗಳು ಅರಸನ ಮಂಡಲವನ್ನೇ ಕಲುಷಿತಗೊಳಿಸುವುವು (೩-೧೫೧); ಕಾರಣ, ಜಾಗರೂಕನಾದ ಅರಸನು (ನೀರನ್ನಾಗಲೀ ರಕ್ತವನ್ನಾಗಲೀ ಸುರಿಸಿ) ಆ ಧೂಳನ್ನು ಅಡಗಿಸಬೇಕಾಗುವುದು.

ನೀರನ್ನೆರೆದು ಧೂಳನ್ನಡಗಿಸುವುದೆಂದರೆ ಅಂತಃಶತ್ರುವನ್ನು ಸಂತೈಸಿ ಶಮನಗೊಳಿಸುವುದೆಂದೂ ಅರ್ಥ. ಅಂದರೆ, ಅರಸನಾದವನಿಗೆ ಛಲವನ್ನು ಸಾಧಿಸುವುದು ಎಷ್ಟು ಮುಖ್ಯವೋ ಅಷ್ಟೇ ಮುಖ್ಯವಾದುದು ಒಲವನ್ನು ಸಂಪಾದಿಸಿಕೊಳ್ಳುವುದಾಗಿತ್ತು; ಏಕೆಂದರೆ 'ಚಲದೆಡೆಗೆ ಪಿರಿದು ರಜಮುಂ ನೆಲಸುಂ' (ಚಲದಿಂದಲೇ ಸಾಧಿಸ ಹೊರಟರೆ ಒಂದೊಂದು ಕಣವೂ ದೈತ್ಯಾಕಾರ ತಾಳುವುದು) (೩-೧೭೫). ಉಗುರಿನಿಂದ ಚಿವುಟಿ ಹಾಕುವುದಕ್ಕೆ ಕೊಡಲಿಯನ್ನು ಬಳಸುವುದು ಜಾಣತನವಲ್ಲ; ಅಲ್ಲದೆ, ದೈವ ಮತ್ತು ಕಾಲದ ಬೆಂಬಲ ಪಡೆಯದೆ, ಶೌರ್ಯದಿಂದಲೇ ಎಲ್ಲವನ್ನೂ ಸಾಧಿಸುವೆನೆಂಬುದೂ ಮುತ್ಸದ್ದಿಯಾದವನಿಗೆ ಸಲ್ಲದ ತಂತ್ರ. 'ಪ್ರತಿಕೂಲಮಾಗಿ ನಿಲೆ ಮತಸಯುಸಮನುಕೂಲಮಾಗಿ ನಿಲೆಯುಂ ಕಾರ್ಯಸ್ಥಿತಿಯುಂ ಸಾಧಿಸಲಾಗದು'; ಏಕೆಂದರೆ ಕಾಲ ಕೂಡಿಬಾರದೆ ಪ್ರಖರನಾದ ಸೂರ್ಯನೂ ಉದಯಿಸಲಾರನಲ್ಲವೇ? (೩-೧೪೯; ೧೪೭). ಇದನ್ನರಿತವನು ದೈವ ಮತ್ತು ಕಾಲದ ಒಲವು ದೊರಕುವ ವರೆಗೂ ಶತ್ರುಗಳೊಡನೆ ಸಂಧಾನದ ಮಾರ್ಗವನ್ನು ಅನುಸರಿಸಿ, ಸಂಯಮದ ರಾಜಕೀಯ ಜಾಣ್ಮೆಯನ್ನು ತೋರಬೇಕು. ಇಂತಹ ಮುತ್ಸದ್ದಿಯನ್ನು 'ಪೂರಾಶ್ರಿತ ಹೃತ್ಕ್ಲೇಶ ವಿದೂರಾ' (೩-೨೩೬)ನೆಂದು ಮಾರ್ಗಕಾರನು ಕರೆದರೆ, 'ಪದೋಪನತ-ಪ್ರಸಾದತನವಹ-ಪಾಕ್ರೋ ವಿಭೂತಿಪರಂ' (ಪ್ರ. ೪೪) ಎಂದು ಸಂಜಾನ್ ಶಾಸನ ಕವಿಯು ಕರೆದನು. ಸಾಮಂತ ಮಂಡಲವನ್ನು ಸಂತೈಸಿ, ಸ್ನೇಹ ಸಂಪಾದಿಸಿಕೊಂಡವನಲ್ಲದೆ ಮತ್ತಿನ್ನಾವನು 'ಅನುರಕ್ತಮಂಡಲ' (೩-೧೧೦)ನೆಂಬುದಕ್ಕೆ ಅರ್ಹರಾಗಬಲ್ಲನು?[೨೫]

ದೈವ ಮತ್ತು ಕಾಲದ ಅನುಕೂಲವಿದ್ದಾಗ ನಿಷ್ಠುರರಾಗಿ ಶತ್ರುಸಂಪತ್ತನ್ನು ದೋಚುತ್ತಿದ್ದ ರಾಷ್ಟ್ರಕೂಟ ಅರಸರು, ತಮ್ಮ ಪ್ರಜೆಗಳ ಪ್ರೀತ್ಯಾದರವನ್ನು ಸಂಪಾದಿಸಿಕೊಳ್ಳಲು ಲಘು ಕರವನ್ನು

ಹೇರುತ್ತಿದ್ದರೆಂಬ ಮಾರ್ಗಕಾರನ ಮಾತು ತುಂಬಾ ಗಮನಾರ್ಹವಾದದ್ದು. 'ಮೃದುತರ-ಕರಂಗಳಿಂದ್-ಅತಿಮುದಮಂ ಲೋಕಕ್ಕೆ ಪಡೆಗುಮ್ ಇಂತೀರಾಜಂ' (೩-೧೧೦) ಎಂಬ ಅವರ ಮಾತನ್ನು ಸಮಕಾಲೀನ ಶಾಸನಗಳೂ ಪ್ರತಿಧ್ವನಿಸುವುವು. ಉಗ್ರ ಕಠಿಣ ಸೂರ್ಯನಂತೆ ಶತ್ರು ಸಂಪತ್ತನ್ನೆಲ್ಲ ಸೂರೆಗೊಳ್ಳುತ್ತಿದ್ದ ಘೋರನು 'ಅಚಂಡ ಕರತಾ ಪ್ರಹಾದಿತ ಕ್ಷಮಾತಲಃ' ನೆನಿಸಿದ್ದನ್ನು ರಧನ್‌ಪುರ ಶಾಸನದಿಂದ ನಿದರ್ಶಿಸಬಹುದು (ಪ. ೪).

ಮಾರ್ಗಕಾರನು ಸುಭಟರನ್ನು ಒಂದೆರಡು ಬಾರಿ (೧-೧೨೩; ೨-೨೮) ಮಾತ್ರ ಉಲ್ಲೇಖಿಸುವನು; ಆದರೆ, ಮಧ್ಯಕಾಲೀನ ವೀರಸಿದ್ಧಾಂತಕ್ಕೆ ಬದ್ಧರಾದ ವೇಳೆವಾಳಿ, ಜೋಳವಾಳಿ, ಲೆಂಕವಾಳಿ, ತುಳಿಲಾಳು, ಸತೀ, ಗರುಡ ಮೊದಲಾದವರ ಬಗ್ಗೆ ಅವನು ಸಂಪೂರ್ಣ ಮೌನ ತಾಳಿರುವನು. ಈ ಕಾಲದ ಉಚ್ಛ್ರಾಯ ಹಂತದಲ್ಲಿ– ಅಂದರೆ, ಕ್ರಿ.ಶ. ೧೦೦೦-೧೨೦೦; ಪಂಪ-ಬಂಧುವರ್ಮರ ಕಾಲ– ವೀರಸಿದ್ಧಾಂತದ ಚರ್ಚೆಯು ಸಾಕಷ್ಟು ಮಹತ್ವವನ್ನು ಪಡೆದುಕೊಂಡಿತ್ತೆನ್ನುವುದನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದು.[೬] ಕನ್ನಡ ಕವಿಗಳ ಈ ಚರ್ಚೆಯ ಆರಂಭಿಕ ಸೆಳಕನ್ನು ನಾವು ಮೊದಲು ಸ್ಪಷ್ಟವಾಗಿ ಕಾಣುವುದು ಕವಿರಾಜಮಾರ್ಗದಲ್ಲಿ. ಕ್ಷಾತ್ರತೇಜಸ್ವಿಯೂ ಆಯುಧಪಾಣಿಯೂ ಆದ ಕಲಿಯನ್ನು ಅತ್ಯಂತ ಆದರದಿಂದ ಕಾಣುವುದು ಅಂದಿನ ಯುಗಧರ್ಮವಾಗಿತ್ತು. ಒಂದು ಪ್ರಶ್ನೆಯನ್ನೆತ್ತಿ ಅದನ್ನು ಉತ್ತರಿಸುತ್ತಾ ಮಾರ್ಗಕಾರನು ವೀರಸಿದ್ಧಾಂತದ ಚರ್ಚೆಯನ್ನು ಪ್ರಾರಂಭಿಸಿರುವನು. **'ಗುಣಯುತನಪ್ಪನಂ ಸುಭಟನಪ್ಪನನ್ ಆಯುಧಯುಕ್ತನಪ್ಪನಂ ಪ್ರಣುತ-ಸಮಸ್ತ-ವೈರಿಗುಣನಪ್ಪನಂ... ಮನದೆ ಮೆಚ್ಚದರಾರ್...?'** ಎಂಬುದೇ ಅವನ ಪ್ರಶ್ನೆ ಮತ್ತು ಅದರಲ್ಲಿ ಅಡಗಿರುವ ತತ್ವವೇ ಅವನು ಕೊಡುವ ಉತ್ತರ (೧-೧೨೩). ವೀರನಲ್ಲಿರಬೇಕಾದ ಮೊದಲ ಗುಣ ಸಂಯಮ– ಕಾರಣ ಅವನು **'ಸೈರಣೆಯಿನ್ ನೆಲ'** (೩-೨೦). ಎಷ್ಟೇ ಬಗೆಯ ಪ್ರಹಾರಕ್ಕೊಳಗಾದರೂ ಅದನ್ನು ಸಹಿಸಿಕೊಳ್ಳುವ ಧರಿತ್ರಿಯಂತೆ, ಸೈರಿಸಿಕೊಳ್ಳಬಲ್ಲವನು ಮಾತ್ರ ಅಚಲಿತ ಮನಸ್ಕನಾಗಿ ಶತ್ರುಗಳೊಡನೆ ಹೋರಾಡಿ ಜಯ ಗಳಿಸಬಲ್ಲನು. ಬೇರೆಲ್ಲೆಡೆಗಿಂತಲೂ ಈ ಗುಣವು ರಣರಂಗದಲ್ಲಿ ಅವನಿಗೆ ಹೆಚ್ಚು ಸಹಕಾರಿಯಾಗುವುದು. **'ಸ್ಫುರಿಯಿಸದೆ ದಶನವಶನಾಂತರಂ'** (ತುಟಿಗಳನ್ನು ಕದಲಿಸದೆ), **'ರಕ್ತಂಗಳಾಗದೆನಿಸುಂ ಕಣ್ಗಳ್'** (ಕಣ್ಣುಗಳನ್ನೆಷ್ಟೂ ಕೆಂಪಾಗಿಸದೆ), **'ಭರಿತ ಭ್ರೂಕುಟಿ-ಕಲಮಾಗಿರದೆ'** (ಮುಖ ಮತ್ತು ಹುಬ್ಬನ್ನು ಎಳ್ಳಷ್ಟೂ ಗಂಟುಗೊಳಿಸದೆ), **'ಅರಿಬಲಮಂ ಗೆಲ್ದು ನಿಂತಂ'** (ಶತ್ರುಸೇನೆಯನ್ನು ಜಯಿಸಿ ನಿಂತನು), ಎಂದು ಒಬ್ಬ ಕದನಪ್ರಚಂಡನನ್ನು (೩-೧೨೩) ಮಾರ್ಗಕಾರನು ಪರಿಚಯಿಸುವನು.

ಕಲಿಯಾದವನಿಗೆ ಸಂಯಮದೊಡನೆ ರಣನೀತಿಯನ್ನು ಪಾಲಿಸುವ ಪ್ರಜ್ಞೆಯೂ ಬೇಕು. ಇದನ್ನು 'ಪಾಳಿ' ಎಂಬ ಪದದಡಿ ಮಧ್ಯಕಾಲೀನ ಕನ್ನಡ ಕವಿಗಳು ಸಮಗ್ರವಾಗಿ ಚರ್ಚಿಸಿರುವರು. ಮಾರ್ಗಕಾರನೂ ಈ ಪದವನ್ನು ಕನಿಷ್ಠ ಮೂರು ಬಾರಿ (೧-೧೪೧; ೨-೧೪೨; ೩-೧೭೮) ಬಳಸಿರುವನು : ಇವುಗಳಲ್ಲಿ ಒಂದು ಕವಿಯ ಪಾಳಿಯನ್ನು ಚರ್ಚಿಸಿದರೆ, ಇನ್ನೆರಡು ಕಲಿಯ ಪಾಳಿಯನ್ನು ಚರ್ಚಿಸುವುವು. ಒಂದರಲ್ಲಿ ಅವನು 'ಪಿಂತಂ ನೋಡದೆ

ಪಾೞಿಗೆಟ್ಟೞಿಪಿನಿಂ' ಬಾಳುವವನನ್ನು ಮೂದಲಿಸಿದ್ದಾರೆ (೨-೧೪೨), ಇನ್ನೊಂದರಲ್ಲಿ 'ಪಾೞಿನಿಲೆ ನೆಗೞೆ ಬಾೞ್ವುದು ಬಾೞೆಂಬುದು' (೩-೧೭೮) ಎಂದು ಹೊಗಳಿರುವನು.

'ಪಾಳಿ' ಎಂದರೆ ನೀತಿ, ರೀತಿ, ಸಂಪ್ರದಾಯ, ಕಟ್ಟಳೆ, ಧರ್ಮ, ಕ್ರಮ, ವಿಧಾನ ಎಂಬೆಲ್ಲ ಅರ್ಥಗಳುಂಟು. ರಣಪಾಳಿ ಎಂದರೆ ಯುದ್ಧ ಮಾಡುವಾಗ ಅನುಸರಿಸಬೇಕಾದ ಕಟ್ಟಳೆ. ಇದರ ಸ್ವರೂಪವನ್ನು ಸ್ಪಷ್ಟಗೊಳಿಸಿದ ಕನ್ನಡದ ಮೊದಲ ಕವಿ ಮಾರ್ಗಕಾರ.

'ಬಿಸುಡಾಯುಧಮಂ' (ಶಸ್ತ್ರವನ್ನು ತ್ಯಜಿಸು), **'ಪುಲ್ಲಕರ್ಚು'** (ನೆಲಕ್ಕೆ ಮುಖಮಾಡಿ ಬೀಳು; ಹುಲ್ಲನ್ನು ಬಾಯಲ್ಲಿ ಹಿಡಿ), **'ಏರು ಪುತ್ತನ್'** (ಅಸಹಾಯಕನಾಗಿ ಹುತ್ತವನ್ನು ಏರಿ ನಿಲ್ಲು), **'ಅಡಿಗೆಱಗೆನ್ನಾ'** (ನನ್ನ ಕಾಲ ಹಿಡಿ), **'ನಿಲ್ಲದೆ ತೊಲಗು'** (ಹೋರಾಡುವ ಸಾಹಸ ಬಿಟ್ಟು ಇಲ್ಲಿಂದ ಕಾಲ್ಕೀಳು), **'ಇಂತಲ್ಲದೊಡೆ ಎೞ್ದಾರ್ದುರ್ಕೆಯ್ದುಗೆಯ್'** (ಇಲ್ಲದಿದ್ದರೆ ಹೋರಾಡಲು ನಿರ್ಧರಿಸಿ, ಸಿಂಹದಂತೆ ಘರ್ಜಿಸುತ್ತಾ ಶಸ್ತ್ರವನ್ನು ಕೈಗೆತ್ತಿಕೋ) (೩-೨೦೦). ಹೀಗೆ ಶರಣಾಗಿ ರಕ್ಷಿಸಿಕೊಳ್ಳುವ ಇಲ್ಲವೇ ಕಲಿತನವನ್ನು ಪ್ರದರ್ಶಿಸುವ ಅವಕಾಶವನ್ನು ಶತ್ರುವಿಗೆ ಒದಗಿಸಿಕೊಡುವುದೇ ವೀರನ ಸಿದ್ಧಾಂತ.

ಈ ವೀರಸಿದ್ಧಾಂತದ ಪರಿಭಾಷೆಯನ್ನು ಅನೇಕ ಕನ್ನಡ ಕವಿಗಳು ಮುಂದೆ ಬಳಸಿ, ಬೆಳೆಸಿ, ಭವ್ಯಗೊಳಿಸಿದರು.[೭೭] ಇದಕ್ಕೆ ಸಂಬಂಧಿಸಿದ ಮತ್ತೊಂದು ಪರಿಭಾಷೆ, ವೀರಸ್ವರ್ಗ. ವೈರಿಯ ಅಲುಗಿಗೆ ರಣರಂಗದಲ್ಲಿ ಆಹುತಿಯಾದವನು ವೀರಸ್ವರ್ಗ ಸೇರುವನೆಂಬ ಕಲ್ಪನೆಯು ಬಹುಪುರಾತನ ಕಾಲದ್ದು. **'ಜಿತೇನ ಲಭ್ಯತೇ ಪೃಥ್ವೀ ಮೃತೇನಾಪಿ ಸುರಾಂಗನಾ'** ಎಂಬ ಕ್ಷಾತ್ರನೀತಿಯನ್ನು ಮಾರ್ಗಕಾರನು ಸ್ಪಷ್ಟವಾಗಿ ಗುರುತಿಸಿರುವನು. ರಾಷ್ಟ್ರಕೂಟರೇನೂ ವೈರಿಗಳನ್ನು ರಣರಂಗದಲ್ಲಿ ನಿರ್ದಯವಾಗಿ ಕೊಲ್ಲುತ್ತಿದ್ದರು ನಿಜ– ಆದರೆ ಮಡಿದ ವೀರನಿಗೆ **'ಸುರಾಂಗನಾ ಸುರತ ವಿಷಯ** (ದೈಹಿಕ ಸುಖ; ಸುರಾಂಗನಾ 'ರಾಜ್ಯ'ದ ಒಡೆತನ) **ಸುಖ'**ವನ್ನು ಒದಗಿಸಿ ಕೊಡುವ ಔದಾರ್ಯವನ್ನು ತೋರುವ ಪುರುಷೋತ್ತಮರೂ ಅವರಾಗಿದ್ದರು. ಹೀಗೆ **'ಸುರಸುಂದರಿ ಲೀಲಾರಸ ಪರಿರಂಭಾರಂಭ ಸುರತ ಸುಖದೊಳ್'** (೩-೧೬೦; ೨-೮೦) ಅವರನ್ನು ಇರಿಸುತ್ತಿದ್ದುದನ್ನು ರಾಷ್ಟ್ರಕೂಟ ವೀರಗಲ್ಲುಗಳು ಸ್ಪಷ್ಟವಾಗಿ ಪ್ರದರ್ಶಿಸುವುವು.

ಇವರಿಗಿಂತ ಮುಂಚಿನ (ಬದಾಮಿ ಚಾಳುಕ್ಯ ಮೊದಲಾದವರ) ಕಾಲದ ವೀರಗಲ್ಲುಗಳಲ್ಲಿ ಕಾಣದ ಹೊಸ ಬಗೆಯ ಆಯಾಮಗಳನ್ನು ರಾಷ್ಟ್ರಕೂಟರು ತಂದುಕೊಟ್ಟರು. ವೀರಗಲ್ಲುಗಳಿಗೆ ರಾಜಮುದ್ರೆಯನ್ನು ಒತ್ತಿ, ಅವುಗಳ ಘನತೆಯನ್ನು ಹೆಚ್ಚಿಸಿದ ಮೊದಲ ಭಾರತೀಯ ವಂಶಸ್ಥರು ರಾಷ್ಟ್ರಕೂಟರು– ಇವರ ಶಿಲಾಫಲಕಗಳ ಮೇಲಿರುವ ನೇಗಿಲು ಇದನ್ನು ಪ್ರತಿನಿಧಿಸುವುದು. ಪ್ರಮಾಣದಲ್ಲಿ ಹಿಂದೆಂದೂ ಕಾಣದ ಭವ್ಯತೆಯನ್ನೂ ಇವರು ವೀರಗಲ್ಲುಗಳಿಗೆ ತಂದುಕೊಟ್ಟರು. ಗದಗು-ಬೆಟಗೇರಿಯಲ್ಲಿರುವ ರಾಷ್ಟ್ರಕೂಟ ವೀರಗಲ್ಲುಗಳಲ್ಲಿ ಕೆಲವು ೧೪-೧೫ ಅಡಿ ಎತ್ತರ ಮತ್ತು ೪ ಅಡಿ ಅಗಲವಿರುವುದು ಇದಕ್ಕೆ ಸಾಕ್ಷಿ. ಇವರು ವಿನೂತನ ಬಗೆಯ ಫಲಕವಿನ್ಯಾಸವನ್ನೂ ಜಾರಿಗೆ ತಂದರು– ಮೂರು ಮತ್ತು ಅದಕ್ಕಿಂತ ಹೆಚ್ಚಿನ ಪಟ್ಟಿಕೆಗಳಲ್ಲಿ ವೀರನ ಪಯಣವನ್ನು ನಿರೂಪಿಸಿ, ಭೂಮಿ, ಅಂತರ್‌ವಲಯ (ಮೋಡಗಳಿಂದ ತುಂಬಿದ ಆಕಾಶಮಾರ್ಗ) ಮತ್ತು ಸ್ವರ್ಗದ ಪರಿಕಲ್ಪನೆಯನ್ನು ಶಿಲ್ಪದಲ್ಲಿ ಸಾಕ್ಷಾತ್ಕರಿಸಿ ತೋರಿಸಿದರು.[೭೮]

ಇವರ ನಿರೂಪಣಾ ವಿಧಾನಗಳು ಶಿಲ್ಪದ ಸೊಬಗನ್ನು ಇಮ್ಮಡಿಗೊಳಿಸಿವವಲ್ಲದೆ ವೀರಗಲ್ಲುಗಳು ಬರೀ ಸ್ಮೃತಿಕಲ್ಲುಗಳಾಗಿರದೆ ಭವ್ಯವಾದ ಕಲಾಕೃತಿಗಳೂ ಎನಿಸತೊಡಗಿದವು. ರಾಷ್ಟ್ರಕೂಟ ಪೂರ್ವಯುಗದಲ್ಲಿ ವೀರವೃತ್ತಾಂತವನ್ನು ಒಂದು ಇಲ್ಲವೆ ಎರಡು ಪಟ್ಟಿಕೆಗಳಲ್ಲಿ ಮಾತ್ರ ನಿರೂಪಿಸಲಾಗುತ್ತಿತ್ತು. ಬದಾಮಿ ಚಾಳುಕ್ಯರ ವೀರಗಲ್ಲುಗಳಲ್ಲಿ ಸುರಾಂಗನೆಯರು ವೀರನನ್ನು ಕೊಂಡೊಯ್ಯುವ ದೃಶ್ಯವನ್ನು ಆಗಾಗ ಕಾಣುವೆವು– ಆದರೆ ಅಲ್ಲಿ ಅವನ ಸ್ವರ್ಗವಾಸದ ಚಿತ್ರ ಅಪರೂಪ. ರಾಷ್ಟ್ರಕೂಟರ ವೀರಗಲ್ಲುಗಳಲ್ಲಿ ಅವನ ಸುರಾಂಗನಾ ಸಖ್ಯಕ್ಕೆ ಹೆಚ್ಚು ಒತ್ತು ದೊರಕಿರುವುದನ್ನು– ಆಗೊಮ್ಮೆ ಈಗೊಮ್ಮೆ ಮಾತ್ರ ಅವನು ದೈವಸನ್ನಿಧಿಯಲ್ಲಿರುವುದನ್ನು– ಕಾಣುವೆವು.

ಈ ಕಾರಣ, ಪ್ರಮಾಣ, ಭವ್ಯತೆ, ವಿನ್ಯಾಸ, ವಿನೂತನತೆ, ನಿರೂಪಣಾ ಸೊಬಗು ಮತ್ತು ಶಿಲ್ಪ ಘನತೆಯಲ್ಲಿ ರಾಷ್ಟ್ರಕೂಟರ ಸಾಧನೆಯನ್ನು ಸರಿಗಟ್ಟುವ ಸಾಹಸವನ್ನು ಮುಂದೆ ಬಂದ ಅರಸುಮನೆತನಗಳೂ ಮಾಡಲಿಲ್ಲವೆನ್ನಬಹುದು. ಇಂತಹ ಪ್ರಯತ್ನಕ್ಕೆ ಕೈಹಾಕಿದ ಕದಂಬರೂ ಕಲ್ಯಾಣಿ ಚಾಳುಕ್ಯರೂ ಹೊಯ್ಸಳರೂ ರಾಷ್ಟ್ರಕೂಟರ ಎತ್ತರಕ್ಕೆ ಏರಲು ಸಮರ್ಥರಾಗಲೇ ಇಲ್ಲವೆಂದೂ ಹೇಳಬೇಕು.

ಆಕರ ಟಿಪ್ಪಣಿ :

೧. ಇದು ಎರಡನೇ ಕಂತಿನ ಮಂಥನ. ಇತಿಹಾಸಕಾರನಾಗಿ, ಐತಿಹಾಸಿಕ ದಾಖಲೆಗಳ ಹಿನ್ನೆಲೆಯಲ್ಲಿ, ಒಂದು ಕಾವ್ಯವನ್ನು ಅಭ್ಯಸಿಸಿದರೆ, ಅದು ಇತಿಹಾಸ ರಚನೆಗೆ ಎಷ್ಟು ಉಪಯೋಗವಾಗಬಹುದು ಎಂಬ ಪ್ರಶ್ನೆಯನ್ನು ಗಮನದಲ್ಲಿಟ್ಟುಕೊಂಡು ಈ ಅಭ್ಯಾಸವನ್ನು ಕೈಕೊಳ್ಳಲಾಗಿದೆ. ಕವಿರಾಜಮಾರ್ಗವು ರಾಜತ್ವ ಮತ್ತು ರಾಜನೀತಿಯ ಮೇಲೆ ಹೆಚ್ಚು ಬೆಳಕು ಚೆಲ್ಲುವುದಿಲ್ಲ ಎಂಬ ಸಾಮಾನ್ಯ ಅಭಿಪ್ರಾಯವನ್ನೂ ಇಲ್ಲಿ ಪರೀಕ್ಷಿಸಲು ಪ್ರಯತ್ನ ಮಾಡಲಾಗಿದೆ.

೨. ಈ ಪದಗಳಿಗಾಗಿ ಸಂಕಲನ-೧೮ (ನವಂಬರ್ ೨೦೦೪), ಪು. ೨೩-೩೨ ನೋಡಿ.

೩. ೧-೩೬; ೧-೧೧೫; ೧-೪೯; ೨-೭, ೮. ಈ ಉಲ್ಲೇಖಗಳು ಡಾ. ಕೆ. ಕೃಷ್ಣಮೂರ್ತಿಯವರು ಸಂಪಾದಿಸಿದ ನೃಪತುಂಗಾನುಮತಂ-ಶ್ರೀವಿಜಯ ಪ್ರಭೂತಂ ಕವಿರಾಜಮಾರ್ಗಂ(ಬೆಂಗಳೂರು, ೧೯೮೩)ದಿಂದ ಆಯ್ದವುಗಳಾಗಿವೆ.

೪. ೧-೨೦; ೧-೭೨; ೧-೧೧೫; ೨-೧೪೨; ೩-೧೧೫; ೨-೭೨; ೩-೪೩; ೧೧೧ ಮುಂ.ಗಳಿಗೆ ಹೋಲಿಸಿ ನೋಡಿ- ಸಂಕಲನ-೧೮, ಪು. ೨೮.

೫. ಪಿ. ವಿ. ಕಾಣೆ, ಹಿಸ್ಟರಿ ಆಫ್ ಧರ್ಮಶಾಸ್ತ್ರ, (ಪುಣೆ, ೧೯೭೩), ಸಂ. III, ಪು. ೨೮-೩೮, ೬೬ ಮುಂ. 'ರಾಟ್' ಪದ ಅಪರೂಪವಾಗಿ ಮಾತ್ರ ಕಾಣಿಸಿಕೊಳ್ಳುವುದು. ಆದರೆ ಅಭಿರಾಮನ ಸಾಮಂತನಾದ 'ಈಶ್ವರ-ರಾಟ್'ನ ಉಲ್ಲೇಖ ಕಲಚ್ಚೂಲ ತಾಮ್ರಪಟ ಶಾಸನದಲ್ಲಿ ಬರುವುದು-CII, IV, ೧೧೮

೬. ೧-೫೯, ೬೫, ೯೯, ೧೩೨; ೨-೧೦, ೧೨, ೪೨, ೧೫೧; ೪೧, ೩-೨೩೩. 'ರಾಜ' ಪದ ಪೂರ್ವದಲ್ಲಿ 'ಅ' ಪ್ರತ್ಯಯ ಹಚ್ಚಿ ತಮಿಳರು 'ಅರಜನ್' (ಅರಸನ್, ಅರಸ) ಎಂದರು ಎಂಬ ಸೂಚನೆ ಇದೆ. ಇದು 'ಸ್ಕೂಲ್'ಗೆ 'ಇಸ್ಕೂಲ್' ಎನ್ನುವಂತೆ. ನೋ. ಸಾ. ಶಿ. ಮರುಳಯ್ಯ, ಕನ್ನಡ ಭಾಷೆಯ ಚರಿತ್ರೆ (ಬೆಂಗಳೂರು, ೧೯೯೯), ಪು. ೭೫.

೭. ಹಲ್ಮಿಡಿ ಶಾಸನಕ್ಕೆ ನೋ. ಮೈಸೂರು ಪ್ರಾಕ್ತನ ವರದಿ ೧೯೩೬, ಪು. ೭೨-೮೧, ಸಾ. ೧೪. ಆಳುವರಸನು ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲೂಕಿಗೆ ಸೇರಿದ ಶಾಸನಗಳಲ್ಲಿ (ಎಕ VI, ಕೊಪ್ಪ ೩೭-೩೮)

ಕಾಣಿಸಿಕೊಂಡರೆ, ಸಿಂದರಸ ಮತ್ತು ಮಾಧವಟ್ಟಿಯರಸರು ಆಡೂರು ಶಾಸನದಲ್ಲಿ (ಎಸ್‌ಐಐ XX.9) ಚೋಳಮುತ್ತರಸನು ಶ್ರವಣಬೆಳ್ಗೊಳದ ಕ್ರಿ.ಶ. ೭೫೦ ದ ಎರಡು ಶಾಸನಗಳಲ್ಲಿ (ಎಕ II, ಶ್ರ.ಬೆ. ೯೫ ಮತ್ತು ೯೬) ಉಲ್ಲೇಖಗೊಂಡಿರುವರು. ರಾಜಾದಿತ್ಯರಸನು ಶಿವಮೊಗ್ಗಾ ಜಿಲ್ಲೆಯ ಸೊರಬ ತಾಲೂಕಿನ (ಎಕ VII, ಸೊರಬ ೧೦) ಕ್ರಿ.ಶ. ೮೦೦ ರ ಶಾಸನದಲ್ಲಿ ಬರುವನು. 'ಅರಸ'ನನ್ನು ತಿರುಮಕೂಡ್ಲು-ನರಸೀಪುರ ಶಾಸನದಲ್ಲಿ (ಎಕ XIV, ತಿ.ನ. ೨೫೩), 'ಅರಸುಕೊತ್ತಿಗಳ್'ನ್ನು ಶಿವಮೊಗ್ಗಾ ಜಿಲ್ಲೆಯ ಶಿಕಾರಿಪುರ ತಾಲೂಕಿನ ಶಾಸನಗಳಲ್ಲಿ (ಎಕ VII, ಶಿಕಾರಿಪುರ ೪೫) ನೋಡಬಹುದು. ಭೌಗೋಳಿಕವಾಗಿ ತುಂಗಭದ್ರೆಯ ಉತ್ತರಕ್ಕೆ, ಅಂದಿನ ಗಂಗ ರಾಜ್ಯದಲ್ಲಿ ಈ ಪದವು ಮೊದಲು ಹೆಚ್ಚು ಪ್ರಚಾರಕ್ಕೆ ಬಂತೆಂದು ಕಾಣುವುದು.

೮. ಎಕ IX, ಬೆಂಗಳೂರು ೫೫.

೯. ನನ್ನ ಮೊದಲ ಲೇಖನದಲ್ಲಿ (ಸಂಕಲನ-೧೮, ಪು. ೨೩-೨೪) ಈ ಬಗ್ಗೆ ಕೆಲವು ವಿವರವನ್ನು ಕೊಟ್ಟಿರುವೆ. ಅಲ್ಲಿ 'ತುಂಗ' ವಿಶೇಷಣವು ಪ್ರಚಾರಕ್ಕೆ ಬಂದದ್ದು ಮೊದಲನೆಯ ಕೃಷ್ಣನ (ಕ್ರಿ.ಶ. ೭೫೬-೭೫) ಕಾಲದಲ್ಲಿ ಎಂದಿರುವುದು ಮಾಳಖೇಡ ಮನೆತನದ ಅರಸರನ್ನು ಮಾತ್ರ ಗಮನದಲ್ಲಿಟ್ಟುಕೊಂಡು ಮಾಡಿದ ನಿರ್ಣಯ. ಆದರೆ ಇನ್ನೂ ಆಳವಾಗಿ ಹುಡುಕಿದರೆ 'ತುಂಗ' ಪದದ ಪ್ರಯೋಗವು ಮಾಳಖೇಡ ಶಾಖೆಯು ಪ್ರಾರಂಭವಾಗುವುದಕ್ಕಿಂತ ಬಹು ಪೂರ್ವಕಾಲಕ್ಕೆ ಹೋಗುವುದೆಂದೆನಿಸುವುದು. ಕದಂಬ ಮೃಗೇಶವರ್ಮನ ಹಲಸಿ ತಾಮ್ರಪಟ (ಕ್ರಿ.ಶ.ಸು. ೪೫೦-೬೦)ದಲ್ಲಿ ಬರುವ "ತುಂಗ-ಗಂಗ-ಕುಲೋತ್ಸಾದಿ ಪಲ್ಲವ ಪ್ರಲಯಾನಲಃ ಗಂಗಬಲಂ ತುಂಗಮದಾವಲೇಪಂ... ಜಯಶ್ರೀಯಂ-ಪಲ್ಲವ-ಪಾರ್ಥಿವಸ್ಯ ಜಹಾರ" (ಇಎ VII, ಪು. ೨೪-೨೫) ಎಂಬ ಪಾಠದಲ್ಲಿ ಇದಕ್ಕೆ ಆಧಾರವನ್ನು ಪಡೆಯಬಹುದು. ಆದರೆ ಇಲ್ಲಿ ಬರುವ 'ತುಂಗ' ಪದವು ರಾಷ್ಟ್ರಕೂಟರನ್ನು ಉದ್ದೇಶಿಸಿದುದಾಗಿದೆಯೋ ಎಂಬುದನ್ನು ಇನ್ನೂ ಇತ್ಯರ್ಥಗೊಳಿಸಬೇಕಾಗಿದೆ.

೧೦. ಸಂಬಂಧಪಟ್ಟ ಉಲ್ಲೇಖಗಳಿಗೆ ನೋ. ಸಂಕಲನ-೧೮, ಪು. ೨೩ ರಿಂದ.

೧೧. ಅದೇ.

೧೨. ೨-೩೮, ೭೬, ೨೪; ೩-೨೨, ೧೫೮.

೧೩. ಸಂಕಲನ-೧೮, ಅದೇ.

೧೪. ಅನೇಕ ಶಾಸನಗಳಲ್ಲಿ ಈ ಬಿರುದುಗಳು ಉಲ್ಲೇಖಗೊಂಡಿರುವವು. ಅವುಗಳಲ್ಲಿ ಪಿಂಪ್ರಿ(ಎಐ X, ೧೯), ಕರ್ಹಾಡ್(IV, ೨೭೮), ಸಂಜಾನ್(XVIII, ೨೬), ರಧನಪುರ(VI, ೨೩), ಜಂಬಗಾವ್(XXXVI, ೨೯), ಸೂರತ್(XXI, ೧೩೩) ತಾಮ್ರಪಟಶಾಸನಗಳನ್ನು ಇಲ್ಲಿ ನಿದರ್ಶಿಸಬಹುದು.

೧೫. ಎಕ XIII, ಗುಬ್ಬಿ ೬೧ (ಕ್ರಿ.ಶ. ೮೧೨). ಕವಿರಾಜಮಾರ್ಗದ ಉಲ್ಲೇಖಗಳಿಗೆ ನೋಡಿ, ಸಂಕಲನ-೧೮, ಅದೇ.

೧೬. ಜೆಬಿಬಿಆರ್‌ಎಎಸ್ III, ಪು. ೩೭೧; ಇಐ III, ೧೭; XXIII (೧), ಪು. ೮; VIII, ೬, XXXVI, ೨೯, XXXVIII, ೭.

೧೭. ೩-೧೫೧; ೧-೫, ೩-೨೨೦, ೨೨೫; ೧-೧೦೦

೧೮. ರಾಜಾತ್ಮಂ ಮನ ಏವ ತಸ್ಯ ಸಚಿವಸ್ಸಾಮಂತಚಕ್ರಂ ಪುನಸ್ತನೋತ್ಯೇಂದ್ರಿಯವರ್ಗ ಏಷ ವಿಧಿವಹ್ಯಾಗಾದಯಸ್ಸೇವಕಾಃ ದೇಹಸ್ಥಾನಮಧಿಷ್ಠಿತಸ್ವವಿಷಯಂ ಭೋಕ್ತು ಸ್ವಂತತಃ (ಪ. ೪೨, XVIII, ೨೬).

೧೯. ಎಐ VI, ೨೩ (ಕ್ರಿ.ಶ. ೮೦೮)

೨೦. 'ಸಾಱುಗಾನೆಯವರೆಲ್ಲರುಮಂ ನೃಪ ತಾನೆ ಮತ್ತೇಱುವಂ ಪಣಿದೊಡಾನೆಯನ್'-೧-೧೩೪.

೨೧. ಎಐ VI, ಪು. ೩೦; ಎಸ್‌ಐಐ XVIII, ೧೪ ಮತ್ತು IX, ೬೨.

೨೨. ಇಐ IV, ೪೯; VI, ೨೩ ಮತ್ತು ೮

೨೩. ಅದೇ.

೨೪. ೨-೧೩೭; ೨-೧೦, ೧೨; ೨-೧೩೭; ೩-೯೮, ೧೧೭

೨೫. ಧ್ರೋರನು ಎಲ್ಲಾ ವರ್ಗದ ಸಾಮಂತರನ್ನೂ ಶತ್ರುರಾಜರನ್ನೂ ಸೆರೆಯಿಂದ ಮುಕ್ತಗೊಳಿಸಿ, ಅವರ ಸ್ವಕ್ಷೇತ್ರಗಳಿಗೆ ಗೌರವಯುತವಾಗಿ ಕಳಿಸಿಕೊಟ್ಟದ್ದಲ್ಲದೆ– ಸಾಮಂತವರ್ಗಾತ್-ಸ್ವೇಷಾಂ-ಪದೇಷು-ಮನುಯೈಸ್-ಸ್ಥಾಪಯಿಸ್ಯಾನ್– ಗಂಗ ಅರಸನನ್ನು ಬಹಿರಂಗ ಸಭೆಯಲ್ಲಿ ತನಗೆ ಪಿತೃಸಮಾನನೆಂದು ಘೋಷಿಸಿ, ಅವನಿಗೂ ರಾಜ್ಯಾಧಿಕಾರವನ್ನು ಒಪ್ಪಿಸಿಕೊಟ್ಟ ಪ್ರಸಂಗವನ್ನು ಸಂಜಾನ್ ಶಾಸನದಲ್ಲಿ ಮನಮುಟ್ಟುವಂತೆ ವರ್ಣಿಸಲಾಗಿದೆ.

೨೬. ಗುಜರಾತು, ಸೌರಾಷ್ಟ್ರ ಮತ್ತು ರಾಜಸ್ಥಾನದಲ್ಲಿ 'ಪಾಲಿಯ' ಪದವು ಇಂದಿಗೂ ರೂಢಿಯಲ್ಲಿದೆ. ಅದು ಸ್ಮೃತಿಕಲ್ಲು ಅಥವಾ ಕಂಬವನ್ನು ಸೂಚಿಸುವುದು. ಸಂಸ್ಕೃತ ಪದವಾದ 'ಪಾಲ' 'ರಕ್ಷಿಸು', 'ಕಾಪಾಡು' ಎಂಬುದರಿಂದ ಇದು ಬಂದಿರಬಹುದೆಂಬ ವಾದವಿದೆ. ನೋ. **ಮೆಮೋರಿಯಲ್ ಸ್ಟೋನ್ಸ್, : ಎ ಸ್ಟಡಿ ಆಫ್ ದೇರ್ ಆರಿಜನ್, ಸಿಗ್ನಿಫಿಕೆನ್ಸ್ ಅಂಡ್ ವೆರೈಟಿ**, ಸಂ. ಎಸ್. ಶೆಟ್ಟರ್ ಮತ್ತು ಗುಂಥೇರ್ ಸೋಂಥೈಮರ್ (ಧಾರವಾಡ-ಹೈಡೆಲ್‌ಬರ್ಗ್, ೧೯೮೨) ಪು. ೧೧೦-೧೧೬, ೧೩೯-೧೪೯, ೧೫೭-೧೭೩). ಕನ್ನಡದಲ್ಲಿ ಇದು 'ವಾಳಿ' ಪ್ರತ್ಯಯದೊಡನೆ ಹಲವು ಪದಗಳೊಡನೆ ಬೆರೆತುಕೊಂಡಿತು. ಉದಾಹರಣೆಗೆ– ವೇಳೆ+ಪಾಳಿ=ವೇಳೆವಾಳಿ; ಜೋಳ+ಪಾಳಿ=ಜೋಳವಾಳಿ; ಲೆಂಕ+ಪಾಳಿ=ಲೆಂಕವಾಳಿ.

೨೭. ವೀರಸಿದ್ಧಾಂತದ ಸಮಗ್ರ ಚಿತ್ರಕ್ಕೆ ನೋ. ಬಂಧುವರ್ಮನ **ಹರಿವಂಶಾಭ್ಯುದಯ** (ಸಂ. ಬಿ. ಎಸ್. ಸಣ್ಣಯ್ಯ, ಮೈಸೂರು-೧೯೭೪)

೨೮. **ಮೆಮೋರಿಯಲ್ ಸ್ಟೋನ್ಸ್**, ಪು. ೨೨೭-೨೩೦, ಚಿತ್ರ ೪-೯. ನೋ. ಆರ್. ಶೇಷಶಾಸ್ತ್ರಿ, **ಕರ್ನಾಟಕದ ವೀರಗಲ್ಲುಗಳು** (ಬೆಂಗಳೂರು, ೧೯೨), ಚಿತ್ರ ೨೩೪-೨೪೪. ಆದರೆ ಸುರಾಂಗನಾಸಖ್ಯದ ತತ್ವವು ಎಷ್ಟು ಪುರಾತನವಾದದ್ದು ಎಂಬುದನ್ನು ನಾವಿನ್ನೂ ತಿಳಿದುಕೊಳ್ಳಬೇಕಾಗಿದೆ. ತಮಿಳುನಾಡಿನ ವೀರಗಲ್ಲುಗಳು (ಅವರು 'ನಟುಕಲ್ಲು' ಎಂದು ಅವನ್ನು ಕರೆಯುವರು)ಗಳಲ್ಲಿ ವೀರಸ್ವರ್ಗ ಅಥವಾ ಸುರಾಂಗನಾ-ಸಖ್ಯದ ಚಿತ್ರಗಳು ಅಪರೂಪ, ಆದರೆ ಪುರಂ (೨೮೭)ನಲ್ಲಿ ಸ್ವರ್ಗಸ್ಥ ವೀರನು ಸುರಾಂಗನೆಯರನ್ನು ವಿವಾಹವಾಗುವ ಉಲ್ಲೇಖ ಬರುವುದು. ಈ ಕಲ್ಪನೆಯು ಬೌದ್ಧರ 'ಛಾಯಾ' ಸ್ಮಾರಕಗಳಲ್ಲಿ ಇತ್ತೋ-ಇಲ್ಲವೋ ಎಂಬುದು ಸ್ಪಷ್ಟಗೊಳ್ಳುತ್ತಿಲ್ಲ. ಆದರೆ ನಾಗಾರ್ಜುನಕೊಂಡದಲ್ಲಿಯ ಛಾಯಾ ಫಲಕಗಳು ಅದ್ಭುತ ಪ್ರಮಾಣವನ್ನು (ವಾಶಿಷ್ಠೀಪುತ್ರ ಶಾಂತಮೂಲನ ಸ್ಮೃತಿ ಫಲಕವು ಸು. ೧೨' ಎತ್ತರವಿದೆ), ಸುಂದರವಾದ ಉಬ್ಬು ಶಿಲ್ಪಗಳ ಅನೇಕ (ಇಲ್ಲಿಯ ಫಲಕಗಳು ಐದು) ಫಲಕಗಳನ್ನೂ, ಶಾಸನಪಾಠಗಳನ್ನೂ ಹೊಂದಿವೆ. ಈ ಫಲಕಾಗ್ರದಲ್ಲಿರುವ ವ್ಯಕ್ತಿ (ಅದು ಸ್ತ್ರೀಯಾದರೂ)ಯ ಸುತ್ತಲೂ ಸುರಾಂಗನೆಯರಿರುವಂತೆ ತೋರಿಸಲಾಗಿದೆ. ನೋ. ಇಐ XXXV, ಪು. ೧-೪; XXI, ಪು. ೬೩-೬೪; XXXIV, ಪು. ೨೦-೨೨. ಗಂಗಕಾಲದ ವೀರಗಲ್ಲುಗಳು ಒಂದು ಬಗೆಯಲ್ಲಿ ಅದ್ಭುತವೆನಿಸಿದರೂ (ಕೋಲಾರ ಮತ್ತು ಬೇಗೂರಿನ ವೀರಗಲ್ಲುಗಳು ಇದಕ್ಕೆ ನಿದರ್ಶನ– ನೋ. ಆರ್. ಶೇಷಶಾಸ್ತ್ರಿ, ಅದೇ. ಚಿತ್ರ ೧೭೫ ಮತ್ತು ೨೫೪), ಈ ವೀರಗಲ್ಲುಗಳ ವಿನ್ಯಾಸದಲ್ಲಿ ಕೌಶಲ್ಯತೆಯ ಕೊರತೆ ಎದ್ದು ಕಾಣುವುದು. ರಾಷ್ಟ್ರಕೂಟ ವೀರಗಲ್ಲುಗಳನ್ನು ಸಮಗಟ್ಟುವಂತಹ ಸ್ಮೃತಿಕಲ್ಲುಗಳನ್ನು ಗೋವೆಯ ಕದಂಬರು, ಕಲ್ಯಾಣಿ ಚಾಳುಕ್ಯರು ಮತ್ತು ಹೊಯ್ಸಳರು ನೆಟ್ಟರಾದರೂ ರಾಷ್ಟ್ರಕೂಟರ ಪೂರ್ಣ ಪ್ರಮಾಣದ ಸೊಬಗನ್ನು ಈ ಶಿಲ್ಪಿಗಳು ಸಾಧಿಸಿಕೊಳ್ಳುವಲ್ಲಿ ಸಂಪೂರ್ಣ ಸಾರ್ಥಕತೆಯನ್ನು ಪಡೆಯಲಿಲ್ಲ.

---

* ಸಂಕಲನ-೧೮ (೧೪ ನವಂಬರ್ ೨೦೦೪) 'ಕವಿರಾಜಮಾರ್ಗ ಮಂಥನ : ನೃಪತುಂಗನ ವ್ಯಕ್ತಿತ್ವ' ಲೇಖನದ ಪು. ೨೩, ಸಾಲು ೮ ರಲ್ಲಿ ಅಚ್ಚಾಗಿರುವ 'ಅಮೋಘವರ್ಷ-ನೃಪತುಂಗ' ಎಂಬುದನ್ನು 'ಅಮೋಘವರ್ಷ ನೃಪೇಂದ್ರ' ಎಂದು ತಿದ್ದಿಕೊಂಡು ಓದಬೇಕು.

■ ಡಾ. ಷ. ಶೆಟ್ಟರ್ : ಡಾ. ಎಸ್. ರಾಧಾಕೃಷ್ಣನ್ ಸಂದರ್ಶಕ ಪ್ರಾಧ್ಯಾಪಕ, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಸ್ಟಡೀಸ್, ಐಐಎಸ್‌ಸಿ ಕ್ಯಾಂಪಸ್, ಬೆಂಗಳೂರು - ೫೬೦ ೦೧೨ ■

ಕನ್ನಡದಲ್ಲಿ ಕಲ್ಲಚ್ಚು ಅರ್ಥಾತ್ ಶಿಲಾಬರಹದ ಮುದ್ರಣ

ಶ್ರೀನಿವಾಸ ಹಾವನೂರ

ಹತ್ತೊಂಬತ್ತನೆಯ ಶತಮಾನಕ್ಕಿಂತ ಮುಂಚಿನ ಪ್ರಾಚೀನ ಕನ್ನಡ ಸಾಹಿತ್ಯವು ತಾಳೆಗರಿ ಇಲ್ಲವೆ ಕಾಗದ ಪ್ರತಿಗಳಲ್ಲಿ ಕಾಣಿಸಿಕೊಂಡಿತಷ್ಟೆ. ಆಮೇಲೆ ಅಚ್ಚಿನ ಮೊಳೆಗಳನ್ನು ಬಳಸಿ ನೂರಾರು ಪ್ರತಿಗಳನ್ನು ಮುದ್ರಿಸಿ ಹೊರತರುವುದು ರೂಢಿಗತವಾಗಿ ಇಂದಿಗೂ ಪ್ರಚಾರದಲ್ಲಿದೆ. ಈ ನಡುವೆ, ಅಂದರೆ ಮೊಳೆಗಳ ಮುದ್ರಣವು ಆರಂಭವಾಗುವ ಮೊದಲು, ಇನ್ನೊಂದು ಬಗೆಯ ಮುದ್ರಣವು ಮೂಡಿಬಂದಿತು. ಅದುವೆ ಶಿಲಾ-ಮುದ್ರಣ; ಕಲ್ಲಚ್ಚು. ಮಧ್ಯಯುಗದ ಕಾಲದಿಂದ ಯುರೋಪದಲ್ಲಿ ಮುದ್ರಾಯಂತ್ರಗಳು ಲಭ್ಯವಿದ್ದವು. ರೋಮನ್ (ಇಂಗ್ಲಿಶ್ ಇತ್ಯಾದಿ) ಲಿಪಿಯ ಅಕ್ಷರಗಳೂ ನಿರ್ಮಿತವಾಗಿ, ಮುದ್ರಣ ಕಾರ್ಯ ನಿಯಮಿತವಾಗಿ ಜಗದಾದ್ಯಂತ ಸಾಗಿ ಬಂದಿದ್ದಿತು. ಆದರೆ ಕನ್ನಡ ಲಿಪಿಯ ಅಕ್ಷರಗಳ ಮೊಳೆಗಳು ಲಭ್ಯವಿಲ್ಲದಿದ್ದಾಗ? ಆ ಮಧ್ಯಂತರದ ಅವಧಿಯಲ್ಲಿ ಶಿಲಾಮುದ್ರಣ ಅಸ್ತಿತ್ವದಲ್ಲಿ ಬಂದಿತು.

ಕನ್ನಡ ಮೊಳೆಗಳು ಇಲ್ಲದಿದ್ದಾಗ ಈ ರೀತಿ ಹೊರಬಂದ ಶಿಲಾಮುದ್ರಿತ ಪುಸ್ತಕಗಳು ಈಗ ನೋಡುವುದಕ್ಕೂ ಸಿಗುವುದಿಲ್ಲ. ಅನೇಕ ಹಳಗನ್ನಡ ಕಾವ್ಯಗಳು, ಹೊಸಗನ್ನಡದ ಹಲವು ಗ್ರಂಥಗಳು ಮತ್ತು ಹತ್ತಾರು ಪತ್ರಿಕೆಗಳು ಈ ಬರಹದಲ್ಲಿಯೇ ಮೂಡಿಬಂದವು. ಆದರೆ ಇವೆಲ್ಲ ಗತೇತಿಹಾಸಕ್ಕೆ ಸಂದು ಹೋಗಿವೆ. ಇವುಗಳ ಸ್ವರೂಪವನ್ನೂ Lithograph ಎಂದು ಕರೆಯಿಸಿಕೊಳ್ಳುವ ಅದರ ವಿಧಾನವನ್ನೂ ನೆನಪಿನಲ್ಲಿ ಉಳಿಸಿಕೊಳ್ಳುವ ಪ್ರಯತ್ನ ಇಲ್ಲಿದೆ.

ಕನ್ನಡ ಲಿಪಿಗೆ ಬೇಕಾದ ಮೊಳೆಗಳನ್ನು ತಯಾರಿಸುವುದೇ ತಾಪದಾಯಕ ಕೆಲಸವಾಗಿತ್ತು. ಏಕೆಂದರೆ ನಮ್ಮಲ್ಲಿಯ ೫೦ ಮೂಲಾಕ್ಷರಗಳಲ್ಲದೆ ಕಾಗುಣಿತ, ಒತ್ತಕ್ಷರಗಳೂ ಸೇರಿದಂತೆ ೨೫೦ ಕ್ಕೂ ಮೇಲ್ಪಟ್ಟು ಸಂಜ್ಞೆಗಳು ಮಾತೃಕೆಗಳು ಮೊದಲು ಸಿದ್ಧವಾಗಬೇಕು. ಅಲ್ಲಿಂದ ಎರಕ ಹೊಯ್ದು ಮಾರಾಟಕ್ಕೆ ಒದಗಬೇಕು. ಔದ್ಯೋಗಿಕವಾಗಿ ಹಿಂದಿದ್ದ ನಮ್ಮ ನಾಡಿನಲ್ಲಿ ಇದು ಸುಲಭ ಸಾಧ್ಯವಿರಲಿಲ್ಲ.


DICTIONARY,

CARNÁṬACA AND ENGLISH.

ಅಂಕ

ಅ 1. The inherent short vowel and first letter of the Carnátaca alphabet. 2. an interjection of surprise; as, ಅಅದಾ-ಗಿತ್ತ What! is it so? 3. When prefixed to nouns derived from Sanscrit, beginning with a consonant, it denotes negation; as ಯುಕ್ತ, proper, fit; ಅಯುಕ್ತ, improper, unfit; ಯೋಗ್ಯ respectable, worthy; ಅಯೋಗ್ಯ disrespectable, unworthy. As a negative prefix to words beginning with a vowel ಅ is changed to ಅನ್, [illegible] end, make ಅನಂತ endless.

s. ಅಂಕ s. n. 1. An arithmetical sign or figure. 2. a mark or spot. 3. the flank or part above the hip. 4. a species of dramatic entertainment. 5. the act of a play. 6. a chapter or section. 7. the body. 8. proximity, vicinity. 9. place, abode. 10. ornament, decoration. 11. the thigh. [illegible] the right thigh; [illegible] the left thigh. 12. war [illegible] malign war. 13. fault, offence.

c. ಅಂಕಣ s. n. The space between two cross beams; the opening between any two pillars supporting a roof. ಅಂಕಣ ಪಟ್ಟಿ, or ಅಂಕ [illegible] the number of openings between the cross beams of a roof, or the pillars supporting it.

s. [illegible] ... the thigh used as a bed for a child. 2. a small pillow or cushion to put under the legs. E. ಅಂಕ the thigh, and [illegible] a cushion or pillow.

s. c. [illegible] s. n. Gunpowder.

s. ಅಂಕಪಟ್ಟಿ, ಅಂಕ ಪಟ್ಟಿಕೆ s. n. The thighs as elevated in crossing them.

s. ಅಂಕಪಾಳಿ, ಅಂಕಪಾಳಿಕೆ s. n. An embrace, embracing. E. ಅಂಕ the flank, and ಪಾಳಿ or ಪಾಲಿಕೆ nourishing.

s. [illegible] s. n. The seat, the lap.

ವಿದೇಶಿ ಮಿಶನರಿಗಳು ಮತ್ತು ಬ್ರಿಟಿಶ್ ಅಧಿಕಾರಿಗಳು ತಮ್ಮ ದೇಶಗಳಿಂದ ಕನ್ನಡ ಲಿಪಿಯ ಮೊಳೆಗಳನ್ನು ಸಿದ್ಧಪಡಿಸಿ ತರಿಸುವುದು

ಸಾಧ್ಯವಿತ್ತು. ಹಾಗೆ ಮಾಡಿದರೆನ್ನುವ. ಆದರೆ ಅದಕ್ಕೂ ವೇಳೆ ತಗುಲಿತು. ಸುರುವಿಗೆ ಅವರಾದರೂ ಶಿಲಾಮುದ್ರಣಕ್ಕೇ ಮೊರೆಹೋದರು. ಇದಕ್ಕೆ ಸಂಬಂಧಿಸಿದ ಒಂದು ವೈಚಿತ್ರವನ್ನು ಹೇಳಬೇಕು. ರೀವ್ಹ್ ಎಂಬ ಮಿಶನರಿಯು ಸರಕಾರದ ಆಣತಿಯಂತೆ ಮೊತ್ತಮೊದಲ ಬಾರಿಗೆ ಇಂಗ್ಲಿಶ್-ಕನ್ನಡ; ಕನ್ನಡ-ಇಂಗ್ಲಿಶ್ ನಿಘಂಟು ತಯಾರಿಸಿದ (೧೮೨೪; ೧೮೩೨). ಅದನ್ನು ಮುದ್ರಿಸಲು ಇಂಗ್ಲಿಶ್ ಮೊಳೆಗಳೇನೊ ಸಿದ್ಧವಿದ್ದುವು. ಕನ್ನಡದವು? ಅವನ್ನು ಕಟ್ಟಿಗೆಯಲ್ಲಿ ಕೊರೆದು (ಒಂದೊಂದೇ ಅಕ್ಷರವನ್ನಲ್ಲ; ಶಬ್ದಗಳನ್ನು) ಮಧ್ಯೆ ಸೇರಿಸಿ, ಆ ಬೃಹತ್ ಗ್ರಂಥಗಳನ್ನು ಹೊರತರಬೇಕಾಯಿತು. (ನೋಡಿ ಚಿತ್ರ-೧)

ಇತ್ತ ನಮ್ಮವರಿಗೆ ಕಲ್ಲಿನ ಮೇಲೆ ಬರೆಯುವ ಉಪಕ್ರಮ ಅರಿಯದ್ದೇನೂ ಅಲ್ಲ. ಶಿಲಾಶಾಸನಗಳಿದ್ದುವಲ್ಲ! ಆದರೆ ಮುದ್ರಿಸುವುದಕ್ಕೆ ಬೇರೆಯೇ ವಿಧಾನ ಬೇಕಿದ್ದಿತು. ಎಸೊಯ್ಡ್ ಸೆನೆಫೆಲ್ಡ್ ಎಂಬ ಪ್ರೇಗ್ ನಿವಾಸಿ ೧೭೯೬ ರಲ್ಲಿ ಅದನ್ನು ಕಂಡುಹಿಡಿದಿದ್ದ. ಇದಕ್ಕಾಗಿ ಕ್ಯಾಲ್ಸಿಯಮ್ ಕಾರ್ಬನೇಟಿನ ಲೇಪ ಇರುವ ಶಿಲೆಯ ಫಲಕ ಮತ್ತು ಗ್ರೀಜ್‌ನಂತಹ ದ್ರವ ಇವನ್ನು ಬಳಸಬೇಕಿದ್ದಿತು. ಆಮೇಲೆ ಇದರಲ್ಲಿ ಸುಧಾರಣೆಯಾಗಿ Lithography ನೆಲೆಗೊಂಡಿತು. ನೂರಾರು, ಸಾವಿರಾರು ಪ್ರತಿಗಳನ್ನು ಮುದ್ರಿಸುವ ಕ್ರಮ ಕೈಗೂಡಿತು. ನಮ್ಮವರು ಯುರೋಪದ ಈ ತಂತ್ರವನ್ನು ನೇರವಾಗಿ ಎತ್ತಿಕೊಂಡಂತಿಲ್ಲ. ಮೆದುವಾದ ಕಲ್ಲು, ಜಿಡ್ಡಿನ ಎಣ್ಣೆ ಇಟ್ಟುಕೊಂಡು ಅಕ್ಷರಗಳನ್ನು ಕೈಯಿಂದ ಬರೆದು ಮುದ್ರಿಸತೊಡಗಿದರು.

ಇದರ ಕ್ರಮವನ್ನು ಹೀಗೆ ವಿವರಿಸಬಹುದು :

"ಕಲ್ಲನ್ನು ಮೊದಲು ನಯಗೊಳಿಸಿ, ಅನಂತರ ಅದರ ಮೇಲೆ ಅಕ್ಷರ, ಚಿತ್ರ ಬರೆಯಬೇಕು. ಕಲ್ಲಚ್ಚಿನಿಂದ ನಾವು ನೇರವಾಗಿ ಮುದ್ರಿಸುವುದರಿಂದ ಬರೆಯುವ ಅಕ್ಷರಗಳನ್ನು ಹಿಂದು ಮುಂದಾಗಿ ಬರೆಯಬೇಕು. ಬ್ರಷ್, ಪೆನ್, ಕಲ್ಲಚ್ಚಿನ ಮಸಿ ಇಟ್ಟುಕೊಂಡಿರಬೇಕು. ಅನಂತರ ಗೋಂದು ಮತ್ತು ದುರ್ಬಲ ನೈಟ್ರಿಕ್ ಆಮ್ಲದಿಂದ ಕಲ್ಲನ್ನು ಒರೆಸಬೇಕು. ಇದರಿಂದ ಚಿತ್ರ / ಅಕ್ಷರ ಬರೆಯದಿದ್ದ ಜಾಗವು ಜಿಡ್ಡುಯುಕ್ತ ಮಸಿಯನ್ನು ಆಕರ್ಷಿಸುವುದಿಲ್ಲ. ಈಗ ಕಲ್ಲಿನ ಮೇಲೆ ನೀರನ್ನು ತೆಳುವಾಗಿ ಹಾಕಬೇಕು. ಆಗ ಖಾಲಿ ಜಾಗದಲ್ಲಿ ಮಾತ್ರ ನೀರು ಇರುತ್ತದೆ. ಆ ನೀರು ಆರುವುದರೊಳಗೆ ಜಿಡ್ಡುಯುಕ್ತ ಮಸಿಯನ್ನು ಉರುಳೆಯಿಂದ ಕಲ್ಲಿನ ಮೇಲೆ ಉರುಳಿಸಬೇಕು. ಅದರಿಂದ ಅಕ್ಷರ/ಚಿತ್ರಗಳಿಗೆ ಮಸಿ ಹತ್ತಿಕೊಳ್ಳುತ್ತದೆ. ಖಾಲಿ ಜಾಗದಲ್ಲಿ ನೀರು ಇರುವುದರಿಂದ ಮಸಿ ಹತ್ತಿಕೊಳ್ಳುವುದಿಲ್ಲ. ಈ ಸ್ಥಿತಿಯಲ್ಲಿ ಮುದ್ರಿಸಬೇಕಾದ ಕಾಗದವನ್ನು ಅದರ ಮೇಲಿಟ್ಟು ಒತ್ತಡ ಹಾಕಿದಾಗ ಆ ಕಾಗದಕ್ಕೆ ಕಲ್ಲಿನ ಮೇಲಿನ ಅಕ್ಷರ, ಚಿತ್ರಗಳು ಮೂಡಿಬರುತ್ತವೆ." (ಜ್ಞಾನಗಂಗೋತ್ರಿ, ಸಂಪುಟ ೪, ಪುಟ ೫೦೮.)

ಕನ್ನಡ ಕಲ್ಲಚ್ಚಿನ ದಿಶೆಯಲ್ಲಿ ಮೊದಲ ಹೆಜ್ಜೆ ಇಟ್ಟವರು ಆಗಿನ ಮುಂಬಯಿ ಸರಕಾರದಲ್ಲಿ ಶಿಕ್ಷಣಾಧಿಕಾರಿಗಳಾಗಿದ್ದ ಬಾಳಶಾಸ್ತ್ರಿ ಜಾಂಭೇಕರರು. ಆ ಪ್ರಾಂತದ ಮರಾಠೀ, ಗುಜರಾತೀ ಮಕ್ಕಳಿಗಿದ್ದಂತೆ ಕನ್ನಡ ಮಕ್ಕಳಿಗೂ ಮಾತೃಭಾಷೆಯಲ್ಲಿಯೆ ಪ್ರಾಥಮಿಕ ಶಿಕ್ಷಣ ದೊರೆಯಬೇಕೆಂಬುದು ಸರಕಾರೀ ನಿರ್ಣಯವಾಗಿದ್ದಿತು. ಆದರೆ ಕನ್ನಡ ಪುಸ್ತಕಗಳು ಇದ್ದುವೆಲ್ಲಿ? ಮೈಸೂರು ಸರಕಾರದವರ ಪಠ್ಯಗಳು ಇಲ್ಲಿಯ ಶಿಕ್ಷಣ ಕ್ರಮಕ್ಕೆ ಹೊಂದುವಂತಿರಲಿಲ್ಲ. ಆದಕಾರಣ

ಕನ್ನಡ ಶಿಲಾಮುದ್ರಣಕ್ಕೆ ಜಾಂಭೇಕರರು ಅಣಿಯಾದರು. ಅದಕ್ಕಾಗಿ ಶಿಲೆ ಬೇಕಲ್ಲ? ಕರ್ನೂಲಿನಿಂದ ಮೆದುಕಲ್ಲಿನ ಫಲಕ (Slabs) ಕೊರೆಯಿಸಿ ತರಿಸಲಾಯಿತು. ಹಾಗೆ ಮುದ್ರಿಸಿದ ಕನ್ನಡ ಪುಸ್ತಕದ ಹೆಸರು "ಸಂಣ್ಣ ಹಿತೋಪದೇಶ" ಎಂಬುದು (೧೮೩೬). ಅದರ ಮುಖಪುಟವನ್ನು ಅದರಲ್ಲಿದ್ದಂತೆಯೇ ಇಲ್ಲಿ ಕೊಡಲಾಗಿದೆ :

॥ ಸಂಣ್ಣ ಹಿತೋಪದೇಶ ॥

ಯಿ ಗ್ರಂಥ ಕನ್ನಡ ಸಾಲೆವಳಗೆ ವೊದುವಂಥಾ
ಯೇಳು ಯೆಂಟ್ಟು ವರಷದ ಹುಡಗರಿಗೆ ಥೊಡೆ
ಕಷ್ಟದಿಂದಾ ಚೆಲೊ ತನದ ತಿಳವಳಿಕೆ ಆಗ
ಬೇಕೆಂದು ಬಹು ಪ್ರೀತ್ತೆಯಿಂದ್ಯಾ ಕೊಡಲ್ಪಟ್ಟಿದೆ.

॥ ಮುಂಬಯಿ ಹೆಸರು
ವುಳ್ಳ ಅರಮನಿಯ
ಛಾಪಖಾನೆಯಲ್ಲಿ
ಛಾಪಿಸಿದ
ಸಂನ್ನು ೧೮೩೬
ಶಕೆ ೧೭೫೮.

ಆಗಿನ ಕಾಲಕ್ಕೆ ಶುದ್ಧವಾದ ಕನ್ನಡ ಬರವಣಿಗೆ ರೂಢವಾಗಿರಲಿಲ್ಲವೆಂಬುದರ ಜೊತೆಗೆ ಕಲ್ಲಿನ ಮೇಲೆ ಅಕ್ಷರ ಕೆತ್ತಿದವನ ತಪ್ಪುಗಳೂ ಸೇರಿಕೊಂಡಿವೆ. ಉದಾ. ಗೆ ಒಂದು ಶಬ್ದ ಅದೇ ವಾಕ್ಯದಲ್ಲಿ ಎರಡು ಬಾರಿ ಬಂದಾಗ ಆದಂಥ ತಪ್ಪು ಇದು :

'ಬೆಳಿಗ್ಗೆ ವಿದ್ಯಾಭಾಸ ಮಾಡಿದರೆ ವಿದ್ಯಾ ಬಾಸ ಬರತದೆ.'

ಮುಂದಿನ ಹೆಜ್ಜೆ ಬಾಸೆಲ್ ಮಿಶನ್ನಿನವರದ್ದು. ಮಂಗಳೂರಿಗೆ ೧೮೩೪ ರಲ್ಲಿ ಬಂದರಾದರೂ, ಏಳೆಂಟು ವರ್ಷ ಮುದ್ರಣಕ್ಕೆ ತೊಡಗಿರಲಿಲ್ಲ. ಕ್ರಿ.ಶ. ೧೮೪೨ ರಲ್ಲಿ ಅವರಿಗೆ ಮುಂಬಯಿಯಲ್ಲಿ ಒಂದು ಮುದ್ರಾಯಂತ್ರ ದಾನವಾಗಿ ದೊರಕಿತು. ಅಲ್ಲಿಯೇ ಕನ್ನಡ ಬಲ್ಲ ಆನಂದರಾವ್ ಎಂಬ ವ್ಯಕ್ತಿಯಿಂದ ತಮ್ಮ ಹಾಡುಗಳ ಸಂಗ್ರಹ "ಗೀತಗಳು" ಎಂಬುದನ್ನು ಬರೆಯಿಸಿ ಮುದ್ರಿಸಿಕೊಂಡೇ ಬಂದರು (ಚಿತ್ರ ೨). ಆಮೇಲೆ ತಮ್ಮ ದೇಶದಲ್ಲಿ ಕನ್ನಡದ ಮೊಳೆಗಳನ್ನು ಎರಕ ಹೊಯ್ಯಿಸಿ ನಿಯಮಿತವಾಗಿ ಮುದ್ರಣಕ್ಕೆ ಅಣಿಯಾಗುವ ಮುನ್ನ (೧೮೫೦) ಶಿಲಾಮುದ್ರಣವನ್ನೇ ನೆಚ್ಚಿಕೊಂಡರು. ಅದಕ್ಕೆ ಬೇಕಾದ ಶಿಲಾಫಲಕಗಳನ್ನು ಜರ್ಮನಿಯಿಂದ ತರಿಸಿಕೊಂಡರು.



ಮರುವರ್ಷವೇ ಅವರು ಪತ್ರಿಕೆಯೊಂದನ್ನು ಕಲ್ಲಚ್ಚಿನಲ್ಲಿ ಹೊರತಂದರು. ಅದುವೇ ಆದ್ಯ ಕನ್ನಡ ಪತ್ರಿಕೆ 'ಮಂಗಳೂರು ಸಮಾಚಾರ' (ಚಿತ್ರ ೩). ಇಲ್ಲಿಯ ಅಕ್ಷರಗಳ ವಿನ್ಯಾಸದ ಬಗೆಯನ್ನು ಗಮನಿಸಬೇಕು, ಏಕಪ್ರಕಾರವಾಗಿ, ಅಚ್ಚುಕಟ್ಟಾಗಿ ಮೂಡಿ ಬಂದಿವೆಯಲ್ಲವೆ. ಆ ಮುಂದಿನ ಅವರ ವಿಶೇಷ ಪ್ರಯತ್ನ ಹಳಗನ್ನಡ ಕಾವ್ಯಗಳದ್ದು. ಒಂದಲ್ಲ ಏಳೆಂಟು ಕಾವ್ಯಗಳು : 'ರಾವಣ ದಿಗ್ವಿಜಯ' ಎಂಬ ಯಕ್ಷಗಾನವೂ ಸೇರಿದಂತೆ, ದಾಸರ ಪದಗಳು, ಜೈಮಿನಿಭಾರತ, ಕುಮಾರವ್ಯಾಸಭಾರತ (ಕೆಲವು ಪರ್ವಗಳು), ಹರಿಭಕ್ತಿಸಾರ, ಚೆನ್ನಬಸವಪುರಾಣ ಮತ್ತು ಬಸವಪುರಾಣ. ಈ ಕೊನೆಯ ಗ್ರಂಥವು ಫೂಲ್ಸ್‌ಕ್ಯಾಪ್ ಆಕಾರದ ೬೨೦ ಪುಟಗಳನ್ನು ಆಕ್ರಮಿಸಿದ್ದು, ಒಟ್ಟಿನ ಶಿಲಾಮುದ್ರಣದ ಅತಿ ದೊಡ್ಡ ಕೃತಿಯೆನಿಸಿದೆ. (ಚಿತ್ರ ೪).


ಮಂಗಳೂರ ಸಮಾಚಾರ


ಬಸವಪುರಾಣವು.

ಈ ಕೃತಿಗಳನ್ನು ಮುದ್ರಣಕ್ಕೆ ಅಣಿಗೊಳಿಸುವಾಗ, ಕಾಗದದ ಸೈಜ್, ಅಕ್ಷರಗಳ ಗಾತ್ರ, ಸಾಲುಗಳ ಮಧ್ಯೆ ಬಿಡಬೇಕಾದ ಜಾಗ– ಮುಂತಾದ ಅಂಶಗಳನ್ನು ಸೂಕ್ಷ್ಮವಾಗಿ ಆಲೋಚಿಸಿಯೆ ಮುಂದುವರಿದರು. ಅಲ್ಲದೆ, ಹಾಗೆ ಬರೆಯುವವರ ಬಗ್ಗೆ ಯೋಗ್ಯರನ್ನು ಆರಿಸಿ, ನಿಯಮಿತ ಸಂಬಳದ ಮೇಲೆ ಗೊತ್ತು ಮಾಡಿದ್ದರು. (ಈ ಬಗ್ಗೆ ಅವರ ಸುದೀರ್ಘ ಪತ್ರವ್ಯವಹಾರವೇ ಇದೆ.) ಇಂತು ಕಲ್ಲಚ್ಚಿನ ಮುದ್ರಣ ವಿಚಾರವಾಗಿ ಗುಣ ಮತ್ತು ಗಾತ್ರ ಇವೆರಡರಲ್ಲಿಯೂ ಬಾಸೆಲ್ ಮಿಶನ್ನಿನವರ ಕೊಡುಗೆ ಅನನ್ವಿತವಾದದ್ದು.

ಬೆಂಗಳೂರು, ಮೈಸೂರು ಕಡೆಗಳಲ್ಲಿ ಮೊಳೆಗಳ ಮುದ್ರಣವೇ ಮೊದಲಿನಿಂದ,

ಅಂದರೆ ೧೮೪೦ ರಿಂದ ಮೊದಲಾಗಿದ್ದಿತು. ಆದರೆ ಮೈಸೂರು ಅರಮನೆಯ ಪ್ರಕಟನೆಗಳಲ್ಲಿ ಚಿತ್ರಗಳನ್ನು ಶಿಲೆಯಲ್ಲಿ ಬಿಡಿಸಿ ಮುದ್ರಿಸಿದುದು ಕಂಡುಬರುತ್ತದೆ (ಚಿತ್ರ ೫).



ಇತ್ತ ಉತ್ತರ ಕರ್ನಾಟಕದಲ್ಲಿ ಮುದ್ರಣ ಕಾರ್ಯವೆಂಬುದೇ ತಡವಾಗಿ ಎಂದರೆ ೧೮೫೫ ರಲ್ಲಿ ಆರಂಭವಾಯಿತು. ಯಥಾಪ್ರಕಾರ ಕಲ್ಲಚ್ಚಿನದು. ಧಾರವಾಡದ ಸುಪ್ರಸಿದ್ಧ ಟ್ರೇನಿಂಗ್ ಕಾಲೇಜಿನಿಂದ ಹೊರಡುತ್ತಿದ್ದ 'ಕನ್ನಡ ಶಾಲಾಪತ್ರಕ'ವು ಸುರುವಿಗೆ ಕಲ್ಲಚ್ಚಿನಲ್ಲಿ ಮೂಡಿಬಂದಿತು. ಸಣ್ಣ ಗಾತ್ರದ ವ್ಯಾವಹಾರಿಕ ಉಪಯೋಗದ ಪುಸ್ತಕಗಳು ಇದೇ ರೀತಿಯವು. ಅಂಥ ಒಂದು ಪುಸ್ತಕವೆಂದರೆ 'ಸುಭಾಷಿತ ಗ್ರಂಥಮಾಲಾ' (೧೮೬೫). ಕಲ್ಲಿನ ಮೇಲೆ ಬರೆಯುವುದರ ಪರಿಶ್ರಮವನ್ನು ಮನಗಂಡು, ಬರೆದವನ ಹೆಸರನ್ನೇ ಶೀರ್ಷಿಕಾ ಪುಟದಲ್ಲಿ ಕಾಣಿಸಲಾಗಿದೆ (ಚಿತ್ರ ೬). ಸುರುವಿಗೆ ಈ ಉದ್ಯಮದಲ್ಲಿ ತೊಡಗಿದ ಬಿನ್ನಾಡ ಚೆನ್ನವೀರಪ್ಪ ಮತ್ತು ಸುರ್ಜಾನಸಿಂಗ್ ಬಂಧುಗಳನ್ನು ನೆನೆಯಬೇಕು.



೭. ಮುಂಬಯಿ ಕರ್ನಾಟಕದಲ್ಲಿ ವ್ಯಾಪಕವಾಗಿ ನಡೆಯುತ್ತಿದ್ದ ಕಲ್ಲಚ್ಚಿನ ಪುಸ್ತಕದ ಒಂದು ಮಾದರಿ (೧೮೭೦).

ಆಗಿನ ಪಠ್ಯ ಪುಸ್ತಕಗಳಿಗಂತೂ ಶಿಲಾಮುದ್ರಣವೇ ತಾರಕವಾಗಿದ್ದಿತು (ಚಿತ್ರ ೭). ಆದರೆ ದಶಸಹಸ್ರ ಲೆಕ್ಕದಲ್ಲಿ ಬೇಕಾಗಿದ್ದ ಪಠ್ಯ ಪುಸ್ತಕಗಳನ್ನು ಕಲ್ಲಚ್ಚಿನಿಂದ ಹೊರತರುವುದು ಕಷ್ಟಕರವಾದದ್ದೆನಿಸಿತು. ಹೀಗಾಗಿ, ಪಠ್ಯಗಳನ್ನು ಮೊಳೆಗಳ ಮುದ್ರಣದಲ್ಲಿ ಬೃಹತ್ತಾಗಿ ಬೆಳೆದಿದ್ದ ಬಾಸೆಲ್ ಮಿಶನ್ ಪ್ರೆಸ್ಸಿನಲ್ಲಿ ಮುದ್ರಿಸ ತೊಡಗಿದರು.

ಕಲ್ಲಚ್ಚಿನ ಶಿಲಾಮುದ್ರಣದ ಇನ್ನೊಂದು ಕ್ಷೇತ್ರ ಕನ್ನಡ ಪತ್ರಿಕೆಗಳದ್ದು. ಉತ್ತರ ಕರ್ನಾಟಕದ ಅನೇಕ ವಾರ ಹಾಗೂ ಮಾಸಪತ್ರಿಕೆಗಳು ಹಾಗೆ ಬೆಳಕು ಕಂಡಿವೆ. ಜ್ಞಾನಬೋಧಕವು (೧೮೬೨), ಸತ್ಯವ್ರತ (೧೮೮೮) ರಸಿಕರಂಜಿನಿ (೧೮೮೪) ಇತ್ಯಾದಿ. ಅಂತೂ ೧೮೯೦ ರ ಒಳಗಿನ ಅವಧಿಯಲ್ಲಿ, ಮುಂಬಯಿ ಕರ್ನಾಟಕದಲ್ಲಿ ಹೊರಟಂಥ ಎಲ್ಲ ಪತ್ರಿಕೆಗಳೂ ಕಲ್ಲಚ್ಚಿನವೇ. ಸಂಬಂಧಪಟ್ಟವರಿಗೆ ಅದೊಂದು ಸುಲಭವಾದ ಉದ್ಯಮವಾಗಿ ಕಂಡಿತೇನೋ; ಹೇಗೊ, ಎಂತೂ ಬರೆಸುವುದು, ನೂರಿನ್ನೂರು ಪ್ರತಿಗಳನ್ನು ಮುದ್ರಿಸುವುದು. ಸದ್ದಾ ಮುದ್ದಾ ಅಕ್ಷರಗಳು; ಕರಡನ್ನು ತಿದ್ದುವ ಕೆಲಸವೇ ಇಲ್ಲದ್ದು. ಹೀಗಾಗಿ ಗುಣಮಟ್ಟದ ದೃಷ್ಟಿಯಿಂದ ತೀರ ಕಚ್ಚಾ ಸ್ವರೂಪದ ಮುದ್ರಣ ನಡೆಯಿತು.

ಈ ಪತ್ರಿಕೆಗಳಲ್ಲಿ ಬರುತ್ತಿದ್ದ ಜಾಹೀರಾತುಗಳದ್ದೇ ಒಂದು ಮೋಜು. ಗದುಗಿನ 'ರಸಿಕರಂಜಿನಿ' ವಾರಪತ್ರಿಕೆಯವರು ಈ ರೀತಿ ಜಾಹೀರಾತು ಕೊಡುತ್ತಿದ್ದರು: (ಚಿತ್ರ ೮ ನ್ನು ನೋಡುವುದು.)



ಪತ್ರಿಕೆಗಳ ಈ ಹಂಡಬಂಡ ಸ್ಥಿತಿಯನ್ನು ಕಂಡು ತ್ರಸ್ತನಾಗಿ ಚಿತ್ತವಾಡಗಿಯ ಓರ್ವ ವಾಚಕನು (ಹೆಸರು ಕೊಟ್ಟಿಲ್ಲ) ಅದೇ ರಸಿಕರಂಜಿನಿಯಲ್ಲಿ ಆಕ್ಷೇಪಿಸಿ ಪತ್ರವನ್ನು ಬರೆದ. ಸಂಪಾದಕರು ಅದಕ್ಕೆ ಏನೇನೊ ಸಬೂಬನ್ನು ಕೊಟ್ಟರೆಂದು ಕಾಣುತ್ತದೆ. ಇದಕ್ಕೆ ಉತ್ತರವಾಗಿ ಆ ವಾಚಕನು ಮತ್ತೆ ಬರೆದ–

'ನಿಮ್ಮ ನೂತನ ಪತ್ರದಲ್ಲಿ (ಪತ್ರಿಕೆ) ಇದ್ದ ದೋಷಗಳನ್ನು ಬಯಲಿಗೆ ಹಾಕಿ ಅದನ್ನು ಸುಧಾರಿಸಲಿಕ್ಕೆ ಹೇಳಿದರೆ 'ಬುದ್ಧೀ ಹೇಳಲಿಕ್ಕೆ ಹೋದರೆ ಬೈಯಲಿಕ್ಕೆ ಬಂದ' ಎಂಬೋ ರೀತ್ಯಾ ನಿಮ್ಮ ತಲೆ ತಿರಿಗಿ ಮಾಡಿದ ಅಕಾಂಡ

ತಾಂಡವಕ್ಕೆ ನಾನು ಇಷ್ಟು ಬರೆಯುವ ಶ್ರಮ ತಗೋಬೇಕಾಯಿತು. ಆಗಲಿ ಇನ್ನಾದರೂ ಬುದ್ಧೀ ತಂದುಕೊಂಡು ಪತ್ರವನ್ನು ಉತ್ತಮ ರೀತಿಯಿಂದಾ ತೆಗೆದರೆ ವಾಚಕರಿಗೆ ಮಹದುಪಕಾರ ಮಾಡಿದ ಹಾಗಾಗುವದು. ನಮ್ಮ ವಾಕ್ಯಾ[ಗ್ರ್ಯಾ]ದದಿಂದ ವಾಚಕರಿಗೆ ವೃಥಾ ಶಿರೋವೇದನಾ ಕೊಡೋದಲ್ಲದೆ ಉತ್ತಮ ಪತ್ರದ ಪೃಷ್ಠಳ ಸ್ಥಳವನ್ನು ವ್ಯರ್ಥ ಕಳಿಯುವದು ಶಿಷ್ಟತನವಲ್ಲಾ ಇಂನು ಪುನಃ ಲೇಖಣಿಯಂನು ನಿಮ್ಮ ಮೇಲೆ ಹಿಡಿಯುವ ಪ್ರಸಂಗವನ್ನು ತಾರದೇ ಇರುವಿರೆಂದು ನಂಬುತ್ತೇನೆ. ರಸಿಕ ರಂಜನಿಕರ್ತರೆ ಪ್ರಸಂಗವಶದಿಂದ ಆದ ಪತ್ರ ವಿಸ್ತಾರಕ್ಕೆ ಕ್ಷಮೆಯಿರಲಿ.

ತಮ್ಮ
"ಕ್ಷ"

ಚಿತವಾಡಗಿ
೯-೮-೧೮೯೦

ಮತ್ತೊಂದು ಜಾಹೀರಾತು 'ಚಂದ್ರೋದಯ'ದಲ್ಲಿ ಬಂದದ್ದು (ಚಿತ್ರ ೯). ಕಂಪನಿಯ ಹೆಸರನ್ನು ವರ್ತುಲದಲ್ಲಿ ಹಿಡಿದಿಟ್ಟ ರೀತಿಯನ್ನು ಗಮನಿಸಬೇಕು. ಆದರೆ ಈ ಜಾಹೀರಾತಿನಲ್ಲಿರುವ ತಪ್ಪುಗಳ ಮತ್ತು ಬರೆದ ರೀತಿಯಿಂದಾಗಿ ಯಾರೂ ಆ ವಸ್ತುವನ್ನು ಕೊಳ್ಳಲು ಮುಂದೆ ಬಂದಿರಲಾರರು!

ಈ ರೀತಿಯ ಅಪದ್ಧ ಮುದ್ರಣದಿಂದಾಗಿ ಕಿಟೆಲ್ಲರು ಒಂದೆಡೆ 'The Lithographs from Dharavada simply ruin the eyes' ಎಂದು ಉದ್ಗಾರವೆತ್ತಿದ್ದಾರೆ (೧೮೭೪).

ಮುಂದೆ ೧೮೮೪ ರ ದಶಕದಲ್ಲಿ ವೆಂಕಟ ರಂಗೋ ಕಟ್ಟಿಯವರು, ಶಿಕ್ಷಣಾಧಿಕಾರಿ ರಸೆಲ್ಲರ ಸಹಾಯದಿಂದ ಕನ್ನಡ ಮೊಳೆಗಳನ್ನು ತಯಾರಿಸಲು ಪ್ರಯತ್ನಪಟ್ಟರು. ಮುಂಬಯಿಯಿಂದ ಬಂದ ಅತ್ತಾವರ ಅನಂತಾಚಾರಿ ಎಂಬವರೂ ಈ ಕೆಲಸದಲ್ಲಿ ಉದ್ಯುಕ್ತರಾಗಿದ್ದರು. ಅದಕ್ಕಿಂತ ಬೆಂಗಳೂರಿನಲ್ಲಿ ದೇಶೀಯರಿಂದಲೇ ಟೈಪ್ ಫೌಂಡ್ರಿಗಳು ಸ್ಥಾಪಿತವಾಗಿ ಕನ್ನಡದಲ್ಲಿಯ ಮೊಳೆಗಳು ದೊರೆಯುವಂತಾದುವು. ಅಂತೂ ಇಪ್ಪತ್ತನೆಯ ಶತಮಾನದ ಆರಂಭದಿಂದ ಕಲ್ಲಚ್ಚಿನ ಪುಸ್ತಕಗಳು ಕಾಣಸಿಗುವುದಿಲ್ಲ.



ಅಂದರೇನಾದಹಾಗಾಯಿತು? ೧೮೩೦ ರ ದಶಕದಿಂದ ಸುಮಾರು ೭೦ ವರ್ಷಗಳಲ್ಲಿ ಮಾತ್ರ ಕಲ್ಲಚ್ಚಿನ ಆವಿಷ್ಕಾರವಾಯಿತು. ಇಂಥ ಪುಸ್ತಕಗಳನ್ನು ಮನೆಯಲ್ಲಾಗಲೀ ಗ್ರಂಥಾಲಯಗಳಲ್ಲಿಯಾಗಲೀ ಕಾಯ್ದಿರಿಸುವ ಪ್ರವೃತ್ತಿ ಕಂಡುಬರುವುದಿಲ್ಲ. ಕಳಪೆಯ ಕಾಗದ ಬಳಕೆಯೂ ಈ ದುಃಸ್ಥಿತಿಗೆ ಕಾರಣವಾಯ್ತು.

ಆದರೆ ಹಸ್ತ ಲಿಖಿತ ಪ್ರತಿಯಿಂದ ಸಾವಿರಾರು ಪ್ರತಿಗಳ ಮುದ್ರಣಕ್ಕೆ ಸಾಗುವ ಘಟ್ಟದಲ್ಲಿ ಈ ಸಾಹಿತ್ಯ ರಾಶಿ ಒಂದು ಸೇತುವೆಯಾಗಿತ್ತು. ಅಲ್ಲದೆ ಅಪೂರ್ವವೂ ಮೌಲಿಕವೂ ಆದ ಅನೇಕ ಕೃತಿಗಳನ್ನೂ ಪತ್ರಿಕೋದ್ಯಮ ಚರಿತ್ರೆಯಲ್ಲಿನ ಆರಂಭದ ಪತ್ರಿಕೆಗಳನ್ನೂ ಹೊರತಂದ ಹೊಸಗನ್ನಡ ಸಾಹಿತ್ಯದ ನಿರ್ಮಿತಿಯಲ್ಲಿ ಅವುಗಳ ಪಾತ್ರ ಗಣನೀಯವಾದದ್ದು.

■ ಡಾ. ಶ್ರೀನಿವಾಸ ಹಾವನೂರ, ಕೆ ಟಿ ಸಿ, ಬಲ್ಮಠ, ಮಂಗಳೂರು-೫೭೫ ೦೦೧ ■

ಜಾಗತೀಕರಣ-ಖಾಸಗೀಕರಣ-ಉದಾರೀಕರಣಗಳು ಈ ದೇಶದ ಮೇಲೆ ಬೀರುವ ಇತ್ಯಾತ್ಮಕ ಮತ್ತು ನೇತ್ಯಾತ್ಮಕ ಪರಿಣಾಮಗಳ ಬಗ್ಗೆ ನಾನು ಬೇಕಷ್ಟು ಬಾರಿ ಚರ್ಚಿಸಿದ್ದೇನೆ. ಈ ಹಿನ್ನೆಲೆಯಲ್ಲಿ ನನ್ನ ಗ್ರಹಿಕೆಗಳು ಇವು :

೧) ಜಾಗತೀಕರಣದಿಂದ ದೇಶದಲ್ಲಿ ಆಗುವ ಅಭಿವೃದ್ಧಿ ಅಭದ್ರ ಅಭಿವೃದ್ಧಿಯಾಗಿದೆ. ಈ ದೇಶದ ರಾಜಕೀಯ ಪರಮಾಧಿಕಾರಕ್ಕೆ ಒಳಪಡದ ಯಾವುದೇ ಸಂಸ್ಥೆ ತನಗೆ ಪ್ರತಿಕೂಲ ಸನ್ನಿವೇಶ ಉಂಟಾದಾಗ ಹೂಡಿಕೆಯನ್ನು ಹಿಂತೆಗೆದುಕೊಳ್ಳಬಹುದು. ಆಗ ಅದರ ಚರಾಸ್ತಿಗಳೆಲ್ಲವೂ ಹೊರಟುಹೋಗುತ್ತದೆ. ಈ ಚರಾಸ್ತಿಗಳು ರೂಪಿಸಿರುವ ಭ್ರಮಾತ್ಮಕ ಅಭಿವೃದ್ಧಿಯ ಪರದೆ ಹರಿದು ಹೋಗುತ್ತದೆ.

೨) ಜಾಗತೀಕರಣ ಕಾಣಿಸುವಂತಹ ಅಭಿವೃದ್ಧಿಯೇನಿದೆಯೋ ಅದು ಬರಿಯ ಆರ್ಥಿಕಾಭಿವೃದ್ಧಿಯಷ್ಟೇ ಆಗಿದ್ದು ಆ ಆರ್ಥಿಕಾಭಿವೃದ್ಧಿ ಕೂಡ ಸಮಾಜದ ಮೇಲು-ಸ್ತರವನ್ನು ಅಭಿವೃದ್ಧಿಯ ಪ್ರಕ್ರಿಯೆಗೆ ಒಳಪಡಿಸುತ್ತದೆಯೇ ಹೊರತು ಕೆಳಸ್ತರದಲ್ಲಿ ಅಭಿವೃದ್ಧಿ ಪ್ರಕ್ರಿಯೆ ನಡೆಯುವುದಿಲ್ಲ.

೩) ಜಾಗತೀಕರಣದ ಸಾಂಸ್ಕೃತಿಕ ಪರಿಣಾಮಗಳು ಸಾಂಸ್ಕೃತಿಕ ಕಾರಣಗಳಿಗಾಗಿ ತಾರತಮ್ಯ ಉಳ್ಳ ಈ ಸಮಾಜವನ್ನು ತಾರತಮ್ಯರಹಿತ ಸಮಾಜವಾಗಿ ರೂಪಿಸಲು ಅಶಕ್ತವಾಗಿವೆ. ಇದಕ್ಕೆ ಬಹಳ ಮುಖ್ಯವಾದ ಎರಡು ಕಾರಣಗಳಿವೆ. ಮೊದಲನೆಯದಾಗಿ, ಒಂದು ಆರ್ಥಿಕ ಧೋರಣೆಯಾಗಿ ಬಂದಿರುವ ಜಾಗತೀಕರಣಕ್ಕೆ ತಾರತಮ್ಯರಹಿತ ಸಮಾಜ ನಿರ್ಮಾಣದ ಯಾವ ಉದ್ದೇಶವೂ ಇಲ್ಲ. ಅದು ಈ ದೇಶದ ಸಾಮಾಜಿಕ ತಾರತಮ್ಯದ ನೆಲೆಗಳ ಆಳ ಅಭ್ಯಾಸಕ್ಕೆ ತೊಡಗಿಯೂ ಇಲ್ಲ. ಮತ್ತು ದೇಶದ ಸಾಮಾಜಿಕ ತಾರತಮ್ಯದ ನೆಲೆಗಳು ಯಥಾಸ್ಥಿತಿಯನ್ನು ಮುಂದುವರಿಸುವ ನಿಟ್ಟಿನಲ್ಲಿ ಜಾಗತೀಕರಣದ ಸಾಂಸ್ಕೃತಿಕ ಪರಿಣಾಮವನ್ನು ಹಿಮ್ಮೆಟ್ಟಿಸಬಲ್ಲಷ್ಟು ಬಲಿಷ್ಠವಾಗಿವೆ. ತಾರತಮ್ಯರಹಿತ ಸಮಾಜ ನಿರ್ಮಾಣದ ಉದ್ದೇಶವು ಅಂತರಂಗದ ತುಡಿತವಾಗಿ ಬಂದಂತಹ ಕ್ರಿಯೆಗಳನ್ನೇ ಬಹುಮಟ್ಟಿಗೆ ಹಿಮ್ಮೆಟ್ಟಿಸಲು ಸಶಕ್ತವಾದ ಯಥಾಸ್ಥಿತಿವಾದಿ ನೆಲೆಗಳಿಗೆ ಅಂತಹ ಯಾವ ತುಡಿತವೂ ಇಲ್ಲದಿರುವ ಜಾಗತೀಕರಣವನ್ನು ಎದುರಿಸುವುದು ಅಸಾಧ್ಯದ ಮಾತೇನಲ್ಲ. ಈ ವಿಚಾರಕ್ಕೆ ಪೂರಕವಾಗಿ ಎರಡನೆಯ ಕಾರಣ ತೆರೆದುಕೊಳ್ಳುತ್ತದೆ. ಜಾಗತೀಕರಣದ ಸಾಂಸ್ಕೃತಿಕ ದಾಳಿಗೆ ಪರ್ಯಾಯವೇನೋ ಎಂಬ ಭ್ರಮಾತ್ಮಕ ನೆಲೆಯಲ್ಲಿ ರೂಪುಗೊಂಡಿರುವ ಮತೀಯವಾದಿ ನೆಲೆಗಳು ಸಾಮಾಜಿಕ ಯಥಾಸ್ಥಿತಿಯನ್ನು ಕಾಯ್ದುಕೊಂಡುಬಿಡುತ್ತವೆ. ಈ ವಿಚಾರಕ್ಕೆ ಎರಡು ಸ್ವರೂಪಗಳಿವೆ. ಮೊದಲನೆಯದಾಗಿ, ಮತೀಯವಾದಿ ನೆಲೆಗಳು ಸಂಸ್ಕೃತಿಯನ್ನು ಧರ್ಮದ ಆಧಾರದಲ್ಲಿ ವ್ಯಾಖ್ಯಾನಿಸುತ್ತವೆ. ಅದು ಏಕಧರ್ಮದ ಆಧಿಪತ್ಯವಿರುವ ಸಮಾಜದಲ್ಲಿ ಸಂಸ್ಕೃತಿನಿಷ್ಠವಾಗಬಹುದಾದರೂ ಯಾವುದೇ ಬಹುಜನಾಂಗೀಯ ವ್ಯವಸ್ಥೆಯಲ್ಲಿ ಸಂಸ್ಕೃತಿಯನ್ನು ಧರ್ಮದ ಆಧಾರದಲ್ಲಿ

ವ್ಯಾಖ್ಯಾನಿಸಿದಾಗ ಅದು ಸಾಮಾಜಿಕ ತಾರತಮ್ಯವನ್ನು ಎತ್ತಿಹಿಡಿಯುತ್ತದೆ. ಬಹುಜನಾಂಗೀಯ ವ್ಯವಸ್ಥೆಯಲ್ಲಿ ಸಂಸ್ಕೃತಿಯನ್ನು ಸಮಾಜಶಾಸ್ತ್ರೀಯ ದೃಷ್ಟಿಕೋನದಲ್ಲಿ ವ್ಯಾಖ್ಯಾನಿಸುವುದೇ ಅತ್ಯಗತ್ಯವಾಗಿರುತ್ತದೆ. ಆದರೆ ಮತೀಯವಾದಿ ನಿಲುಮೆಗಳು ದಟ್ಟವಾಗಿರುವಾಗ ಸಂಸ್ಕೃತಿಯನ್ನು ಸಮಾಜಶಾಸ್ತ್ರೀಯ ದೃಷ್ಟಿಕೋನದಲ್ಲಿ ಗ್ರಹಿಸುವ ಶಕ್ತಿಗಳು ದುರ್ಬಲವಾಗುತ್ತವೆ. ಅಲ್ಲದೆ ಧರ್ಮದ ಆಧಾರದಲ್ಲಿ ವ್ಯಾಖ್ಯಾನಿಸಲ್ಪಡುವ ಸಂಸ್ಕೃತಿ ಆತ್ಯಂತಿಕವಾಗಿ ಯಥಾಸ್ಥಿತಿಯದಾಗಿರುತ್ತದೆ. ಇದರ ಎರಡನೆಯ ಸ್ವರೂಪವೆಂದರೆ, ಮತೀಯವಾದಿ ನಿಲುಮೆಗಳು ಸಂಸ್ಕೃತಿಯ ಮುಖೇನ ಪ್ರತಿಪಾದಿಸುವ ಆರ್ಥಿಕ ಧೋರಣೆಯೂ, ಜಾಗತೀಕರಣವು ನೇರವಾಗಿ ಪ್ರತಿಪಾದಿಸುವ ಆರ್ಥಿಕ ಧೋರಣೆಯೂ ಒಂದೇ ಆಗಿದ್ದು ಅವು ತಾರತಮ್ಯ ಉಳ್ಳ ಸಮಾಜಕ್ಕೆ ನಿಷ್ಠವಾಗಿಯೇ ಇವೆ. ತಾರತಮ್ಯಪರವಾದ ಆರ್ಥಿಕ ಧೋರಣೆ ಉಳ್ಳ ಶಕ್ತಿಗಳಿಂದ ತಾರತಮ್ಯರಹಿತ ಸಮಾಜ ನಿರ್ಮಾಣ ಸಾಧ್ಯವಾಗುವುದಿಲ್ಲ. ನೆಹರೂ ಕಲ್ಪನೆಯ ನಗರೀಕರಣ ಹಾಗೂ ಶಿಕ್ಷಣದಿಂದ ಸಾಮಾಜಿಕ ತಾರತಮ್ಯ ನಿವಾರಣೆಯ ಸಾಧ್ಯತೆಗಳು ಸುಳ್ಳು ಎನ್ನುವುದು ಕಣ್ಣಿಗೆ ರಾಚುತ್ತಿರುವ ಸಂಗತಿಯಾಗಿದೆ. ಸುಶಿಕ್ಷಿತರೇ ಮತೀಯವಾದಿ ತೆಕ್ಕೆಯೊಳಗಿರುವುದು ಈ ಅಭಿಪ್ರಾಯವನ್ನು ಪುಷ್ಟೀಕರಿಸುತ್ತದೆ. ಶಿಕ್ಷಿತರು ಯಾಕೆ ಮತೀಯವಾದಿ ತೆಕ್ಕೆಯೊಳಗಿದ್ದಾರೆಂಬುದರ ನಾನಾ ಕಾರಣಗಳ ಚರ್ಚೆ ಈ ಲೇಖನಕ್ಕೆ ಅನಗತ್ಯವಾದ್ದರಿಂದ ಈ ಅಂಶವನ್ನು ವಿಸ್ತರಿಸುವುದಿಲ್ಲ. ಒಟ್ಟಾರೆಯಾಗಿ ಜಾಗತೀಕರಣದ ಸಾಂಸ್ಕೃತಿಕ ಪರಿಣಾಮದಿಂದ ಸಾಮಾಜಿಕ ತಾರತಮ್ಯ ನಿವಾರಣೆ ಅಸಾಧ್ಯ.

೪) ವಿಶ್ವಸಮಾಜದ ಪರಿಕಲ್ಪನೆ ನಾಗರಿಕ ಸಮಾಜದ ಸದಾ ಕಾಲದ ತುಡಿತವಾಗಿದ್ದರೂ ಅದು ಆದರ್ಶವೇ ಹೊರತು ವಾಸ್ತವವಲ್ಲ. ಪ್ರತಿಯೊಂದು ನಾಗರಿಕ ಸಮಾಜವೂ ಅದರದೇ ಆದ ರಾಜಕೀಯ ಅಧಿಕಾರ ಕೇಂದ್ರವನ್ನು ಹೊಂದಿರುತ್ತದೆ. ಈ ಅಧಿಕಾರವು ಕಾಲಕಾಲಕ್ಕೆ ಬೇರೆಬೇರೆ ಸ್ವರೂಪದಲ್ಲಿ ರಾಷ್ಟ್ರೀಯತೆಯ ಪರಿಕಲ್ಪನೆಯನ್ನು ಕಟ್ಟಿಕೊಟ್ಟಿದೆ. ಎಲ್ಲಿಯ ತನಕ ರಾಷ್ಟ್ರೀಯತೆಯ ಪರಿಕಲ್ಪನೆ ಇರುತ್ತದೋ ಅಲ್ಲಿಯ ತನಕ ವಿಶ್ವಸಮಾಜದ ಪರಿಕಲ್ಪನೆ ಅವಾಸ್ತವಿಕವೇ ಆಗಿರುತ್ತದೆ. ಜಾಗತೀಕರಣದ ಈ ಹೊತ್ತಿನ ಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಹೇಳುವುದಾದರೆ ಜಾಗತೀಕರಣಕ್ಕೆ ವಿಶ್ವಸಮಾಜದ ಕಡೆಗೆ ಮುಂದಡಿಯಿಡುವ ಪ್ರಾಥಮಿಕ ಪೂರ್ವಸಿದ್ಧತೆಯೂ ಇಲ್ಲ. ಹಾಗಿರುವಾಗ ಈಗ ಬಂದಿರುವ ಜಾಗತೀಕರಣದ ಆಶ್ರಯದಲ್ಲಿ ಯಾವುದೇ ರೀತಿಯಲ್ಲೂ ವಿಶ್ವಭ್ರಾತೃತ್ವದ ಅಂಶಗಳನ್ನು ಗುರುತಿಸಲು ಸಾಧ್ಯವಿಲ್ಲ.

ಈ ಹಿನ್ನೆಲೆಯನ್ನಿಟ್ಟುಕೊಂಡು ಹೇಳುವುದಾದರೆ ಇವತ್ತು ಯಾವ ಡಾ. ಮನಮೋಹನ್ ಸಿಂಗರನ್ನು ಜಾಗತೀಕರಣದ ಪ್ರವಾದಿಯೋಪಾದಿಯಲ್ಲಿ ಈ ದೇಶ ಗ್ರಹಿಸಬೇಕಾಗಿದೆಯೋ ಅವರಿಗಿಂತ ಚೆನ್ನಾಗಿ, ಜಾಗತೀಕರಣದಿಂದ ಈ ದೇಶಕ್ಕೆ ಒಳ್ಳೆಯದಾಗುವುದಿಲ್ಲವೆಂದು ತಿಳಿದಿರುವ ಮತ್ತೊಬ್ಬರಿರಲು ಸಾಧ್ಯವಿಲ್ಲ ಎಂಬುದು ನನ್ನ ನಂಬಿಕೆ. ಯಾಕೆಂದರೆ ಅರ್ಥಶಾಸ್ತ್ರ ಎನ್ನುವ ಅಧ್ಯಯನ ಶಾಖೆ ನಿಂತಿರುವುದೇ ಸಾಮಾಜಿಕ ನ್ಯಾಯದ ಪರಿಕಲ್ಪನೆಯ ಮೇಲೆ.

ಅಂಥಲ್ಲಿ ಅರ್ಥಶಾಸ್ತ್ರದ ಪ್ರಾಥಮಿಕ ತಿಳಿವಳಿಕೆಯುಳ್ಳ ಯಾರೊಬ್ಬರಿಗೂ ಜಾಗತೀಕರಣವು ಸಾಮಾಜಿಕ ನ್ಯಾಯವನ್ನು ಸಾಧಿಸುವುದಿಲ್ಲ ಎಂದು ಗೊತ್ತಿರುತ್ತದೆ. ಹಾಗಿರುವಾಗ ಈ ದೇಶದ ಅತ್ಯುತ್ತಮ ಅರ್ಥಶಾಸ್ತ್ರಜ್ಞರಲ್ಲೊಬ್ಬರಾದ ಪ್ರಧಾನಿ ಡಾ. ಸಿಂಗರಿಗೆ ಅದು ಗೊತ್ತಿಲ್ಲವೆಂದರೆ ಅದಕ್ಕಿಂತ ದೊಡ್ಡ ಜೋಕ್ ಬೇರೆ ಇರಲು ಸಾಧ್ಯವಿಲ್ಲ.

ಆದರೂ ಡಾ. ಸಿಂಗರೇಕೆ ಜಾಗತೀಕರಣದ ಪರ ವಾದಿಸುತ್ತಾರೆ ಎನ್ನುವುದು ಇಲ್ಲಿನ ಕೇಂದ್ರಪ್ರಶ್ನೆ. ಈ ಪ್ರಶ್ನೆ ಕೇವಲ ಡಾ. ಸಿಂಗರದಾಗಿರದೆ ವಿಶ್ವದ ಎಲ್ಲ ದುರ್ಬಲ ದೇಶಗಳ ಕಾರ್ಯಾಂಗ ಮುಖ್ಯಸ್ಥರ ಪ್ರಶ್ನೆಯೂ ಹೌದು. ಇದಕ್ಕೆ ಎಲ್ಲರಿಗೂ ಗೊತ್ತಿರುವ ಉತ್ತರ ಅಮೆರಿಕ ಮತ್ತದರ ಮಿತ್ರಕೂಟದ ಒತ್ತಡ. ಆದರೆ ಈ ಒತ್ತಡ ಇಂದಿರಾ ಗಾಂಧಿಯವರನ್ನೇಕೆ ಬಾಧಿಸಲಿಲ್ಲ ಅಥವಾ ಬಾಧಿಸಿದರೂ ಅವರು ಒತ್ತಡವನ್ನು ಮೀರಿ ನಿಲ್ಲಲು ಹೇಗೆ ಸಾಧ್ಯವಾಯಿತು ಎನ್ನುವುದನ್ನು ಜಾಗತಿಕ ರಾಜಕೀಯ ಸ್ಥಿತ್ಯಂತರದ ಹಿನ್ನೆಲೆಯಲ್ಲಿ ನೋಡಬೇಕಾಗುತ್ತದೆ. ಇಂತಹ ನೋಟ ಈ ದೇಶವನ್ನು ತನ್ನದೇ ಶಕ್ತಿಯಲ್ಲಿ ಕಟ್ಟಿ ನಿಲ್ಲಿಸಲು ಸಾಧ್ಯವಾಗುವ ಪ್ರಕ್ರಿಯೆಗಳತ್ತ ಬೆಳಕು ಚೆಲ್ಲಬಲ್ಲುದು.

ಇಂದಿರಾ ಅವರ ತಂದೆಯೂ, ಪಾಂಡಿತ್ಯದಲ್ಲಿ ಇಂದಿರಾಗಿಂತ ಉನ್ನತ ಮಟ್ಟದಲ್ಲಿದ್ದವರೂ ಆದ ನೆಹರೂ ಅವರಿಗೆ ವಾಸ್ತವವಾದಿ ನೆಲೆಯಲ್ಲಿ ಅಂತಾರಾಷ್ಟ್ರೀಯ ಸನ್ನಿವೇಶದಲ್ಲಿ ಭಾರತವನ್ನು ಹೇಗೆ ಸಶಕ್ತಗೊಳಿಸಬಹುದು ಎನ್ನುವ ಕಲ್ಪನೆ ಇಂದಿರಾಗಿಂತ ಕಡಿಮೆ ಇತ್ತೆಂದು ತೋರುತ್ತದೆ. ನೆಹರೂ ಭಾರತದ ಪ್ರಭಾವವನ್ನು ಅಂತಾರಾಷ್ಟ್ರೀಯ ವೇದಿಕೆಯಲ್ಲಿ, ಬೃಹತ್ ಕಾರ್ಖಾನೆಗಳಲ್ಲಿ ಕಾಣಲು ಯತ್ನಿಸಿದರೆ ಇಂದಿರಾ ದೇಶದ ತಳಮಟ್ಟದ ಬಲಸಂವರ್ಧನೆ ಅಂತಾರಾಷ್ಟ್ರೀಯ ವೇದಿಕೆಯಲ್ಲಿ ಭಾರತ ಪ್ರಭಾವಶಾಲಿಯಾಗುವುದಕ್ಕೂ ಕಾರಣವಾಗುತ್ತದೆ ಎಂಬುದನ್ನು ಗ್ರಹಿಸಿದ್ದರು. ಇಂದಿರಾ ಅವರ ದರ್ಪ, ಸರ್ವಾಧಿಕಾರಿ ಮನೋಧರ್ಮಗಳೇ ಮೊದಲಾದ ಅವರ ಮಿತಿಗಳ ನಡುವೆಯೂ ಭೂಸುಧಾರಣೆ, ಇಪ್ಪತ್ತು ಅಂಶಗಳ ಕಾರ್ಯಕ್ರಮಗಳಂತಹ ಪ್ರಭಾವಶಾಲಿ ಅಭಿವೃದ್ಧಿ ಪ್ರಕ್ರಿಯೆಗಳು ಒಂದಷ್ಟು ಜನರನ್ನು ಮೇಲೆತ್ತಲು ಸಾಧ್ಯವಾಗಿದ್ದರೆ ಅದರ ಕೀರ್ತಿ ಇಂದಿರಾ ಅವರಿಗೇ ಸಲ್ಲುತ್ತದೆ. ಈ ಅಂಶಕ್ಕೆ ನಾನು ಒತ್ತು ಕೊಡುತ್ತಿರುವುದಕ್ಕೆ ಕಾರಣವಿದೆ. ಯಾವುದೇ ಅಭಿವೃದ್ಧಿ ದೃಷ್ಟಿಕೋನದಲ್ಲಿ ಎರಡು ಕೇಂದ್ರಗಳಿರುತ್ತವೆ. ಮೊದಲನೆಯದು ನೆಹರೂ ಮಾದರಿಯದು. ಈ ಮಾದರಿಯ ದೃಷ್ಟಿಯಲ್ಲಿ ಯಥಾಸ್ಥಿತಿಯ ಸಮಾಜದಲ್ಲಿ ಯಾರು ಕೇಂದ್ರಸ್ಥಾನದಲ್ಲಿರುತ್ತಾರೋ ಅವರೇ ಅಭಿವೃದ್ಧಿ ಪ್ರಕ್ರಿಯೆಗೆ ಒಳಗಾಗುವ ಮೊದಲ ಪಾಲುದಾರರಾಗಿರುತ್ತಾರೆ. ಅವರು ಅಭಿವೃದ್ಧಿ ಪ್ರಕ್ರಿಯೆಗೆ ಒಳಗಾದಾಗ ಉಂಟಾಗುವ ಪರಿಣಾಮವು ಅವರಿಗೆ ಪೂರಕವಾಗುವಂತೆ ಅನ್ಯಕೇಂದ್ರಸ್ಥಾನದ ದುರ್ಬಲರು, ದಲಿತರು, ಆದಿವಾಸಿಗಳು, ಸಣ್ಣ ಮತ್ತು ಅತಿಸಣ್ಣ ರೈತರನ್ನು ಅಭಿವೃದ್ಧಿ ಪ್ರಕ್ರಿಯೆಗೆ ಒಳಪಡಿಸುತ್ತದೆ. ಎರಡನೆಯದು ಅಂಬೇಡ್ಕರ್ ಮಾದರಿಯ ಅಭಿವೃದ್ಧಿ. ಅದು ಪಾಶ್ಚಿಮಾತ್ಯ ರೀತಿಯ ಅಭಿವೃದ್ಧಿಯನ್ನು ಮನ್ನಿಸುತ್ತಿದ್ದು ಅದರ ಸಾಂಸ್ಕೃತಿಕ ಲೋಪ-ದೋಷಗಳೇನೇ ಇದ್ದರೂ ಅದು ಅನ್ಯಕೇಂದ್ರಸ್ಥಾನದ ವ್ಯವಸ್ಥೆಯ ತಳಮಟ್ಟವನ್ನೇ ಅಭಿವೃದ್ಧಿ ಪ್ರಕ್ರಿಯೆಯ ನಾಯಕ ಸ್ಥಾನದಲ್ಲಿರಿಸುತ್ತದೆ. ಇಂದಿರಾ ಅವರ ಕ್ರಮಗಳು ಅಂಬೇಡ್ಕರ್ ದೃಷ್ಟಿಯನ್ನು

ಆಧರಿಸದೆ ಇದ್ದರೂ ನೆಹರೂ ಮಾದರಿಗಿಂತ ಕೊಂಚ ಭಿನ್ನವಾಗಿ ಅಂಬೇಡ್ಕರ್ ದೃಷ್ಟಿಯತ್ತ ಒಲವಿರಿಸಿಕೊಂಡಿರುವುದಾಗಿತ್ತು. ಸಾಮಾಜಿಕ ಮುಗ್ಧತೆಯ ಹಿನ್ನೆಲೆಯಲ್ಲಿ ಇಂದಿರಾ ಅವರ ಕ್ರಮಗಳು ಎಷ್ಟು ಬಲಶಾಲಿಯಾದವೆಂದರೆ ಇವತ್ತಿಗೂ ಅನ್ಯಕೇಂದ್ರಸ್ಥಾನ ಕಾಂಗ್ರೆಸ್ ಪರವಾದ ಒಲವಿರಿಸಿಕೊಂಡಿದ್ದರೆ ಅದಕ್ಕೆ ಇಂದಿರಾ ಅವರೇ ಮೂಲ ಕಾರಣರಾಗಿದ್ದಾರೆ. ಇಂದಿರಾ ಅವರ ಮಗನೂ, ಇಂದಿರಾ ನೀತಿಗಳ ಪಾಲಕರೂ, ಶಿಕ್ಷಣದ ಬಗ್ಗೆ ಭಾರತದ ಪ್ರಧಾನಿಗಳಲ್ಲೇ ಅತ್ಯಂತ ಹೆಚ್ಚು ಕಾಳಜಿ-ಕಳಕಳಿ-ಪ್ರಾಮಾಣಿಕತೆ ಮಾತ್ರವಲ್ಲದೆ ಭ್ರಮೆಯನ್ನೂ ಇರಿಸಿಕೊಂಡಿದ್ದ ರಾಜೀವ್ ಗಾಂಧಿಯವರೂ ಇಂದಿರಾ ಗಮನಿಸಿದ ಶಕ್ತಿಕೇಂದ್ರಗಳನ್ನು ಅವರಷ್ಟು ಸಮರ್ಥವಾಗಿ ಗ್ರಹಿಸಲು ಸಾಧ್ಯವಾಗಲಿಲ್ಲ.

ಎರಡನೆಯ ಸಂಗತಿಯೆಂದರೆ, ಇಂದಿರಾ ಅವರ ಕಾಲಘಟ್ಟದಲ್ಲಿ ಅಮೆರಿಕಕ್ಕೆ ಅತ್ಯಂತ ಸಶಕ್ತ ಪ್ರತಿಸ್ಪರ್ಧಿಯಾದ ಯುಎಸ್‌ಎಸ್‌ಆರ್ ಅಮೆರಿಕದ ವಿಸ್ತರಣಾ ನೀತಿಗೆ ತಡೆ ಒಡ್ಡಿತ್ತು. ಎರಡು ಟಗರುಗಳು ಪರಸ್ಪರ ಜಗಳವಾಡುತ್ತಿರುವಾಗ ಮಿಕ್ಕ ಆಡುಗಳು ಕೊಂಚ ನೆಮ್ಮದಿಯಿಂದಿರಲು ಸಾಧ್ಯವಾಗುತ್ತದೆ. ಇಂದಿರಾ ಅವರು ಈ ಅವಕಾಶವನ್ನು ಭಾರತದ ಬಲವರ್ಧನೆಗೆ ಬಳಸಿಕೊಂಡಿದ್ದರು. ಹಾಗಂತ ಅದು ಯಶಸ್ವಿಯಾಗಿದೆಯೆಂದೇನಲ್ಲ. ಯಶಸ್ವಿಯಾಗಿರುತ್ತಿದ್ದರೆ ಇವತ್ತು ಮನಮೋಹನ್ ಸಿಂಗರು ಒತ್ತಡಕ್ಕೆ ಮಣಿಯಬೇಕಾದ ಅಗತ್ಯವಿರಲಿಲ್ಲ. ಈ ನಿಟ್ಟಿನಲ್ಲಿ ಯಾಕೆ ಯಶಸ್ವಿಯಾಗಲಿಲ್ಲ ಎನ್ನುವುದಕ್ಕೂ ಯುಎಸ್‌ಎಸ್‌ಆರ್ ನತ್ತಲೇ ನೋಡಬೇಕಾಗುತ್ತದೆ. ನೆಹರೂ, ಇಂದಿರಾ, ಶಾಸ್ತ್ರಿ ಇವರೆಲ್ಲರ ಕಾಲದ ಅಭಿವೃದ್ಧಿ ಪ್ರಕ್ರಿಯೆಗಳು ಮೂಲಭೂತವಾಗಿ ಯುಎಸ್‌ಎಸ್‌ಆರ್ ಕೃಪಾಶ್ರಯದಲ್ಲೇ ನಡೆದವುಗಳು ಹೊರತು ದೇಶೀಯವಾದದ್ದೇನಲ್ಲ. ಯುಎಸ್‌ಎಸ್‌ಆರ್‌ನ ಕೃಪೆಯನ್ನು ಪಡೆದಿದ್ದರೆ ಅದರಿಂದಾಗಿಯೇ ಯಾವ ತೊಂದರೆಯೂ ಆಗಬೇಕಿರಲಿಲ್ಲ. ಆದರೆ ಯುಎಸ್‌ಎಸ್‌ಆರ್ ಮಾದರಿಯ ಅಭಿವೃದ್ಧಿಗೆ ತೊಡಗುವುದರ ಬದಲಿಗೆ ಯುಎಸ್‌ಎಸ್‌ಆರ್ ನೆರವನ್ನು ದೇಶೀ ಮಾದರಿಯ ಅಭಿವೃದ್ಧಿಗೆ ತೊಡಗಿಸಿಕೊಳ್ಳಬೇಕಾಗಿತ್ತು. ವಾಸ್ತವವಾಗಿ ಯುಎಸ್‌ಎಸ್‌ಆರ್ ಮಾದರಿಯ ಅಭಿವೃದ್ಧಿ ನೆಹರೂ ಮಾದರಿಗಿಂತ ಭಿನ್ನವಾದುದೇನೂ ಅಲ್ಲ. ಈ ನಿಟ್ಟಿನಲ್ಲಿ ಇಂದಿರಾ ಯುಎಸ್‌ಎಸ್‌ಆರ್ ಮಾದರಿಗಿಂತ ಕೊಂಚ ಆಚೆ ಚಲಿಸಿದರಾದರೂ ಅದು ಯುಎಸ್‌ಎಸ್‌ಆರ್ ಮಾದರಿ ಅಥವಾ ನೆಹರೂ ಮಾದರಿಯ ವಿಶಾಲ ಸ್ವರೂಪವಾಯಿತೇ ಹೊರತು ಮೂಲಭೂತವಾಗಿ ಅನ್ಯಕೇಂದ್ರವನ್ನುದ್ದೇಶಿಸಿದ ಅಭಿವೃದ್ಧಿಯಾಗಲಿಲ್ಲ. ಇದನ್ನು ಯುಎಸ್‌ಎಸ್‌ಆರ್ ಒತ್ತಡ ಎನ್ನುವುದಕ್ಕಿಂತ ಯುಎಸ್‌ಎಸ್‌ಆರ್ ಪ್ರಭಾವ ಎನ್ನುವುದು ಸೂಕ್ತವಾಗುತ್ತದೆ. ಪ್ರಾಯಃ ಇಂದಿರಾ ಅಭಿವೃದ್ಧಿ ಕ್ರಮಗಳಿಗೆ ಸೈದ್ಧಾಂತಿಕ ಹಿನ್ನೆಲೆಯಿರದೆ ನೆಹರೂವಿಯನ್ ಪರಿಕಲ್ಪನೆಯೊಳಗೆ ಹಂತಹಂತವಾಗಿ ಸೇರಿಹೋಯಿತೆಂದು ತೋರುತ್ತದೆ.

ಮುಂದಿನದು ಯುಎಸ್‌ಎಸ್‌ಆರ್ ಕುಸಿತ. ಇವತ್ತು ಅದೇ ಯುಎಸ್‌ಎಸ್‌ಆರ್ ಇರುತ್ತಿದ್ದರೆ ಯುಎಸ್‌ಎ ಇರಾಕ್ ಮೇಲೆ ಆಕ್ರಮಣ ಮಾಡಲು ಸಾಧ್ಯವಿರುತ್ತಿರಲಿಲ್ಲ. ಯುಎಸ್‌ಎ ಯುದ್ಧನೌಕೆಗಳು ಹೊರಡುವ ಮೊದಲೇ ಯುಎಸ್‌ಎಸ್‌ಆರ್‌ನ

ಯುದ್ಧನೌಕೆಯೊಂದು ಗಲ್ಫ್ ಪ್ರದೇಶದಲ್ಲಿ ಲಂಗರು ಹಾಕಿರುತ್ತಿತ್ತು. ಯುಎಸ್‌ಎ ಮಿತ್ರಕೂಟ ಅಭಿವೃದ್ಧಿಶೀಲ ರಾಷ್ಟ್ರಗಳೊಂದಿಗೆ ಆರ್ಥಿಕ ಒಪ್ಪಂದಗಳನ್ನು ಮಾಡಿಕೊಳ್ಳುವಾಗಲೆಲ್ಲ ಯುಎಸ್‌ಎಸ್‌ಆರ್ ಅಡ್ಡಗಾಲು ಹಾಕುತ್ತಿತ್ತು. ಕನಿಷ್ಠ ಈ ಶಕ್ತಿ ಸಮತೋಲನವು ಅಭಿವೃದ್ಧಿಶೀಲ ರಾಷ್ಟ್ರಗಳನ್ನು ಅಮೆರಿಕದ ಒತ್ತಡದಿಂದ ಹೊರಗಿರಲು ಸಹಾಯ ಮಾಡುತ್ತಿತ್ತು. ಆದರೆ ಯುಎಸ್‌ಎಸ್‌ಆರ್ ಕುಸಿಯಿತು. ಅದರ ಕುಸಿತಕ್ಕೆ ಕಾರಣರಾದ ಮಿಖೈಲ್ ಗೋರ್ಬಚೇವ್ ಮಹಾನ್ ಜನತಾಂತ್ರಿಕ ಪ್ರವಾದಿಯೆಂಬ ಪ್ರಚಾರವನ್ನು ಪಡೆದರು. ಆದರೆ ಗೋರ್ಬಚೇವ್ ಅಮೆರಿಕ ಕೇಂದ್ರಿತ ದೃಷ್ಟಿಯಲ್ಲಿ ಅರ್ಥೈಸಿದಾಗಲಷ್ಟೆ ನಾಯಕರೆನಿಸುತ್ತಾರೆ. ಅಭಿವೃದ್ಧಿಶೀಲ ದೇಶಗಳ ಅನ್ಯಕೇಂದ್ರಸ್ಥಾನದ ದೃಷ್ಟಿಯಲ್ಲಿ ಅರ್ಥೈಸಿದಾಗ ಅವರೊಬ್ಬ ಖಳನಾಯಕ. ಇತ್ತಂಡಗಳಿಗೂ ಸೇರದೆ ಅರ್ಥೈಸಿದಾಗ ವಾಸ್ತವವನ್ನು ಎದುರಿಸುವ ಶಕ್ತಿ-ಸಾಮರ್ಥ್ಯಗಳಿಲ್ಲದ ದುರ್ಬಲ ನಾಯಕ.

ಅದೇನೇ ಇದ್ದರೂ ಈ ವಿದ್ಯಮಾನಗಳು ಅಂತಿಮವಾಗಿ ಒಂದೇ ಕಡೆಗೆ ಬೆಳಕು ಚೆಲ್ಲುತ್ತವೆ. ಸ್ವಂತಿಕೆಯಿಂದ ಅಭಿವೃದ್ಧಿ ಸಾಧಿಸದೆ ಯಾರು ಯಾರದೋ ಆಶ್ರಯದಲ್ಲಿ ಅಭಿವೃದ್ಧಿ ಪ್ರಕ್ರಿಯೆಗೆ ತೊಡಗಿಕೊಂಡರೆ ಆಶ್ರಯ ಕೊಟ್ಟವರ ಅವನತಿಯೊಂದಿಗೆ ನಮ್ಮ ಅವನತಿಯೂ ಸಂಭವಿಸುತ್ತದೆ. ಈ ವಿಚಾರ ಈಗಲೂ ಪ್ರಸ್ತುತ. ಅಂದು ಯುಎಸ್‌ಎಸ್‌ಆರ್‌ನ ಆಶ್ರಯದಲ್ಲಿದ್ದ ಭಾರತ ಇಂದು ಯುಎಸ್‌ಎ ಆಶ್ರಯದಲ್ಲಿದೆ. ಯುಎಸ್‌ಎ ಯೇನಾದರೂ ಮುಗ್ಗರಿಸಿದರೆ ಭಾರತದ ಆರ್ಥಿಕತೆಯ ಮೇಲ್ಪದರದಲ್ಲಿ ಕಾಣಿಸುತ್ತಿರುವ ಅಭಿವೃದ್ಧಿ ಕೂಡ ಮುಗ್ಗರಿಸಿ ಹೋಗಲಿದೆ. ಸ್ವತಃ ಅಮೆರಿಕವೇ ತನ್ನ ರೈತರಿಗೆ ೮೫% ಸಬ್ಸಿಡಿ ಕೊಡಲು ತೊಡಗಿರುವುದು, ಹೊರಗುತ್ತಿಗೆ ವಿಚಾರದಲ್ಲಿ ಅದು ತಳೆದಿರುವ ನಿಲುವು ಮುಂತಾದವು ಅಮೆರಿಕ ತಾನು ಪ್ರತಿಪಾದಿಸುತ್ತಿರುವ ಆರ್ಥಿಕ ನೀತಿಯಲ್ಲಿ ಈಗಾಗಲೇ ಮುಗ್ಗರಿಸತೊಡಗಿದೆ ಎಂಬುದಕ್ಕೆ ಸಾಕ್ಷಿಯಾಗುತ್ತದೆ.

ಇಂಥಲ್ಲಿ ಮನಮೋಹನ್ ಸಿಂಗ್ ಪ್ರಣೀತ, ಅಮೆರಿಕ ಮಿತ್ರಕೂಟ ಪ್ರಣೀತ ಜಾಗತೀಕರಣ ಸನ್ನಿವೇಶ ದೇಶವನ್ನು ಯಾವ ರೀತಿ ವಿಭಜಿಸುತ್ತದೆ ಎಂಬುದನ್ನು ನೋಡಬೇಕು. ಈ ಸನ್ನಿವೇಶ ಜಾಗತೀಕರಣದಿಂದಲೇ ಹುಟ್ಟಿಕೊಂಡಿರುವುದಾಗಿರದೆ ಪಶ್ಚಿಮ ಪ್ರಣೀತ ಆಧುನಿಕತೆಯಿಂದ ಹುಟ್ಟಿಕೊಂಡಿದ್ದು ಜಾಗತೀಕರಣದಿಂದ ಹೆಚ್ಚು ತೀವ್ರಗೊಳ್ಳುತ್ತಿರುವುದಾಗಿದೆ. ಸಾಪೇಕ್ಷವಾಗಿ ಅಲ್ಲಲ್ಲಿ ಆಗಾಗ ಅನ್ಯಕೇಂದ್ರಸ್ಥಾನ ಆಧರಿತ ಅಭಿವೃದ್ಧಿ ನಡೆದರೂ ಒಟ್ಟೂ ಆಧುನಿಕ ಅಭಿವೃದ್ಧಿ ಪ್ರಕ್ರಿಯೆಗಳು ಪಶ್ಚಿಮ ಪ್ರಣೀತ ಆಧುನಿಕತೆಯನ್ನೇ ಆಧರಿಸಿವೆ. ಅದರ ತೀವ್ರತೆಯನ್ನು ಒಂದೆರಡು ಉದಾಹರಣೆಗಳ ಮೂಲಕ ಮುಂದುವರಿಸುತ್ತೇನೆ. ಇತ್ತೀಚೆಗೆ ಕಂಪ್ಯೂಟರ್ ಕೇಂದ್ರಿತ ಅಭಿವೃದ್ಧಿ ತುಂಬಾ ಮಹತ್ವ ಪಡೆದಿದೆ. ನಿಜವಾಗಿಯೂ ಕಂಪ್ಯೂಟರ್ ಅಭಿವೃದ್ಧಿಯ ಒಂದು ಸಾಧನವೆನ್ನುವಲ್ಲಿ ಎರಡನೆ ಮಾತು ಬರುವುದಿಲ್ಲ. ಕಂಪ್ಯೂಟರ್‌ನ ಆವಶ್ಯಕತೆಯನ್ನು ನಿರಾಕರಿಸುವ ಪ್ರಶ್ನೆಯೂ ಇಲ್ಲ. ಆದರೆ ಕಂಪ್ಯೂಟರ್ ಅನ್ನು ಅಭಿವೃದ್ಧಿಗೆ ಬಳಸಿಕೊಳ್ಳುವುದೇ ಬೇರೆ; ಕಂಪ್ಯೂಟರ್‌ನ ಮೂಲಕ ಅಭಿವೃದ್ಧಿ ಸಾಧಿಸುವುದೇ ಬೇರೆ; ಕಂಪ್ಯೂಟರೇ ಅಭಿವೃದ್ಧಿಯ ಸಂಕೇತವೆನಿಸುವುದೇ ಬೇರೆ. ಒಂದನೆ ಹಂತದಲ್ಲಿ ಮನುಷ್ಯ ಅಭಿವೃದ್ಧಿಯ ಕೇಂದ್ರಸ್ಥಾನದಲ್ಲಿ

ಆಶಸಿಗೆ ಪೂರಕವಾಗಿ ಕಂಪ್ಯೂಟರನ್ನು ಉಪಯೋಗಿಸಲಾಗುತ್ತದೆ. ಎರಡನೆ ಹಂತದಲ್ಲಿ ಕಂಪ್ಯೂಟರ್‌ಗೆ ಪೂರಕವಾಗಿ ಮನುಷ್ಯನನ್ನು ಹೊಂದಿಸಲಾಗುತ್ತದೆ. ಮೂರನೆ ಹಂತದಲ್ಲಿ ಮನುಷ್ಯ ಅಮುಖ್ಯನಾಗಿ ಕಂಪ್ಯೂಟರೇ ಅಭಿವೃದ್ಧಿ ಸಾಮ್ರಾಜ್ಯದ ಚಕ್ರವರ್ತಿಯಾಗಿರುತ್ತದೆ!

ಎರಡು ಮತ್ತು ಮೂರನೆ ಹಂತಗಳು ಎಷ್ಟು ಪ್ರಭಾವಿಯಾಗಿವೆ ಎನ್ನುವುದನ್ನು 'ಕಂಪ್ಯೂಟರ್ ಇಲ್‌ಲಿಟರೇಟ್' ಎನ್ನುವ ಪದಬಳಕೆಯ ಮನೋಧರ್ಮದಲ್ಲಿ ಗ್ರಹಿಸಬಹುದು. ಕಂಪ್ಯೂಟರ್ ಗೊತ್ತಿಲ್ಲದವನನ್ನು ಕಂಪ್ಯೂಟರ್ ಇಲ್‌ಲಿಟರೇಟ್ ಅಂತ ಅನ್ನುವುದು ಸೂಕ್ತವೆನ್ನುವುದಾದರೆ 'ಸಯನ್ಸ್ ಇಲ್‌ಲಿಟರೇಟ್', 'ಆರ್ಟ್ಸ್ ಇಲ್‌ಲಿಟರೇಟ್', 'ಲಿಟರೇಚರ್ ಇಲ್‌ಲಿಟರೇಟ್', 'ಪ್ರಿಂಟಿಂಗ್ ಟೆಕ್ನಾಲಜಿ ಇಲ್‌ಲಿಟರೇಟ್', 'ಹೋಮ ಇಲ್‌ಲಿಟರೇಟ್' (ಹೋಮ ಮಾಡಲು ಗೊತ್ತಿಲ್ಲದವನು!), 'ಬೂದಿ ಇಲ್‌ಲಿಟರೇಟ್' (ಬೂದಿ ಸೃಷ್ಟಿಸಲು ಗೊತ್ತಿಲ್ಲದವನು!) ಎಂದೆಲ್ಲ ವಿಂಗಡಿಸಬೇಕಾಗುತ್ತದೆ. ಯಾಕೆಂದರೆ ಎಲ್ಲವನ್ನೂ ಬಲ್ಲವರು ಯಾರೂ ಇಲ್ಲ. ಹಾಗಿರುವಾಗ ಕಂಪ್ಯೂಟರ್ ಗೊತ್ತಿಲ್ಲದವನು ಮಾತ್ರ 'ಇಲ್‌ಲಿಟರೇಟ್' ಆಗಿಬಿಡುವುದು ಹೇಗೆ. ಅರ್ಥಾತ್ ಈ ಪದಬಳಕೆ ಒಟ್ಟೂ ವ್ಯವಸ್ಥೆಯನ್ನು ಅಕ್ಷರ ಸಂಸ್ಕೃತಿಯಿಂದ ಕಂಪ್ಯೂಟರ್ ಸಂಸ್ಕೃತಿಯತ್ತ ಕೊಂಡೊಯ್ಯುವ ಉದ್ದೇಶ ಹೊಂದಿದೆ. ಅದಕ್ಕೆ ಸರಿಸಮನಾದ ಸ್ಥಾನಮಾನವನ್ನು ಕಂಪ್ಯೂಟರ್‌ಗೆ ಕೊಡುತ್ತಿದೆ. ಈ ವ್ಯವಸ್ಥೆಯು ಅಕ್ಷರ ಸಂಸ್ಕೃತಿಯ ಆಶ್ರಯದಲ್ಲಿ ನಾವು ಕಟ್ಟಿಕೊಂಡಿರುವ ಆರ್ಥಿಕ, ರಾಜಕೀಯ, ಸಾಂಸ್ಕೃತಿಕ, ಸಾಮಾಜಿಕ, ಚಾರಿತ್ರಿಕ, ಸಾಹಿತ್ಯಿಕ ಪರಿಕಲ್ಪನೆಗಳನ್ನೆಲ್ಲ ನಾಶ ಮಾಡಬಯಸುತ್ತದೆ. ಇಲ್ಲಿ ಪಶ್ಚಿಮ ಕೇಂದ್ರಿತ ಏಕರೂಪಿ ಸಂಸ್ಕೃತಿಯ ಪ್ರತಿಪಾದನೆ ನಡೆಯುತ್ತದೆ ಎನ್ನುವಷ್ಟೇ ಪ್ರಮುಖವಾದ ವಿಚಾರ ಇನ್ನೊಂದಿದೆ. ಅದು ಈ ಮಾದರಿಯ ಅಭಿವೃದ್ಧಿ ಬಹು ದೊಡ್ಡದಾದ ಪ್ರತ್ಯೇಕ ಸಮಾಜವೊಂದನ್ನು ರೂಪಿಸುತ್ತದೆ ಎಂಬುದು. ಹೇಳುವುದಕ್ಕೇನೋ ಬಹು ಸುಲಭವಾಗಿ ೨೦೧೦ ರಲ್ಲಿ ೨೦೨೦ ರಲ್ಲಿ ಕಂಪ್ಯೂಟರ್ ಲಿಟರೇಟ್ ಭಾರತವನ್ನು ರೂಪಿಸುತ್ತೇವೆ ಎಂದು ಘೋಷಿಸಬಹುದು. ಇಂತಹ ಘೋಷಣೆ ಕೊಡುವವರಿಗೆ ಗ್ರಾಮಭಾರತ ಅರ್ಥವೇ ಆಗುವುದಿಲ್ಲ. ನಿರ್ದಿಷ್ಟ ಕಾಲಮಿತಿಯಲ್ಲಿ ಇಡೀ ಭಾರತವನ್ನು ಈ ರೀತಿ ಮಾಡಬಹುದು ಎಂಬ ಕಲ್ಪನೆಯನ್ನು ಅನ್ಯಕೇಂದ್ರಸ್ಥಾನಗಳು ನಿರಾಕರಿಸುತ್ತವೆ. ೫೦ ವರ್ಷಗಳಲ್ಲಿ ಸಂಪೂರ್ಣ ಸಾಕ್ಷರತೆಯನ್ನೇ ಸಾಧಿಸಲು ಸಾಧ್ಯವಾಗಿಲ್ಲ. ಹಾಗಿರುವಾಗ ದಿಢೀರ್ ಅಂತ ಕಂಪ್ಯೂಟರ್ ಸಾಕ್ಷರತೆ ಸಾಧಿಸಲಾಗುತ್ತದೆ ಎನ್ನುವುದು ತಪ್ಪು ಕಲ್ಪನೆಯಾಗುತ್ತದೆ. ಹಾಗಂದರೆ ವಾಸ್ತವವಾಗಿ ಕಂಪ್ಯೂಟರ್ ಕ್ರಾಂತಿಯಲ್ಲಿ ತೊಡಗಿಕೊಂಡಿರುವವರಿಗೆ ಅನ್ಯಕೇಂದ್ರಸ್ಥಾನಗಳಲ್ಲಿರುವ ಬಡ ಕೃಷಿಕರು, ಕೂಲಿ ಕಾರ್ಮಿಕರು, ವೇಶ್ಯೆಯರು, ಆದಿವಾಸಿಗಳು, ಕೊಳಚೆ ಪ್ರದೇಶ ನಿವಾಸಿಗಳು ಇವರನ್ನೆಲ್ಲ ಕಂಪ್ಯೂಟರ್ ಸಾಕ್ಷರರನ್ನಾಗಿ ಮಾಡಬೇಕೆಂಬ ತುಡಿತವೇನೂ ಇಲ್ಲ. ಒಂದು ವೇಳೆ ಕಂಪ್ಯೂಟರ್ ಸಾಕ್ಷರತೆಯನ್ನು ದಾಖಲೆಯಲ್ಲಿ ತೋರಿಸಿದರೂ ವಾಸ್ತವವಾಗಿ ಸಂಪೂರ್ಣ ಕಂಪ್ಯೂಟರ್ ಸಾಕ್ಷರತೆ ಅಸಾಧ್ಯ. ಯಾಕೆಂದರೆ ಅನ್ಯಕೇಂದ್ರಸ್ಥಾನಗಳು ಪ್ರಭುತ್ವದಿಂದಲೇ ನಿರ್ಲಕ್ಷಿಸಲ್ಪಟ್ಟಿರೆ. ಪ್ರಭುತ್ವ ಆಸಕ್ತಿ ವಹಿಸುವ ಕೇಂದ್ರಸ್ಥಾನದಲ್ಲಿ ಕೂಡ ಒಂದು ಗುಂಪಿಗೆ ಕಂಪ್ಯೂಟರ್ ಒಗ್ಗದ ಕಷಾಯವಾಗಿ ಅದರಿಂದ ದೂರ ಉಳಿದುಬಿಡುತ್ತಾರೆ. ಅದು ಅವರವರ ಜೀವನದೃಷ್ಟಿಗೆ ಸಂಬಂಧಿಸಿದ ಪ್ರಶ್ನೆಯಾಗಿರುತ್ತದೆ.

ಮುಂದಿನ ಅಭಿವೃದ್ಧಿಯ ಹಂತ ಸಮಾಜವನ್ನು ಮತ್ತಷ್ಟು ಪ್ರತ್ಯೇಕಿಸುತ್ತದೆ. ಯಾರು ಕಂಪ್ಯೂಟರ್ ಸಾಕ್ಷರರಲ್ಲವೋ ಅವರನ್ನೆಲ್ಲ ನಿರಾಕರಿಸಿ ಪಥ ಮುನ್ನಡೆಯುತ್ತದೆ. ಆಗ ಈ ಕಂಪ್ಯೂಟರ್ ಅನಕ್ಷರಸ್ಥರನ್ನು ಪ್ರತಿನಿಧಿಸುವ ಯಾವುದೇ ಶಕ್ತಿ ಇಲ್ಲವಾಗುತ್ತದೆ. ಅಂಥಲ್ಲಿ ಕಂಪ್ಯೂಟರ್ ಅನಕ್ಷರಸ್ಥರು ತಮ್ಮದೇ ಆದ ಹೊಸ ಪ್ರಾತಿನಿಧಿಕ ಶಕ್ತಿಯನ್ನು ಹುಡುಕುತ್ತಾ ಹೋಗುತ್ತಾರೆ. ಅದು ಸಮಾಜದಲ್ಲಿ ಪ್ರತ್ಯೇಕತೆಗೆ ಬಲವಾದ ಶಕ್ತಿಯಾಗುತ್ತದೆ.

ಇನ್ನೊಂದು ಉದಾಹರಣೆಗೆ ಬನ್ನಿ. ಇತ್ತೀಚೆಗೆ ಎಜುಸ್ಯಾಟ್ ಉಪಗ್ರಹವನ್ನು ಹಾರಿಸಿ ಶಿಕ್ಷಣ ಕ್ಷೇತ್ರದಲ್ಲಿ ಭಾರೀ ಕ್ರಾಂತಿಯನ್ನು ನಿರೀಕ್ಷಿಸಲಾಗಿದೆ. ಆ ನಿರೀಕ್ಷೆಗಳೆಲ್ಲ ಈಡೇರಿದರೆ ಮುಂದಿನ ಎರಡು ಮೂರು ದಶಕಗಳಲ್ಲಿ ಶಿಕ್ಷಕರು ಪ್ರಾಮುಖ್ಯ ಕಳೆದುಕೊಳ್ಳುತ್ತಾರಲ್ಲದೆ ಶಿಕ್ಷಕ ಉದ್ಯೋಗದಲ್ಲಿ ಭಾರೀ ಪ್ರಮಾಣದ ಇಳಿಕೆಯಾಗಲಿದೆ. ಇದರಿಂದ ಶಿಕ್ಷಕ-ವಿದ್ಯಾರ್ಥಿಗಳ ನಡುವೆ ಏರ್ಪಡುವ ಸಂಬಂಧಗಳು; ಆ ಮುಖೇನ ಒದಗುವ ಜ್ಞಾನ ಇಲ್ಲವಾಗುತ್ತದೆ ಎನ್ನುವುದು ಅದರ ಸಾಂಸ್ಕೃತಿಕ ಪರಿಣಾಮ. ಅಷ್ಟೇ ಮುಖ್ಯವಾದ ಇನ್ನೊಂದು ಪರಿಣಾಮ ಉಂಟಾಗಲಿದೆ. ಎಜುಸ್ಯಾಟ್‌ನ ಉಪಯೋಗ ಪಡೆಯಲು ವಿದ್ಯಾರ್ಥಿಗಳು ವಾರ್ಷಿಕ ಒಂದು ಸಾವಿರ ರೂ. ಶುಲ್ಕ ತೆರಬೇಕಾದೀತೆಂದು ಡಾ. ಯು. ಆರ್. ರಾವ್ ಸಲಹೆ ಮಾಡಿದ್ದಾರೆ. ಈ ಮೊತ್ತ ಹೆಚ್ಚಾಗಬಹುದು ಅಥವಾ ಕಡಿಮೆಯಾಗಬಹುದು. ಆದರೆ ಆ ಶುಲ್ಕವನ್ನು ತೆರಲಾಗದ ಗುಂಪು ಇದ್ದೇ ಇರುತ್ತದೆ. ಇಡೀ ಶೈಕ್ಷಣಿಕ ಅಭಿವೃದ್ಧಿ ಎಜುಸ್ಯಾಟ್‌ಅನ್ನು ಅವಲಂಬಿಸುವಂತಾದಾಗಲೂ ಈ ಗುಂಪು ಶಿಕ್ಷಕರನ್ನೇ ಅವಲಂಬಿಸುತ್ತದೆ. ಆದರೆ ಅಭಿವೃದ್ಧಿಯ ನಿರ್ದೇಶಕ ಶಕ್ತಿಗಳು ಈ ಗುಂಪನ್ನು ನಿರ್ಲಕ್ಷಿಸುತ್ತವೆ. ಆ ಗುಂಪು ತಮ್ಮ ಪ್ರಾತಿನಿಧಿಕ ಶಕ್ತಿಗಳನ್ನು ಹುಡುಕತೊಡಗುವಲ್ಲಿ ಪ್ರತ್ಯೇಕತೆಗೆ ಮತ್ತೊಂದು ಪ್ರೇರಣೆ ಒದಗುತ್ತದೆ.

ಇವೆರಡು ಪಶ್ಚಿಮ ಕೇಂದ್ರಿತ ಅಭಿವೃದ್ಧಿಯ ಪರಿಣಾಮವನ್ನು ವಿಶದಪಡಿಸಲು ನಾನು ಸಾಂಕೇತಿಕವಾಗಿ ತೆಗೆದುಕೊಂಡ ಉದಾಹರಣೆಗಳಷ್ಟೇ. ಹಲವಾರು ಸ್ತರಗಳಲ್ಲಿ ನಡೆಯುವ ಈ ಪಶ್ಚಿಮ ಮಾದರಿಯ ಅಭಿವೃದ್ಧಿ ಕ್ರಮೇಣ ಅಭಿವೃದ್ಧಿಯ ನಿರ್ದೇಶಕ ಶಕ್ತಿಗಳಿಂದ ನಿರ್ಲಕ್ಷಿಸಲ್ಪಟ್ಟ ಪರ್ಯಾಯ ಸಮಾಜವೊಂದನ್ನು ರೂಪಿಸುತ್ತಾ ಹೋಗುತ್ತದೆ. ಆ ಪರ್ಯಾಯ ಸಮಾಜವು ತನ್ನನ್ನು ಪ್ರತಿನಿಧಿಸುವ ರಾಜಕೀಯ ಶಕ್ತಿಯನ್ನು ಹುಡುಕಾಡುವ ಪ್ರಯತ್ನದಲ್ಲಿ ಪ್ರತ್ಯೇಕತಾವಾದ ತಲೆಯೆತ್ತುತ್ತದೆ. ಅದೃಷ್ಟವಶಾತ್ ಅಥವಾ ದುರದೃಷ್ಟವಶಾತ್ ಈ ಪರ್ಯಾಯ ಸಮಾಜದಲ್ಲೇ ಪರಸ್ಪರ ವಿರೋಧಾತ್ಮಕವಾದ ಲಕ್ಷಣಗಳಿರುವುದರಿಂದ ಅವು ಒಗ್ಗೂಡದೆ ಹೋಗುತ್ತಿವೆ. ಅದರಿಂದಾಗಿ ರಾಷ್ಟ್ರೀಯ ಏಕತೆ ಎನ್ನುವುದು ಉಳಿದುಕೊಂಡಿದೆ. ಅದಲ್ಲದಿದ್ದರೆ ಐ. ಕೆ. ಗುಜ್ರಾಲ್, ದೇವೇಗೌಡ, ವಿ. ಪಿ. ಸಿಂಗ್, ಚಂದ್ರಶೇಖರ್, ವಾಜಪೇಯಿ, ಮನಮೋಹನ್ ಸಿಂಗ್ ಸರಕಾರಗಳೆಲ್ಲ ಅಲ್ಪಮತ ಪಡೆದ ಸರಕಾರಗಳಾಗಿದ್ದು ಸಮಾಜದ ಯಾವುದೋ ಒಂದು ಬೃಹತ್ ಗುಂಪು ಯಾವುದೇ ರಾಜಕೀಯ ಪಕ್ಷದಲ್ಲೂ ವಿಶ್ವಾಸವಿರಿಸಿಕೊಂಡಿಲ್ಲ ಎಂಬುದನ್ನು ಅರಿತು ಅನ್ಯಕೇಂದ್ರಸ್ಥಾನಗಳ ದೃಷ್ಟಿಯಲ್ಲಿ ಅಭಿವೃದ್ಧಿ ಪ್ರಕ್ರಿಯೆಯನ್ನು ಕೈಗೆತ್ತಿಕೊಳ್ಳಬೇಕಿತ್ತು. ಆದಾಗ್ಯೂ ಅನ್ಯಕೇಂದ್ರಸ್ಥಾನದಲ್ಲಿರುವ ಪರ್ಯಾಯ ಸಮಾಜದ ಶಕ್ತಿಗಳು ಸದಾಕಾಲವೂ ಪರಸ್ಪರ ಕಚ್ಚಾಡುತ್ತಲೇ ಇರುತ್ತವೆಯೆಂದು

ಭಾವಿಸಬೇಕಾಗಿಲ್ಲ. ಯಾವುದೋ ಒಂದು ಅನಿವಾರ್ಯತೆ ಅವರನ್ನು ಒಗ್ಗೂಡಿಸಿ ಬಿಡಲು ಸಾಧ್ಯವಿದೆ. ಅಂಥ ಸಂದರ್ಭದಲ್ಲಿ ಅಲ್ಲಿಂದ ಬರುವ ರಾಜಕೀಯ ಶಕ್ತಿ ಹಿಂಸಾತ್ಮಕ ಸ್ವರೂಪದಲ್ಲಿರಬಹುದು– ಅಹಿಂಸಾತ್ಮಕ ಸ್ವರೂಪದಲ್ಲಿರಬಹುದು; ಆದರೆ ಈಗಿರುವ ಸ್ವರೂಪದ ರಾಷ್ಟ್ರೀಯ ಏಕತೆಗೆ ಧಕ್ಕೆ ತರುತ್ತವೆ.

ಈ ಹಿನ್ನೆಲೆಯಲ್ಲಿ ಮನಮೋಹನ್ ಸಿಂಗ್ ಮೆಂಟಾಲಿಟಿಯ ರಾಜಕೀಯ ಶಕ್ತಿಗಳು ಒಂದು ವಿಚಾರವನ್ನು ಸ್ಪಷ್ಟಪಡಿಸಿಕೊಳ್ಳಬೇಕಾಗಿದೆ. ತಾವು ಕೇಂದ್ರಸ್ಥಾನದಲ್ಲಿದ್ದುಕೊಂಡು ಅಭಿವೃದ್ಧಿಗೆ ಒಳಪಡಿಸುತ್ತಿರುವ ಯಾವ ಸಾಮಾಜಿಕ ಶಕ್ತಿಗಳೂ ಅಮೆರಿಕ ಮಿತ್ರಕೂಟದ ಒತ್ತಡವನ್ನು ಎದುರಿಸಲು ತಮಗೆ ಶಕ್ತಿ ಒದಗಿಸಲಾರವು ಎಂಬ ವಿಚಾರ ಮನದಟ್ಟಾಗಬೇಕು. ಯಾಕೆಂದರೆ ಈ ಶಕ್ತಿಗಳು ಅಂತರಂಗದಲ್ಲಿ ಪಶ್ಚಿಮಾಭಿಮುಖಿಯಾಗಿಯೇ ಇವೆ. ಅಂಥಲ್ಲಿ ಅನ್ಯಕೇಂದ್ರಸ್ಥಾನದಲ್ಲಿರುವ ಪರ್ಯಾಯ ಸಮಾಜವನ್ನು ನಾಯಕ ಸ್ಥಾನದಲ್ಲಿರಿಸಿ; ಕನಿಷ್ಠ ಸಮಾನ ಸ್ಥಾನದಲ್ಲಿರಿಸಿ ಅಭಿವೃದ್ಧಿಯನ್ನು ಪುನರ್ನಿರ್ವಚಿಸಬೇಕಾದ ಅಗತ್ಯವಿದೆ.

ಈ ವಿಚಾರವನ್ನು ಪ್ರಸ್ತಾಪಿಸಿದ ತಕ್ಷಣ ಒಂದು ಹೆಸರನ್ನು ಉಲ್ಲೇಖಿಸದಿರಲು ಸಾಧ್ಯವಾಗುವುದೇ ಇಲ್ಲ. ಅದು– ಗಾಂಧಿ. ಸಾಂಕೇತಿಕವಾಗಿ ಗಾಂಧೀ ಮಾದರಿ ಅಭಿವೃದ್ಧಿಯ ಒಂದು ವಿಚಾರವನ್ನು ಎತ್ತಿಕೊಳ್ಳುತ್ತೇನೆ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಶಿಕ್ಷಣಕ್ಕೆ ದೊರೆತ ಸಂಸ್ಥಾರೂಪದಲ್ಲಿ ಪ್ರಧಾನವಾಗಿರುವುದು ಪಾಶ್ಚಿಮಾತ್ಯ ಶಿಕ್ಷಣ ಮಾದರಿ. ಅದಕ್ಕೆ ಪರ್ಯಾಯವಾಗಿ ಅಲ್ಲಲ್ಲಿ ನಡೆಯುತ್ತಿರುವ ಪ್ರಯತ್ನಗಳು ಗುರುಕುಲ ಪದ್ಧತಿಯನ್ನು ಆಧರಿಸಿವೆ. ಆದರೆ ಈ ಎರಡೂ ಮಾದರಿಗಳು ಬಹು ಮುಖ್ಯವಾದ ಜೀವಂತಿಕೆ ಇರುವ ಶಿಕ್ಷಣವನ್ನು ನಿರ್ಲಕ್ಷಿಸಿವೆ. ಒಬ್ಬ ಕಮ್ಮಾರನ, ಒಬ್ಬ ಬಡಗಿಯ, ಒಬ್ಬ ನೇಕಾರನ ತಿಳಿವಳಿಕೆಯನ್ನು ಶಿಕ್ಷಣ ವ್ಯವಸ್ಥೆಯಿಂದ ಬಹುಮಟ್ಟಿಗೆ ಹೊರಗಿರಿಸಿವೆ. ವಾಸ್ತವವಾಗಿ ಬದುಕುವ ಶಕ್ತಿಯನ್ನು ಕೊಡುವ ಆ ತಿಳಿವಳಿಕೆಗಳೇ ನಿಜವಾದ ಶಿಕ್ಷಣವಾಗಿದೆ. ಆಯಾ ಪ್ರದೇಶಕ್ಕನುಗುಣವಾಗಿ ಸ್ಥಳೀಯ ತಿಳಿವಳಿಕೆಗಳಿಗೆ ವ್ಯವಸ್ಥಿತ ಶಿಕ್ಷಣದ ರೂಪ ಕೊಡುವ ಕೆಲಸವನ್ನು ಪ್ರಭುತ್ವ ಮಾಡಬೇಕಾಗುತ್ತದೆ. ಇವತ್ತು ಜಾಗತೀಕರಣದ ಆರ್ಥಿಕ ಮತ್ತು ಸಾಂಸ್ಕೃತಿಕ ದಾಳಿಯೆರಡನ್ನೂ ತಡೆಯಲು ಇರುವ ಏಕೈಕ ಶಕ್ತಿಯೆಂದರೆ ಗಾಂಧೀ ಮಾದರಿಯ ಅಭಿವೃದ್ಧಿ.

ಆದರೆ ಗಾಂಧೀ ಮಾದರಿಯ ಅಭಿವೃದ್ಧಿಗೆ ಇರುವ ಬಹು ದೊಡ್ಡ ಮಿತಿಯೆಂದರೆ ರಾಜಕೀಯ ಶಕ್ತಿಯ ಕುರಿತ ಅದರ ಬಹುವಾದ ನಿರ್ಲಕ್ಷ್ಯ. ಅದರಿಂದಾಗಿ ಪ್ರತಿಭಟನಾ ಶಕ್ತಿಯಾಗಿ ಕ್ರಿಯೆಯನ್ನು ಸೃಷ್ಟಿಸುವಲ್ಲಿ ಬಹುವಾಗಿ ಯಶಸ್ಸು ಪಡೆಯುವ ಗಾಂಧೀ ಮಾದರಿ ಒಂದು ವ್ಯವಸ್ಥೆಯಾಗಿ ಕ್ರಿಯೆಯನ್ನು ಸೃಷ್ಟಿಸುವಲ್ಲಿ ಹಿನ್ನಡೆ ಅನುಭವಿಸುತ್ತದೆ. ಈ ನಿಟ್ಟಿನಲ್ಲಿ ಗಾಂಧೀ ಮಾದರಿಗಿಂತ ಹೆಚ್ಚು ಸತ್ವಶಾಲಿಯಾಗಿರುವಂಥದು ಅಂಬೇಡ್ಕರ್ ಮಾದರಿ. ಅಂಬೇಡ್ಕರ್ ಮಾದರಿ ಈ ದೇಶಕ್ಕೆ ವಿಶೇಷವಾದದ್ದೇನನ್ನೂ ಮಾಡದೆ ಹೋಗಿರಬಹುದು; ಆದರೆ ಯಾವುದೇ ವ್ಯವಸ್ಥೆ ಬಂದರೂ ಅದು ಅನ್ಯಕೇಂದ್ರಶಕ್ತಿಗಳ ಬಗ್ಗೆ ಒಂದು ಮಟ್ಟಿನ ಕ್ರಿಯಾಶೀಲತೆಯನ್ನು ಪ್ರದರ್ಶಿಸಲೇಬೇಕಾದ ಮಟ್ಟಿನ ರಾಜಕೀಯ ಪ್ರಜ್ಞೆಯನ್ನು ಹುಟ್ಟುಹಾಕಿದೆ. ಭಾರತದಂತಹ

ದೇಶಕ್ಕೆ ಇದು ಅಂಬೇಡ್ಕರ್ ಕೊಟ್ಟಿರುವ ಮಹತ್ವದ ದೇಣಿಗೆ ಎನ್ನುವಲ್ಲಿ ಭಿನ್ನಾಭಿಪ್ರಾಯವಿರಲಾರದು.

ಈ ಹಿನ್ನೆಲೆಯಲ್ಲೇ ಗಾಂಧೀ ಮಾದರಿಯ ಸಾಮಾಜಿಕ ಮಿತಿಗಳನ್ನೂ ಹೇಳಬೇಕು. ಈ ದೇಶಕ್ಕೆ ವಿಶೇಷವಾಗಿ ಕಾಡುತ್ತಿರುವ ಜಾತಿ ಆಧಾರಿತ ತಾರತಮ್ಯಕ್ಕೆ ಗಾಂಧೀ ಬಳಿ ಇರುವುದು ನೈತಿಕ ಪ್ರಜ್ಞೆಯ ಪರಿಕರ. ಪ್ರಾಯಶಃ ಸಾಮಾಜಿಕ ಸಂದರ್ಭದ ಈ ನೈತಿಕ ಪ್ರಜ್ಞೆಯ ಪರಿಕರಕ್ಕೆ ಆರ್ಥಿಕ ಪರಿಕರಗಳಲ್ಲೊಂದಾದ 'ಧರ್ಮದರ್ಶಿತ್ವ'ವೇ ಮೂಲ ನೆಲೆಯೆಂದು ತೋರುತ್ತದೆ. ಪ್ರಸಕ್ತ ಸಾಮಾಜಿಕ ಸನ್ನಿವೇಶದಲ್ಲಿ ಕೇವಲ ಅಂತಃಕರಣವೇ ಜಾತಿತಾರತಮ್ಯ ನಿವಾರಿಸೀತು ಎನ್ನಲು ಬರುವುದಿಲ್ಲ. ಈ ನಿಟ್ಟಿನಲ್ಲಿ ಅಂಬೇಡ್ಕರ್ ಮಾದರಿ ಹೆಚ್ಚು ಶಕ್ತಿಯುತವಾದದ್ದು. ಗಾಂಧೀವಾದಕ್ಕಿಂತ ಅಂಬೇಡ್ಕರ್‌ವಾದದ ವ್ಯಾಪ್ತಿ ಚಿಕ್ಕದಿರಬಹುದು, ಆದರೆ ದಲಿತ ವಿಮೋಚನೆಯ ನಿಟ್ಟಿನಲ್ಲಿ ಗಾಂಧೀವಾದದ್ದು ಗ್ರಹಿಕೆಗಳಾಗಿದ್ದರೆ ಅಂಬೇಡ್ಕರ್‌ವಾದದ್ದು ಅನುಭವಜನ್ಯ ತಿಳಿವಳಿಕೆಗಳಾಗಿವೆ. ದಲಿತ ವಿಮೋಚನೆಯ ವಿಚಾರಕ್ಕಷ್ಟೆ ಸೀಮಿತಗೊಳಿಸಿ ಹೇಳುವುದಾದರೆ ಅಂಬೇಡ್ಕರ್‌ವಾದ ಗಾಂಧೀವಾದಕ್ಕಿಂತ ಹೆಚ್ಚು ಆಳವಾದದ್ದು; ತೀವ್ರ ತುಡಿತದಿಂದ ಕೂಡಿರುವಂಥದು. ಅದರ ಈ ತುಡಿತ ಅದಕ್ಕೆ ಕೊಟ್ಟಿರುವ ಆಕ್ರೋಶದ ಹೊಳಪು ಅಂಬೇಡ್ಕರ್‌ವಾದದ ಶಕ್ತಿಯೂ ಹೌದು. ಮಿತಿಯೂ ಹೌದು. ನಾನಾ ರೀತಿಯ ದಾಳಿಗಳಿಗೆ ಒಡ್ಡಿಕೊಂಡು ದಲಿತ ಚಳವಳಿಯನ್ನು ಜೀವಂತವಾಗಿ ಇರಿಸಿಕೊಂಡಿರುವುದಕ್ಕೆ ಅಂಬೇಡ್ಕರ್‌ವಾದದಲ್ಲಿರುವ ಆಕ್ರೋಶದ ಶಕ್ತಿಯೇ ಕಾರಣವಾಗಿದೆ. ಹಾಗೆಯೇ ದಲಿತ ಚಳವಳಿಯನ್ನು ದಲಿತೇತರ ಸಮುದಾಯಗಳತ್ತ ಒಯ್ಯಲು ಉಂಟಾಗಿರುವ ತೊಡಕುಗಳಿಗೂ ಅದರ ಆಕ್ರೋಶವೇ ಕಾರಣವಾಗಿದೆ.

ಈ ಸಂದರ್ಭದಲ್ಲಿ ಚರ್ಚಾರ್ಹವಾದ ಇನ್ನೊಂದು ಸಂಗತಿಯತ್ತ ಗಮನ ಸೆಳೆಯಬೇಕಾಗಿದೆ. ಗಾಂಧೀ-ಅಂಬೇಡ್ಕರ್ ಇಬ್ಬರೂ ಸಹ ಸಂಸ್ಕೃತಿಯನ್ನು ಸಮಾಜಶಾಸ್ತ್ರೀಯ ದೃಷ್ಟಿಕೋನದಲ್ಲಿ ಅರ್ಥೈಸಿದವರೇ. ಆದರೆ ಗಾಂಧೀ ಅರ್ಥೈಸುವಿಕೆಯ ಕ್ರಮ ಆಧ್ಯಾತ್ಮಿಕ ಹಿನ್ನೆಲೆಯನ್ನು ಇಟ್ಟುಕೊಳ್ಳುತ್ತದೆ. ಆಧ್ಯಾತ್ಮಿಕ ಹಿನ್ನೆಲೆಯು ಯಾವುದೇ ವಿಚಾರಕ್ಕೆ ಬಹಳ ವ್ಯಾಪಕವಾದ ವೇದಿಕೆಯನ್ನು ಒದಗಿಸುವುದರೊಂದಿಗೆ ಯಾರು ಬೇಕಾದರೂ ಅವರವರ ದೃಷ್ಟಿಕೋನಕ್ಕೆ ತಕ್ಕಂತೆ ಅರ್ಥೈಸಬಲ್ಲ ನಮ್ಯತೆಯನ್ನೂ ಒದಗಿಸಿಕೊಡುತ್ತದೆ. ಅಮೂರ್ತ ಸಂಗತಿಗಳನ್ನು ವಾದದ ಹಿನ್ನೆಲೆಯಾಗಿ ಇಟ್ಟುಕೊಂಡಾಗ ಉದ್ಭವಿಸುವ ತೊಡಕು ಇದು. ಅದರಿಂದಾಗಿ ಒಬ್ಬ ದಲಿತ ಹೋರಾಟಗಾರನೂ – ಒಬ್ಬ ಪುರೋಹಿತಶಾಹಿಯೂ, ಒಬ್ಬ ವೈಚಾರಿಕನೂ – ಒಬ್ಬ ಮತೀಯವಾದಿಯೂ ತನಗೆ ಬೇಕಾದಂತೆ ಗಾಂಧಿಯನ್ನು ಅರ್ಥೈಸಿಬಿಡಬಹುದು! ಆದರೆ ಅಂಬೇಡ್ಕರ್ ಅನ್ನು ಈ ರೀತಿ ಬಳಸಿಕೊಳ್ಳಲು ಆಗುವುದಿಲ್ಲ. ಅಂಬೇಡ್ಕರ್ ಅವರು ಸಂಸ್ಕೃತಿಯನ್ನು ಅರ್ಥೈಸುವಾಗ ಹಿನ್ನೆಲೆಯಾಗಿ ಇಟ್ಟುಕೊಂಡದ್ದು ರಾಜಕೀಯವನ್ನು. ಅಂಬೇಡ್ಕರ್ ಬೌದ್ಧ ಧರ್ಮದತ್ತ ಸರಿದಂತೆ ಅವರು ಅರ್ಥೈಸುವ ಕ್ರಮದಲ್ಲಿ ಕೊಂಚ ಬದಲಾವಣೆಯಾಗಿದ್ದರೂ ಅದನ್ನು ಅಂಬೇಡ್ಕರ್ ಅವರ ಮೂಲ ಧೋರಣೆಯಾಗಿ ತೆಗೆದುಕೊಳ್ಳಬೇಕಾದ ಅಗತ್ಯವಿಲ್ಲ. ಯಾಕೆಂದರೆ ಬೌದ್ಧ ಧರ್ಮದತ್ತಣಿನ ಅಂಬೇಡ್ಕರ್ ಒಲವುಗಳು ಅವರ ಮೂಲ ಧೋರಣೆಯನ್ನು ಇಡಿಯಾಗಿ ಬದಲಿಸುವಂತಹದೇನೂ ಆಗಿರಲಿಲ್ಲ.

ಇವನ್ನೆಲ್ಲ ಯಾಕೆ ಹೇಳುತ್ತಿದ್ದೇನೆಂದರೆ ಗಾಂಧೀ ಮಾದರಿಯ ಅಭಿವೃದ್ಧಿಯನ್ನು ತೆಗೆದುಕೊಳ್ಳುವಾಗ ಒಟ್ಟೂ ಅಭಿವೃದ್ಧಿಗೆ ಬಹು ದೊಡ್ಡ ತಡೆಯೂ, ಅವಾಸ್ತವಿಕವೂ ಆಗಿರುವ ಗಾಂಧಿಯನ್ 'ಧರ್ಮದರ್ಶಿತ್ವ'ಕ್ಕೆ ಪರ್ಯಾಯವನ್ನು ಹುಡುಕುವುದಕ್ಕಾಗಿ. ಅಂಬೇಡ್ಕರ್ ಮಾದರಿಯಲ್ಲಿರುವ 'ರಾಜಕೀಯ' ಪರಿಕರ ಅದಕ್ಕೆ ಅತ್ಯಂತ ಸೂಕ್ತವಾದ ಪರ್ಯಾಯವಾಗಿದೆ. ಆದರೆ ಅಂಬೇಡ್ಕರ್‌ಮಾದರಿಯ ಮೇಲೆ ಪಶ್ಚಿಮ ಮಾದರಿಯ ಅಭಿವೃದ್ಧಿ ಪರಿಕಲ್ಪನೆಯ ದಟ್ಟ ಪ್ರಭಾವವಿದ್ದು ದಲಿತ ವಿಮೋಚನೆಯ ಸಂದರ್ಭದ ಬಳಿಕ ಅದೂ ಸಹ ಪಶ್ಚಿಮದತ್ತಲಿನ ಏಕರೂಪೀ ಸಂಸ್ಕೃತಿಯ ಕಡೆಗೇ ಕೊಂಡೊಯ್ಯುತ್ತದೆ. ಆ ಕಡೆಗೆ ನಡೆಯುವುದರ ಆತ್ಯಂತಿಕ ಪರಿಣಾಮ ಜಾಗತೀಕರಣಕ್ಕೆ ಅಥವಾ ಅಮೆರಿಕ ಮಿತ್ರಕೂಟಕ್ಕೆ ಶರಣಾಗತಿಯೇ ಆಗುತ್ತದೆ. ಇದನ್ನು ತಡೆಯುವುದಕ್ಕಿರುವ ಏಕೈಕ ಶಕ್ತಿ ಗಾಂಧೀ ಮಾದರಿಯೇ. ಅದಕ್ಕಾಗಿ ಸಾಮಾಜಿಕ ಕಾರಣಕ್ಕಾಗಿ ಅಂಬೇಡ್ಕರ್ ಮಾದರಿಯೂ ಸಾಂಸ್ಕೃತಿಕ ಮತ್ತು ಆರ್ಥಿಕ ಕಾರಣಕ್ಕಾಗಿ ಗಾಂಧೀ ಮಾದರಿಯೂ ಪರಸ್ಪರ ಹೊಂದಾಣಿಕೆ ಸಾಧಿಸುವುದು ಅಗತ್ಯವಾಗುತ್ತದೆ. ಇಲ್ಲಿ ನಾನು ಸಾಮಾಜಿಕ ಕಾರಣ ಎಂದಿರುವುದು ಆರ್ಥಿಕೇತರ ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಚಾರಗಳಿಗಾಗಿ ಹತಾಶೆಗೆ ತಲುಪಿರುವ ಎಲ್ಲರನ್ನೂ ದೃಷ್ಟಿಯಲ್ಲಿರಿಸಿಕೊಂಡು.

ಈ ಸಮನ್ವಯ ಮಾದರಿಯ ಅಭಿವೃದ್ಧಿಗೆ ಪ್ರಭುತ್ವ ಚಾಲನೆ ಒದಗಿಸಬೇಕು. ಅದಕ್ಕೆ ತಕ್ಕಂತಹ ಸಾಮಾಜಿಕ ಒತ್ತಡವೊಂದು ಕ್ರಿಯೇಟ್ ಆಗಬೇಕು. ಈ ಒತ್ತಡವು ಆಕ್ಟಿವಿಸ್ಟಿಕ್ ನೆಲೆಯಲ್ಲಿ ನಡೆಯಬೇಕಾಗುತ್ತದೆ. ಈ ಮೂಮೆಂಟ್ ಪ್ರಮುಖವಾದ ಮೂರು ನೆಲೆಗಳಲ್ಲಿ ಒಂದಕ್ಕೊಂದು ಪೂರಕವಾಗಿ ನಡೆಯಬೇಕಾಗುತ್ತದೆ.

ಮೊದಲನೆಯದಾಗಿ, ಸಾಂಸ್ಕೃತಿಕ ನೆಲೆಯನ್ನು ತೆಗೆದುಕೊಳ್ಳುತ್ತೇನೆ. ವಿಷಯವನ್ನು ವಿಸ್ತರಿಸುವುದಕ್ಕಾಗಿ ಒಟ್ಟೂ ಸಾಂಸ್ಕೃತಿಕ ಚಟುವಟಿಕೆಗಳನ್ನು ಎರಡು ಸಂಸ್ಥೆಗಳ ಸಂಕೇತದ ಮೂಲಕ ಮುಂದಿಡುತ್ತೇನೆ. ಒಂದನೆಯದು ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನಲ್ಲಿರುವ ಕಾಂತಾವರ ಕನ್ನಡ ಸಂಘ. ಪುಟ್ಟ ಗ್ರಾಮವೊಂದರಲ್ಲಿ ಇದು ನಡೆಸುವ ಸಾಂಸ್ಕೃತಿಕ ಚಟುವಟಿಕೆಗಳು ನಿಜಕ್ಕೂ ಬೆರಗಾಗಿ ನೋಡುವಂಥದು. ಆದರೆ ಅದರ ಎಲ್ಲ ಚಟುವಟಿಕೆಗಳು ಫೆಯಿಲ್ಯೂರ್ ಓರಿಯೆಂಟೆಡ್ ಸಕ್ಸಸ್ ಆಗಿದೆ. ಈ ಮಾತು ಯಾಕೆ ಹೇಳುತ್ತಿದ್ದೇನೆಂದರೆ ಸಂಘವು ಸಂಸ್ಕೃತಿ-ಸಾಹಿತ್ಯ-ವಿಚಾರಗಳ ಬಗ್ಗೆ ಏನೇನೂ ಗೊತ್ತಿಲ್ಲದ ದಟ್ಟ ದರಿದ್ರರನ್ನೂ, ತೀರಾ ಹಿಂದುಳಿದ ಜಾತಿಗಳನ್ನೂ, ಸ್ತ್ರೀಯರನ್ನೂ, ಮಕ್ಕಳನ್ನೂ ಒಂದೇ ಕಡೆ ಸಾವಿರ ಸಾವಿರ ಸಂಖ್ಯೆಯಲ್ಲಿ ಸಂಘಟಿಸುತ್ತದೆ. ಆದರೆ ತನ್ನ ಕಾರ್ಯಕ್ರಮಗಳು ಈ ಜನರನ್ನೂ ತಲುಪಿದೆಯೇ ಎಂದು ಅದು ಮೌಲ್ಯೀಕರಣ ಮಾಡಿಕೊಳ್ಳುವುದಿಲ್ಲ. ಈ ಜನರನ್ನು ತಲುಪಲು ಯಾವ ವಿಧಾನವನ್ನು ಅನುಸರಿಸಬೇಕು ಎಂದು ಯೋಚಿಸುವುದಿಲ್ಲ. ತುಳು ಭಾಷೆಯಲ್ಲಿ ಭಾಷಣ ಮಾಡಿದರೆ ಒಳ್ಳೆಯದಿತ್ತು ಎನ್ನುವ ಜನರಿಗೆ ಕನಿಷ್ಠ ಅವರಿಗೆ ಅರ್ಥವಾಗುವ ಕನ್ನಡವಲ್ಲಾದರೂ ಹೇಳುವವರು ಬೇಕು. ಇಂಥಲ್ಲಿ ದೂರದೂರದಿಂದ ವಿದ್ವಾಂಸರನ್ನು ಕರೆಸಿ ವಿದ್ವಾಂಸರ ಭಾಷೆಯಲ್ಲಿ ಉಪನ್ಯಾಸ ಕೊಡಿಸಿದರೆ ವಾಸ್ತವವಾಗಿ ಜನರ ಮೇಲೆ ಆಗುವ ಪರಿಣಾಮ ನಿಷ್ಕ್ರಿಯವಾಗಿರುತ್ತದೆ. "ಭಾಷಣ ತುಂಬಾ ಚೆನ್ನಾಗಿತ್ತು. ಆದರೆ ಏನು ಹೇಳಿದರೆಂದು ನೆನಪಿಲ್ಲ. ಊಟ ಮಾತ್ರ ಭಾರೀ ಚೆನ್ನಾಗಿತ್ತು" ಎನ್ನುವಂತಾಗಿ ಬಿಡುತ್ತದೆ.

ಎರಡನೇ ರೀತಿಯು ಸಂಸ್ಥೆಗಳಿಗೆ ಸಾಂಕೇತಿಕವಾಗಿ ನೀನಾಸಮ್ ಸಂಸ್ಕೃತಿ ಶಿಬಿರವನ್ನು ಪ್ರಸ್ತಾಪಿಸುತ್ತೇನೆ. ಅಲ್ಲಿನ ಕಾರ್ಯಕ್ರಮಗಳನ್ನು ಸಂಘಟಕರು ಮೌಲ್ಯೀಕರಣ ಮಾಡುತ್ತಾರೆ. ಅಂತಲೇ ಉದ್ದೇಶ ಬಹುಮಟ್ಟಿಗೆ ಈಡೇರುತ್ತದೆ ಕೂಡ. ಆದರೆ ಇಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸುವವರು ಒಂದು ಹಂತದ ತಿಳುವಳಿಕೆ ಉಳ್ಳವರು. ಅವರೇನೋ ಹೆಚ್ಚು ಹೆಚ್ಚು ತಿಳಿದುಕೊಳ್ಳುತ್ತಾರೆ. ಆದರೆ ನಿಜವಾಗಿಯೂ ವಾಸ್ತವದ ತಿಳಿವಳಿಕೆ ಹೆಚ್ಚು ಅಗತ್ಯವಿರುವ ಜನಸಾಮಾನ್ಯರನ್ನು ತಲುಪುವುದು ಕಷ್ಟವಾಗಿಬಿಡುತ್ತದೆ. ಕಾಂತಾವರ ಕನ್ನಡ ಸಂಘ ಕ್ವಾಂಟಿಟಿಯನ್ನು ಕಾಯ್ದುಕೊಂಡರೆ ನೀನಾಸಮ್ ಕ್ವಾಲಿಟಿಯನ್ನು ಕಾಯ್ದುಕೊಳ್ಳುತ್ತದೆ; ಜೊತೆಗೆ ಕ್ವಾಂಟಿಟಿ ಕೂಡ. ಆದರೆ ಆ ಕ್ವಾಂಟಿಟಿ ಎಲ್ಲಿಂದ ಬರಬೇಕೋ ಅಲ್ಲಿಂದ ಬರುತ್ತಿಲ್ಲ.

ಎರಡನೆಯದು ಸಾಮಾಜಿಕ ನೆಲೆಗಳು. ಶರಾಬು ನಿಷೇಧ ಸಮ್ಮೇಳನಗಳು, ಸಾಕ್ಷರತಾ ಸಮ್ಮೇಳನ, ಬಾಲಕಾರ್ಮಿಕ ವಿರೋಧೀ ಜಾಥಾ, ಮಹಿಳಾ ಸಬಲೀಕರಣ ಕಾರ್ಯಕ್ರಮಗಳು, ಮಾನವ ಹಕ್ಕುಗಳ ರ್‍ಯಾಲಿ, ದಲಿತರ ಹಕ್ಕುಗಳ ಕುರಿತ ಕಾರ್ಯಕ್ರಮಗಳು —ಹೀಗೆ ಈ ಸ್ತರದ ವಿಪುಲವಾದ ಚಟುವಟಿಕೆಗಳು ನಡೆಯುತ್ತಿವೆ. ಈ ನಡೆಗಳು ಪ್ರಾಮಾಣಿಕ ಶ್ರದ್ಧೆಯಿಟ್ಟ ಹೆಜ್ಜೆಗಳೇ ಆಗಿದ್ದರೂ ಸಾಮಾಜಿಕ ನೆಲೆಯ ಆ್ಯಕ್ಟಿವಿಸ್ಟ್‌ಗಳು ತಮ್ಮ ಪ್ರಭಾವವಲಯದಲ್ಲಿರುವ ಜನವರ್ಗವನ್ನು ಇನ್ನೆರಡು ನೆಲೆಗಳತ್ತ ಒಯ್ಯಬೇಕಾದ ಅಗತ್ಯವನ್ನು ಮನಗಾಣುತ್ತಿಲ್ಲ. ಈ ವಿಚಾರವನ್ನು ಮುಂದೆ ಚರ್ಚಿಸುತ್ತೇನೆ.

ಮೂರನೆಯದು ಆರ್ಥಿಕ ನೆಲೆಗಳು. ಸಾಂಸ್ಕೃತಿಕ ಮತ್ತು ಸಾಮಾಜಿಕ ನೆಲೆಗಳಿಗೆ ಹೋಲಿಸಿದರೆ ಅರ್ಥಿಕ ನೆಲೆಯ ಆ್ಯಕ್ಟಿವಿಸ್ಟ್‌ಗಳು ತೀರಾ ಕಡಿಮೆಯೆಂದೇ ಹೇಳಬೇಕು. ಅಷ್ಟೇ ಅಲ್ಲ, ಒಟ್ಟೂ ಭಾರತೀಯ ಸಮಾಜವೇ ಸ್ವತಂತ್ರ ಆರ್ಥಿಕ ಚಿಂತನಧಾರೆಯೊಂದರ ಜರೂರತ್ತನ್ನು ಮನಗಾಣುತ್ತಿಲ್ಲ. ಇಂಥಲ್ಲಿ ಬಹಳ ಮುಖ್ಯವಾದ ಆರ್ಥಿಕ ಆ್ಯಕ್ಟಿವಿಸ್ಟ್ ನೆಲೆಗಳೆಂದರೆ ಕಮ್ಯುನಿಸ್ಟ್ ಸಂಘಟನೆಗಳು ಹಾಗೂ ರೈತ ಸಂಘಟನೆಗಳು. ಆದರೆ ಕಮ್ಯುನಿಸ್ಟ್ ನೆಲೆಗಳು ಅವುಗಳ ಪಾರಂಪರಿಕವಾದ ಯುಎಸ್‌ಎಸ್‌ಆರ್ ಮಾದರಿಗಳನ್ನು ಮುಂದಿಟ್ಟುಕೊಂಡು ಗ್ರಾಮಭಾರತಕ್ಕೆ ಹೋದಾಗ ಅಲ್ಲಿನ ಸಾಂಸ್ಕೃತಿಕ ಸನ್ನಿವೇಶಗಳು ಈ ಮಾದರಿಗಳನ್ನು ಸ್ವೀಕರಿಸಲಾರದೆ ಹೋಗುತ್ತವೆ. ಅಲ್ಲದೆ ಕಮ್ಯುನಿಸ್ಟರು ಅತ್ಯಂತ ಪ್ರಭಾವಶಾಲಿಯಾದ ಕಾಂಗ್ರೆಸ್‌ಗೆ ಮುಖಾಮುಖಿಯಾಗಬೇಕಾಗುತ್ತದೆ. ಈ ರೀತಿಯ ಮುಖಾಮುಖಿಯಲ್ಲಿ ಏಕಕಾಲಕ್ಕೆ ಸೋಷಿಯಲಿಸ್ಟಿಕ್ ಹಾಗೂ ಕ್ಯಾಪಿಟಲಿಸ್ಟಿಕ್ ಧೋರಣೆ ಹೊಂದಿರುವ ಕಾಂಗ್ರೆಸ್ ಎರಡೂ ನೆಲೆಯ ಅಭಿವೃದ್ಧಿಯನ್ನು ತನ್ನದೆಂದು ಕಬಳಿಸಿಕೊಂಡು ಬಿಡುತ್ತದೆ. ಮತ್ತೆ ಇಂದಿರಾ ಅವರ ಭೂಸುಧಾರಣೆ, ಬ್ಯಾಂಕ್ ರಾಷ್ಟ್ರೀಕರಣಗಳನ್ನು ನೆನಪಿಸಿಕೊಂಡರೆ ಅವುಗಳ ಯಶಸ್ಸು ಇಂದಿರಾರದೇ ಆದರೂ ಅದರ ಹಿಂದಿನ ಅಪಾರ ಶ್ರಮ-ಶ್ರದ್ಧೆ-ಪ್ರಾಮಾಣಿಕ ಹೋರಾಟ ಕಮ್ಯುನಿಸ್ಟರದಾಗಿತ್ತು. ಆದರೆ ಫಲಾನುಭವಿಗಳೇ ಅದನ್ನು ಮರೆತುಬಿಟ್ಟಿದ್ದಾರೆ. ಕಾಂಗ್ರೆಸ್‌ನ ಈ ಕಬಳಿಸುವ ಗುಣದಿಂದಾಗಿ ಅದಕ್ಕೆ ಪ್ರತಿಶಕ್ತಿಯಾಗಿ ನಿಲ್ಲಬೇಕಾದರೆ ಬಿಜೆಪಿಯಂತಹ ಒಂದು ಪಕ್ಷ ಭಾವನಾತ್ಮಕವಾದ 'ಧರ್ಮ'ವನ್ನು ಆಧರಿಸಬೇಕಾಯಿತು. ಈ ಕುರಿತಾಗಿ ಒಂದು ಒಳ್ಳೆಯ ಜೋಕ್ ಇದೆ. ಇವತ್ತು ಅಯೋಧ್ಯೆಯಲ್ಲಿ ರಾಮದೇವಾಲಯ ಕಟ್ಟಿರೆಂದು ಮುಸಲ್ಮಾನರೆಲ್ಲ ಒಪ್ಪಿಕೊಂಡರೂ ಬಿಜೆಪಿ ರಾಮದೇವಸ್ಥಾನ ಕಟ್ಟುವುದಿಲ್ಲ. ಯಾಕೆಂದರೆ

ಕಟ್ಟಿದ ಬಳಿಕ ಅದರ ಪ್ರಸ್ತಾಪ ಮಾಡುವಂತಿಲ್ಲವಲ್ಲ. ಆಮೇಲೆ ಬಿಜೆಪಿಯವರಿಗೆ ಮಾತನಾಡಲು ಬೇರೆ ವಿಷಯಗಳೇ ಇಲ್ಲ! ಈ ಜೋಕ್‌ನ ಹಿಂದೆ ಒಂದು ವಾಸ್ತವವೂ ಇದೆ. ಯಾರದೇ ಪ್ರಯತ್ನದ ಫಲವನ್ನು ಪಡೆಯುವಲ್ಲಿ ಕಾಂಗ್ರೆಸ್ಸೇ ಮುಂದಿರುತ್ತದೆ. ಕಮ್ಯುನಿಸ್ಟ್‌ರ ಮಟ್ಟಿಗಂತೂ ಈ ಮಾತು ನೂರಕ್ಕೆ ನೂರು ದಿಟ. ಇತ್ತಿಚೆಗಂತೂ ಮತೀಯವಾದಿಗಳನ್ನು ಎದುರಿಸುವ ಧಾವಂತದಲ್ಲಿ ಕಮ್ಯುನಿಸ್ಟರು ತಮ್ಮ ಮೂಲ ಆರ್ಥಿಕ ಧೋರಣೆಯನ್ನೇ ಮರೆತುಬಿಟ್ಟಿದ್ದಾರೇನೋ ಅಂತ ಅನಿಸುತ್ತಿದೆ. ಈ ನಿಟ್ಟಿನಲ್ಲಿ ಕಮ್ಯುನಿಸ್ಟರು ತಮ್ಮ ಕ್ರಿಯೆಗಳನ್ನು ಪುನರ್ವಿಮರ್ಶಿಸಬೇಕಾದ ಅಗತ್ಯವಿದೆ.

ರೈತ ಸಂಘಟನೆಗಳು ಈ ನೆಲದ ತಲಸ್ಪರ್ಶಿ ತಿಳಿವಳಿಕೆ ಉಳ್ಳವುಗಳು. ಜಾಗತೀಕರಣಕ್ಕೆ ಪ್ರತಿಯಾಗಿ ಗ್ರಾಮಭಾರತವನ್ನು ಕಟ್ಟಿ ನಿಲ್ಲಿಸಲು ನಿಜವಾಗಿಯೂ ಶಕ್ತಿ ಇರುವಂಥವು. ಆದರೆ ಅವುಗಳ ವ್ಯಾಪ್ತಿ ತುಂಬಾ ಸೀಮಿತ. ಮತ್ತು ನಾನಾ ಪ್ರದೇಶಗಳಲ್ಲಿ ನಾನಾ ರೀತಿಯಾಗಿ ಅಸ್ತಿತ್ವದಲ್ಲಿರುವ ಅವುಗಳನ್ನು ಏಕಸೂತ್ರದಡಿಯಲ್ಲಿ ತರಲು ಕಷ್ಟವಾಗುತ್ತಿದೆ. ಬಹುಶಃ ಇತರೆಲ್ಲ ಆ್ಯಕ್ಟಿವಿಸ್ಟ್ ಗ್ರೂಪ್‌ಗಳು ಈ ಕಾರ್ಯಕ್ಕೆ ತೊಡಗುವುದರಿಂದ ಕೊಂಚ ಪ್ರಯೋಜನ ವಾದೀತೇನೋ. ಅದಾಗಬೇಕಾದರೆ ಸಾಂಸ್ಕೃತಿಕ - ಸಾಮಾಜಿಕ ಮತ್ತು ಆರ್ಥಿಕ ಆ್ಯಕ್ಟಿವಿಸ್ಟರ ನಡುವೆ ಅಂತರ್‌ಸಂಬಂಧೀ ತಿಳಿವಳಿಕೆಗಳು ಏರ್ಪಡಬೇಕು. ಅದೇ ಏರ್ಪಡುತ್ತಿಲ್ಲ. ತಮ್ಮ ತಮ್ಮ ಚಟುವಟಿಕೆಗಳನ್ನು ತಮ್ಮ ತಮ್ಮ ಕ್ಷೇತ್ರದಲ್ಲಿ ನಡೆಸುವ ಅವು ಬೇರೆ ಆ್ಯಕ್ಟಿವಿಸ್ಟರೊಂದಿಗೆ ಸ್ನೇಹ ಸಹಾನುಭೂತಿ, ಪ್ರೀತಿ, ಭಾಗವಹಿಸುವಿಕೆಯನ್ನು ಹೊಂದಿರಬಹುದು. ಆದರೆ ಅದು ಅಂತರ್‌ಸಂಬಂಧೀ ತಿಳಿವಳಿಕೆಯಾಗಿ ಮಾರ್ಪಾಟು ಹೊಂದಿಲ್ಲ.

ಇಂಥಲ್ಲಿ ಅಂತರ್‌ಸಂಬಂಧೀ ತಿಳಿವಳಿಕೆಯ ಅಗತ್ಯವನ್ನು ಮನಗಾಣಬೇಕಾದದ್ದು ಅಗತ್ಯವಾಗಿದೆ. ಯಾವುದೇ ವ್ಯವಸ್ಥೆಯ ಸಂಸ್ಕೃತಿ ಉಳಿಯಬೇಕಾದರೆ ಸಂಸ್ಕೃತಿಯ ವಾಹಕಗಳಾದ ಜನರಲ್ಲಿ ಸಾಮಾಜಿಕ ಪ್ರಜ್ಞೆ, ಆರ್ಥಿಕ ಸಶಕ್ತತೆ ಇರಬೇಕಾಗುತ್ತದೆ. ಒಂದು ಸಾಮಾಜಿಕ ಪ್ರಜ್ಞೆಯನ್ನು ಸಾಂಸ್ಕೃತಿಕ ಹಾಗೂ ಆರ್ಥಿಕ ಸನ್ನಿವೇಶಗಳು ನಿರ್ಧರಿಸುತ್ತವೆ. ಒಂದು ಸಶಕ್ತ ಆರ್ಥಿಕ ಸಮುದಾಯವನ್ನು ಸಾಮಾಜಿಕ ಪ್ರಜ್ಞೆ ಮತ್ತು ಪ್ರಬುದ್ಧ ಸಾಂಸ್ಕೃತಿಕ ಸನ್ನಿವೇಶಗಳು ರೂಪಿಸುತ್ತವೆ. ಅಂತಲೇ ಅಭಿವೃದ್ಧಿ ಪ್ರಕ್ರಿಯೆಗೆ ಅಂತರ್‌ಸಂಬಂಧೀ ತಿಳಿವಳಿಕೆಯುಳ್ಳ ಆ್ಯಕ್ಟಿವಿಸ್ಟರ ಅನಿವಾರ್ಯತೆ ಇದೆ. ಆ್ಯಕ್ಟಿವಿಸ್ಟರ ಜೊತೆಗೆ 'ಈತ ಸಕಾರಣವಿಲ್ಲದೆ ಹೇಳಿರಲಾರ' ಎನ್ನುವ ಜನಾಭಿಪ್ರಾಯ ಉಳ್ಳ, ಜನರ ನಂಬಿಕೆಗೆ ಅರ್ಹರಾದ ಇನ್‌ಆ್ಯಕ್ಟಿವಿಸ್ಟ್ ಥಿಂಕರ್ಸ್ ಕೂಡ ಇರಬೇಕಾಗುತ್ತದೆ. ಇವೆಲ್ಲವೂ ಪರಸ್ಪರ ಪೂರಕವಾಗಿ ಕಾರ್ಯ ನಿರ್ವಹಿಸಲು ಸಾಧ್ಯವಾದಾಗ ಒಟ್ಟೂ ವ್ಯವಸ್ಥೆಯನ್ನು ಸಮಗ್ರವಾಗಿ, ಅಭಿವೃದ್ಧಿ ಪ್ರಕ್ರಿಯೆಗೆ ತೊಡಗಿಸಬಲ್ಲ ಸಶಕ್ತ ರಾಜಕೀಯ ವ್ಯವಸ್ಥೆಯೊಂದು ರೂಪು ತಳೆಯುತ್ತದೆ. ಆಗ ಪ್ರಾಯಶಃ ಡಾ. ಮನಮೋಹನ್ ಸಿಂಗ್ ಕೂಡ 'ಜಾಗತೀಕರಣ ಅನಿವಾರ್ಯ'ವೆಂದು ಹೇಳಲಾರರು.

ಈ ಬರಹದ ಒಂದೆರಡು ಅಂಶಗಳ ವಿಸ್ತರಣೆಗೆ ಡಾ.ಎಚ್.ಎಸ್.ರಾಘವೇಂದ್ರರಾವ್ ಅವರೊಂದಿಗೆ ನಡೆಸಿದ ವೈಯಕ್ತಿಕ ಸಂವಾದದಲ್ಲಿ ಸಿಕ್ಕ ಹೊಳಹನ್ನು ಬಳಸಿಕೊಂಡಿದ್ದೇನೆ. —ಲೇಖಕ

■ ಅರವಿಂದ ಚೊಕ್ಕಾಡಿ, ಫ್ರ್ಯಾಂಕೊ ವಿಲ್ಲಾ, ಚರ್ಚ್ ರಸ್ತೆ, ಬೆಳ್ತಂಗಡಿ-೫೭೪ ೨೧೪ (ದ.ಕ.) ■

ಪುಸ್ತಕ ಪರಿಶೀಲನೆ

೧. *ಸಮಗ್ರ ದಿಗಂಬರ ಕಾವ್ಯ* : ತೆಲುಗು : ನಗ್ನಮುನಿ, ನಿಖಿಲೇಶ್ವರ, ಜ್ವಾಲಾಮುಖಿ, ಚೆರಬಂಡರಾಜು, ಭೈರವಯ್ಯ, ಮಹಾಸ್ವಪ್ನ; ಅನು. : ಗುರುಮೂರ್ತಿ ಪೆಂಡಕೂರು;

ಯುವಕರ ಸಂಘ (ರಿ.), ಹಗರಿಬೊಮ್ಮನಹಳ್ಳಿ, ಪ್ರ.ಮು ೨೦೦೩, ಪು. ೨೮೮, ರೂ. ೧೨೫/-

ಬಹಳ ಸಲ, ತಮ್ಮ ಕಾವ್ಯದ ಆಶಯದ ಬಗ್ಗೆ, ಕವಿಗಳು, ಗದ್ಯದಲ್ಲಿ ಅನ್ನುವದಕ್ಕೂ, ಅದು ಪದ್ಯದಲ್ಲಿ ಆಗುವದಕ್ಕೂ ಸಾಕಷ್ಟು ಅಂತರ ಕಂಡುಬರುವದು ಸ್ವಾಭಾವಿಕ. ಒಳ್ಳೆಯ ಪದ್ಯವಾಗುವಲ್ಲಿಯಂತೂ ಈ ಅಂತರ ಇನ್ನೂ ವಿಸ್ತರಿಸಿಕೊಳ್ಳುವಂತಹದು. ಇದು, ವಿಶೇಷವಾಗಿ, ಸಾಮುದಾಯಿಕಗಳ, ಸಾರ್ವತ್ರಿಕಗಳ ನಿರೀಕ್ಷಣೆ ಮತ್ತು ವಿಶ್ಲೇಷಣೆಯಾಗುವ ಸಮಾಜಮುಖಿ ರಚನೆಗಳಲ್ಲಿ ಎದ್ದು ಕಾಣುವಂತಹ ಅಂಶ. ಆದರೆ ದಿಗಂಬರ ಕವಿತೆಗಳಲ್ಲಿ ಮಾತ್ರ, ಈ ಅಂತರ, ತೀರ ಕಡಿಮೆ ಎನ್ನುವಷ್ಟು ಕಿರಿದಾದುದು. ದಿಗಂಬರ ಕವಿತೆಗಳ ಯಶಸ್ಸು ಮತ್ತು ಪ್ರಭಾವಗಳಿಗೆ ಈ ಅಂಶವೇ ಮುಖ್ಯ ಕಾರಣವೆನ್ನಿಸುತ್ತದೆ. ಇದನ್ನು ಸ್ಪಷ್ಟಪಡಿಸುವದಕ್ಕೆ, ಈ 'ಸಮಗ್ರ ದಿಗಂಬರ ಕಾವ್ಯ'ದ ಕನ್ನಡ ಸಂಪುಟಕ್ಕಾಗಿಯೇ, ದಿಗಂಬರ ಕವಿಗಳಲ್ಲಿ ಒಬ್ಬರಾದ 'ನಗ್ನಮುನಿ' ಅವರು ಬರೆದ ಕೆಲವು ಮಾತುಗಳನ್ನು ನೋಡಬಹುದು : "ನಮಗೆ ಸ್ವಾತಂತ್ರ್ಯ ಬಂದೊಡನೆ, ಹಳೆಯ ಸಮಾಜದ ಸ್ಥಾನದಲ್ಲಿ ನವಸಮಾಜದ ನಿರ್ಮಾಣವು ಆರಂಭವಾಗುತ್ತದೆಂದೂ, ಮೌಲ್ಯಗಳು ಬದಲಾವಣೆ ಪಡೆಯುತ್ತವೆಂದೂ, ಜನರಿಗೆ ಸ್ವಾತಂತ್ರ್ಯ ಸರ್ವ ಸಮಾನ ತತ್ವಗಳು, ಪ್ರಾಮಾಣಿಕ ಬದುಕನ್ನು ಸ್ಥಾಪಿಸುವ ದಿಕ್ಕಿನಲ್ಲಿ ಹೊಸ ರಾಜ್ಯವು ಏರ್ಪಡುತ್ತದೆಂದೂ ಎಲ್ಲರೂ ಆಶಿಸಿದರು. ಆದರೆ, ಸ್ವಾರ್ಥ, ಅಸಮಾನತ್ವ, ಅಧರ್ಮ ಮತ್ತು ಅನೀತಿಗಳು ವಿಪರೀತವಾಗಿ ಬೆಳೆದವು. ಬಯಸಿದ್ದಕ್ಕೂ ಬಂದುದಕ್ಕೂ ಹೊಂದಿಕೆಯೇ ಇಲ್ಲದಂತಾಯಿತು. ಪ್ರಜಾಪ್ರಭುತ್ವ ಸೊಟ್ಟ ದಾರಿ ಹಿಡಿಯಿತು.

"ಒಂದು ಕಡೆ ಸರಕಾರದ ವೈಫಲ್ಯಗಳು, ದ್ವಂದ್ವ ಪ್ರಮಾಣಗಳು, ಜನರ ಕಣ್ಣು ಮುಚ್ಚಲು ಪ್ರತಿ ಮಾತಿನ ಮೇಲೆ, ಕಾರ್ಯದ ಮೇಲೆ, ವ್ಯವಸ್ಥೆಯ ಮೇಲೆ ಹಾಕಿದ ಮುಸುಕುಗಳು, ತಲೆಯಾಡಿಸುವ ಅಧಿಕಾರಿ ಗಣಗಳು, ತತ್‌ಫಲವಾಗಿ ಕ್ಯಾನ್ಸರಿನಂತೆ ವ್ಯಾಪಿಸಿದ ಅನೀತಿ, ಇನ್ನೊಂದೆಡೆ, ಮೇಧಾವಿಗಳ ಚಿಂತಕರ ಉದಾಸೀನತೆ, ಕವಿಗಳ ಅಸ್ಪಷ್ಟವಾದ, ಯಾಂತ್ರಿಕ ಹೊಗಳಿಕೆಯ ಕಾವ್ಯಗಳು, ಸತ್ಯವನ್ನು ಮರೆಮಾಚುವದು; ಈ ಎಲ್ಲರಿಂದಾಗಿ, ನಿಧಾನವಾಗಿ, ಜನಾಂಗವು ನಿಸ್ತೇಜವಾಗಿ ನಿರ್ವೀರ್ಯವಾಯಿತು. ಆನುವಂಶಿಕ ಪ್ರಜಾಪ್ರಭುತ್ವದಲ್ಲಿ ಮೌಲ್ಯಗಳಲ್ಲಿ ತಾರು ಮಾರಾಗಿ ಹೌದಪ್ಪಗಳ ಮೇಳ ನಡೆಯಿತು."

ಈ ಎಲ್ಲ ಹಿನ್ನೆಲೆಗಳಲ್ಲಿ, ಸಾಮುದಾಯಿಕ ಪ್ರತಿಭಟನೆಯನ್ನೇ ಮುಖ್ಯವಾಗಿಟ್ಟುಕೊಂಡು, ಕಾವ್ಯಲೋಕವನ್ನು ಪ್ರವೇಶಿಸಿದವರು (೧೯೬೫) ೬ ಜನ ದಿಗಂಬರ ಕವಿಗಳು : ನಗ್ನಮುನಿ, ನಿಖಿಲೇಶ್ವರ, ಜ್ವಾಲಾಮುಖಿ, ಚೆರಬಂಡರಾಜು, ಭೈರವಯ್ಯ ಮತ್ತು ಮಹಾಸ್ವಪ್ನ. ಎಂತಲೇ, "ಸ್ವಾತಂತ್ರ್ಯೋತ್ತರ ಸಮಾಜದ, ರಾಜ್ಯದ ವಕ್ರ ಲಕ್ಷಣಗಳ ಮೇಲೆ, ಹಳಸಿದ ಸಂಸ್ಕೃತಿಯ ಮೇಲೆ ಪ್ರತಿಭಟನೆಯನ್ನು ಪ್ರಾರಂಭಿಸುತ್ತ ಪ್ರಕಟಗೊಂಡ ಪ್ರಥಮ ಆಂದೋಲನವೇ ದಿಗಂಬರ ಕಾವ್ಯ. ವಸ್ತುಗಳಲ್ಲಿಯೂ, ರೂಪವಿನ್ಯಾಸದಲ್ಲಿಯೂ ಕ್ರಾಂತಿಯನ್ನು ತಂದ ಮೊದಲ ಆಂದೋಲನವೇ ದಿಗಂಬರ ಕಾವ್ಯ. ಬರೆಯುವ ಅಕ್ಷರದ ಮೇಲೆ, ನುಡಿಯುವ ಪದದ ಮೇಲೆ, ಆಲೋಚನೆಯ ಮೇಲೆ, ಆಚರಣೆಯ ಮೇಲೆ, ರಾಜ್ಯವು ಎಳೆಯುತ್ತಿರುವ ತೆರೆಗಳನ್ನು ಹರಿದೊಗೆಯಲು ಮುಂದಾದ ಆಂದೋಲನವೇ ದಿಗಂಬರ ಕಾವ್ಯ."

ಎಂತಲೇ, ಇಲ್ಲಿಯ ಅನೇಕ ಕವಿತೆಗಳನ್ನು (ಉದಾಹರಣೆಗೆ : ನಗ್ನಮುನಿ ಅವರ 'ಕಾಸ್ಮಿಕ್ ಜಾತಿ', 'ಸುಖರೋಗಿ', 'ಸಮುದ್ರ ಬಂಧನ'; ನಿಖಿಲೇಶ್ವರ ಅವರ 'ನೀನು ಹೇಳಿದ್ದು ಸುಳ್ಳಲ್ಲ', 'ವೇದಗಳು ವರ್ಣಿಸುವ ಸೈತಾನನ ಮುಖದಲ್ಲಿ'; ಜ್ವಾಲಾಮುಖಿ ಅವರ 'ಶೃಂಗಾರ ವಿಲಾಸ', 'ಪುನರ್ಯೋನಿ

ಪ್ರವೇಶಂ`: ಚೆರಬಂಡರಾಜು ಅವರ `ಇನ್ನೂ, ನೀನಿನ್ನೂ ಗುಲಾಮ`, `ಆಕಾಶವು ಚಿಕ್ಕಿ ಚಿಕ್ಕಿ ಅಳುತ್ತಿದೆ`: ಜ್ವಾಲಾಮುಖಿ ಅವರ `ಹವಗೆಟ್ಟ ಹಾಡು`, `ಬರಗಾಲ ಭಿಕ್ಷೆ`: ಮಹಾಸ್ವಪ್ನ ಅವರ `ಗ್ಲಾನಿರ್ಭವತಿ ಭಾರತ`, `ನಟ ಸಮ್ರಾಟ್` ಇತ್ಯಾದಿ) ಗಮನಿಸಿದಾಗ ಒಂದು ಮಾತು ಸ್ಪಷ್ಟವಾಗುತ್ತದೆ.

ಇಲ್ಲಿಯ ಕವಿತೆಗಳಲ್ಲಿ ಕುದಿತವಿದೆ, ತಪ್ತತೆಯಿದೆ, ಉದ್ವಿಗ್ನತೆಯಿದೆ: ಕೋಪ-ತಾಪ, ಸಂತಾಪಗಳೆಲ್ಲವೂ ಇವೆ. ಆದರೆ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ, ಇವೆಲ್ಲವುಗಳ ಹಿಂದೆ ಗೊಂಬೆಯಾಡುವ ಕಳಕಳಿಗಳಿವೆ, ನೋವುಗಳಿವೆ, ಹೀಗಾಗುತ್ತದೆಯಲ್ಲ ಎಂಬ ತಳಮಳಗಳಿವೆ. ಎಂತಲೇ, ಇವು ಓದುಗನನ್ನು ತಾಗುತ್ತವೆ, ತಿವಿಯುತ್ತವೆ, ಎತ್ತರಕ್ಕೆ ಎಳೆಯುತ್ತವೆ. ಇದೇ ಇಲ್ಲಿಯ ಕವನಗಳಲ್ಲಿಯ ಹೆಚ್ಚುಗಾರಿಕೆ.

ಇನ್ನೊಂದು ಮಾತನ್ನೂ ನಾನು ಇಲ್ಲಿ ಹೇಳಲೇಬೇಕು : ಯಾವುದೇ ಒಂದು ತೀರ ಭಿನ್ನವಾದ ಆಶಯದ, ತೀರ ಭಿನ್ನವಾದ ಅಭಿವ್ಯಕ್ತಿಯ, ತೀರ ಭಿನ್ನವಾದ ತುಡಿತಗಳ ಸೃಜನಶೀಲ ಕೃತಿ, ತನ್ನನ್ನು ಅಳೆಯಬಹುದಾದ ವಿಮರ್ಶೆಯ ಮಾನದಂಡಗಳನ್ನು ತನ್ನ ಒಡಲೊಳಗೇ ಇಟ್ಟುಕೊಂಡು ಬಂದಿರುತ್ತದೆ. 'ದಿಗಂಬರ ಕಾವ್ಯ'ದಂತಹ ತೀರ ಭಿನ್ನವಾದ ಕಾವ್ಯವನ್ನು ಓದುವಾಗ ಈ ಮಾತನ್ನು ಗಮನದಲ್ಲಿಟ್ಟುಕೊಳ್ಳಬೇಕಾದುದು ಆವಶ್ಯಕ.

ಕೊನೆಯ ಮಾತು : ಯಾವ ಭಾಷೆಯಲ್ಲಿ ಭಾಷಾಂತರಗೊಂಡರೂ ಆಯಾ ಭಾಷೆಯ ಕಾವ್ಯದ ಮೇಲೆ, ಆಲೋಚಿಸುವ ಕ್ರಮದ ಮೇಲೆ, ಅಭಿವ್ಯಕ್ತಿಸುವ ತೀಕ್ಷ್ಣತೆಯ ಮೇಲೆ, ಮಂಡಿಸುವ ಅನಿವಾರ್ಯದ ಮೇಲೆ, ಒಂದಿಲ್ಲೊಂದು ಬಗೆಯಿಂದ ಪ್ರಭಾವವನ್ನು ಬೀರಬಲ್ಲಂಥ ಅಪ್ಪಳಿಸುವ ಗುಣಶಕ್ತಿಯ ಪದ್ಯಗಳು, ಈ 'ದಿಗಂಬರ ಕಾವ್ಯ'. ಗುರುಮೂರ್ತಿ ಪೆಂಡಕೂರರ ಶ್ರಮ ಬೆನ್ನು ಚಪ್ಪರಿಕೆಗೆ ಅರ್ಹವಾದುದು.

– ದೇಶಪಾಂಡೆ ಸುಬ್ಬರಾಯ, ನೆಲೆ, ೧೩, ಕುಸುಮನಗರ, ಶ್ರೀರಂಗಮಾರ್ಗ, ಧಾರವಾಡ-೫೮೦ ೦೦೮

೨. ಮಧ್ಯಂತರದ ಒಂದು ಗದ್ಯಗೀತೆ : ಶಶಿಕಲಾ ವೀರಯ್ಯಸ್ವಾಮಿ

ನೆಲೆ ಪ್ರಕಾಶನ, ಸಿಂದಗಿ - ೫೮೬ ೧೨೮, ಪ್ರ.ಮು. ೨೦೦೪, ಪು. ೭೯, ರೂ. ೬೦/-

ಇದು ಶಶಿಕಲಾ ವೀರಯ್ಯಸ್ವಾಮಿಯವರ ೫ ನೆಯ ಕವನ ಸಂಕಲನ. ಇದರಲ್ಲಿ ಸ್ವಂತದ ಕವಿತೆಗಳು, ೬ ಅನುವಾದಗಳು, ೨೦ ಚುಟುಕುಗಳು ಸೇರಿವೆ. ನೋವು ಇಲ್ಲಿನ ಸ್ಥಾಯಿ. ಹಾಗಂತ ಕವಯಿತ್ರಿ ಎಲ್ಲೂ ಗೋಳಾಟದ ಕಂತೆ ಕಟ್ಟುವುದಿಲ್ಲ. ಅಥವಾ ಪ್ರತಿಭಟನೆಯ ಹೆಸರಿನಲ್ಲಿ ಘೋಷಣೆಗಳ ಸಂತೆ ನೆರೆಸುವುದಿಲ್ಲ. ಅವರ ಮೊದಲ ಸಂಕಲನ `ಗುಬ್ಬಿಮನಿ` (೧೯೭೯) ಯಿಂದಲೂ ಅವರ ಕಾವ್ಯನಡಿಗೆಯನ್ನು ಗಮನಿಸಿದವರಿಗೆ ಅವರ ಒಟ್ಟು ಕಾವ್ಯದ ಗಂಭೀರ ಒಳದನಿಗಳ ಸುಳಿವು ತಿಳಿದೇ ಇದೆ. ಈ ಕಾರಣದಿಂದ ಬಂಡಾಯ ಬಂಡಾಯೋತ್ತರ ಕನ್ನಡ ಕಾವ್ಯದ ಅಧ್ಯಯನಕ್ಕೆ ಇವರ ಕಾವ್ಯ ಮುಖ್ಯ ಆಕರವೆನಿಸಬಲ್ಲದು. ೧೫ ವರ್ಷಗಳ ದೀರ್ಘ, ನಿಧಾನ ನಡಿಗೆಯಲ್ಲೂ ಈ ಮುಂಚೂಣಿಯ ಸ್ಥಾನವನ್ನು ಅವರು ಉಳಿಸಿಕೊಂಡಿರುವುದಕ್ಕೆ ಈ ಸಂಕಲನದ ಹಲವಾರು ಕವಿತೆಗಳು ಸಮರ್ಥನೆ ಒದಗಿಸುತ್ತವೆ.

ಇಲ್ಲಿ ಒಂದೆರಡು ಗಜಲ್ ಮಾದರಿಯ ಕವಿತೆಗಳು ಇವೆಯಾದರೂ ಒಟ್ಟು ಕವಿತೆಗಳ ಆಳದಲ್ಲಿಯೇ ಗಜಲ್‌ಗೆ ಹತ್ತಿರದ ಒಳದನಿಯೊಂದು ಮಿಡಿದಿರುವುದು ಅನುಭವಕ್ಕೆ ಬರುತ್ತದೆ. ವೈಯಕ್ತಿಕ ಅಳಲನ್ನು ಸಾಧಾರಣೀಕರಣಗೊಳಿಸುವಲ್ಲಿ ಯಾವುದೇ ಕವಿಯ ಯಶಸ್ಸು, ಸೃಷ್ಟಿಕೌಶಲ್ಯಗಳು ಅಡಗಿವೆ. ಈ ನಿಟ್ಟಿನಲ್ಲಿ 'ಒಂಟಿಮರ' ಕವಿತೆ ಗಮನಾರ್ಹ.

ಹಸಿರು ಸೀರೆಗಳ ಸಿರಿವಂತೆಯರ ನಡುವೆ / ನಿಂತಿದ್ದೇನೆ ನಾನೊಬ್ಬ, ಹರಕು ಚಿಂದಿಯ ಬಂಜೆ / ನಿತಾಂತ, ಏಕತಾನತೆಗಂಜಿ.

`ಒಂಟಿಮರ` ರೂಪಕದ ಬೇರುಗಳಲ್ಲಿ ವೈಯಕ್ತಿಕ ನೋವಿನ ಸೆಲೆಗಳು ಅವ್ಯಕ್ತವಾಗಿ ಹರಿಯುವುದರಿಂದಲೇ ವಿಷಾದ ಅನುಭೂತಿಯ ಮುಖ್ಯ ನೆಲೆಯಾಗುತ್ತದೆ. `ಮನುಕುಲದ ಕತೆ`, `ನಾನೊಬ್ಬ ಭಾರತೀಯ`, `ಜನ್ಮಹಕೆ ಬಾಯಿಲ್ಲದವರ ಕವಿತೆ`, `ಅಳಲು`, `ಹೂವಿನ ಪ್ರಾರ್ಥನೆ`,

`ಮಧ್ಯಂತರದ ಒಂದು ಗದ್ಯಗೀತೆ` ಇಂಥ ಇನ್ನೂ ಹಲವಾರು ಕವಿತೆಗಳಲ್ಲಿ ವ್ಯಷ್ಟಿ ಸಮಷ್ಟಿಗಳ ನೋವು, ಆಘಾತಗಳು ನಮ್ಮ ಕಾಲದ ಮುಖ್ಯ ಸಮಸ್ಯೆಗಳ ಹಿನ್ನೆಲೆಯಲ್ಲಿ ಅತ್ಯಂತ ಸಮತೋಲನದ ಮನೋವ್ಯವಸ್ಥಾಯಿಯಲ್ಲಿ ಪ್ರಕಟಗೊಂಡಿವೆ. ಕೆಲವು ಕವಿತೆಗಳ ನಾಟಕೀಯತೆ, ವಿಡಂಬನೆಗಳು ಶಿಥಿಲವೆನಿಸಬಹುದಾದರೂ ಇದು ಪ್ರತಿಯೊಬ್ಬ ಮಹತ್ವದ ಕವಿಯಲ್ಲೂ ಕಾಣುವ ಸಾಮಾನ್ಯ ಸಂಗತಿ. ಇತ್ತೀಚಿನ ದಿನಗಳಲ್ಲಿ ಒಟ್ಟು ಕನ್ನಡ ಕಾವ್ಯದ ಅವಸ್ಥೆಯೇ ಶಿಥಿಲಗೊಂಡಂತಿರುವಾಗ ತನ್ಮಯವಾಗಿ ಓದಿ ಆನಂದಿಸುವ ಕವಿತೆಗಳನ್ನು ನೀಡಿರುವ ಶಶಿಕಲಾ ವೀರಯ್ಯಸ್ವಾಮಿ ಅಭಿನಂದನಾರ್ಹರು.

೩. ಮೂರು ಕಿರುನಾಟಕಗಳು : ಶ್ರೀನಿವಾಸ್ ವಿ. ಸುತ್ರಾವೆ

ವಿನಯ ಪ್ರಕಾಶನ, ೧೬೪೬/೧೪, ವಿದ್ಯಾನಗರ, ದಾವಣಗೆರೆ - ೫. ಪ್ರ.ಮು. ೨೦೦೪, ಪು. ೬೪, ರೂ. ೪೦/-

ಅನ್ಯಮೂಲ ಆಧಾರಿತ ಮೂರು ನಾಟಕಗಳ ಸಂಗ್ರಹವಿದು. ಮಾಸ್ತಿಯವರ ಪ್ರಖ್ಯಾತ ಕಥೆ `ಆ್ಯಟಿಲನ ದಾಕ್ಷಿಣ್ಯ`ವನ್ನು ಆಧರಿಸಿ ಬರೆಯಲಾದ `ಅಟಿಲಾನ ಅಂತಃಕರಣ` ನಾಟಕವು ಸಮರ್ಥ ರೂಪಾಂತರವಾಗಿದೆ. ಮೂಲ ಕಥೆಯಲ್ಲಿಯೇ ಅಂತರ್ಗತವಾಗಿರುವ ನಾಟಕೀಯ ವಿನ್ಯಾಸವನ್ನು ಕಥೆಯ ಸ್ವರೂಪ, ಆಶಯಗಳು ಕೆಡದಂತೆ ನಾಟಕದಲ್ಲಿ ಪರಿಣಾಮಕಾರಿಯಾಗಿ ಹಿಡಿಯಲಾಗಿದೆ. ಎಲ್ಲೂ ಭಾವಾವೇಶದ, ಕಾವ್ಯಾತ್ಮಕ ಸಂಭಾಷಣೆಗಳನ್ನು ಹೆಣೆಯದೆ ಲೇಖಕರು ಮಾಸ್ತಿಯವರ ನಿರುದ್ವಿಗ್ನ ಶೈಲಿಯ ಸರಳತೆಯನ್ನು ರೂಪಾಂತರದಲ್ಲೂ ಉಳಿಸಿಕೊಂಡಿದ್ದಾರೆ.

ಇಂಗ್ಲಿಷ್ ನಾಟಕಕಾರ ನಾರ್ಮನ್ ಮ್ಯಾಕ್ಸ್ ಕಿನೆಲ್‌ನ `The Bishop`s Candlesticks` ಎಂಬ ಅತ್ಯಂತ ಜನಪ್ರಿಯ ನಾಟಕ ಆಧರಿಸಿ `ಪೂಜಾರಿಯ ದಯೆ` ನಾಟಕ ಬರೆಯಲಾಗಿದೆ ಎಂದು ಲೇಖಕರು ಹೇಳಿದ್ದಾರೆ. ಅವರ ಹೇಳಿಕೆಯಲ್ಲಿ ಇದು ಮೂಲ ನಾಟಕದ ಯಥಾವತ್ತಾದ ಅನುವಾದವಲ್ಲ ಎಂಬ ದನಿ ಇದೆ. ಮೂಲ ನಾಟಕದೊಂದಿಗೆ ತುಲನೆ ಮಾಡಿ ಅಭ್ಯಸಿಸಲು ಇಲ್ಲಿ ಅವಕಾಶವಿದೆ. ಆದರೆ ನವೋದಯ ಮತ್ತು ಪ್ರಗತಿಶೀಲ ಸಾಹಿತ್ಯ ಸಂದರ್ಭದ ಮಾನವೀಯತೆಯ ನೆಲೆಗಳ ಹುಡುಕಾಟದ ಸಾಮಾಜಿಕ ಆಶಯ ಈ ಕೃತಿಯಲ್ಲಿ ಸೂಕ್ತವಾಗಿ ನಿರೂಪಗೊಂಡಿದೆ.

ಪ್ರಖ್ಯಾತ ಇಂಗ್ಲಿಷ್ ಕಥೆಗಾರ್ತಿ ಕ್ಯಾಥರೀನ್ ಮ್ಯಾನ್ಸ್‌ಫೀಲ್ಡ್‌ಳ `The Doll`s House` ಎಂಬ ಕಥೆಯನ್ನು ಆಧರಿಸಿ ಬರೆಯಲಾದ `ಬೊಂಬೆಮನೆ` ನಾಟಕವು ಮಕ್ಕಳಿಗಾಗಿ ಬರೆಯಲ್ಪಟ್ಟಂತೆ ತೋರಿದರೂ ನಮ್ಮ ಸಮಾಜದಲ್ಲಿ ಸಿರಿತನ ಬಡತನಗಳ ವರ್ಗತರತಮ ಹೇಗೆ ಎಲ್ಲ ಕಾಲಕ್ಕೂ ಜೀವಂತವಾಗಿ ಮುಂದುವರಿದಿದೆ ಎಂಬುದನ್ನು ಬಿಂಬಿಸುವಲ್ಲಿ ಯಶಸ್ವಿಯಾಗಿದೆ. ಮಕ್ಕಳಲ್ಲಿ ಕಂಡುಬರದ ಈ ಭೇದ ದೊಡ್ಡವರನ್ನು ಆವರಿಸುವ ವಿಕಾರ ಎಂಬುದು ಇಂದಿಗೂ ಪ್ರಸ್ತುತವಾಗಿದೆ. ಬಾಳಿನ ಸಕಲ ಸೌಲಭ್ಯಗಳು ಶ್ರೀಮಂತರಿಗೆ ಮಾತ್ರ, ಬಡವರಿಗೆ ಅವುಗಳ ಹತ್ತಿರ ಸುಳಿಯುವ ಅರ್ಹತೆಯೂ ಇಲ್ಲ ಎಂಬ ಸಂಕೀರ್ಣ ಆಶಯವನ್ನು ಮಕ್ಕಳ ಸಹಜ ಬೆರಗಿನಲ್ಲಿ, ರೂಪಕಾತ್ಮಕವಾಗಿ ಈ ಕಿರುನಾಟಕದಲ್ಲಿ ಕಟ್ಟಿಕೊಡಲಾಗಿದೆ.

– ಬಸವರಾಜ ವಕ್ಕುಂದ, ೧೭/೫, ವಸ್ತ್ರದ ಬಿಲ್ಡಿಂಗ್ ಮಹಿಷಿ ರಸ್ತೆ, ಮಾಳಮಡ್ಡಿ, ಧಾರವಾಡ-೫೮೦ ೦೦೭

೪. ನಿಶಾ ನಿಮಂತ್ರಣ : ಹರಿವಂಶರಾಯ ಬಚ್ಚನ್ : ಅನು. : ಪಾಂಡುರಂಗ ಕೋಟಿ

ದೀಪರಾಜ ಪ್ರಕಾಶನ, ಮದ್ರಾಸ ಗಲ್ಲಿ, ಸೈದಾಪುರ, ಧಾರವಾಡ, ಪ್ರ.ಮು. ೨೦೦೧, ಪು. ೧೧೩, ರೂ. ೮೦/-

ಹಲವು ಬಾರಿ ಎಳೆಯ ವಯಸ್ಸಿನಲ್ಲಿ ಓದಿದ, ಅಭ್ಯಸಿಸಿದ ಸಾಹಿತ್ಯ ಕೃತಿ ಎಷ್ಟೊಂದು ಪ್ರಭಾವ ಬೀರಬಲ್ಲುದು ಎಂಬುದಕ್ಕೆ ಪ್ರಸ್ತುತ ಅನುವಾದ ಸಾಕ್ಷಿ. ವೈದ್ಯಕೀಯ ಇಲಾಖೆಯಿಂದ ನಿವೃತ್ತರಾದ ಪಾಂಡುರಂಗ ಕೋಟಿ ಅವರು ತಮ್ಮ ಬಿ.ಎ. ಪದವಿಗಾಗಿ ಹಿಂದೀ ಸಾಹಿತ್ಯವನ್ನು ಮೇಜರ್ ವಿಷಯವಾಗಿ ಅಭ್ಯಸಿಸಿದಾಗ ಹರಿವಂಶರಾಯ ಬಚ್ಚನ್ ಅವರ `ನಿಶಾ ನಿಮಂತ್ರಣ` ಅವರ ಮೇಲೆ ಗಾಢವಾದ ಪ್ರಭಾವವನ್ನು ಬೀರಿ ಕನ್ನಡ ಅನುವಾದಕ್ಕೆ ಪ್ರೇರೇಪಿಸಿತು ಎಂದು ಹೇಳಿಕೊಂಡಿದ್ದಾರೆ. ಸತೀಶ

ಕುಲಕರ್ಣಿಯವರು ಗುರುತಿಸಿದ ಹಾಗೆ ಶಬ್ದಸಹಿತ ಅನುವಾದ ಈ ಕೃತಿಯಲ್ಲಿ ಕಂಡುಬರುತ್ತದೆ. ರಚನೆಯ ದೃಷ್ಟಿಯಿಂದ ಭಿನ್ನ ಪರಿವಾರಕ್ಕೆ ಸೇರಿದ ಎರಡು ಭಾಷೆಗಳ ಶಬ್ದಾನುವಾದ ಓದಿನ ಹರಿವನ್ನು ಕುಂಠಿತಗೊಳಿಸುವ ಸಾಧ್ಯತೆ ಇದೆ. ಇದು ಕೃತಿಯ ಕೊರತೆಯೂ ಆಗಬಹುದು. ಇಲ್ಲಿ ಬಚ್ಚನ್‌ರ ನೂರು ಕವಿತೆಗಳನ್ನು ನೂರು ಪುಟಗಳಲ್ಲಿ ಹಿಡಿದಿಡಲಾಗಿದೆ.

'ಜಗದ ಬಂಧನವು ಮುರಿಯಿತು, ನಾನು ಸಮುದ್ರದಲ್ಲಿ ಬಿದ್ದಿದ್ದೇನೆ' 'ಜಗದೊಂದಿಗೆ ನನ್ನ ಪ್ರೇಮವಿಲ್ಲ,' 'ಈಗ ನನ್ನ ದುರ್ಬಲತೆಯಿಂದ ಪ್ರೀತಿಯುಳ್ಳವರು ಭೆಟ್ಟಿಯಾಗುವುದಿಲ್ಲ. ಕಳೆದ ದಿನಗಳು ಎಂದು ಬರುವವು' ಎಂಬ ಸಾಲುಗಳನ್ನು ಗಮನಿಸಿದಾಗ ಈ ಸಂಕಲನದ ಹೆಚ್ಚಿನ ಕವಿತೆಗಳು ಕಳೆದ ದಿನಗಳ ವೈಭವೀಕರಣ ಹಾಗೂ ನಂತರದ ದಿನಗಳಲ್ಲಿನ ನಿರಾಶೆ, ವಿಮುಖತೆಯನ್ನು ಪ್ರಕಟಪಡಿಸುತ್ತವೆ. ಈ ನೂರು ಕವಿತೆಗಳಲ್ಲಿ ನೋವು, ನಿರಾಶೆಗಳೇ ಸ್ಥಾಯೀಭಾವ.

'ನನ್ನ ಭೆಟ್ಟಿಗಾಗಿ ಯಾರು ದುಃಖಿಸುವರು? / ನನ್ನ ಹಿತಚಿಂತನ ಯಾರ ಸಲುವಾಗಿ? /ಈ ಪ್ರಶ್ನೆಯನ್ನು ಕಡಿಮೆ ಮಾಡುತ್ತಾ ಹೃದಯದೊಳು ದುಃಖವ / ತುಂಬಿಕೊಂಡು ಹೆಜ್ಜೆ ಇಡುವೆ / ಹಗಲು ಕೂಡಲೆ ಮುಗಿಯುತ್ತಾ ಹೋಗುತಿದೆ.'

ಈ ಕವನದಲ್ಲಿ ಏಕಾಂಗಿತನದ ಭಯ ವ್ಯಕ್ತವಾಗುತ್ತದೆ. ನೋವು, ಒಂಟಿತನದ ತಳಮಳ, ವಿಮುಖತೆಯಲ್ಲಿ ಪರ್ಯಾವಸಾನವಾಗಿಸಿರುವುದು ಸಂಕಲನದ ಎಲ್ಲ ಕವನಗಳಲ್ಲಿ ಕಂಡುಬರುತ್ತದೆ. ಆದರೂ, 'ಸಂಜೆಯ ತಾರೆಯು ಉದಯವಾಯಿತು' ಎಂಬಲ್ಲಿ ಆಶಾವಾದವಿದೆ.

೫. *ಸಲಸಲದ ಪಾಡು* : ವಿಜಯಕಾಂತ ಪಾಟೀಲ

ಸುಮುಖ ಪ್ರಕಾಶನ, ನಂ. ೩, ಕಾಮಾಕ್ಷಿ ಪಾಳ್ಯ, ಬೆಂಗಳೂರು-೭೯, ಪ್ರ.ಮು. ೨೦೦೩, ಪು. ೬೪, ರೂ. ೨೨/-

'ಸಲಸಲದ ಪಾಡು' ವಿಜಯಕಾಂತ ಪಾಟೀಲರ ಎರಡನೆಯ ಕವನ ಸಂಕಲನ. ಧಾರವಾಡದ ಆಡುಗನ್ನಡ, ಗ್ರಾಮೀಣ ಪರಿಸರದ ಜೀವನಾನುಭವ, ಭೂತ, ವರ್ತಮಾನ ಹಾಗೂ ಭವಿಷ್ಯತ್ತಿನ ಆಗುಹೋಗುಗಳ ಬಗ್ಗೆ ಖಾಳಜಿ ಪಾಟೀಲರ ಕವನಗಳಲ್ಲಿ ಮಡುಗೊಂಡಿರುವುದು ಎದ್ದು ಕಾಣುತ್ತದೆ. ಸಂಕಲನ ಆರಂಭವಾಗುವುದೇ ಭೂತದ, ಕಳೆದ ದಿನಗಳ ಅನುಭವದ ಅಭಿವ್ಯಕ್ತಿಯಿಂದ.

> ನಿನ್ನಜ್ಜ ಕೆರಸಿಹೋಳಿಗೆ ಚಟಗಿ ತುಪ್ಪ ಬಿಗಿದೆದ್ದರ
> ಒಂದೇ ಕೂರಿಗೆಯಲಿ ಆರೇಳು ಎಕರೆ ಬಿತ್ತುತ್ತಿದ್ದ

ಅಜ್ಜಿ ಹೇಳುವ ಅಜ್ಜನ ಗುಣಗಳು ಮೈಯೊಳಗೆ ಸೇರಿ ಲೇಖಕರಿಗೆ ಮಾದರಿಯಾಗುತ್ತದೆ. ಅದನ್ನೆ 'ಒಮ್ಮೊಮ್ಮೆ ಪರಿವೆಗೂ ಬಾರದಂತೆ ಒಳತೂರಿ ತಿವಿಯತೊಡಗುತ್ತಾನೆ' ಎಂದು ಕವನವಾಗಿಸಿದ್ದಾರೆ. ಇದು ಭೂತವನ್ನು ಸ್ವೀಕರಿಸುವ, ತನಗರಿವಿಲ್ಲದಂತೆ ತನ್ನದಾಗಿಸಿಕೊಂಡ ಪ್ರಕ್ರಿಯೆಯೂ ಕೂಡಾ. ಸಹಬಾಳ್ವೆ ಎಂಬುದು ಕೇವಲ ಮಾನವನಿಗೆ ಸೀಮಿತವಾದದ್ದಲ್ಲ. ನಿಸರ್ಗದಲ್ಲಿಯೇ ಕೂಡಿ ಬಾಳುವ ಕ್ರಿಯೆ ನಡೆದು ಬಂದಿದೆ. ಎಲ್ಲಿಯದೊ ಮಲೆನಾಡ ಅಂಚು, ಮತ್ತೆಲ್ಲಿಯದೊ ಬಯಲನಾಡಿನ ಕೊನೆ. ಆದರೂ ಒಂದನ್ನು ಆಶ್ರಯಿಸಿ ಇನ್ನೊಂದು ಇದೆ ಎಂಬುದನ್ನೆ, 'ಮಲೆನಾಡಿಲ್ಲಿ ಬಿದ್ದ ಭಾರಿ ಮಳೆಗೆ / ನನ್ನದೆಯ ಹೊಳೆಗೆ ತುಂಬು ನೆರೆ... / ಅಲ್ಲಿ ಶುರುವಾದರೆ ಹನಿ ಹನಿ ಮಳೆ / ಇಲ್ಲಿ ನಳನಳಿಸುವ ಇಳೆ'– ಹೀಗೆಯೇ ಮುಂದುವರಿಯುತ್ತದೆ ಕವನ.

ಗ್ರಾಮೀಣ ಪರಿಸರದ ವಿವರಗಳಿಗೆ ಕವಿಹೃದಯ ಉಬ್ಬಿ ಅರಳುತ್ತದೆ, ಶಬ್ದ ಸಿದ್ಧಗೊಳ್ಳುತ್ತವೆ. ಸಾಲುಗಳು ಬಿತ್ತರವಾಗುತ್ತವೆ :

'ನನ್ನೂರು ಒಂದೊಮ್ಮೆ' ಎಂಬ ಕವನದ ಅಂದಿನ ಚಿತ್ರ, 'ಹಬ್ಬ ಹರಿದಿನ ಜಾತ್ರೆ ಸಡಗರದ ಪರಾಕಾಷ್ಠೆ / ಚಕ್ಕಡಿ ತುಂಬ ಬುತ್ತಿ ಹೋಳಿಗೆ ತುಪ್ಪ /ಕಾಳು ರಾಶಿಯ ಸುತ್ತ ಸುಗ್ಗಿ ಕೇಕೆ' ಮುಂದುವರಿದು 'ಇಡಿ ಊರೇ ಆಗ ಅವಿಭಕ್ತಕೂಟ / ಹಿರಿತಲೆಯ ಅಣತಿಗೆ ಹೂಂ ಎನ್ನುವ ಮನ'

ಆದರೆ ಈಗ, 'ಆಗಿನಂತೆ ಈಗಲೂ ಮೂಡುತ್ತಾನೆ ಸೂರ್ಯ... / ಕೊರತೆ ಎಂದರೆ ಈಗ / ಕೋಳಿ ಕೂಗುವುದಿಲ್ಲ ಹೂವು ಅರಳುವುದಿಲ್ಲ.'

ಈ ಕವನದ ಮೂಲಕ ಭೂತ ಹಾಗೂ ವರ್ತಮಾನಗಳನ್ನು ಹಿಡಿದಿಡುವ ಪ್ರಯತ್ನ ಮಾಡಿದ್ದಾರೆ ಪಾಟೀಲರು. ಬದುಕಿನ ವಿಪರ್ಯಾಸಗಳನ್ನು ಚಿತ್ರೀಕರಿಸುವಲ್ಲಿ ಪಾಟೀಲರು ತುಂಬ ಯಶಸ್ವಿಯಾಗುತ್ತಾರೆ. ವಿಜಯಕಾಂತ ಪಾಟೀಲರು ಸಂಕೇತಗಳಿಗೆ ಗಂಟುಬೀಳದ, ಕವನಗಳನ್ನು ಕ್ಲಿಷ್ಟತೆಗೆ, ಕ್ಲೀಷೆಗೆ ಒಡ್ಡದ ಭರವಸೆ ಮೂಡಿಸುವ ಕವಿ.

—ಡಾ. ಅಂಕದ ಮುರಿಗೆಪ್ಪ, ಮುಖ್ಯಸ್ಥರು, ಕನ್ನಡವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೩

೬. *ಕಳಕಳಿ* : ಡಾ. ಪ್ರಹ್ಲಾದ ಅಗಸನಕಟ್ಟೆ

ಶಕ್ತಿ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ೫ ನೇ ಕ್ರಾಸ್, ವಿಧಾನಸೌಧ ವಿಸ್ತರಣೆ, ಕವಿಧಾಮನಗರ,

ಲಗ್ಗೆರೆ, ಬೆಂಗಳೂರು-೫೮, ಪ್ರ.ಮು. ೨೦೦೪, ಪು. ೧೯೨, ರೂ. ೧೫೦/-

ಸಮಕಾಲೀನ ಸಾಹಿತ್ಯದ ಅರ್ಥಪೂರ್ಣ ಚರ್ಚೆಗೊಂದು ಉತ್ತಮ ನಿದರ್ಶನ ಪ್ರಹ್ಲಾದ ಅಗಸನಕಟ್ಟೆ ಯವರ 'ಕಳಕಳಿ'. ಪುಸ್ತಕದ ಹೆಸರೇ ಸೂಚಿಸುವಂತೆ ವಿಮರ್ಶೆಯನ್ನೇ ಪುನರ್‌ವ್ಯಾಖ್ಯಾನಿಸುವ ಅದರ ಪರಿಭಾಷೆಯನ್ನು ಸೃಜನಶೀಲಗೊಳಿಸುವ ಒಂದು ಮಹತ್ತರ ಕಾರ್ಯವನ್ನೂ ಅವರಿಲ್ಲಿ ಮಾಡಿದ್ದಾರೆ. ಇದು ಕಳಕಳಿ. ಸಹೃದಯತೆಯಿಂದ ಕೃತಿ ಅಥವಾ ಲೇಖಕನೊಬ್ಬನನ್ನು ಎತ್ತಿಕೊಂಡಾಗ ಹರಿದು ಬಂದ ವಿಚಾರಲಹರಿಯನ್ನು ಒಂದಿಷ್ಟು ವಿಮರ್ಶಾ ಭಾಷೆಯಲ್ಲಿ ಕಟ್ಟಿಕೊಡುವ ಕಳಕಳಿ ಇಲ್ಲಿಯ ಬಹುಪಾಲು ಬರಹಗಳ ಹಿಂದಿನ ಉದ್ದೇಶ.

ಮೂರು ಕಿರುಸಂದರ್ಶನ ಹಾಗೂ ಇಪ್ಪತ್ತಾರು ದೀರ್ಘ ಲೇಖನಗಳ 'ಕಳಕಳಿ' ವಿಮರ್ಶೆಗೆ ಇತಿಹಾಸ, ಸಮಕಾಲೀನ ರಾಜಕೀಯ, ಮನೋವಿಜ್ಞಾನ, ತತ್ವಜ್ಞಾನ, ಭಾಷಾಶಾಸ್ತ್ರದ ಅನೇಕ ಮಹತ್ವದ ಶಾಖೆಗಳಾದ ರಚನಾವಾದ, ಸಂರಚನಾವಾದ, ರಚನೋತ್ತರವಾದ, ಸಂವಾದನಾವಾದಗಳನ್ನು ಮಾನದಂಡ ಗಳನ್ನಾಗಿಸಿಕೊಳ್ಳುತ್ತಲೇ ಅವುಗಳ ಮಿತಿಗಳನ್ನೂ ಸಾರಿ ಹೇಳುತ್ತದೆ. 'ವಿಮರ್ಶೆ ಅಂದರೆ ಬೆವರು ಸುರಿಸುವ ಕೆಲಸ. ಇನ್ನೊಬ್ಬರ ಫಸಲು ಹೊಕ್ಕು ಮೇಯುವ, ಮೇಯ್ದುದ್ದನ್ನು ಹಗಲಿರುಳು ಮೆಲಕಾಡುವ ತ್ರಾಸಿನ ಕೆಲಸ' ಎನ್ನುವ ಪ್ರಹ್ಲಾದ ತಮ್ಮ ಬರಹದಲ್ಲಿ ಎಲ್ಲಿಯೂ ಶಬ್ದಗಳ ಮೋಹಕ್ಕೆ ಸಿಲುಕಿರುವಂತೆ ತೋರುವುದಿಲ್ಲ.

'ಅಲ್ಲಮಪ್ರಭು ಮತ್ತು ಸೂಫಿ ಧರ್ಮ' ಹಾಗೂ ಡಾ. ಎಚ್. ಎಸ್. ಶಿವಪ್ರಕಾಶರೊಂದಿಗಿನ ಅವರ ಸಂದರ್ಶನ ಈ ಕೃತಿಯಲ್ಲಿ ಮತ್ತೆ ಮತ್ತೆ ಓದುಗನ ಓದನ್ನು ನಿರೀಕ್ಷಿಸುವ ಎರಡು ಕಳಕಳಿಯ ಬರಹಗಳು. ತರ್ಕ, ಊಹೆ, ವಾದ-ವಿವಾದಗಳಲ್ಲಿ ಮಗ್ನರಾಗಿರುವವರನ್ನೆಲ್ಲ ಅಜ್ಞಾನಿಗಳು ಎಂದ ಸೂಫಿಗಳು ಜ್ಞಾನದ ಹೆಪ್ಪುಗಟ್ಟುವಿಕೆಯನ್ನು ಜೀವನ ಕಳಕಳಿಯ ತಳಹದಿಯ ಮೇಲೆ ನೋಡಿದವರು. ಅಂತೆಯೇ ಅಲ್ಲಮನೂ ಎಂದು ಹೇಳುವ ಅಗಸನಕಟ್ಟೆ ಅಲ್ಲಮನನ್ನು ಮತ್ತೆ ಉಗ್ರಕೋಪಿ ಎನ್ನುತ್ತಾರೆ. 'ನಿದ್ದೆ'ಯ ವಿಷಯದಲ್ಲಿ ಮಾತ್ರ ಅಲ್ಲಮ ಮತ್ತು ಸೂಫಿಗಳು ಸಮಾನ ಧೋರಣೆಯುಳ್ಳವರು ಎಂಬುದು ಅವರ ವಾದ. ಕುವೆಂಪುವಿನಿಂದ ಅಡಿಗರ ವರೆಗೆ , ಆ ಹಿಂದೆ ಪಂಪನಿಂದ ಕುವೆಂಪು ವರೆಗೆ ಯಾವ ಕವಿಯೂ ಕಾವ್ಯಕ್ಕಾಗಿ ಕಾವ್ಯ ಬರೆಯಲಿಲ್ಲ ಎನ್ನುವ ಶಿವಪ್ರಕಾಶರೊಂದಿಗಿನ ಸಂದರ್ಶನದ ಸೆಳಹು ಒಂದು ಪ್ರಾಮಾಣಿಕ ಹಾಗೂ ಚಾರಿತ್ರಿಕ ದಾಖಲಾತಿ. ಉಳಿದ ಲೇಖನಗಳು ಪ್ರೋತ್ಸಾಹದ ಉದ್ದೇಶದ ಚರ್ಚೆಗಳು. ಅಗಸನಕಟ್ಟೆಯವರ ವಿಮರ್ಶೆಗೊಳಗಾದ ಲೇಖಕರು ಖಂಡಿತವಾಗಿಯೂ ಲೇಖಕರಾಗಿ ಉಳಿದುಕೊಳ್ಳುತ್ತಾರೆ.

೭. ತೇಲ್‌ನೋಟ : ಕು. ಗೋ.

ಪುಸ್ತಕ ನಿಧಿ, ಗಾವಳಿ, ಕುಂದಾಪುರ - ೫೭೬ ೨೧೦, ದ್ವಿ.ಮು. ೨೦೦೪, ಪು. ೧೬೪, ರೂ. ೫೦/-

'ತೇಲ್‌ನೋಟ' ಬರೀ ಹಾಸ್ಯ ಲೇಖನಗಳ ಒಂದು ಸಂಕಲನ ಎಂದು ಬರೆಯುವುದಾದರೆ ಅದು ಪುಸ್ತಕವನ್ನು ಬದಿಗೆ ಸರಿಸುವ ಕ್ರಿಯೆಯಾಗುತ್ತದಷ್ಟೇ. ಲೇಖಕ ಕು. ಗೋ. ಅವರಲ್ಲಿ ಹುದುಗಿರುವ ಒಬ್ಬ ಗಂಭೀರವಾದ ಕವಿ, ಚಿಂತಕ, ಕಥೆಗಾರನ ಬಗೆಗೆ ಏನೂ ಮಾತನಾಡಿದಂತಾಗುವುದಿಲ್ಲ. ಉದಾ-ಹರಣೆಗೆ ಮುನ್ನುಡಿಯಲ್ಲಿ ಡಾ. ಸಿ. ಎನ್. ರಾಮಚಂದ್ರನ್ ಬರೆಯುವಂತೆ ಸಂಕಲನದ ಮೊದಲ ಲೇಖನ 'ರಥೋತ್ಸವ' ಒಂದು ಸೊಗಸಾದ ಚಿಕ್ಕ ಕಥೆಯೆ. ಹನಿಗವನದಂತೆ ಮುಗಿದು ಹೋಗುವ ಈ ಲೇಖನ ನಮ್ಮಲ್ಲಿ ಮುಗುಳ್ನಗೆ ಹುಟ್ಟಿಸುತ್ತಲೆ ಎಷ್ಟೊಂದು ಧ್ಯಾನಕ್ಕೆ ಎಡೆಮಾಡಿಕೊಡುತ್ತದೆ, ಆನಂದದ ಹೂಗಳ ಗುಚ್ಛದಂತಿದೆ.

'ತೇಲ್‌ನೋಟ' ಆಧುನಿಕ ಬದುಕಿನ ಕಷ್ಟಕಾರ್ಪಣ್ಯಗಳನ್ನು ರಚನಾತ್ಮಕವಾಗಿ ನೋಡುವ ದಾರಿಯನ್ನು ತೋರಿಸುತ್ತಲೇ ಸಾರ್ವತ್ರಿಕವಾಗಿ ಅಪರಾಧಗಳನ್ನು ಖಂಡಿಸುವ ಬರಹ. 'ಆಗೋಲ್ಲ', 'ಒಂದು ಪಯಣ', 'ಭಯಂಕರ ನಟ ಸೋಮಯ್ಯ' ಹಾಗೂ 'ಹಲೋ ಹಲೋ'ಗಳು ನಮಗೆ ನಗೆ ತರಿಸುವುದಕ್ಕಿಂತಲೂ ಮುಖ್ಯವಾಗಿ ಚಿಂತನೆಗೆ ಹಚ್ಚುತ್ತವೆ. ಈ ಬದುಕನ್ನು ಇಷ್ಟೊಂದು ಸುಂದರವಾಗಿಸಿಕೊಳ್ಳಬಹುದೆ? ಎಂದು ಆಲೋಚನೆಗೆ ತೊಡಗಿಸುತ್ತವೆ. ಶಬ್ದಗಳ ವಾಚಾಳಿತನ, ಒಂದು ನಿರ್ದಿಷ್ಟ ನಿರೀಕ್ಷೆ ಮತ್ತು ಏಕತಾನತೆಯಿಂದ ನರಳುವ ಉಳಿದ ಹೆಚ್ಚಿನ ಲೇಖನಗಳು ಓದುಗನ ಮನಸ್ಸನ್ನು ತಟ್ಟುವುದಿಲ್ಲ. ಮುನ್ನುಡಿಯಲ್ಲಿ ಶ್ರೀನಿವಾಸ ವೈದ್ಯರು ಬರೆಯುವಂತೆ 'ಈ ಸಂಕಲನದಲ್ಲಿರುವ ಲೇಖನಗಳಲ್ಲಿ ಹೆಚ್ಚಿನವು ನಮಗೆ ಪರಿಚಿತವೇ ಆದ– ಆದರೆ ಲೇಖಕರ ಕೈಯಲ್ಲಿ ಹೊಸದಾಗಿ, ಸುಂದರವಾಗಿ ಮೂಡಿಬಂದ– ನಿತ್ಯ ಜೀವನದ ನೈಜ ಚಿತ್ರಣಗಳು. ಹೋಟೆಲು, ಬ್ಯಾಂಕು, ಜೀವವಿಮೆ, ತರಕಾರಿ, ಮಾರುಕಟ್ಟೆ, ಬೆಲೆಗಳ ನೆಗೆತ, ನೀತಿಯ ಕುಸಿತ, ಭ್ರಷ್ಟಾಚಾರ, ಅನಾಚಾರ ಹೀಗೆ ನಮಗೆಲ್ಲಾ ಅನುಭವವೇದ್ಯವಾದ ಬದುಕಿನ ಚಿಕ್ಕ ಚೊಕ್ಕ ಲೇಖನಗಳು.' ತೇಲ್‌ನೋಟದ ಲೇಖನಗಳ ಆಶಯ ಬಹುಪಾಲು ಸಂದರ್ಭಗಳಲ್ಲಿ ಅಸ್ಪಷ್ಟವಾಗಿಯೇ ಉಳಿಯುತ್ತದೆ.

– ಡಾ. ಆರ್. ಜಿ. ಮಠಪತಿ, ಅಧ್ಯಾಪಕರು, ಸ್ನಾತಕೋತ್ತರ ಇಂಗ್ಲಿಶ್ ಅಧ್ಯಯನ ವಿಭಾಗ,
ಬಸವೇಶ್ವರ ಕಲಾ ಕಾಲೇಜು, ಬಾಗಲಕೋಟೆ-೫೮೭ ೧೦೧

೮. ರಿಹರ್ಸಲ್ : ಚಂದ್ರಕಾಂತ ಕುಸನೂರ

ಆನಂದಕಂದ ಗ್ರಂಥಮಾಲೆ, ಮಲ್ಲಾಡಿಹಳ್ಳಿ - ೫೭೭ ೫೩೧, (ಚಿತ್ರದುರ್ಗ). ಪ್ರ.ಮು. ೨೦೦೧, ಪು ೬೫, ರೂ. ೭೦/-

ಬರವಣಿಗೆ ಎನ್ನುವುದು ತಮ್ಮ ಪಾಲಿಗೆ 'ಒಂದು ರೀತಿಯ ಬಿಡುಗಡೆಯಾಗುವ ಕ್ರಿಯೆ' ಎಂದು ಹೇಳಿಕೊಳ್ಳುವ ಚಂದ್ರಕಾಂತ ಕುಸನೂರರು, ಕತೆ, ಕಾವ್ಯ, ನಾಟಕ, ವಿಮರ್ಶೆ ಏನೇ ಬರೆದರೂ ಅದಕ್ಕೊಂದು ಸ್ಪಷ್ಟವಾದ ಧ್ಯೇಯವಿರುತ್ತದೆ. ಮತ್ತು ಅದು ಕೃತಿಯಲ್ಲಿ ಅತ್ಯಂತ ಸಂಯಮದಿಂದ ಮಂಡಿತವಾಗುತ್ತದೆ. ಇಂಥ ಕಾರಣಕ್ಕಾಗಿಯೆ ಕುಸನೂರರು ಬರವಣಿಗೆಯನ್ನು ಒಂದು ಗೀಳಾಗಿ (obsession) ಸ್ವೀಕರಿಸಿಲ್ಲ. ಹೀಗಾಗಿ ಇವರ 'ಅಭಿವ್ಯಕ್ತಿ'ಗೆ ಹೊಸಗನ್ನಡ ಸಾಹಿತ್ಯ ಸಂದರ್ಭದಲ್ಲಿ ಒಂದು ಮನ್ನಣೆಯಿದೆ. ಈ ಮಾತುಗಳಿಗೆ ಇವರ ಈ 'ರಿಹರ್ಸಲ್' ನಾಟಕವೂ ಒಂದು ನಿದರ್ಶನವಾಗಬಲ್ಲುದು. ಈ ನಾಟಕ ಮನುಷ್ಯ ಸಂಬಂಧ ಹಾಗೂ ಆಸಕ್ತಿಗಳ ಮುಖಾಮುಖಿಯಲ್ಲಿ ಮೈ ಪಡೆಯುತ್ತ ಹೋಗುತ್ತದೆ. ಇಲ್ಲಿ ಸಂಭವಿಸುವ ಈ ಮುಖಾಮುಖಿ ಎರಡು ಸ್ತರಗಳದ್ದು. ಒಂದು ತೋರಿಕೆಯ ನೆಲೆಯದ್ದು, ಇನ್ನೊಂದು ಸುಪ್ತ ನೆಲೆಯದ್ದು. ಈ ತಂತ್ರವೇ ನಾಟಕದ ಅನನ್ಯತೆಯೂ ಆಗಿದೆ. ಗೋವಿಂದರಾವ್/ವೆಂಕಮ್ಮ, ಬಾಳಾಚಾರ್/ಪೌರೋಹಿತ್ಯ, ನಾಟಕ ಕಲಾವಿದರು/ಕಾಂತಾಬಾಯಿ, ರಂಗರಾವ್‌ರ ಭೂತ/ಶ್ರಾದ್ಧ

ಇವೆಲ್ಲದರ ಸಂಬಂಧ ಹಾಗೂ ಆಸಕ್ತಿಗಳ ಢೋಂಗಿತನವನ್ನು ಅನಾವರಣಗೊಳಿಸುತ್ತ ಹೋಗುವುದು ಆ ಮೂಲಕ ಮನುಷ್ಯನ ಒಟ್ಟು ಬೂರ್ಜ್ವಾತನಕ್ಕೆ ಒಂದು ರೂಪಾತ್ಮಕ ಪ್ರತಿಕ್ರಿಯೆ ನೀಡುವುದು ನಾಟಕದ ಆಸಕ್ತಿಯಾಗಿದೆ. ಇಲ್ಲಿಯ ಪಾತ್ರಗಳು ತಮ್ಮ ಲೋಲುಪತೆಗಳಿಗಾಗಿ ತಮ್ಮ ತಮ್ಮ ಅಂತರಂಗದ ವರ್ತುಳದೊಳಗೆ 'ರಿಹರ್ಸಲ್' (ತಾಲೀಮು) ನಡೆಸುವುದರಿಂದ 'ಶೀರ್ಷಿಕೆ'ಯಲ್ಲೇ ಇಡೀ ನಾಟಕದ ಅರ್ಥ-ಧ್ವನಿಯ ನಿರ್ವಚನವನ್ನು ಕಾಣಬಹುದಾಗಿದೆ.

೯. ಮಿಂಚು : ಶಿರೀಷ್ ಜೋಶಿ

ಅನುದಕಿಯ ಗ್ರಂಥಮಾಲೆ, ಮಲ್ಲಾಡಿಹಳ್ಳಿ - ೫೭೭ ೫೩೧, (ಚಿತ್ರದುರ್ಗ), ಪ್ರ.ಮು. ೨೦೦೧, ಪು. ೬೪, ರೂ. ೭೦/-

ಬೆಳಗಾವಿಯ ರಂಗಸಂಪದ ತಂಡದ ಕ್ರಿಯಾಶೀಲ ಸದಸ್ಯರಾದ ಶಿರೀಷ್ ಕಲಾವಿದರಾಗಿ, ನಾಟಕಕಾರರಾಗಿ ರಂಗಭೂಮಿಯ ಗಾಢವಾದ ಒಡನಾಟವುಳ್ಳವರು. ಈ ಅನುಭವದ ಹಿನ್ನೆಲೆಯಲ್ಲಿ ಸೃಷ್ಟಿಯಾದ ನಾಟಕ 'ಮಿಂಚು'. ಸ್ವಾತಂತ್ರ್ಯ ಸಂಗ್ರಾಮದ 'ಬೆಳ್ಳಿಚುಕ್ಕಿ' ಎಂದೇ ಭಾವಿಸುವ ಕಿತ್ತೂರು ಚೆನ್ನಮ್ಮ ಬ್ರಿಟಿಶರ ವಿರುದ್ಧ ಬಂಡಾಯ ಸಾರಿದ ಪ್ರಥಮ ಮಹಿಳೆ. ಇವಳ ಬಲಗೈಬಂಟರಾಗಿ, ನಾಡನಿಷ್ಠೆ, ಸ್ವಾಮಿನಿಷ್ಠೆಯನ್ನು ಮೆರೆದ ಅನೇಕ ವೀರಾಗ್ರಣಿಗಳ ಹೆಸರುಗಳು ಕಿತ್ತೂರಿನ ಸ್ವಾತಂತ್ರ್ಯ ಸಮರದ ಇತಿಹಾಸದಲ್ಲಿ ದಾಖಲಿತವಾಗಿವೆ. ಇಂಥ ವೀರಾಗ್ರಣಿಗಳ ಮುನ್ನೆಲೆಯ ಬಂಟ ಸಂಗೊಳ್ಳಿ ರಾಯಣ್ಣ. ಈತನ ಬಗ್ಗೆ ಇತಿಹಾಸ, ಐತಿಹ್ಯ, ಲಾವಣಿ, ಗೀಗೀ ಮುಂತಾದ ಚಾರಿತ್ರಿಕ, ಸಾಹಿತ್ಯಿಕ ವಿವರಗಳನ್ನು ಆಧರಿಸಿ ಶಿರೀಷ್ ಈ ನಾಟಕವನ್ನು ರಚಿಸುವಾಗ ಜಾನಪದ ರಂಗತಂತ್ರವನ್ನು ಅನುಸರಿಸಿರುವುದು ಸೂಕ್ತವಾಗಿದೆ. ಚೆನ್ನಮ್ಮ ಬ್ರಿಟಿಶರ ಕೈದಿಯಾಗಿ ಬೈಲಹೊಂಗಲದ ಬಂದೀಖಾನೆಯಲ್ಲಿದ್ದಾಗ ಆಕೆಯ ಕನಸನ್ನು ಸಾಕಾರಗೊಳಿಸುವ ಸಂಕಲ್ಪದಿಂದ ಬ್ರಿಟಿಶರ ವಿರುದ್ಧ ಗೆರಿಲ್ಲಾ ಮಾದರಿಯ ದಾಳಿಯನ್ನು ಕೈಗೆತ್ತಿಕೊಂಡವನು ರಾಯಣ್ಣ. ಈತನ 'ನಾಡನಿಷ್ಠೆ' ಹಾಗೂ 'ಸ್ವಾತಂತ್ರ್ಯಪ್ರೀತಿ'ಯನ್ನು ನಿರೂಪಿಸುವುದು ಈ ನಾಟಕದ ಉದ್ದೇಶವಾಗಿದೆ. ಈತನ 'ಸಂಕಲ್ಪ' ಸ್ವಕೀಯರ ಸ್ವಾರ್ಥ, ವಿಶ್ವಾಸದ್ರೋಹ, ಒಳಸಂಚುಗಳಿಗೆ ಬಲಿಯಾಗುವುದನ್ನೂ ಇಲ್ಲಿ ಪರಿಣಾಮಕಾರಿಯಾಗಿ ನಿರೂಪಿಸಲಾಗಿದೆ. ಈ ಎಲ್ಲ ಘಟನಾವಳಿಗಳ ಕೇಂದ್ರವಾಗಿ 'ಮಿಂಚಿ'ನಂತೆ ಹೊಳೆದು ಕಣ್ಮರೆಯಾಗುವ ರಾಯಣ್ಣ ನಂದಗಡದಲ್ಲಿ ನೇಣುಕುಣಿಕೆಗೆ ಕೊರಳೊಡ್ಡಿಸಿದರೂ ಅವನ ಸ್ವಾತಂತ್ರ್ಯಪ್ರೇಮದ ಬೀಜಗಳು ಈ ನೆಲದಾಯಿಯ ಮಡಿಲಲ್ಲಿ ಮತ್ತೆ ಮೊಳಕೆಯೊಡೆದು ಚಿಗುರುತ್ತವೆ ಎಂಬ ಆಶಾವಾದ ಈ ನಾಟಕದಲ್ಲಿದೆ.

– ಡಾ. ಬಾಳಣ್ಣ ಸೀಗಿಹಳ್ಳಿ, ಉತ್ಕರ್ಷ, # ೧/೨೯೯೧, ಶ್ರೀನಗರ, ೧ ನೇ ಕ್ರಾಸ್, ಧಾರವಾಡ-೩

೧೦. ಪಾಶುಪತ ದರ್ಶನ : ಎಸ್. ಎಸ್. ಹಿರೇಮಠ

ಸಮತಾ ಪ್ರಕಾಶನ, ಹರಪನಹಳ್ಳಿ-೫೮೩೧೩೧ (ದಾವಣಗೆರೆ). ಪ್ರ.ಮು. ೨೦೦೩, ಪು. ೧೨೦, ರೂ. ೩೫/-

ದರ್ಶನಶಾಸ್ತ್ರದಂಥ ಗಂಭೀರ ವಿಷಯವನ್ನು ಚರ್ಚಿಸುವುದಕ್ಕೆ ಆಳವಾದ ಅಧ್ಯಯನ, ಅಪಾರ ತಾಳ್ಮೆ ಬೇಕು. ಇಂಥ ಚರ್ಚೆಗಳು ತೀರ ಕಡಿಮೆಯಾಗುತ್ತಿರುವ ಇಂದಿನ ದಿನಗಳಲ್ಲಿ ಎಸ್. ಎಸ್. ಹಿರೇಮಠ ಅವರು ವ್ರತನಿಷ್ಠೆಯಿಂದ ಈ ಕಾರ್ಯದಲ್ಲಿ ತೊಡಗಿರುವುದು ನಿಜಕ್ಕೂ ಮೆಚ್ಚಬೇಕಾದ ಸಂಗತಿ.

ಈಗಾಗಲೇ 'ಸಾಂಖ್ಯದರ್ಶನ' ಕೃತಿಯ ಮೂಲಕ ಜಿಜ್ಞಾಸುಗಳ ಗಮನ ಸೆಳೆದ ಹಿರೇಮಠರು ದರ್ಶನ ಅಧ್ಯಯನಕ್ಕೊಂದು ಹೊಸ ಆಯಾಮ ಒದಗಿಸಿದ್ದಾರೆ. ಈ ಹಿಂದೆ ಶಂ. ಬಾ. ಜೋಶಿಯವರು ಮಂಡಿಸಿದ ವಿಚಾರಗಳ ಮುಂದುವರಿಕೆಯಾಗಿ ಶ್ರೀಯುತರ ಚಿಂತನೆಗಳು ಹರಿವಡೆದಿವೆ.

ಭಾರತೀಯ ದರ್ಶನಗಳನ್ನೆಲ್ಲ ವೈದಿಕ ಹಿನ್ನೆಲೆಯಲ್ಲಿಟ್ಟು ನೋಡುವ ಚಿಂತಕರಿಗಿಂತ ಭಿನ್ನವಾಗಿ ಚಿಂತಿಸುವ ವಿದ್ವಾಂಸರ ಸಂಖ್ಯೆ ಬೆರಳೆಣಿಕೆಯಷ್ಟು. ಅಲ್ಲಿಯೂ ಹೊಸ ವಾದಗಳನ್ನು ಮಂಡಿಸುವವರು ಇನ್ನೂ ವಿರಳ. ಇಂಥ ವಿರಳ ಸಂಖ್ಯೆಯ ವಿದ್ವಾಂಸರಲ್ಲಿ ಎಸ್. ಎಸ್. ಹಿರೇಮಠ ಅವರೂ ಒಬ್ಬರು.

ಭಾರತೀಯ ಶೈವ ಪ್ರಪಂಚದ ಕೆಲ ಗ್ರಹಿತ ನಂಬಿಕೆಗಳನ್ನು ಸಾಧಾರವಾಗಿ ನಿರಾಕರಿಸುತ್ತಾ ಮಾನ್ಯವಳಿ ಅಥವಾ ಮನ್ಯೆಯವಳಿ ಎಂಬ ಶಾಖೆಯನ್ನು ಮೊದಲ ಬಾರಿಗೆ ಆಧಾರ ಸಹಿತ ಮಂಡಿಸಿದ ಪ್ರತಿಭಾನ್ವಿತ ವಿದ್ವಾಂಸ ಈ ಹಿರೇಮಠ ಅವರು.

ಹಿರೇಮಠರ 'ಪಾಶುಪತ ದರ್ಶನ' ಕೃತಿ ಕಡಲನ್ನು ಹಿಡಿಯೊಳಡಗಿಸಿದಂತಿದೆ. ಕೇವಲ ನೂರೆಂಟು ಪುಟಗಳಲ್ಲಿ ಅವರು ಒದಗಿಸುವ ಶಾಸ್ತ್ರ, ಶಾಸನ ಮತ್ತು ಇನ್ನಿತರ ಆಕರಗಳ ಮಾಹಿತಿ ದಿಗ್ಭ್ರಮೆಗೊಳಿಸುವಂಥದ್ದು.

ಒಟ್ಟು ಏಳು ಅಧ್ಯಾಯಗಳಲ್ಲಿ ವಿಸ್ತರಿತವಾದ 'ಪಾಶುಪತ ದರ್ಶನ' ಪ್ರಾಚೀನದಿಂದ ಆಧುನಿಕ ಕಾಲದ ವರೆಗಿನ ಚರ್ಚಾ-ಹರವನ್ನು ಪಡೆದುಕೊಂಡಿದೆ. ಮೊದಲ ಅಧ್ಯಾಯದಲ್ಲಿ ದರ್ಶನಶಾಸ್ತ್ರದ ಅಧ್ಯಯನಕ್ಕೆ ಪೀಠಿಕೆಯಿದೆ. ಪ್ರಕೃತಿಪ್ರಧಾನ ಸಾಂಖ್ಯತತ್ವ ಹಾಗೂ ಪುರುಷಪ್ರಧಾನ ಪಾಶುಪತ ತತ್ವಗಳೆರಡೂ ಅವೈದಿಕ ಎಂದರೆ ದ್ರಾವಿಡ ದರ್ಶನಗಳೆಂಬುದರತ್ತ ನಮ್ಮ ಗಮನ ಸೆಳೆಯುತ್ತಾರೆ. ರುದ್ರನನ್ನು ಪಾಶುಪತದ ಹೊರಗಿಟ್ಟು ನೋಡುವ ಪ್ರಯತ್ನ ಕುತೂಹಲಕಾರಿಯಾಗಿದೆ. ನಂತರದಲ್ಲಿ ಧರ್ಮ-ದರ್ಶನಗಳ ಕುರಿತ ಚರ್ಚೆಯಿದೆ.

೨ ನೆಯ ಅಧ್ಯಾಯದಲ್ಲಿ ಪಾಶುಪತದರ್ಶನದ ಪ್ರಾಚೀನತೆಯನ್ನು ಸಿಂಧು ನಾಗರಿಕತೆಯ ಉಪಲಬ್ಧ ಕುರುಹುಗಳಿಂದ, ಪ್ರಾಚೀನ ತಮಿಳು ಹಾಗೂ ಸಂಸ್ಕೃತ ಕೃತಿಗಳ ಆಧಾರದಿಂದ ಗುರುತಿಸುವ ಪ್ರಯತ್ನವಿದೆ. ಸಂನ್ಯಾಸವನ್ನು ಅಸಾಮಾಜಿಕ ಎಂಬ ಹಿರೇಮಠರ ಮಾತು ಚಿಂತನೆಗೆ ಗ್ರಾಸವನ್ನೊದಗಿ ಸುತ್ತದೆ; ಅಂತೆಯೆ ಉಗ್ರ ರುದ್ರ ಸೌಮ್ಯ ಶಿವನ ಚರ್ಚೆಯೂ, ತತ್ವಾಲೋಚನೆಗಳನ್ನೊಳಗೊಂಡ ೩ ನೆಯ ಅಧ್ಯಾಯ ಓದುಗನ ಪೂರ್ವಸಿದ್ಧತೆಯನ್ನಪೇಕ್ಷಿಸುತ್ತದೆ. ಕೆಲ ಅಂಶಗಳಲ್ಲಿ ಶೈವರ ಸುಧಾರಿತ ರೂಪವಾಗಿ ವೀರಶೈವ ಬೆಳೆದುದನ್ನು ಲೇಖಕರು ತಿಳಿಸುತ್ತಾರೆ. ಜಾಬಾಲ್ಯ, ಅಥರ್ವಶಿರಸ್ ಉಪನಿಷತ್ತಿನಿಂದ ಪ್ರಾರಂಭಿಸಿ ಲಿಂಗಮೀಮಾಂಸೆ ವರೆಗಿನ ತಾಂತ್ರಿಕ ಜಿಜ್ಞಾಸೆ ಕುತೂಹಲಕಾರಿಯಾಗಿದೆ.

ಪಶು-ಪತಿ-ರುದ್ರ ಚರ್ಚೆಯನ್ನು ೪ ನೆಯ ಅಧ್ಯಾಯದಲ್ಲಿ ಕೈಗೆತ್ತಿಕೊಂಡ ಹಿರೇಮಠರು 'ರುದ್ರ, ವ್ಯಕ್ತಿಯಲ್ಲ ಗುಂಪು' ಎಂಬುದನ್ನೂ, ಆರ್ಯ-ದ್ರಾವಿಡ ಹೋರಾಟದಲ್ಲಿ 'ರುದ್ರ' ಕಂಡ ಸ್ಥಿತ್ಯಂತರವನ್ನೂ ಸಾಧಾರಣವಾಗಿ ಚರ್ಚಿಸಿದ್ದಾರೆ. ಇದಲ್ಲದೆ ಶತರುದ್ರೀಯ, ಶ್ವೇತಾಶ್ವತರ ಉಪನಿಷತ್ತು, ಮಹಾಭಾರತ, ಏಕಾದಶ ರುದ್ರರು, ರುದ್ರಾಣಿಯರು ಮತ್ತು ಇತರ ಉಪನಿಷತ್ತುಗಳಲ್ಲಿ ಬರುವ ರುದ್ರರ ಕುರಿತ ಪಾಂಡಿತ್ಯಪೂರ್ಣ ಚರ್ಚೆ ಈ ಅಧ್ಯಾಯದಲ್ಲಿದೆ. ೫ ಹಾಗೂ ೬ ನೆಯ ಅಧ್ಯಾಯಗಳಲ್ಲಿ ಕ್ರಮವಾಗಿ ಕರ್ನಾಟಕದ ಶಾಸನಗಳಲ್ಲಿ ಪಾಶುಪತ ಹಾಗೂ ಕನ್ನಡ ಪರಂಪರೆಯಲ್ಲಿ ಪಾಶುಪತ ವಿಷಯಗಳ ಚರ್ಚೆಯಿದ್ದು ಇದು ಲೇಖಕರ ಅಧ್ಯಯನದ ವ್ಯಾಪಕತೆಗೆ, ಗಾಂಭೀರ್ಯಕ್ಕೆ, ಶಿಸ್ತಿಗೆ ಸಾಕ್ಷ್ಯವನ್ನೊದಗಿಸುತ್ತದೆ.

ಶಾಸನ ವಿಭಾಗದಲ್ಲಿ ೧೯ ಶಾಸನಗಳನ್ನು ಹಾಗೂ ಪರಂಪರೆ ವಿಭಾಗದಲ್ಲಿ ವಚನಗಳಿಂದ ಪ್ರಾರಂಭಿಸಿ 'ಶಿವತತ್ವರತ್ನಾಕರ' ವರೆಗಿನ ಕೃತಿಗಳನ್ನು ಪರಿಶೀಲಿಸಿದ್ದಾರೆ. 'ಆಧುನಿಕ ವಿದ್ವಾಂಸರ ಪ್ರಕಾರ ಪಾಶುಪತ ರುದ್ರ' ಎಂಬ ಕೊನೆಯ ಅಧ್ಯಾಯದಲ್ಲಿ ಆಧುನಿಕ ಭಾರತದ ಹಾಗೂ ಕರ್ನಾಟಕದ ವಿವಿಧ ವಿದ್ವಾಂಸರ ಅಭಿಪ್ರಾಯಗಳನ್ನೊದಗಿಸಿದ ಲೇಖಕರು ಅವುಗಳನ್ನು ವಿಮರ್ಶೆಯ ಒರೆಗಲ್ಲಿಗೆ ತಿಕ್ಕಿ ಪರಿಶೀಲಿಸಿದ್ದಾರೆ. ಇಂಥದೊಂದು ಸಾಹಸ ಕೈಕೊಂಡಿದ್ದರೂ ಈ ನಿಟ್ಟಿನಲ್ಲಿ ಕೈಕೊಂಡಿರುವ ಅಧ್ಯಯನವನ್ನು 'ಸಣ್ಣ ಪ್ರಯತ್ನ' ಎಂದು ಕರೆದುಕೊಳ್ಳುವ ಹಿರೇಮಠರ ವಿನಯವನ್ನು ಮೆಚ್ಚಲೇಬೇಕು.

ಹಿರೇಮಠರು ಹಿಡಿದ ಹಾದಿ ತುಂಬ ಭಿನ್ನವಾದದ್ದು. ಕನ್ನಡದ ತಾತ್ವಿಕ ಚಿಂತನೆಗೆ ಹೊಸ ನೋಟ ಒದಗಿಸುವಂಥದ್ದು. ಅವರ ದರ್ಶನ ಮಾಲಿಕೆಯ ಇತರ ಕೃತಿಗಳಿಗಾಗಿ ಜಿಜ್ಞಾಸುಗಳು ಕುತೂಹಲದಿಂದ ಕಾಯುವಂತಾಗಿದೆ.

– ಚಂದ್ರಶೇಖರ ವಸ್ತ್ರದ, ಬೆಳಗು, ಬೇಲೇರಿ ಆಯಿಲ್ ಮಿಲ್ ಹತ್ತಿರ, ಮಸಾರಿ, ಗದಗ -೫೮೨ ೧೦೧

ಸಂಕಲನ : ಅನಿಸಿಕೆ

೧. ಸಂಕಲನ-೧೮ ಸೊಗಸಾದ ಲೇಖನಗಳಿಂದ ಶುಭ್ರವಸನಧಾರಿಣಿಯಂತೆ ಕಂಡಿತು. ಇನ್ನುಮುಂದೆ ನನ್ನ ಕೆಲವು ಲೇಖನ ಸಂಕಲನವೇ ಪ್ರಕಟಿಸಲಿ ಎಂಬುದು ಈಗಿನ ನಿರ್ಧಾರ.

– ಡಾ. ಶ್ರೀನಿವಾಸ ಹಾವನೂರ, ಮಂಗಳೂರು

೨. ಸಂಕಲನ-೧೮ ರ 'ಕಡೀಪುಟ' ಮನನೀಯ. ಸಿಪಿಕೆ ಯವರ ಕಾವ್ಯಕ್ಕೆ ಕನ್ನಡ ಸಾರಸ್ವತ ಲೋಕದಿಂದ ಸಂದಾಯವಾಗಬೇಕಾದಷ್ಟು ಗಮನ ಸಂದಾಯವಾಗಿಲ್ಲ. ಈ ದಿಟ್ಟಿಯಿಂದ ಅವರ ಕಾವ್ಯ ಕುರಿತಾದ ಮಾಧವ ಕುಲಕರ್ಣಿಯವರ ಸಾರವತ್ತಾದ ಲೇಖನ ಪ್ರಮುಖವಾದದ್ದು. ಈಗ ಸ್ವಲ್ಪಮಟ್ಟಿಗಿನ ಕೊರತೆ ತುಂಬಿದೆ. ಆನಂದ ಗಾಣಿಗರ ಮತ್ತು ಹಾಲಾಡಿ ಮಾರುತಿರಾಯರ 'ಅವ್ವ ಅಪ್ಪ' ಮಾಲಿಕೆಯ ಲೇಖನಗಳು ಹೃದಯಸ್ಪರ್ಶಿಯಾಗಿವೆ. ಈ ಮಾಲಿಕೆ ಸಂಕಲನದ ಪದಕಹಾರ. ಶೈಲಜಾ ಹಿರೇಮಠರ ಪುಸ್ತಕ 'ಸ್ತ್ರೀಕಥನ' ಕುರಿತು ಚಂದ್ರಶೇಖರ ವಸ್ತ್ರದ ಅವರ ವಸ್ತುನಿಷ್ಠ ಪರಿಶೀಲನೆ ತುಂಬ ಚೆನ್ನಾಗಿದೆ. ಡಾ. ಷ. ಶೆಟ್ಟರ್ ಅವರ ಲೇಖನ 'ಕವಿರಾಜಮಾರ್ಗ : ವ್ಯಕ್ತಿತ್ವ' ಒಂದು ಒಳ್ಳೆಯ ಪ್ರವೇಶ. ಇದರ ಇತ್ಯಾತ್ಮಕತೆಯನ್ನು ಇತಿಹಾಸಕಾರರು ನಿರ್ಣಯಿಸಬೇಕಷ್ಟೆ. ಆದರೆ ಪ್ರವೇಶಿಕೆಯ ಪ್ರಯತ್ನ ಗಂಭೀರದ್ದಾಗಿದೆ. ಲೇಖಕರ ಶ್ರಮ ಅಭಿನಂದನೀಯವಾದದ್ದು. ಸಂಕಲನ ಚಿರಕಾಲ ಬರುತ್ತಿರಲಿ.

– ಲಲಿತಾ ಸಿದ್ದಬಸವಯ್ಯ, ತುಮಕೂರು

೩. ಸಪ್ಟಂಬರ್ ೨೦೦೪ ರ ಸಂಚಿಕೆಯಲ್ಲಿ ನಿಮ್ಮ ಕಳಕಳಿಯ ನಿವೇದನೆ, ಕಡೀಪುಟ ಹಾಗೂ ಕವಿತೆ-ಲೇಖನಗಳನ್ನು ಅವಲೋಕಿಸಿದೆ. ಎಂದಿನಂತೆ ತುಂಬ ವೈಶಿಷ್ಟ್ಯಪೂರ್ಣವಾಗಿ ಒಡಮೂಡಿದೆ. ಅಭಿನಂದನೆಗಳು... ನೀವ್ ನಿಶ್ಚಿಂತ್ಯಾಗ ಇರ್ರಿ. ಖಂಡಿತಾಃ ಆರ್ರೂರ್ ಮಂದಿಗಿಂತ ಹ್ಯಾಚ್ಚು ಚಂದಾದಾರ್ರು ಸಿಗ್ತಾರು. **– ಕೃ. ಶಿ. ಹೆಗಡೆ, ಪುಣೆ**

೪. ತಮ್ಮ ಸಂಕಲನದ ಸಪ್ಟಂಬರ್ ೨೦೦೪ ರ ಸಂಚಿಕೆಯನ್ನು ಪುಣೆಯಲ್ಲಿ ಶ್ರೀ ಕೃ. ಶಿ. ಹೆಗಡೆಯವರ ಮನೆಯಲ್ಲಿ ಅವಲೋಕಿಸಿ ತುಂಬ ಪ್ರಭಾವಿತನಾದೆ. ಕನ್ನಡ ನಾಡು-ನುಡಿ-ಸಂಸ್ಕೃತಿಯ ದ್ಯೋತಕಗಳಾದ ಇಂತಹ ವೈಶಿಷ್ಟ್ಯಪೂರ್ಣ ಪತ್ರಿಕೆ ಎಂದೂ ನಿಲ್ಲಬಾರದು. ಆರ್ಥಿಕ ಮುಗ್ಗಟ್ಟಿನಿಂದ ತತ್ತರಿಸಬಾರದು. ನಾನೇನೂ ಸಾಹಿತಿಯಲ್ಲ ಆದಾಗ್ಯೂ ತಾವು ನಡೆಸುತ್ತಿರುವ ಕನ್ನಡದ ಕೆಲಸಕ್ಕಾಗಿ ಮೂರು ವರ್ಷದ ಚಂದಾಹಣ ಕಳಿಸುತ್ತಿದ್ದೇನೆ. **– ಆರ್. ಎನ್. ಹೆಗಡೆ, ಮುಂಬಯಿ**

೫. ಸಂಕಲನ ೨೦೦೪ ರ ಎಲ್ಲ ಸಂಚಿಕೆಗಳನ್ನು ಆಸಕ್ತಿಯಿಂದ ಓದಿದ್ದೇನೆ. 'ನನ್ನ ಅವ್ವ ನನ್ನ ಅಪ್ಪ' ಮತ್ತು 'ಕಡೀಪುಟ'ಗಳು ನನ್ನ ಅಚ್ಚುಮೆಚ್ಚಿನ ಅಂಕಗಳು. ನವಂಬರ್ ೨೦೦೪ ರ 'ಕಡೀಪುಟ'ವಂತೂ ನಿಜವಾಗಲೂ ಅರ್ಥಪೂರ್ಣವಾಗಿದೆ. **– ಶಂಕರಗೌಡ ಸಾತ್ಮಾರ್, ಮುಂಡಗೋಡ**

೬. ತಮ್ಮ ಸಂಕಲನ ಒಂದು ವಿಶಿಷ್ಟ ಪತ್ರಿಕೆ. ಸಂಕಲನ-೧೮ ಸಂಚಿಕೆಯ 'ಕಡೀಪುಟ' ಬಹಳ ಚೆನ್ನಾಗಿ ಬಂದಿದೆ. **– ಭರತ ದುಂಡಪ್ಪ ಕುಂಬಾರ, ಚಿಂಚಣಿ**

೭. ಸಂಕಲನ-೧೮ ರ 'ಕಡೀಪುಟ' ಚೆನ್ನಾಗಿದೆ. ಮಕ್ಕಳ ಪ್ರಶ್ನಿಸುವಿಕೆಯನ್ನು ತಡೆಹಿಡಿಯುವ ಅಥವಾ ಕಿವಿಚಿ ಹಾಕುವ ಶಿಕ್ಷಕರು/ಪೋಷಕರು ಮಕ್ಕಳ ಮೊದಲ ಶತ್ರುಗಳು. ಪ್ರಶ್ನಿಸುವ ಮೂಲಕ ಮಕ್ಕಳು ತಮ್ಮನ್ನು ಜಾಣರನ್ನಾಗಿಸಲು ಸುಲಭ ಅವಕಾಶವನ್ನು ಹಿರಿಯರಿಗೆ ಒದಗಿಸುತ್ತವೆ. ಆದಷ್ಟೂ ನಾವು ಮಕ್ಕಳ ಪ್ರಶ್ನೆಗಳಿಗೆ ಉತ್ತರಿಸಬೇಕು. ಇದಕ್ಕಾಗಿ ಎಲ್ಲ ಶಿಕ್ಷಕರು/ಪೋಷಕರು ಎಲ್ಲ ವಿಷಯಗಳ ಬಗೆಗೆ ಅಷ್ಟಿಷ್ಟು ತಿಳಿದಿರಬೇಕು... 'ಅಪ್ಪ ಅಮ್ಮ' ಲೇಖನಗಳು ಸಂಕಲನದ ಒಳ್ಳೆಯ ಮಾಲಿಕೆ. ಡಾ. ಷ. ಶೆಟ್ಟರ್‌ರಂಥವರು ತಮ್ಮ ಬರಹಗಳನ್ನು ಈ ಪತ್ರಿಕೆಗೆ ಕೊಡುವುದೇ ಒಂದು ಗೌರವ. ಸಂಕಲನ ಚೆಲುವಾಗಿದೆ. **– ಡಾ. ಎಸ್. ಪಿ. ಪದ್ಮಪ್ರಸಾದ್, ಮಧುಗಿರಿ**

೮. ಸಂಕಲನಕ್ಕೆ ದೊರಕುತ್ತಿರುವ ಪ್ರೋತ್ಸಾಹ, ಒತ್ತಾಸೆ, ಪತ್ರಿಕೆಯ ಬಗೆಗಿನ ಸದಭಿಪ್ರಾಯಗಳು ಕಂಡು ಖುಷಿ ಆಯಿತು. ನಿಮ್ಮ ಪ್ರಯತ್ನಕ್ಕೆ ಮತ್ತಷ್ಟು ಯಶಸ್ಸು ಸಿಗಲಿ. ಸಮುದ್ರ ತನ್ನಪ್ಪನನ್ನು ಕೇಳಿದ ಪ್ರಶ್ನೆ ಮತ್ತದರ ಬಗೆಗಿನ ಚಿಂತನ (ಸಂ-೧೮) ಚೆನ್ನಾಗಿದೆ. ಕೆ. ಆನಂದ ಗಾಣಿಗರ 'ಅಪ್ಪ ಅಮ್ಮ' ಓದುಗರ ಮನ ಮಿಡಿಸುವುದಲ್ಲದೇ ನಿರ್ದಿಷ್ಟ ಕಾಲಘಟ್ಟದಲ್ಲಿ ಹೆಣ್ಣು ಅನುಭವಿಸಬೇಕಾಗಿದ್ದ ಪರಿಸ್ಥಿತಿಯನ್ನು ಪರಿಚಯಿಸುತ್ತದೆ. ಅದಕ್ಕಿಂತಲೂ ಮಿಗಿಲಾಗಿ ಲೇಖಕರು, ಅವರ ತಾಯಿ ಮತ್ತು ಇಡೀ ಕುಟುಂಬ ಅಂಥ ದಾರುಣ ದುಃಖದಿಂದ ಮೇಲೆದ್ದು ಪರಿಸ್ಥಿತಿಯನ್ನು ಗಟ್ಟಿ ಮನಸ್ಸಿನಿಂದ, positive attitude ನಿಂದ ಮೆಟ್ಟಿ ನಿಂತಿದ್ದು ಇಂದಿನ ಯುವಜನಾಂಗಕ್ಕೆ ಆದರ್ಶವಾಗಬೇಕಾಗಿದೆ. ಹಾಲಾಡಿ ಮಾರುತಿರಾವ್ ಅವರ ಲೇಖನ ತಂದೆ ಎಂಬ ವ್ಯಕ್ತಿತ್ವದ ಮತ್ತೊಂದು ಮುಖವನ್ನು ಪರಿಚಯಿಸುತ್ತದೆ. ಷ. ಶೆಟ್ಟರ್ ಅವರ ಲೇಖನ ಐತಿಹಾಸಿಕ-ಸಾಹಿತ್ಯಕ ಸಂಶೋಧನೆಯ ಬಗೆಗೆ ಆಸಕ್ತಿ ಕೆರಳಿಸಿದರೆ, ಬಸವರಾಜ ಪಿ. ಡೋಣೂರರ ಲೇಖನ ತೌಲನಿಕ ಅಧ್ಯಯನ ನೀಡಬಹುದಾದ ರಸಾನುಭೂತಿಯ ಬಗೆಗೆ ಬೆಳಕು ಚೆಲ್ಲುತ್ತದೆ. ಎಸ್. ಎಸ್. ಹಿರೇಮಠರ ಲೇಖನ 'ದ್ರೌಪದಿ' ಹೇಗೆ ಆ ಕಾಲದ ದಾಸೀ ಜನರ ಬವಣೆಯನ್ನು ಪ್ರತಿನಿಧಿಸುತ್ತಾಳೆಂಬ ಅಂಶದಿಂದಾಗಿ ಮೆಚ್ಚುಗೆಯಾಗುತ್ತದೆ. ಸಿಪಿಕೆ ಯವರ ಕುರಿತ ಲೇಖನ ಪ್ರಾಯೋಗಿಕ ವಿಮರ್ಶೆಯ ಬಗೆಗೆ ಗಮನ ಸೆಳೆಯುತ್ತದೆ. ಸಂಕಲನ ಹೀಗೇ ಸಂಪುಷ್ಟವಾಗಿ ಬರುತ್ತಿರಲಿ.

– ಎಲ್. ವಿ. ಶಾಂತಕುಮಾರಿ, ಬೆಂಗಳೂರು

೯. ಸಂಕಲನ ಉತ್ತಮವಾಗಿ ಮೂಡಿಬರುತ್ತಿದೆ. ತಮ್ಮ ಶ್ರಮ ಸಾರ್ಥಕ. ಇಂಥ ಸದಭಿರುಚಿಯ ಪತ್ರಿಕೆಗೆ ಅಭಿನಂದನೆಗಳು. ಆಕರ್ಷಕ ವಿನ್ಯಾಸ, ಅಚ್ಚುಕಟ್ಟುತನ, ಉತ್ತಮ ಲೇಖನಗಳು ಸಂಕಲನವನ್ನು ಸಂಗ್ರಹಯೋಗ್ಯವಾಗಿಸಿವೆ. ಸಂಕಲನದ ಪ್ರಕಟಣೆಯನ್ನು ಮುಂದುವರಿಸುತ್ತಿರುವುದನ್ನು ಓದಿ ನನಗೆ ತುಂಬಾ ಖುಷಿಯಾಗಿದೆ. **–ವೈ. ಬಿ. ಹಾಲಬಾವಿ, ಶಕ್ತಿನಗರ**

೧೦. ಸಂಕಲನ ಅವಶ್ಯ ಮುಂದುವರಿಸುವೆ ಎಂದು ಬರೆದುದನ್ನು ಓದಿ ಸಂತೋಷವಾಯಿತು. ಸಂಕಲನದ ಮೂಲಕ ನೀವು ತುಂಬಾ ಒಳ್ಳೆಯ ಕೆಲಸ ಮಾಡುತ್ತಿದ್ದೀರಿ. ಒಳ್ಳೆಯ ಕೆಲಸ ಯಾವತ್ತೂ ನಿಲ್ಲಬಾರದು. Pl. keep it up. I have always felt that one who deserves is not getting his due and instead being meted out a kind of step-motherly treatment which is really sad. ಮುಂಬಯಿಯ ನನ್ನ ಕೆಲವು ಗೆಳೆಯರಿಗೆ ಸಂಕಲನದ ಚಂದಾದಾರರಾಗಲು ಈಗಾಗಲೇ ಹೇಳಿದ್ದೇನೆ. **– ಶ್ರೀನಿವಾಸ ಜಿ. ರಾವ್, ಮುಂಬಯಿ**

೧೧. ಕನ್ನಡದ ಕ್ರಿಯಾಶೀಲ ಮನಸ್ಸುಗಳ ಸಂಕಲನ ಕೆಲಸಕ್ಕೆ ಎರಡು ಚಕ್ರಗಳು ಸಾಕೆಂದು ನೀವು ಸಾಬೀತು ಪಡಿಸಿದ್ದೀರಿ. ಈ ರಥದ ಚಕ್ರಗಳನ್ನು ಮುನ್ನಡೆಸಲು ಕನ್ನಡದ ಕೈಗಳಿವೆ.

– ಡಾ. ಶ್ರೀಧರ ಬಳಗಾರ, ಕುಮಟಾ

೧೨. ಸಂಕಲನ ಸಂಚಿಕೆಗಳಲ್ಲಿ ಅಮೂಲ್ಯ ಸಾಹಿತ್ಯ ದಾಖಲೆಗಳು ಅಡಗಿ ಕುಳಿತಿವೆ– ಯಾವಾಗ ಬೇಕಾದರೂ ಸವಿಯಬಹುದಾದ ರಸಕವಳದಂತೆ ಹೊಸತಾಗಿವೆ. ಇಷ್ಟು ಕಡಿಮೆ ಅವಧಿಯಲ್ಲಿ ಒಂದು ಉತ್ತಮ ಸಾಹಿತ್ಯ ಪತ್ರಿಕೆ ತರಲು ಸಾಕಷ್ಟು ಶ್ರಮಿಸಿದ್ದೀರಿ. ಸಂಕಲನ ನಿರಂತರ ಕ್ರಿಯಾಶೀಲವಾಗಿ ಮುನ್ನಡೆಯಲಿ. ಓದಿ ಸುಮ್ಮನಿದ್ದುಬಿಡುವ ಜಡತೆಯಿಂದ ಓದುಗರನ್ನು ವಿಮೋಚನೆಗೊಳಿಸಿ ಅವರು ಸಹೃದಯರಾಗಿ ಚಂದಾದಾರರಾಗುವಂತೆ ಪ್ರೇರೇಪಿಸಲಿ. **– ಜ್ಯೋತಿ ಗುರುಪ್ರಸಾದ್, ಕಾರ್ಕಳ**

೧೩. ಸಂಕಲನದ ಮೊದಲ ಸಂಚಿಕೆಯಲ್ಲಿ ನುಡಿದಂತೆ ಈ ಮೂರು ವರ್ಷ ನಡೆದುಕೊಂಡಿದ್ದೀರಿ. ಸಾಹಿತ್ಯಿಕ ಪತ್ರಿಕೆಗಳ ವಿಷಯದಲ್ಲಿ ಈ ನುಡಿ-ನಡೆ ಒಂದಾಗೋದು ತುಂಬ ಕಷ್ಟದ್ದು. ಒಂದಾಗಿರೋದು ತುಂಬ ವಿರಳ. ಕನ್ನಡ ಸೃಜನಶೀಲ ಮನಸ್ಸುಗಳ ವೇದಿಕೆಯಾಗಿ ಸಂಕಲನ ಬೆಳೆಯುತ್ತಿದೆ. ಯಾವದೇ ಕಾರಣಕ್ಕೂ ಅದು ನಿಲ್ಲಕೂಡದು. ಮುಂದಿನ ಮೂರು ವರ್ಷದ ಚಂದಾ ಕಳಿಸುತ್ತಿದ್ದೇನೆ.

– ಎಂ. ಡಿ. ಒಕ್ಕುಂದ, ನರಗುಂದ

೧೫. ಸಂಕಲನ ನಿಲ್ಲಿಸಬೇಡಿ. ಅದು ನಿಲ್ಲದಂತೆ ನಾವೆಲ್ಲ ಪ್ರಯತ್ನ ಮಾಡುತ್ತೇವೆ. ಮುಂದಿನ ಮೂರು ವರ್ಷಗಳ ಚಂದಾ ಚೆಕ್ ಸ್ವೀಕರಿಸಿ. — ಡಾ. ಅ. ರಾ. ತೋರೊ, ಕೊಲ್ಹಾಪುರ

೧೫. ಸಂಕಲನದ ಪ್ರಕಟಣೆ ಯಾವ ಕಾರಣಕ್ಕೂ ನಿಲ್ಲಬಾರದು. ಎಂಬುದು ನಮ್ಮ ಆಕಾಂಕ್ಷೆ. ಅಕಸ್ಮಾತ್ ಅಂಥ ತೊಡಕಾದರೆ ಸಂಕಲನದ ಓದುಗರು ನೆರವಿಗೆ ನಿಲ್ಲುತ್ತಾರೆ. ಇದರೊಂದಿಗೆ ಚೆಕ್ ಇದೆ.

— ಟಿ. ಆರ್. ರಾಧಾಕೃಷ್ಣ, ಚಿತ್ರದುರ್ಗ

೧೬. ಕಳೆದ ಮೂರು ವರ್ಷಗಳಿಂದ ಸಂಕಲನವನ್ನು ಆಸಕ್ತಿಯಿಂದ ಓದುತ್ತಿದ್ದೇನೆ. ಇಷ್ಟು ಒಳ್ಳೆಯ ಪತ್ರಿಕೆಯನ್ನು ಓದುವ ಅವಕಾಶ ತಪ್ಪಿಹೋಗಿದ್ದರೆ ಆ ನಷ್ಟ ನನಗೆ ಹೊರತು, ನಿಮಗಲ್ಲ. ಇದಕ್ಕಾಗಿ ನನ್ನನ್ನು ಚಂದಾದಾರರನ್ನಾಗಿ ಮಾಡಲು ನನ್ನ ಹೆಸರನ್ನು ನಿಮಗೆ ಸೂಚಿಸಿದ ನನ್ನ ಆತ್ಮೀಯರಾದ ಮಿತ್ರಾ ವೆಂಕಟರಾಜ ದಂಪತಿಗಳಿಗೆ ನಾನು ಋಣಿಯಾಗಿದ್ದೇನೆ. ಸಂಕಲನ ತನ್ನ ಗುಣಮಟ್ಟವನ್ನು ಉಳಿಸಿಕೊಂಡು ದೀರ್ಘ ಕಾಲ ಮುಂದುವರಿಯಲಿ. **— ಡಿ. ಕೆ. ಸುವರ್ಣ, ಮುಂಬಯಿ**

೧೭. ಸಂಕಲನವು ಯಾವದೇ ಕಾರಣಕ್ಕೆ ಕ್ಷೀಣವಾಗಬಾರದು, ನಿಲ್ಲಬಾರದು. ಈ ಪತ್ರಿಕೆ ನನಗಂತೂ ತುಂಬ ಭರವಸೆಯನ್ನು ನೀಡಿದೆ. ಸಾಹಿತ್ಯದ ಸರ್ವತೋಮುಖ ವಿಚಾರಗಳತ್ತ ಬೆಳಕು ಚೆಲ್ಲುವಂಥಾ ಏಕೈಕ ಪತ್ರಿಕೆಯಾಗಿ ಬರುತ್ತಿರುವುದು ನನ್ನ ಈ ಹಾರೈಕೆಗೆ ಮುಖ್ಯ ಕಾರಣ.

— ಡಾ. ಹರಿಕೃಷ್ಣ ಭರಣ್ಯ, ಮದುರೈ

೧೮. ಸಂಕಲನ ನಿರಂತರವಾಗಿ ಬರಬೇಕು, ಅದು ನಮ್ಮ ಪ್ರೀಯ ಕನಸು. ನಾಡಿನ ಹಲಕೆಲವರಾದರೂ ಇದರ ಮುಂದುವರಿಕೆಗೆ ಸ್ಪಂದಿಸಿದ್ದು ತಿಳಿದು ಖುಶಿಯಾಯಿತು.

— ಎಸ್. ಎಸ್. ಹಿರೇಮಠ, ಹರಪನಹಳ್ಳಿ

೧೯. ಸಂಕಲನ ಸುವಿಚಾರಗಳುಳ್ಳ ಸಾಹಿತ್ಯ ಪತ್ರಿಕೆ. ಇಂಥ ಪತ್ರಿಕೆ ಪ್ರಕಟವಾಗುತ್ತಿರುವುದು ಮೊದಲು ನಮಗೆ ತಿಳಿದೇ ಇರಲಿಲ್ಲ. ವಿಜಯ ಕರ್ನಾಟಕದಲ್ಲಿ ಸಂಪಾದಕ ಶ್ರೀ ವಿಶ್ವೇಶ್ವರ ಭಟ್ ಅವರು ಸಂಕಲನದ ಬಗ್ಗೆ ತಿಳಿಸಿ ಉಪಕಾರ ಮಾಡಿದ್ದಾರೆ. ನಾವು ಸಂಕಲನದೊಂದಿಗಿದ್ದೇವೆ.

— ಜಿ. ಹೆಚ್. ಪ್ರಸಾದ್, ಚಿಕ್ಕಮಗಳೂರು

೨೦. ಸಂಕಲನ ಉತ್ಕೃಷ್ಟ ಪತ್ರಿಕೆ. ಇದು ಸದಾಕಾಲ ಮುನ್ನಡೆಯಲಿ.

— ಬಸವರಾಜ ಚಿಕ್ಕನರಗುಂದ, ಹುಬ್ಬಳ್ಳಿ

೨೦೦೪ ರಲ್ಲಿ ಪ್ರಕಟಿತ
ಸಂಕಲನ ೧೩ ರಿಂದ ೧೮ ರ ಸಮಗ್ರ ಸಾಮಗ್ರಿ ದರ್ಶನ

I. 'ನನ್ನ ಅವ್ವ ನನ್ನ ಅಪ್ಪ' ಮಾಲಿಕೆ : ಕೃತಜ್ಞತಾ ಲೇಖನಗಳು

೧. ನನ್ನ ಅಪ್ಪ ನನ್ನ ಅಮ್ಮ : **ಸುಮಂಗಲಾ** : ಸಂಕಲನ-೧೩ : ಪು. ೫-೯
೨. ನನ್ನ ಅಮ್ಮ ನನ್ನ ಅಯ್ಯ : **ರೇಖಾ ವಿಷ್ಣುಮೂರ್ತಿ** : ಸಂ-೧೪ : ಪು. ೫-೧೧
೩. ನನ್ನ ಅವ್ವ, ನನ್ನ ಅಪ್ಪ : **ಎಂ. ಡಿ. ಗೋಗೇರಿ** : ಸಂ-೧೪ : ಪು. ೧೨-೨೧
೪. ನನ್ನ ಅಪ್ಪಯ್ಯ : **ಪಿ. ಎಂ. ಹೆಗಡೆ** : ಸಂ-೧೫ : ಪು. ೫-೧೧
೫. ಸೋದರ ಅತ್ತೆ ನನ್ನ ಅಮ್ಮ : **ಉಮೇಶ ಎನ್. ಸಂಗನಾಳಮಠ** : ಸಂ-೧೫ : ಪು. ೧೧-೧೫
೬. ನನ್ನಪ್ಪ ನನ್ನವ್ವ : **ಗೀತಾ ನಾಗಭೂಷಣ** : ಸಂ-೧೬ : ಪು. ೫-೧೨
೭. ನನ್ನ ಅಪ್ಪ : **ಕಾರ್ಯಾನಂದ** : ಸಂ-೧೬ : ಪು. ೧೩-೧೭
೮. ನನ್ನ ಅಯ್ಯ, ನನ್ನ ಅಮ್ಮ : **ಟಿ. ಆರ್. ರಾಧಾಕೃಷ್ಣ** : ಸಂ-೧೭ : ಪು. ೫-೧೫
೯. ನನ್ನ ಅವ್ವ, ನನ್ನ ಅಪ್ಪ : **ಕೆ. ಆನಂದ ಗಾಣಿಗ** : ಸಂ-೧೮ : ಪು. ೫-೧೨
೧೦. ನನ್ನ ಅಪ್ಪ, ನನ್ನ ಅಮ್ಮ : **ಹಾಲಾಡಿ ಮಾರುತಿ ರಾವ್** : ಸಂ-೧೮ : ಪು. ೧೨-೧೫

II. ಕತೆ, ಮಕ್ಕಳ ಕತೆ, ಆತ್ಮಕತೆ, ಕಾದಂಬರಿ ಇತ್ಯಾದಿ

೧. ಕಾಳುಮೆಣಸಿಗೂ ಜಾಗತೀಕರಣ! : ಕುಸುಮಾ ಶಾನಭಾಗ : ಸಂಕಲನ-೧೭ : ಪು. ೪೫-೫೪
೨. ಜುನಾಗಡ ಮಹಾತ್ಮೆ : ಶಿವಾನಂದ ನಾಗನೂರ : ಸಂ-೧೮ : ಪು. ೬೧-೬೨

III. ಲಲಿತ ಪ್ರಬಂಧ, ವ್ಯಕ್ತಿಚಿತ್ರ, ನೆನಪುಗಳು ಇತ್ಯಾದಿ

೧. ನಮ್ಮ ಶೇ. ಗೋ. ಕುಲಕರ್ಣಿ ಮತ್ತು ಗೆಳೆಯರ ಬಳಗ : ಎನ್ಕೆ : ಸಂಕಲನ-೧೩ : ಪು. ೨೭-೩೮
೨. ಸುಳ್ಳಿನಿಂದಲೇ ಸತ್ಯಕ್ಕೆ ಡಿಗ್ನಿಟಿ : ಜಿ. ಎಚ್. ಹನ್ನೆರಡುಮಠ : ಸಂ-೧೩ : ಪು. ೫೮-೫೯
೩. ಒಂದು ಜೀವನಾನುಭವಗಾಥೆ : ಎಚ್. ಡಿ. ಚಂದ್ರಪ್ಪಗೌಡ : ಸಂ-೧೬ : ಪು. ೧೯-೨೨
೪. ಕೇಶವಿನ್ಯಾಸ : ಶೈಲಾ ಛಬ್ಬಿ : ಸಂ-೧೬ : ಪು. ೫೨-೫೮
೫. ನನ್ನ ಪ್ರಥಮ ಕಾದಂಬರಿ ಪ್ರಕಟವಾದಾಗ : ಎನ್ಕೆ : ಸಂ-೧೭ : ಪು. ೫೬-೫೮

IV. ಏಕಾಂಕ, ಮಕ್ಕಳ ನಾಟಕ ಇತ್ಯಾದಿ

೧. ಆ ಮನೆಯವನು : ಅನು. ಪಾರ್ವತಿ ಜಿ. ಐತಾಳ್ : ಸಂಕಲನ-೧೩ : ಪು. ೪೮-೫೬
೨. ಚಾಳೀ ರೂ! ಪಾಲಾ ಪೂ! : ಬಿ. ಟಿ. ದೇಸಾಯಿ : ಸಂ-೧೪ : ಪು. ೬೫-೭೨
೩. ಡೊಳ್ಳು ಹೋಗಿ ಬಾಲಾ ಬಂತು ಡುಂ...ಡುಂ... : ದಮಯಂತಿ ನರೇಗಲ್ಲ : ಸಂ-೧೫ : ಪು. ೫೬-೭೦
೪. ಹೇ! ರಕ್ಷಕ : ನಾಟಕ : ನಾರಾಯಣ ಕಂಗಿಲ : ಸಂ-೧೬ : ಪು. ೫೮-೬೨
೫. ಬೊಂಬೆಮನೆ : ಶ್ರೀನಿವಾಸ್ ವಿ. ಸುತ್ರಾವೆ : ಸಂ-೧೭ : ಪು. ೫೮-೬೬

V. ಲೇಖನಗಳು

೧. ಅಲ್ಲಮಪ್ರಭು ಮತ್ತು ಶ್ರೀಸಾಮಾನ್ಯ : ಎಲ್.ವಿ. ಶಾಂತಕುಮಾರಿ : ಸಂ-೧೩ : ಪು. ೧೦-೨೧
೨. ಎಚ್. ನಾಗವೇಣಿಯವರ 'ಗಾಂಧಿ ಬಂದ' : ಎಸ್. ವಿ. ಪ್ರಭಾವತಿ : ಸಂ-೧೩ : ಪು. ೪೩-೪೭
೩. ಉರುಳ್ಗೆ ಕೊರಳ್ : ಅರವಿಂದ ಚೊಕ್ಕಾಡಿ : ಸಂ-೧೩ : ಪು. ೬೦-೭೧

•

೪. ಅಪರೂಪದ ನಾಟಕಕಾರ ಭಾಸ : ಎಸ್. ಎಸ್. ಹಿರೇಮಠ : ಸಂ-೧೪ : ಪು. ೨೪-೩೭
೫. ಬಿ. ವಿ. ಕಾರಂತರ ಕೃತಿಗಳು ಮತ್ತು ಇಂದಿನ ರಂಗಪ್ರಪಂಚ : ಎ. ಆರ್. ನಾಗಭೂಷಣ : ಸಂ-೧೪ : ಪು. ೪೧-೪೩
೬. ಮನಜ ಅವರ ಸಮಗ್ರ ಕಾವ್ಯ 'ವಿದ್ರೋಹ' : ಮಾಧವ ಕುಲಕರ್ಣಿ : ಸಂ-೧೪ : ಪು. ೪೪-೫೦
೭. ಸಮೂಹ ಮಾಧ್ಯಮಗಳು ಮತ್ತು ಸಾಮಾಜಿಕ ಜವಾಬ್ದಾರಿ : ಕೇಶವ ಶರ್ಮ ಕೆ. : ಸಂ-೧೪ : ಪು. ೫೩-೬೪

•

೮. ಸಹೃದಸಂಸ್ಕೃತಿವಿವೇಚನೆಯ ಹಿನ್ನೆಲೆಯಲ್ಲಿ ಕುವೆಂಪು ವೈಚಾರಿಕತೆ : ಸಿ. ಎನ್. ರಾಮಚಂದ್ರನ್ : ಸಂ-೧೫ : ಪು. ೧೯-೩೦
೯. ಮುಳ್ಳೂರು ನಾಗರಾಜ್ ಅವರ 'ನೆಲದ ಜೋಗುಳ' : ಬಸವರಾಜ ಸಬರದ : ಸಂ-೧೫ : ಪು. ೩೧-೩೯
೧೦. ಗೀತೆಯು ಸಮಾಜಶಾಸ್ತ್ರ - ಶ್ರೀರಂಗ : ರಾ. ಕ. ನಾಯಕ : -೧೫ : ಪು. ೪೧-೪೪
೧೧. ಶ್ರೀಕೃಷ್ಣಪಾರಿಜಾತ : ಎಂ. ಎಂ. ಕಲಬುರ್ಗಿ : -೧೫ : ಪು. ೪೫-೫೩
೧೨. ಕವನಾ ಬರೀತ್ಯಾರಂತ ಕವನಾ, ಅವನವ್ವನ ಕವನಾ! : ಬಸವರಾಜ ಸಾದರ : ಸಂ-೧೫ : ಪು. ೫೪-೫೫

•

೧೩. ಮೂರು ಟಿಪ್ಪಣಿಗಳು : ಸುಮತೀಂದ್ರ ನಾಡಿಗ : ಸಂ-೧೬ : ಪು. ೨೯-೩೩
೧೪. ಶತಮಾನದ ಸಾಹಿತಿ ಹಾವರ್ಡ್ ಫಾಸ್ಟ್ : ಜಿ. ಭಾಸ್ಕರ ಮಯ್ಯ : ಸಂ-೧೬ : ಪು. ೩೪-೩೭
೧೫. ಭಗವದ್ಗೀತೆಯಲ್ಲಿ ಯಜ್ಞ ಮತ್ತು ಅದರ ಅರ್ಥ : ಸಿ. ಸೋಮಶೇಖರಯ್ಯ : ಸಂ-೧೬ : ಪು. ೪೨-೪೬
೧೬. ತುಂಟ ಮಂಗನ ಕತೆ.... : ಚಂದ್ರಗೌಡ ಕುಲಕರ್ಣಿ : ಸಂ-೧೬ : ಪು. ೪೬-೪೯
೧೭. ಫ್ಯಾಷನ್ : ಕೆಲವು ಅನ್ನಿಸಿಕೆಗಳು : ಪ್ರಸನ್ನ : ಸಂ-೧೬ : ಪು. ೪೯-೫೨

•

೧೮. ಎಮಿಲಿ ಡಿಕಿನ್‌ಸನ್ ಮತ್ತು ಬಸಮ್ಮನವರ ಕರ್ತಾರನ ಕಮ್ಮಟ : ಎಲ್. ವಿ. ಶಾಂತಕುಮಾರಿ : ಸಂ-೧೭ : ಪು. ೨೦-೩೦
೧೯. ನೇಮಿಚಂದ್ರ ಅವರ 'ಪೆರುವಿನ ಪವಿತ್ರ ಕಣಿವೆಯಲ್ಲಿ' : ಟಿ. ಪಿ. ಪೂರ್ಣಿಮಾ : ಸಂ-೧೭ : ಪು. ೩೨-೩೬
೨೦. ಕಂತ್ರಿ ನಾಯಿಯೂ ಕನ್ನಡ ಭಾಷೆಯೂ : ಪ್ರಸನ್ನ : ಸಂ-೧೭ : ಪು. ೩೭-೩೮
೨೧. ಎರಡು ದೃಶ್ಯಕಾವ್ಯಗಳು : ದೇಶಪಾಂಡೆ ಸುಬ್ಬರಾಯ : ಸಂ-೧೭ : ಪು. ೩೯-೪೩

•

೨೨. ಕವಿರಾಜಮಾರ್ಗ ಮಂಥನ : ನೃಪತುಂಗ ವ್ಯಕ್ತಿತ್ವ : ಷ. ಶೆಟ್ಟರ್ : ಸಂಕಲನ-೧೮ : ಪು. ೨೩-೩೨
೨೩. ಸಿ.ಪಿ.ಕೆ. ಅವರ ಕಾವ್ಯ : ಮಾಧವ ಕುಲಕರ್ಣಿ : ಸಂ-೧೮ : ಪು. ೩೩-೩೯
೨೪. ಜಾನ್ ಕೀಟ್ಸ್ ಮತ್ತು ಬೇಂದ್ರೆ : ಬಸವರಾಜ ಪಿ. ಡೋಣೂರ : ಸಂ-೧೮ : ಪು. ೪೧-೫೧
೨೫. ಮ. ದ್ರೌಪದೀ ವಸ್ತ್ರಾಪಹರಣ ಪ್ರಸಂಗ : ಎಸ್. ಎಸ್. ಹಿರೇಮಠ : ಸಂ-೧೮ : ಪು. ೫೨-೫೭
೨೬. ವಿಜಯಾ ಸುಬ್ಬರಾಜ್ ಅವರ ೩ ನಾಟಕಗಳು : ಎಚ್. ಜಿ. ಸೋಮಶೇಖರ ರಾವ್ : ಸಂ-೧೮ : ಪು. ೫೮-೬೦
೨೭. ಎ. ಜಾನಕಿ ಅವರ 'ಪ್ರೇಮಚಂದರ ಕಥೆಗಳು' : ಎಚ್. ದಂಡಪ್ಪ : ಸಂ-೧೮ : ಪು. ೬೩-೬೫

VI. ಕವಿತೆಗಳು

೧. ಅಯ್ದು ಕವಿತೆಗಳು : ಬಿ. ಎ. ಸನದಿ : ಸಂಕಲನ-೧೩ : ಪು. ೨೨-೨೫
೨. ರವೀಂದ್ರನಾಥ ಅವರ ಹತ್ತು ಮಿಂಚುಗವನಗಳು : ಮನು ಬಳಿಗಾರ್ : ಸಂ-೧೩ : ಪು. ೨೫-೨೬
೩. ಎರಡು ಕವಿತೆಗಳು : ಬೇಲೂರು ಸುದರ್ಶನ್ : ಸಂ-೧೩ : ಪು. ೩೯-೪೧
೪. ಕತ್ತಲಿನೆಡೆಗೆ : ಮಹಾಬಲೇಶ್ವರ ಕಾಟ್ರಹಳ್ಳಿ : ಸಂ-೧೩ : ಪು. ೪೧
೫. ಪ್ರತಿಬಿಂಬ : ಜಯಶ್ರೀ ಕೆ. ಸಿ. : ಸಂ-೧೩ : ಪು. ೪೨
೬. ಸಾಹಿರ್ ಲುಧಿಯಾನ್‌ವೀ ಅವರ ಕವಿತೆಗಳು : ಜಗದೀಶ ಪೂಜಾರ : ಸಂ-೧೩ : ಪು. ೫೬-೫೭
೭. ನಿವೃತ್ತಿಯ ಮುನ್ನಾದಿನ : ವಸಂತ ಕುಲಕರ್ಣಿ : ಸಂ-೧೩ : ಪು. ೫೭

•

೮. ಆರು ಭೌತಿಕವಾದಿ ಕವನಗಳು : ಶಂಕರ ತಲ್ಲೂರ : ಸಂ-೧೪ : ಪು. ೨೧-೨೩
೯. ಅಯ್ದು ಕವಿತೆಗಳು : ಜಿ. ಪಿ. ಬಸವರಾಜು : ಸಂ-೧೪ : ಪು. ೩೭-೪೦
೧೦. ಎರಡು ಕವಿತೆಗಳು : ಗೀತಾ ವಸಂತ : ಸಂ-೧೪ : ಪು. ೫೦-೫೨

•

೧೧. ಅಯ್ದು ಕವಿತೆಗಳು : ವಿಭಾ : ಸಂ-೧೫ : ಪು. ೧೫-೧೮
೧೨. ಈ ಬೆಳಕು : ಡಿ. ಬಿ. ಢಂಗ : ಸಂ-೧೫ : ಪು. ೩೦
೧೩. ನಾಲ್ಕು ಶಬ್ದಬಿಂಬಗಳು : ಕಿರಣ : ಸಂ-೧೫ : ಪು. ೩೯-೪೧

•

೧೪. ಮಳೆ ಬಂದ ಮಾರನೆಯ ದಿನ : ಗುಂಡಣ್ಣ ಕಲಬುರ್ಗಿ : ಸಂ-೧೬ : ಪು. ೧೭-೧೮
೧೫. ಕಾನೂನು : ಶಂಕರಗೌಡ ಸಾತ್ಮಾರ : ಸಂ-೧೬ : ಪು. ೧೮
೧೬. ಅಯ್ದು ಕವಿತೆಗಳು : ಬಸವರಾಜ ವಕ್ಕುಂದ : ಸಂ-೧೬ : ಪು. ೨೨-೨೬
೧೭. ಮಹಜಬೀನ್‌ರ ಎರಡು ತೆಲುಗು ಕವಿತೆಗಳು : ಚಿದಾನಂದ ಸಾಲಿ : ಸಂ-೧೬ : ಪು. ೨೭-೨೮
೧೮. ಸ್ವರ್ಗಕಾಮ : ಸಂತೋಷ ಚೊಕ್ಕಾಡಿ : ಸಂ-೧೬ : ಪು. ೩೮-೪೧

•

೧೯. ಎರಡು ಕವಿತೆಗಳು : ಲಲಿತಾ ಸಿದ್ದಬಸವಯ್ಯ : ಸಂ-೧೭ : ಪು. ೧೬-೧೯
೨೦. ಸಂತ ಹೆಲೆನ್ಸ್ ಪರ್ವತ : ಗುರುಮೂರ್ತಿ ಪೆಂಡಕೂರು : ಸಂ-೧೭ : ಪು. ೩೦-೩೧
೨೧. ಹೈಕುಗಳು : ಸಿದ್ಧರಾಮ ಹಿರೇಮಠ : ಸಂ-೧೭ : ಪು. ೩೧

೨೨. ಸಪ್ತ ವಚನಗಳು : ಕೆ. ಎಸ್. ರತ್ನಮ್ಮ : ಸಂ-೧೭ : ಪು. ೪೩-೪೪
೨೩. ನಾಲ್ಕು ಗಜಲ್ : ಜಂಬಣ್ಣ ಅಮರಚಿಂತ : ಸಂ-೧೭ : ಪು. ೫೪-೫೬

•

೨೪. ಗೀತ ದಶಮಿ : ಮ. ಸು. ಕೃಷ್ಣಮೂರ್ತಿ : ಸಂ-೧೮ : ಪು. ೧೫-೨೦
೨೫. ರಂಗಸ್ಥಳ : ವಸಂತಕುಮಾರ ಪೆರ್ಲ : ಸಂ-೧೮ : ಪು. ೨೦-೨೨
೨೬. ದೇಶವನು ಪ್ರೀತಿಸಲೇಬೇಕು ಖರೆ, ಆದರೆ : ಬಿ. ಟಿ. ದೇಸಾಯಿ : ಸಂ-೧೮ : ಪು. ೩೯-೪೦

VII. ಪುಸ್ತಕ ಪರಿಶೀಲನೆ

• ಸಂಕಲನ-೧೪ : ಪು. ೭೩-೭೮

೧. ತಪ್ಪಂಡ : ಡಾ. ಬಸವರಾಜ ಸಾದರ —ಎಚ್. ದಂಡಪ್ಪ
೨. ಜಾನ್ ಎಮ್. ಸಿಂಗ್ ಅವರ ೨ ನಾಟಕಗಳು : ಶ್ರೀನಿವಾಸ್ ವಿ. ಸುತ್ರಾವೆ —ದುಷ್ಯಂತ ನಾಡಗೌಡ
೩. ಒಂದು ಕರ್ಮ ಕಥೆ : ಜಿ. ಜೆ. ಹರಿಜಿತ್ —ದುಷ್ಯಂತ ನಾಡಗೌಡ
೪. ಬಿಚ್ಚಿದ ಜೋಳಿಗೆ : ಡಾ. ಸ. ಜ. ನಾಗಲೋಟಿಮಠ —ವೆಂಕಟೇಶ ಮಾಚಕನೂರ
೫. ದೇವರ ಸವಾಲ್ : ಪ್ರಹ್ಲಾದ ಅಗಸನಕಟ್ಟೆ —ಕಂನಾಡಿಗಾ ನಾರಾಯಣ
೬. ಅಗಾಂತರ : ಕಾ. ತ. ಚಿಕ್ಕಣ್ಣ —ಶ್ರೀಪತಿ ಮಂಜನಬೈಲು
೭. ಎಚ್ಚೆತ್ತ ಹಿಂದುಸ್ಥಾನ : ಹರ್ಡೇಕರ ಮಂಜಪ್ಪ —ಬ. ಸೋ. ಗೊರವರ

• ಸಂಕಲನ-೧೫ : ಪು. ೭೦-೭೭

೮. ಮುತ್ತಿನ ಸತ್ತಿಗೆ : ಡಾ. ತಾಳ್ತಜೆ ವಸಂತಕುಮಾರ —ಬಿ. ಟಿ. ದೇಸಾಯಿ
೯. ಅಮ್ಮ ಪಂಡರಿಬಾಯಿ : ಸಿ. ಎಸ್. ನಂಜುಂಡಯ್ಯ —ಜಿ. ಟಿ. ಶ್ರೀಧರ ಶರ್ಮ
೧೦. ಸಾಂಖ್ಯ ದರ್ಶನ : ಎಸ್. ಎಸ್. ಹಿರೇಮಠ —ಶಿವಶಂಕರ ಹಿರೇಮಠ
೧೧. ಕನ್ನಡ ಜಗದ್ಗುರು : ಚಂದ್ರಶೇಖರ ವಸ್ತ್ರದ —ಶ್ರೀಪತಿ ಮಂಜನಬೈಲು
೧೨. ಮನದಾಳದ ಮಾತುಗಳು : ರೂಪಾ ಕುಲಕರ್ಣಿ —ವಸಂತ ಕುಲಕರ್ಣಿ
೧೩. ರಂಗಲೋಕ : ಡಾ. ಹೆಚ್. ಎ. ಪಾರ್ಶ್ವನಾಥ್ —ಎ. ಡಿ. ನಂಜುಂಡಸ್ವಾಮಿ
೧೪. ಸೂಜಿಗಲ್ಲು : ಲತಾ ಗುತ್ತಿ —ದೇಶಪಾಂಡೆ ಸುಬ್ಬರಾಯ

• ಸಂಕಲನ-೧೬ : ಪು. ೭೨-೭೬

೧೫. ನೆನಪು ಗರಿಬಿಚ್ಚಿದಾಗ : ಎಲ್. ವಿ. ಶಾಂತಕುಮಾರಿ—ಶ್ರೀಪತಿ ಮಂಜನಬೈಲು
೧೬. ಮೌನ ಮೆರವಣಿಗೆ : ಶಂಕರ ತಲ್ಲೂರ—ದೇಶಪಾಂಡೆ ಸುಬ್ಬರಾಯ
೧೭. ದೇವಬಾಗ : ಚಂದ್ರಶೇಖರ ಪಾಟೀಲ—ದೇಶಪಾಂಡೆ ಸುಬ್ಬರಾಯ
೧೮. ಪುಷ್ಪಮಾಲೆ : ಹಜರತ್ ಜನಾಬಪೀರ ಶ್ರೀಗುರು ಸೈಯದಗೌಸಮದ್ನಿ —ಬ. ಸೋ. ಗೊರವರ
೧೯. ಮಂದಹಾಸದ ಹಿಂದೆ : ನರಸಿಂಹ ಪರಾಂಜಪೆ —ಬ. ಸೋ. ಗೊರವರ
೨೦. ದಾರೀಗೆ ಜತೆಯಿಲ್ಲ : ಜಿ. ಎಸ್. ಉಜ್ಜನಪ್ಪ —ಬ. ಸೋ. ಗೊರವರ
೨೧. ಸಂಸ್ಕೃತಿ ಶೋಧ : ರಾಜಶೇಖರ ಇಚ್ಚಂಗಿ —ಚಂದ್ರಗೌಡ ಕುಲಕರ್ಣಿ
೨೨. ಬಗೆದಷ್ಟು ಬಾನು : ಅರುಂಧತಿ ರಮೇಶ್—ಅಶೋಕ ಶೆಟ್ಟರ್
೨೩. ಸೂರ್ಯ-ಪ್ರೀತಿ : ಬಂದಗದ್ದೆ ರಾಧಾಕೃಷ್ಣ—ಅಶೋಕ ಶೆಟ್ಟರ್
೨೪. ಬರಡು ಭೂಮಿಯ ಸತ್ಯಗಳು : ಡಿ. ಸಿ. ರಾಜಪ್ಪ—ಅಶೋಕ ಶೆಟ್ಟರ್
೨೫. ನಾಕು ಸಾಲುಗಳ ನಡುವೆ : ಮಲ್ಲಿಕಾರ್ಜುನ ಬನ್ನಿ—ಅಶೋಕ ಶೆಟ್ಟರ್
೨೬. ಕುನಾಲ : ಶರಣಗೌಡ ಎರಡೆತ್ತಿನ —ಎಂ. ಡಿ. ಗೋಗೇರಿ
೨೭. ಈ ಮಣ್ಣು ಅಪ್ಪಿಕೊಳ್ಳುವ ಮುನ್ನ : ಗವಿಸಿದ್ಧ ಎನ್. ಬಳ್ಳಾರಿ—ಎಚ್. ಎಸ್. ಪಾಟೀಲ

೨೮. ಕಥನ ಕುತೂಹಲ : ಸಂ. ಮೋಹನ ನಾಗಮ್ಮನವರ—ಶಿವಶಂಕರ ಹಿರೇಮಠ

೨೯. ಮಾರಿ : ಡಿ. ಸಿ. ರಾಜಪ್ಪ—ಶಿವಶಂಕರ ಹಿರೇಮಠ

೩೦. ವೀರಶೈವ ವಿಚಾರಧಾರೆ : ಸಿ. ಸೋಮಶೇಖರಯ್ಯ —ಶಿವಶಂಕರ ಹಿರೇಮಠ

೩೧. ವನ್ ಡೇ ಮಾತರಂ : ಎಚ್. ವಿ. ವೆಂಕಟಸುಬ್ಬಯ್ಯ —ದುಷ್ಯಂತ ನಾಡಗೌಡ

೩೨. ರತ್ನಕಂಕಣ : ಮ. ಸು. ಕೃಷ್ಣಮೂರ್ತಿ —ದುಷ್ಯಂತ ನಾಡಗೌಡ

೩೩. ಚುಟುಕು ಚಿಲುಮೆ : ಸಂ. ಬೆಟ್ಟದೂರು, ಪಾಟೀಲ, ಬಳ್ಳಾರಿ, ಮದರಿ —ಪಾರ್ವತಿ ಪೂಜಾರ

- **ಸಂಕಲನ-೧೭ : ಪು. ೬೭-೭೦**

೩೪. ಪ್ರಯೋಗ ಪ್ರಸಂಗ : ಗಣೇಶ ಅಮೀನಗಡ —ನಾ. ದಾಮೋದರ ಶೆಟ್ಟಿ

೩೫. ತುಂಗೆಯ ತಳಮಳ : ಕಂ. ನಾರಾಯಣ —ಶಿವಶಂಕರ ಹಿರೇಮಠ

೩೬. ಸಾಹಿತ್ಯ ಸೌರಭ : ಜಯದೇವಪ್ಪ ಜೈನಕೇರಿ —ಶಿವಶಂಕರ ಹಿರೇಮಠ

೩೭. ಬೆಂಕಿಯಲ್ಲಿ... ಹೂನಾಸತಿ : ಹರಿಲಾಲ ಪವಾರ —ದೇಶಪಾಂಡೆ ಸುಬ್ಬರಾಯ

೩೮. ಜನರೊಂದಿಗೆ ಪೊಲೀಸರು : ಡಿ. ವಿ. ಗುರುಪ್ರಸಾದ —ಶ್ರೀಪತಿ ಮಂಜನಬೈಲು

- **ಸಂಕಲನ-೧೮ : ಪು. ೬೬-೭೬**

೩೯. ಹತ್ತಿರದ ಮಾತು : ಸತ್ಯನ್ ದೇರಾಜೆ —ದೇಶಪಾಂಡೆ ಸುಬ್ಬರಾಯ

೪೦. ಶಬ್ದವಾಯಿತು ನಕ್ಷತ್ರ : ಧರಣೇಂದ್ರ ಕುರಕುರಿ —ದೇಶಪಾಂಡೆ ಸುಬ್ಬರಾಯ

೪೧. ಸ್ತ್ರೀ ಕಥನ : ಡಾ. ಶೈಲಜ ಹಿರೇಮಠ —ಚಂದ್ರಶೇಖರ ವಸ್ತ್ರದ

೪೨. ಹೀಗೊಂದು ಟಾಪ್ ಪ್ರಯಾಣ : ಈರಪ್ಪ ಕಂಬಳಿ —ಚಂದ್ರಶೇಖರ ವಸ್ತ್ರದ

೪೩. ಜನರೊಂದಿಗೆ ಪೊಲೀಸರು : ಡಾ. ಡಿ. ವಿ. ಗುರುಪ್ರಸಾದ —ಶ್ರೀಪತಿ ಮಂಜನಬೈಲು

೪೪. ಮಹಾದೇವ ಶೆಟ್ಟರ ಕವಿತೆಗಳು —ಡಾ. ಅಂಕದ ಮುರಿಗೆಪ್ಪ

೪೫. ಮೀರಾ ಪದಾವಲಿ : ಮ. ಸು. ಕೃಷ್ಣಮೂರ್ತಿ —ಡಾ. ಅಂಕದ ಮುರಿಗೆಪ್ಪ

೪೬. ದೇವರು ಅಳುತಾನ : ಕಪ್ಲಿ ಸಣ್ಣಹನುಮಂತ —ಜಿ. ಟಿ. ಶ್ರೀಧರ ಶರ್ಮ

೪೭. ತಾಳಪಲ್ಲಿ ವೆಂಕಯ್ಯ : ಡಾ. ದಸ್ತಗೀರಸಾಬ್ ದಿನ್ನಿ —ಜಿ. ಟಿ. ಶ್ರೀಧರ ಶರ್ಮ

೪೮. ಪೂರ್ವಾಂಚಲದಲ್ಲಿ ಕೆಲವು ದಿನಗಳು : ಪ್ರೇಮಾ ಭಟ್ —ಜಿ. ಟಿ. ಶ್ರೀಧರ ಶರ್ಮ

೪೯. ಅರಿವು : ವಿಶ್ವನಾಥ ಬಾಳಗಿ —ಎಂ. ಡಿ. ಗೋಗೇರಿ

೫೦. ಕುವೆಂಪು ಕಾದಂಬರಿ : ಎರಡು ಅಧ್ಯಯನಗಳು : ಟಿ. ಪಿ. ಅಶೋಕ —ಬಸವರಾಜ ವಕ್ಕುಂದ

೫೧. ರಾತ್ರಿ ಮಂಜು : ಡಾ. ಶ್ರೀನಿವಾಸ ಕುಲಕರ್ಣಿ —ಬಸವರಾಜ ವಕ್ಕುಂದ

೫೨. ಬಂದೂಕಿನ ಮನುಷ್ಯ : ಡಾ. ಬಸವರಾಜ ಕುಂಬಾರ —ದುಷ್ಯಂತ ನಾಡಗೌಡ

VIII. ಕಡೇಪುಟ : ಸಿದ್ಧಲಿಂಗ ಪಟ್ಟಣಶೆಟ್ಟಿ

೧. ಈ ಜಾತಿ ಮಡಿ ಮೈಲಿಗಿ... : ಸಂಕಲನ-೧೩ : ಪು. ಆವರಣ ಪುಟ ೩

೨. ನಮ್ಮನ್ನು, ನಮ್ಮ ಸುತ್ತಲಿನ... : ಸಂಕಲನ-೧೪ : ಪು. ಆವರಣ ಪುಟ ೩

೩. ನಾ ಅಕಿನ್ನ ಪ್ರೀತೀ ಮಾಡತೇನಿ... : ಸಂಕಲನ-೧೫ : ಪು. ೮೦ + ಆವರಣ ಪುಟ ೩

೪. ಸಾಮಾನ್ಯವಾಗಿ ಪಶು-ಪ್ರಾಣಿಗಳಿಗೆ : ಸಂಕಲನ-೧೬ : ಪು. ೮೦ + ಆವರಣ ಪುಟ ೩

೫. ನಮ್ಮವ್ವ ದಿನಾ ಮುಂಜಾನೆ... : ಸಂಕಲನ-೧೭ : ಪು. ೭೭-೮೦

೬. ನಾವು ಮಕ್ಕಳ ಕೂಡ... : ಸಂಕಲನ-೧೮ : ಪು. ೭೯-೮೦

IX. ಸಂಕಲನ ೭ ರಿಂದ ೧೨ ರಲ್ಲಿ ಪ್ರಕಟಿತ ಸಮಗ್ರ ಸಾಮಗ್ರಿ ದರ್ಶನ : ಸಂಕಲನ-೧೩ : ಪುಟ ೭೫-೮೦

ಕಡೇಪುಟ : ಸಿದ್ಧಲಿಂಗ ಪಟ್ಟಣಶೆಟ್ಟಿ

ನಮ್ಮಮ್ಮ ದಿನಾ ಕಸಬರಗಿಹಿಡಕೊಂಡು ಅಂಗಳಾ ಹಸಾಮಾಡತಾಳ. ಮಲ್ಲಪ್ಪಕಾಕಾ ವರ್ಷಾ ಹತ್ತತ್ತ ಹೊಸಾ ಗಿಡಾ ಹಚ್ಚತಾನ, ಅವಕ್ಕ ನೀರು ಗೊಬ್ಬರಾ ಹಾಕಿ ಬೆಳಸತಾನ. ನಮ್ಮ ಮಾಸ್ತರು ದಿನಾ ನಮಗ ಎಂಥೆಂಥಾ ಭೊಲೊಭೊಲೊ ಪಾಠಾ ಕಲಸತಾರ, ಆಟಾ ಆಡಸತಾರ. ನಮ್ಮ ಇಡೀ ಜೀವನಾ ರೂಪಿಸುವಂಥ ಎಷ್ಟೆಷ್ಟೋ ಮಾತು ನಾವ್ನ್ಹಲಿ ದಿನಾ ಆಡತೇವು, ಹೇಳತೇವು, ಕಲೀತೇವು, ಕಲಸತೇವು. ಇವೆಲ್ಲ ಜೀವನಪ್ರವಾಹದೊಳಗಿನ ಅನಿವಾರ್ಯ ಪ್ರಾಣ-ಕ್ಷಣಗಳು. ಇವುಗಳ ಮಹತ್ವ ಹೇಳೂದು ಅಗತ್ಯ ಇಲ್ಲ.

ಆದರ ಬಹಿರಂಗದ ನಮ್ಮ ಸಾಮಾಜಿಕ ಮತ್ತು ರಾಜಕೀಯ ಜೀವನ ಎಷ್ಟು ಹದಗೆಟ್ಟೈತಿ, ಕೆಳಮಟ್ಟಕ್ಕ ಇಳದೈತಿ ಅನ್ನೂದನ್ನ ನೋಡಬೇಕು, ತಿಳಕೋಬೇಕು ಅಂದರ ದಿನಾ ಮುಂಜಾನೆ ಬರುವ ಪತ್ರಿಕೆಗಳನ್ನ ಓದಬೇಕು– ಅಲ್ಲ, ನೋಡಬೇಕು. ಕೆಲವರಂತೂ ಪಾರಾಯಣ ಮಾಡತಾರ. ಖರೇ ಹೇಳಬೇಕಂದರ ಅವರು ಅಲ್ಲಿ ಓದಿದ ಯಾವುದನ್ನೂ ನೆನಪಿಟ್ಟಿರೂದಿಲ್ಲ, ಯಾಕಂದರ ನೆನಪ ಇಡೂವಂಥಾದ್ದು ಅಲ್ಲಿ ಏನೂ ಇರೂದೇ ಇಲ್ಲ. ಪತ್ರಿಕೆ ಓದಿದ ಬರೇ ಹತ್ತ ಮಿನಿಟಿನ ಮ್ಯಾಲ ನೀವು ಏನು ಓದಿದಿರಿ ಅಂತ ಕೇಳಿದರ, ಅವರಿಗೆ ಹೇಳಾಕ ಬರೂದಿಲ್ಲ. ಯಾಕಂದ್ರ, ಹೇಳುವಂಥಾದ್ದು ಇರೂದಿಲ್ಲ.

ಪತ್ರಿಕೆಗಳಿಗೆ ಇಂಥ ಮೈಮಾಟ ಇರೂದರಿಂದನ್ಹಲಿ ಅವುಕ್ಕ ಪೇಪರ್ ಅಂತಾರ. ಹಿಂಗಾಗಿ ಓದಿದ ಕೂಡಲೇ ಆ ಪೇಪರ್ ರದ್ದೀಪೇಪರ್ ಆಗಿಬಿಡತೈತಿ. ಯಾವ ಸುದ್ದಿಗೆ ಕಿಮ್ಮತ್ತು ಕೊಡಬೇಕು, ಎದಕ್ಕ ಪ್ರಾಶಸ್ತ್ಯ ಕೊಡಬೇಕು, ಎದನ್ನ ಪ್ರಿಂಟ್ ಮಾಡಬೇಕು ಎದನ್ನ ಮಾಡಬಾರದು ಅನ್ನೂವ ತರ-ತಮ ವಿವೇಚನೆಯನ್ನ ಬಹುತೇಕ ಎಲ್ಲಾ ಪೇಪರಿನವರು ಗಂಟಿಕಟ್ಟಿ ಇಟ್ಟಬಿಟ್ಟಿರತಾರ. ಆದರೂ ಕೆಲಸಕ್ಕ ಬಾರದ ಸುದ್ದಿಗಳನ್ನ ಚಿತ್ರಗಳನ್ನ ಪ್ರಕಟಿಸಿ, ಅವುನ್ನ ರೊಕ್ಕಾಕೊಟ್ಟು ಕೊಂಡು ಓದೂಹಂಗ ಪುಸಲಾಯಿಸುವ ಅವರ ಜಾಣ್ಮೆಯನ್ನ ಮಾತ್ರ ಮೆಚ್ಚಲೇಬೇಕು.

ವಿಶ್ವ ಆರೋಗ್ಯ ದಿನಾಚರಣೆ ದಿವಸ ಪ್ರಧಾನಿ ಕಸಾ ಗುಡಿಸಿದ್ದಲ್ಲ, ಕಸಬರಗಿ ಕೈಯಾಗ ಹಿಡಕೊಂಡಿದ್ದ ಫೋಟೋ ಹೆಡ್‌ಲಾಯಿನ್, ಹೆಡ್‌ಪೇಜ್ ಆಗಿ ನಮ್ಮಂಥಾ ಹೆಡ್ಡರ ಸಲುವಾಗಿ ಬಂದಿರತೈತಿ. ಸಾರಿಗೆ ಸಪ್ತಾಹದಾಗ ನಾಗರಿಕರು ರಸ್ತೆ ನಿಯಮ ಪಾಲಿಸಬೇಕಂತ ಆಯುಕ್ತರ ಹೇಳಿಕೆ. ಮಹಿಳೆಯರು ಉಳಿತಾಯ ಮಾಡಬೇಕಂತ ಪಂಚಾಯತ ಅಧ್ಯಕ್ಷೆಯ ಮಾತು. ಧ್ವಜ ದಿನಾಚರಣೆ ನಿಧಿಗೆ ರಕ್ಷಣಾಮಂತ್ರಿ ಕಾಣಿಕೆ ನೀಡಿದರು. ಶಿಕ್ಷಣದಲ್ಲಿ ಸುಧಾರಣೆ ಆಗಬೇಕಂತ ಹೊಸಾ ಶಿಕ್ಷಣಮಂತ್ರಿಯ ತಜ್ಞ ಹೇಳಿಕೆ. ಭಾಷೆಯ ಕಗ್ಗೊಲೆ ಸಲ್ಲ ಅಂತ ಒಬ್ಬ ಖ್ಯಾತ ಸಾಹಿತಿಯ ಮಾತು, ಸಾದಾ ರೀತಿಯ ನಿಧಾನ ಕೊಲೆ ಆದರ ನಡೀತೈತಿ ಅನ್ನವರ್ಹಂಗ. ಧರ್ಮ ಮತ್ತು ರಾಜಕಾರಣ ಆಧುನಿಕ ಮನುಷ್ಯನ ಎರಡು ಕಾಲು ಆಗಬೇಕಂತ ಮಹಾಸ್ವಾಮೀಜಿಯ ಆಶೀರ್ವಚನ. ವಿದ್ಯಾರ್ಥಿಗಳು ಪುಸ್ತಕ ಓದಬೇಕು ಅಂತ ಸಾಲೀ ಗ್ಯಾದರಿಂಗ್ ದಿನ ಗೆಸ್ಟ್ ಹೇಳಿದ್ದು. ವಕೀಲರು ಕಾಯದೆಗಳನ್ನು ತಿಳಿದಿರಬೇಕು ಅನ್ನೂದು ನ್ಯಾಯಾಧೀಶರ ಸಲಹೆ. ಮಕ್ಕಳ ಬಗ್ಗೆ ಪಾಲಕರು ಕಾಳಜೀ ವಹಿಸಬೇಕಂತ ವಿಶ್ವವಿದ್ಯಾಲಯದ ಕುಲಪತಿಯ ಆಜ್ಞೆ.

ಶುದ್ಧಿಯೇ ಇಲ್ಲದ ಇವು ಎಂಥಾ ಸುದ್ದಿ? ಇವನ್ನೇನ ಇವರು ಹೊಸಾ ಸಂಶೋಧನೆ ಮಾಡಿದವರ್ಹಂಗ ಒನ್ನೇ ಸರ್ತೆ ಹೇಳ್ಯಾರೇನು? ಇಲ್ಲ. ಹಂಗಿದ್ದರ ಇದೆಲ್ಲಾ ಹಿಂಗ್ಯಾಕ ಅಕ್ಕತಿ. ಅಯೋಗ್ಯ ಅನಗತ್ಯ ಅನರ್ಹ ಅನ್ನೂದಕ್ಕ ಇಷ್ಟು ಮಹತ್ವ ಯಾಕ ಬರತೈತಿ? ಯೋಗ್ಯತಾ ಇರಲಿ ಬಿಡಲಿ, ಯಾವ ಮನಶ್ಯಾ ಕುರ್ಚೇದಾಗ ಕುಂತಿರತಾನೋ, ಅಧಿಕಾರಕ್ಕ ಬಂದಿರತಾನೋ, ರೊಕ್ಕಾ ಮಾಡಿಕೊಂಡಿರತಾನೋ, ಗ್ಯಾಂಗ್ ಕಟ್ಟಿರತಾನೋ ಅವ್ನನ್ನ ಹೊಗಳುವ ಮೆಚ್ಚುವ ಮೆರೆಸುವ ಅವ್ನಗ ಪ್ರಚಾರ ನೀಡುವ ಒಂದು ಒಂದು ರೀತಿಯ ಕೀಳು ಪ್ರವೃತ್ತಿಯನ್ನ ನಮಗರಿವಿಲ್ಲದನ್ಹಲಿ ನಾವು ಬೆಳಸಾಕ್ಹತ್ತೇವಿ ಅನಸತೈತಿ. ಈ ಸಾಮಾಜಿಕ ವ್ಯವಸ್ಥೆಯ ಅಸ್ವಾಸ್ಥ್ಯ ಈಗ ಚಿಕಿತ್ಸೆಯನ್ನ ಮೀರಿದಂಥಾ ರೋಗ ಆದಂಗಾಗೇತಿ. ಇದನ್ನ ಹ್ಯಾಂಗ ಸುಧಾರಿಸೂದು? ಒಂದು ಎಂಟ್ಹತ್ತು ವರ್ಷ ಎಲ್ಲಾ ಸುದ್ದೀಪೇಪರ್‌ನೂ ಬಂದ್ ಮಾಡಿಬಿಟ್ಟರ ಹ್ಯಾಂಗ......

ಗುರು ಸಂಸ್ಥೆ, ಹುಬ್ಬಳ್ಳಿ, ಅರ್ಪಿಸುವ



ನಮ್ಮ ತಂಡದ ಈ ನಗೆ ನಾಟಕಗಳನ್ನು ನಿಮ್ಮ ಊರಲ್ಲಿ ನಿಮ್ಮವರೊಂದಿಗೆ ನಗಲು ಆಹ್ವಾನಿಸಿ.

☺ ☺ ☺ ☺ ☺

ಚಾರಿಟಿ ಶೋಗಳಾಗಬಹುದು, ಫಂಡ್ ರೇಸಿಂಗ್ ಶೋಗಳಾಗಬಹುದು, ರಾಜ್ಯೋತ್ಸವ,
ಗಣೇಶ ಉತ್ಸವ, ನವರಾತ್ರಿ ಹಬ್ಬಗಳ ಸಾಂಸ್ಕೃತಿಕ ಕಾರ್ಯಕ್ರಮಗಳಾಗಬಹುದು.

ನಿಮ್ಮಳ ನಗುವಿಗಾಗಿ ನಮ್ಮನ್ನೆ ಕರೆಯಿರಿ

☺ ☺ ☺ ☺ ☺

ಸಂಪರ್ಕ : ಗುರುರಾಜ. ಸಿ. ಆಯೋಜಕರು

ಗುರು ಸಂಸ್ಥೆ, ಹುಬ್ಬಳ್ಳಿ. 175, 14ನೇ ಕ್ರಾಸ್, 8ನೇ ಮನೆ
ಗಿರಿನಗರ, ಬೆಂಗಳೂರು – 560085. ಫೋನ್ : 9448768661

SANKALANA : RNI No. KARKAN 14160 / 10 / 1 / 2002 - TC

ಸಂಕಲನ : ಜನೆವರಿ + ಫೆಬ್ರುವರಿ ೨೦೦೫

ಸಂಪುಟ ೪, ಸಂಚಿಕೆ ೧

ಸಂಪಾದಕರು : ಸಿದ್ಧಲಿಂಗ ಪಟ್ಟಣಶೆಟ್ಟಿ + ಹೇಮಾ ಪಟ್ಟಣಶೆಟ್ಟಿ

●

ಶಿವಶಂಕರ ಹಿರೇಮಠ

ವಿಜಯಾ ಶ್ರೀಧರ್

ಎಂ. ರಾಮಚಂದ್ರಗೌಡ

ಸುನಂದಾ ಪ್ರಕಾಶ ಕಡಮೆ

ಎಸ್. ವಿ. ಪ್ರಭಾವತಿ

ಷ. ಶೆಟ್ಟರ್

ಶ್ರೀನಿವಾಸ ಹಾವನೂರ

ಅರವಿಂದ ಚೊಕ್ಕಾಡಿ

●

ದೇಶಪಾಂಡೆ ಸುಬ್ಬರಾಯ, ಬಸವರಾಜ ವಕ್ಕುಂದ

ಅಂಕದ ಮುರಿಗೆಪ್ಪ, ಆರ್. ಜಿ. ಮಠಪತಿ

ಬಾಳಣ್ಣ ಸೀಗಿಹಳ್ಳಿ, ಚಂದ್ರಶೇಖರ ವಸ್ತ್ರದ

●

ಶ್ರೀನಿವಾಸ ಹಾವನೂರ, ಲಲಿತಾ ಸಿದ್ಧಬಸವಯ್ಯ, ಕೃ. ಶಿ. ಹೆಗಡೆ,
ಆರ್. ಎನ್. ಹೆಗಡೆ, ಶಂಕರಗೌಡ ಸಾತ್ಮಾರ್, ಭರತ ದುಂಡಪ್ಪ ಕುಂಬಾರ,
ಎಸ್. ಪಿ. ಪದ್ಮಪ್ರಸಾದ್, ಎಲ್. ವಿ. ಶಾಂತಕುಮಾರಿ, ವೈ. ಬಿ. ಹಾಲಬಾವಿ,
ಶ್ರೀನಿವಾಸ ಜಿ. ರಾವ್, ಶ್ರೀಧರ ಬಳಗಾರ, ಜ್ಯೋತಿ ಗುರುಪ್ರಸಾದ್,
ಎಂ. ಡಿ. ಒಕ್ಕುಂದ, ಅ. ರಾ. ತೋರೊ, ಟಿ. ಆರ್. ರಾಧಾಕೃಷ್ಣ,
ಡಿ. ಕೆ. ಸುವರ್ಣ, ಹರಿಕೃಷ್ಣ ಭರಣ್ಯ, ಎಸ್. ಎಸ್. ಹಿರೇಮಠ,
ಜಿ. ಹೆಚ್. ಪ್ರಸಾದ್, ಬಸವರಾಜ ಚಿಕ್ಕನರಗುಂದ

●

ಸಿದ್ಧಲಿಂಗ ಪಟ್ಟಣಶೆಟ್ಟಿ

●

ಸಂಕಲನ ಪ್ರಕಾಶನ

ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ - ೫೮೦ ೦೦೪